ಶುಕ್ರವಾರ, ಡಿಸೆಂಬರ್ 13, 2024 | ₹ 7.00

www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

prajavani.net | prajavani | prajavani | prajavani

ಮಾಸ್ಟರ್ಸ್ ಸ್ಪರ್ಧೆ

ಕೇರಳದ ಕೋಯಿಕ್ಕೋಡ್‌ನಲ್ಲಿ ನಡೆದ ‘ರಾಜ್ಯ ಮಾಸ್ಟರ್ಸ್ ಅಥ್ಲೆಟಿಕ್ ಕೂಟ’ದಲ್ಲಿ 82 ವರ್ಷದ ವೃದ್ಧೆಯೊಬ್ಬರು ಶಾಟ್‌ಪಟ್ ಸ್ಪರ್ಧೆಯಲ್ಲಿ ಪಾಲ್ಗೊಂಡರು

ವಿಳಾಸ: 3ನೇ ಬ್ಲಾಕ್ HRBR, BBMP ವಾರ್ಡ್ ಸಂ. 89, ಕಮ್ಮನಹಳ್ಳಿ ಮುಖ್ಯ ರಸ್ತೆ, ಬಾಣಸವಾಡಿ, ಬೆಂಗಳೂರು, ಕರ್ನಾಟಕ – 560043

regaljewellers.net | bangalore@regaljewellers.net | +91 8720 90 90 90

ಕರ್ನಾಟಕ | ಕೇರಳ

SCAN & EXPLORE

REGAL
JEWELLERS

MANUFACTURER
& WHOLESALERS

1978 ರಿಂದಲೂ ವಿಶ್ವಾಸಾರ್ಹ ಆಭರಣ ಸಗಟು ಮಾರಾಟಗಾರರು ಮತ್ತು ಉತ್ಪಾದಕರು

100% HUID
HALLMARKED

ಅದ್ಭುತ ಶುಭಾರಂಭ

ಶುಕ್ರವಾರ
13
ಡಿಸೆಂಬರ್ 2024, ಮಧ್ಯಾಹ್ನ 12:00
ಕಮ್ಮನಹಳ್ಳಿ

ಉದ್ಘಾಟಿಸುವವರು
ರಾಧಿಕಾ ಪಂಡಿತ್

ನಮ್ಮ ಸುವರ್ಣ ಇತಿಹಾಸ

ರೀಗಲ್ ಜ್ಯುವೆಲ್ಲರ್ಸ್ ಹೋಲ್‌ಸೇಲರ್ ಮತ್ತು ಮ್ಯಾನ್ಯುಫ್ಯಾಕ್ಚರರ್: 1978 ರಿಂದಲೂ ಸೌಂದರ್ಯವನ್ನು ರೂಪಿಸುತ್ತಿದೆ

1978 ರಲ್ಲಿ ಶಿವದಾಸ್ ತಮರಸ್ಸರಿ ಅವರು ಸಂಸ್ಥಾಪಿಸಿದ ರೀಗಲ್ ಜ್ಯುವೆಲ್ಲರ್ಸ್ ಕೇರಳದ ಅತಿದೊಡ್ಡ ಹೋಲ್‌ಸೇಲ್ ಮತ್ತು ಉತ್ಪಾದನೆ ಮಾಡುವ ಆಭರಣಕಾರ ಎಂಬುದಾಗಿ ಪರಿಣಿತಿಯನ್ನು ಪಡೆದುಕೊಂಡಿದೆ.

ನಮ್ಮ ಅತ್ಯಂತ ಅನುಭವಿ ವಿನ್ಯಾಸಕಾರರು ಮತ್ತು ಕರಕುಶಲಕಾರರು ತಯಾರಿಸಿದ ಅದ್ಭುತವಾದ ಆಭರಣಗಳ ಕಲೆಕ್ಷನ್ ಅನ್ನು ರೀಗಲ್ ಜ್ಯೂವೆಲ್ಲರ್ಸ್ ಹೊಂದಿದ್ದಾರೆ. ನಮ್ಮ ವಿನ್ಯಾಸಕಾರರು ಅಂತಾರಾಷ್ಟ್ರೀಯ ವಿನ್ಯಾಸಗಾರರ ಜೊತೆಗೆ ಸಹಭಾಗಿತ್ವ ಸಾಧಿಸಿ, 100% ಬಿಐಎಸ್ 916 ಎಚ್‌ಯುಐಡಿ ಹಾಲ್‌ಮಾರ್ಕ್ ಹೊಂದಿರುವ ಚಿನ್ನ ಮತ್ತು ವಜ್ರದ ಉತ್ತಮ ಗುಣಮಟ್ಟದ ಆಭರಣವನ್ನು ತಯಾರಿಸಿದ್ದಾರೆ.

ಕೇರಳದ ಹೊರಗೆ ಬೆಂಗಳೂರಿನ ಕಮ್ಮನಹಳ್ಳಿಯಲ್ಲಿ ನಾವು ನಮ್ಮ ಮೊದಲ ಘಟಕವನ್ನು ಸ್ಥಾಪಿಸುತ್ತಿದ್ದೇವೆ ಮತ್ತು ಮೊದಲ ಹೋಲ್‌ಸೇಲ್ ಮತ್ತು ಉತ್ಪಾದಕರಾಗಿ ನಾವು ಪ್ರೀಮಿಯಂ ಶಾಪಿಂಗ್ ಅನುಭವವನ್ನು ಒದಗಿಸುವುದಕ್ಕೆ ಬದ್ಧವಾಗಿದ್ದೇವೆ.

ಡಿಸೆಂಬರ್ 13 ರಂದು ಮಧ್ಯಾಹ್ನ 12:00 ಗಂಟೆಗೆ ನಮ್ಮ ವೈಭವಯುತ ಉದ್ಘಾಟನೆಗೆ ನಿಮ್ಮನ್ನು ಆಹ್ವಾನಿಸುತ್ತಿದ್ದೇವೆ. ಈ ಕಾರ್ಯಕ್ರಮದಲ್ಲಿ ಜನಪ್ರಿಯ ನಟಿ ರಾಧಿಕಾ ಪಂಡಿತ್ ಹಾಜರಿರಲಿದ್ದಾರೆ.

ಶೀಘ್ರದಲ್ಲೇ ನಾವು ಮಲ್ಲೇಶ್ವರಮ್‌ಗೆ ಮತ್ತು ಬೆಂಗಳೂರಿನ ಇತರ ಪ್ರಮುಖ ಸ್ಥಳಗಳಿಗೆ ವಿಸ್ತರಿಸಲಿದ್ದೇವೆ. ನಿರೀಕ್ಷಿಸಿ.

ಇಂತಿ ನಿಮ್ಮ ,

ರೀಗಲ್ ಜ್ಯೂವೆಲ್ಲರ್ಸ್ ಆಡಳಿತ ಮಂಡಳಿ

ವಿಳಾಸ: 3ನೇ ಬ್ಲಾಕ್ HRBR, BBMP ವಾರ್ಡ್ ಸಂ. 89, ಕಮ್ಮನಹಳ್ಳಿ ಮುಖ್ಯ ರಸ್ತೆ, ಬಾಣಸವಾಡಿ, ಬೆಂಗಳೂರು, ಕರ್ನಾಟಕ – 560043

regaljewellers.net | bangalore@regaljewellers.net

+91 8720 90 90 90

ಎಂದಾದರೂ ಹೋಲ್‌ಸೇಲ್ ಜ್ಯುವೆಲರ್ ಹತ್ತಿರ ನೇರವಾಗಿ ಖರೀದಿಸಿದ್ದೀರ?

ಇತರ ಜ್ಯುವೆಲ್ಲರ್ಸ್ (ಚಿಲ್ಲರೆ ತಯಾರಿಕಾ ಶುಲ್ಕ)	ರೀಗಲ್ ಜ್ಯುವಲರ್ಸ್ (ಹೊತ್ತಾರಿ ತಯಾರಿಕಾ ಶುಲ್ಕ)



ಬೇರೆ ರಿಟೇಲ್ ಜ್ಯುವೆಲರ್ಸ್, ಬಹು ಮಧ್ಯವರ್ತಿಗಳಿರುವುದರಿಂದ ಹೆಚ್ಚಿನ ಮೇಕಿಂಗ್ ಶುಲ್ಕವನ್ನು ವಿಧಿಸುತ್ತಾರೆ

ರೀಗಲ್ ಜ್ಯುವೆಲರ್ಸ್, ಹೋಲ್‌ಸೇಲ್ ಅಂಗಡಿಯಾಗಿರುವುದರಿಂದ, ಮಧ್ಯವರ್ತಿಗಳಿಲ್ಲದೆ ಕನಿಷ್ಟ ಮೇಕಿಂಗ್ ಚಾರ್ಜ್ ವಿಧಿಸಿ, ಗ್ರಾಹಕರಿಗೆ ಅವರ ಹಣಕ್ಕೆ ಹೆಚ್ಚಿನ ಮೌಲ್ಯವನ್ನು ನೀಡುತ್ತದೆ

ಹೋಲ್‌ಸೇಲ್ ಲಾಭಗಳು

ರೀಗಲ್ ಜ್ಯುವೆಲರ್ಸ್‌ನಲ್ಲಿ, ಅತೀ ಸಣ್ಣ ಹೆಚ್‌ಯೂಐಡಿ ಹಾಲ್‌ಮಾರ್ಕ್ ಆಭರಣ ಖರೀದಿಗಳಿಗೂ ಸಹ ಹೋಲ್‌ಸೇಲ್ ದರ ನಿಗದಿಪಡಿಸಲಾಗಿದೆ.

ನಮ್ಮ ಸಿಗ್ನೇಚರ್ ಸಂಗ್ರಹಗಳನ್ನು ಕಣ್ತುಂಬೊಕೊಳ್ಳಿ

tvisa – DIAMONDS BEYOND COMPARE | eternal – POLKI JEWELLERY COLLECTION | YUGA – NAGAS JEWELLERY | MUGAL – IMPERIAL ROYAL COLLECTION | Forever 18 – 18Ct Finest Jewellery | Glow by Polki – Light Weight Polki Collection
VANYA – UNCUT DIAMOND JEWELRY | MANGALLYA – CALCUTTA BRIDAL COLLECTIONS | MangalSutra – THALI JEWELLERY COLLECTION | RAEYA – SOLITAIRE JEWELLERY COLLECTION | Paithruka – CHETTINAD COLLECTION | LUMIERE – PLATINUM COLLECTION
Lillie – KIDS JEWELLERY COLLECTION | RANGAURA – PRECIOUS GEMSTONE COLLECTION

ಕರ್ನಾಟಕ | ಕೇರಳ

ಶುಕ್ರವಾರ, ಡಿಸೆಂಬರ್ 13, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 344 | ಪುಟ 18

● www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ಕನ್ನಡ ಸಿನಿಮಾಗಳೇ ತನ್ನ ಆದ್ಯತೆ ಎಂದಿದ್ದಾರೆ ನಟಿ ರೀಷ್ಮಾ ನಾಣಯ್ಯ

ಆಳ-ಅಗಲ

ಬಂಗಾಳ ಕೊಲ್ಲಿ ಚಂಡಮಾರುತಗಳ ತಾಣ

‘ಮಂತ್ರಿಗಿರಿಗಾಗಿ ಕೃಷ್ಣರ ಮನೆಯ ಬಾಗಿಲು ಒದ್ದಿದ್ದೆ’ 8

‘ಡಿಜಿಟಲ್ ಅರೆಸ್ಟ್’: ₹9 ಕೋಟಿ ವಶ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,289 ▼	24,548 ▼	₹81,780 (ಬೆಂಗಳೂರು)	₹99,400 (ಬೆಂಗಳೂರು) ▲	84.88 ▼

ಚರಿತ್ರೆ ಬರೆದ ಗುಕೇಶ್

- ವಿಶ್ವ ಚಾಂಪಿಯನ್ ಪಟ್ಟಕ್ಕೇರಿದ ಅತ್ಯಂತ ಕಿರಿಯ ಆಟಗಾರ
- ನಿರ್ಣಾಯಕ ಪಂದ್ಯದಲ್ಲಿ ಗೆಲುವಿನ ನಗೆ ಬೀರಿದ ಭಾರತದ ಗ್ರ್ಯಾಂಡ್ ಮಾಸ್ಟರ್

ಗುಕೇಶ್ ಅವರ ಈ ಗೆಲುವು, ಚೆಸ್ ಇತಿಹಾಸದ ಪುಟದಲ್ಲಿ ದಾಖಲಾಗಿರುವುದು ಮಾತ್ರವಲ್ಲ ಕೋಟಿ ಕೋಟಿ ಯುವ ಮನಸ್ಸುಗಳಿಗೆ ‘ಕನಸು ಕಾಣಿರಿ, ಅದನ್ನು ಸಾಧಿಸಿ’ ಎನ್ನುವ ಸ್ಫೂರ್ತಿಯನ್ನೂ ತುಂಬುತ್ತಿದೆ

ನರೇಂದ್ರ ಮೋದಿ, ಪ್ರಧಾನಿ

18ನೇ ವಯಸ್ಸಿಗೆ ವಿಶ್ವ ಚಾಂಪಿಯನ್ ಆಗುವುದು ಎಂದರೆ ಸಣ್ಣ ಮಾತಲ್ಲ. ಇದೊಂದು ಅಭೂತಪೂರ್ವ ಸಾಧನೆ. ಗೆಲುವನ್ನು ಆತ ಸಂಭ್ರಮಿಸಿದ್ದು ನೋಡುವುದಕ್ಕೆ ಅದ್ಭುತ ದೃಶ್ಯವಾಗಿತ್ತು

ವಿಶ್ವನಾಥನ್ ಆನಂದ್
ಚೆಸ್ ದಿಗ್ಗಜ

ಸಿಂಗಪುರ (ಪಿಟಿಐ): ಭಾರತದ ಪಶ್ಚಿಮದ ಕಡಲ ತೀರದಲ್ಲಿ ಗುರುವಾರ ಸಂಜೆ ಸೂರ್ಯ ಕೆಂಪಾಗಿ ಕರಗಿ ಆಗಷ್ಟೇ ತುಸು ಸಮಯವಾಗಿತ್ತು. ವಿಶ್ವ ಚೆಸ್ ರಂಗದಲ್ಲಿ ಆಗ ಗುಕೇಶ್ ದೊಮ್ಮರಾಜು ರೂಪದಲ್ಲಿ ಹೊಸ ‘ಸೂರ್ಯ’ನ ಉದಯವಾಯಿತು.

ನಿರ್ಣಾಯಕ ಪಂದ್ಯದಲ್ಲಿ ಚೀನಾದ ಡಿಂಗ್ ಲಿರೆನ್ ಅವರನ್ನು ಸೋಲಿಸಿದ ಭಾರತದ ಈ ಗ್ರ್ಯಾಂಡ್ ಮಾಸ್ಟರ್, ವಿಶ್ವ ಚಾಂಪಿಯನ್ ಪಟ್ಟಕ್ಕೆ ಏರಿದ ಅತ್ಯಂತ ಕಿರಿಯ ವಯಸ್ಸಿನ ಆಟಗಾರ ಎಂಬ ಇತಿಹಾಸ ಬರೆದರು.

ಚೆಸ್ ದಂತಕಥೆಯಾದ ರಷ್ಯಾದ ಗ್ಯಾರಿ ಕ್ಯಾಸ್ಪರೋವ್ ಅವರು 22ರ ಹರೆಯದಲ್ಲಿ (1985) ಚಾಂಪಿಯನ್ ಆಗಿ ಹೊರಹೊಮ್ಮಿದ್ದು ಇದುವರೆಗಿನ ದಾಖಲೆಯಾಗಿತ್ತು. ಗುಕೇಶ್, 18ರ ಹರೆಯದಲ್ಲೇ ಈ ಸಾಧನೆ ಮಾಡಿದರು. ‘ವಿಜಯಿ’ ಎಂದು ಘೋಷಣೆ ಆಗುತ್ತಿದ್ದಂತೆಯೇ ಕುಳಿತ ಕುರ್ಚಿಯಿಂದ ಮೇಲೆದ್ದ ಈ ಹೊಸ ಚಾಂಪಿಯನ್, ಎರಡೂ ಕೈಗಳನ್ನು ಮೇಲೆತ್ತಿ ಸಂಭ್ರಮಿಸಿದರು. ಭಾವೋದ್ವೇಗಕ್ಕೆ ಒಳಗಾಗಿ ಹರ್ಷದ ಕಣ್ಣೀರು ಸುರಿಸಿದರು. ಪ್ರಶಸ್ತಿಯೊಂದಿಗೆ 13 ಲಕ್ಷ ಡಾಲರ್ (₹ 11.04 ಕೋಟಿ) ಬಹುಮಾನವನ್ನೂ ಅವರು ತಮ್ಮದಾಗಿಸಿಕೊಂಡರು.

ಅಂತಿಮ ಪಂದ್ಯದವರೆಗೆ ಬೆಳೆದ ಫೈನಲ್ ಅನ್ನು ಗುಕೇಶ್ 7.5–6.5 ರಿಂದ ಗೆದ್ದು ಸಂಭ್ರಮಿಸಿದರು.

14ನೇ ಪುಟ ನೋಡಿ

ಒಳ ಪುಟಗಳು

ತಮಿಳುನಾಡು: ಹಲವೆಡೆ ಭಾರಿ ಮಳೆ 09

ದೆಹಲಿ; ಮಹಿಳೆಯರಿಗೆ ₹1 ಸಾವಿರ ನೀಡುವ ಯೋಜನೆ ಜಾರಿ 09

ದೇವನೂರರಿಗೆ ‘ವೈಕಂ’ ಪ್ರಶಸ್ತಿ ಪ್ರದಾನ 09

ಒಂದೇ ದಿನ 1,500 ಮಂದಿಯ ಶಿಕ್ಷೆ ಕಡಿತಗೊಳಿಸಿದ ಬೈಡನ್ 12

ಚಿನ್ನಸ್ವಾಮಿಯಲ್ಲಿ ತಾರೆಗಳ ಮುಖಾಮುಖಿ 13

ಸದನದಲ್ಲಿ ಕೋಲಾಹಲ

ಸುವರ್ಣ ವಿಧಾನಸೌಧ (ಬೆಳಗಾವಿ): ಹಿಂದುಳಿದ ವರ್ಗಗಳ ಪ್ರವರ್ಗ–2ಎ ಅಡಿಯಲ್ಲಿ ಮೀಸಲಾತಿ ಕಲ್ಪಿಸುವಂತೆ ಆಗ್ರಹಿಸಿ ಸುವರ್ಣ ವಿಧಾನಸೌಧಕ್ಕೆ ಮುತ್ತಿಗೆಹಾಕಲು ಯತ್ನಿಸಿದ್ದ ಪಂಚಮಸಾಲಿ ಸಮುದಾಯದ ಜನರ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದ ಪ್ರಕರಣ ವಿಧಾನಮಂಡಲದ ಉಭಯ ಸದನಗಳಲ್ಲೂ ಗುರುವಾರ ಪ್ರತಿಧ್ವನಿಸಿತು. ಆಡಳಿತ ಮತ್ತು ವಿರೋಧ ಪಕ್ಷಗಳ ಮಧ್ಯೆ ತೀವ್ರ ವಾಕ್ಸಮರ, ಭಾರಿ ಕೋಲಾಹಲಕ್ಕೂ ಕಾರಣವಾಯಿತು.

ಸಂವಿಧಾನಕ್ಕೆ ವಿರುದ್ಧ– ಸಿಎಂ: ‘ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ನೀಡುವ ಸಂಬಂಧ ಸಭೆ ಕರೆದಿದ್ದೆ. ಮೀಸಲಾತಿಗಾಗಿ ಹೋರಾಟ ಮಾಡುವುದು ತಪ್ಪು ಎಂದು ಹೇಳಿರಲಿಲ್ಲ. ಅವರ ಬೇಡಿಕೆ ಸಂವಿಧಾನಕ್ಕೆ ವಿರುದ್ಧ ಎಂದು ಮನವರಿಕೆ ಮಾಡಲು ಪ್ರಯತ್ನಿಸಿದ್ದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿವರ–08

‘ಆರ್‌ಎಸ್‌ಎಸ್‌ನವರೇ ಕಲ್ಲು ತೂರಿದ್ದು’ 08

ಸ್ಪೀಕರ್ ಕೊಠಡಿಗೆ ನುಗ್ಗಿ ಗದ್ದಲ 08

ಒಂದು ರಾಷ್ಟ್ರ, ಒಂದು ಚುನಾವಣೆ ಮಸೂದೆಗೆ ಸಂಪುಟದ ಒಪ್ಪಿಗೆ

ನವದೆಹಲಿ: ‘ಒಂದು ರಾಷ್ಟ್ರ–ಒಂದು ಚುನಾವಣೆ’ ಜಾರಿಗೆ ತರಲು ಸಂವಿಧಾನ ತಿದ್ದುಪಡಿ ತರುವ ಮಸೂದೆಗೆ ಕೇಂದ್ರ ಸಚಿವ ಸಂಪುಟ ಗುರುವಾರ ಅನುಮೋದನೆ ನೀಡಿದ್ದು, ಸಂಸತ್‌ನ ಚಳಿಗಾಲದ ಅಧಿವೇಶನದಲ್ಲೇ ಈ ಮಸೂದೆಯನ್ನು ಮಂಡಿಸುವ ಸಂಭವ ಇದೆ. ಬಳಿಕ ಮಸೂದೆಯನ್ನು ಜಂಟಿ ಸಂಸದೀಯ ಸಮಿತಿಗೆ (ಜೆಪಿಸಿ) ಶಿಫಾರಸು ಮಾಡಲಾಗುತ್ತದೆ.

ಸದ್ಯಕ್ಕೆ, ಲೋಕಸಭೆ ಮತ್ತು ವಿಧಾನ ಸಭೆಗಳಿಗೆ ಮಾತ್ರ ಏಕಕಾಲದಲ್ಲಿ ಚುನಾವಣೆ ನಡೆಸುವ ಕರಡು ಮಸೂದೆಗೆ ಸಂಪುಟ ಒಪ್ಪಿಗೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಒಟ್ಟಿಗೆ ಚುನಾವಣೆ ನಡೆಸುವ ಮಸೂದೆಯನ್ನು ಕೇಂದ್ರ ಸರ್ಕಾರವು ಅನುಮೋದಿಸಿರುವುದಕ್ಕೆ ಕಾಂಗ್ರೆಸ್ ಪಕ್ಷವು ವಿರೋಧ ವ್ಯಕ್ತಪಡಿಸಿದೆ. ಗಮನವನ್ನು ಬೇರೆಡೆ ಸೆಳೆಯಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದೆ.

ಇನ್ನೊಂದು ಸುದ್ದಿ 13

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಮಸೀದಿ ಸಮೀಕ್ಷೆಗೆ ‘ಸುಪ್ರೀಂ’ ತಡೆ

ಪೂಜಾ ಸ್ಥಳ ಕಾಯ್ದೆ: ವಿಚಾರಣೆ ನಡೆಸಲಿರುವ ತ್ರಿಸದಸ್ಯ ಪೀಠ

ನವದೆಹಲಿ (ಪಿಟಿಐ): ಧಾರ್ಮಿಕ ಸ್ಥಳಗಳನ್ನು, ಅದರಲ್ಲೂ ಮುಖ್ಯವಾಗಿ ಮಸೀದಿಗಳು ಹಾಗೂ ದರ್ಗಾಗಳನ್ನು, ತಮ್ಮ ವಶಕ್ಕೆ ತೆಗೆದುಕೊಳ್ಳುವ ಕೋರಿಕೆ ಇರುವ ಹೊಸ ಅರ್ಜಿಗಳನ್ನು ದೇಶದ ನ್ಯಾಯಾಲಯಗಳು ಮುಂದಿನ ಸೂಚನೆಯವರೆಗೆ ಕೈಗೆತ್ತಿಕೊಳ್ಳುವಂತೆ ಇಲ್ಲ ಎಂದು ಸುಪ್ರೀಂ ಕೋರ್ಟ್ ಗುರುವಾರ ನಿರ್ದೇಶನ ನೀಡಿದೆ.

ಅಲ್ಲದೆ, ಬಾಕಿ ಇರುವ ಅರ್ಜಿಗಳ ವಿಚಾರವಾಗಿ ಮಧ್ಯಂತರ ಅಥವಾ ಅಂತಿಮ ಆದೇಶವನ್ನು ನೀಡುವಂತೆ ಇಲ್ಲ ಎಂದು ಕೂಡ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ. ‘ಈ ವಿಚಾರವು ಈ ನ್ಯಾಯಾಲಯದ ಪರಿಶೀಲನೆಯಲ್ಲಿದೆ. ಈ ನ್ಯಾಯಾಲಯದ ಮುಂದಿನ ಆದೇಶ ಬರುವತನಕ ಹೊಸದಾಗಿ ಅರ್ಜಿಗಳನ್ನು ದಾಖಲಿಸಿ-ಕೊಳ್ಳುವಂತಿಲ್ಲ ಹಾಗೂ ವಿಚಾರಣೆ ನಡೆಸುವಂತಿಲ್ಲ’ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ, ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ಕೆ.ವಿ. ವಿಶ್ವನಾಥನ್ ಅವರು ಇರುವ ತ್ರಿಸದಸ್ಯ ಪೀಠವು ಸೂಚಿಸಿದೆ.

ಈ ಸೂಚನೆಯ ಪರಿಣಾಮವಾಗಿ, ವಾರಾಣಸಿಯ ಜ್ಞಾನವಾಪಿ ಮಸೀದಿ, ಮಥುರಾದ ಶಾಹಿ ಈದ್ಗಾ ಮಸೀದಿ, ಸಂಭಲ್‌ನ ಶಾಹಿ ಜಾಮಾ ಮಸೀದಿ ಸೇರಿದಂತೆ 10 ಮಸೀದಿಗಳ ಮೂಲ ಸ್ವರೂಪವನ್ನು ಅರಿಯಲು ಸಮೀಕ್ಷೆ ನಡೆಸಬೇಕು ಎಂಬ ಕೋರಿಕೆಯೊಂದಿಗೆ ವಿವಿಧ ಹಿಂದೂ ಗುಂಪುಗಳು ಸಲ್ಲಿಸಿರುವ ಸರಿಸುಮಾರು 18 ಅರ್ಜಿಗಳ ವಿಚಾರಣೆಯು ನಡೆಯುವುದಿಲ್ಲ.

ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆ – 1991ರ ವಿವಿಧ ಅಂಶಗಳನ್ನು ಪ್ರಶ್ನಿಸಿ ವಕೀಲ ಅಶ್ವಿನಿ ಉಪಾಧ್ಯಾಯ ಸೇರಿ ಹಲವರು ಸಲ್ಲಿಸಿರುವ ಆರು ಅರ್ಜಿಗಳ ವಿಚಾರಣೆಯನ್ನು ತ್ರಿಸದಸ್ಯ ಪೀಠವು ನಡೆಸುತ್ತಿದೆ.

7ನೇ ಪುಟ ನೋಡಿ

*Prices are for Bangalore Region Only. For city specific prices, call/ walk-in to the nearest centre. Doctor consultation recommended before booking the tests.



‘ಹಸುರು ಹೊನ್ನು’, ‘ಮಂಕುತಿಮ್ಮನ ಕಗ್ಗ’ ಇಂಗ್ಲಿಷ್‌ಗೆ ಅನುವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಜಿ.ಎಲ್. ಸ್ವಾಮಿ ಅವರ ‘ಹಸುರು ಹೊನ್ನು’ ಹಾಗೂ ಡಿವಿಜಿ (ಡಿ.ವಿ.ಗುಂಡಪ್ಪ) ಅವರ ‘ಮಂಕುತಿಮ್ಮನ ಕಗ್ಗ’ ಕೃತಿಗಳು ಇಂಗ್ಲಿಷ್‌ಗೆ ಅನುವಾದಗೊಂಡಿವೆ.

ಡಿವಿಜಿ ಮೊಮ್ಮಗನ ಪತ್ನಿ ಜ್ಯೋತಿ ನಟರಾಜನ್ ಅವರು ‘ಹಸುರು ಹೊನ್ನು’ ಕೃತಿಯನ್ನು, ಡಿವಿಜಿ ಮೊಮ್ಮಗ ಕೆ. ನಟರಾಜನ್ ಅವರು ‘ಮಂಕುತಿಮ್ಮನ ಕಗ್ಗ’ ಕೃತಿಯನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಮೈಸೂರಿನ ಡಿವಿಜಿ ಬಳಗ ಪ್ರತಿಷ್ಠಾನವು ಇದೇ 15ರಂದು ಬೆಳಿಗ್ಗೆ 10 ಗಂಟೆಗೆ ಬಸವನಗುಡಿಯ ಬಿ.ಪಿ. ವಾಡಿಯಾ ರಸ್ತೆಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಪುಸ್ತಕ ಬಿಡುಗಡೆ ಕಾರ್ಯಕ್ರಮ ಹಮ್ಮಿಕೊಂಡಿದೆ.

ಎಸ್.ವ್ಯಾಸ ವಿಶ್ವವಿದ್ಯಾಲಯದ ಕುಲಪತಿ ಎಚ್.ಆರ್. ನಾಗೇಂದ್ರ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುತ್ತಾರೆ. ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಸಸ್ಯ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಸಿ.ಆರ್. ನಾಗೇಂದ್ರನ್ ಮುಖ್ಯ ಅತಿಥಿಯಾಗಿ ಭಾಗವಹಿಸುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.



ಬೆಂಗಳೂರಿನಲ್ಲಿ ದಿನವಿಡೀ ತುಂತುರು ಮಳೆಯಾಗಿದ್ದು, ಜನರು ಕೊಡೆ ಹಿಡಿದು ಸಾಗಿದರು (ಎಡಚಿತ್ರ) ದಾಬಸ್‌ಪೇಟೆಯಲ್ಲಿ ಮಳೆಯಲ್ಲಿ ರಾಗಿ ಹುಲ್ಲು ನೆನೆದಿರುವುದು ಪ್ರಜಾವಾಣಿ ಚಿತ್ರಗಳು

ನಗರದಲ್ಲಿ ಮೋಡ ಕವಿದ ವಾತಾವರಣ; ಇಂದೂ ಮಳೆ ಸಾಧ್ಯತೆ

ದಿನವಿಡೀ ತುಂತುರು ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗುರುವಾರ ದಿನವಿಡೀ ಮೋಡ ಕವಿದ ವಾತಾವರಣದಲ್ಲಿ ಸಣ್ಣಗೆ, ತಣ್ಣಗೆ ಮಳೆ ಸುರಿಯಿತು.

ಗುಡುಗು ಮಿಂಚುಗಳ ಅರ್ಭಟವಿಲ್ಲದೇ, ಬೀಸುಗಾಳಿಯ ರಭಸವಿಲ್ಲದೇ ಬೆಳಿಗ್ಗಿನಿಂದ ರಾತ್ರಿವರೆಗೂ ಮಳೆಯಾಯಿತು. ಕೆಲ ಸಮಯ ಹನಿ ದೊಡ್ಡದಾಗಿದ್ದರೂ ಹೆಚ್ಚು ಹೊತ್ತು ತೇವದಂತೆ ಆವರಿಸಿತ್ತು.

ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದ ಪರಿಣಾಮ ಇದಾಗಿದ್ದು, ಶುಕ್ರವಾರವೂ ಇದೇ ರೀತಿಯ ಮಳೆ ಮುಂದುವರಿಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದಾಬಸ್ ಪೇಟೆ ವರದಿ: ಸೋಂಪುರ ಹೋಬಳಿಯ ಉದ್ದಕ್ಕೂ ಗುರುವಾರ ಜಡಿ ಮಳೆಯಾಗಿದೆ. ಬುಧವಾರದಿಂದಲೇ ಮೋಡ ಕವಿದ ವಾತಾವರಣವಿತ್ತು. ಗುರುವಾರ ಮುಂಜಾನೆಯಿಂದ ತುಂತುರು ಮಳೆ ಹನಿಯುತ್ತಿತ್ತು. 10 ಗಂಟೆಯ ನಂತರ ಜಡಿ ಮಳೆ ಆರಂಭವಾಯಿತು. ಬಿಟ್ಟು ಬಿಟ್ಟು ಬರುತ್ತಲೇ ಇತ್ತು. ಕೆಲವೆಡೆ ಮಳೆ ಬಿರುಸು ಪಡೆಯಿತು.

ಮಳೆಯ ಪರಿಣಾಮದಿಂದ ಹೋಬಳಿಯ ರೈತರು ತೊಂದರೆಗೆ ಸಿಲುಕಿದರು. ರಾಗಿ ಕಟಾವು ಆಗಿ ಹುಲ್ಲು ಹೊಲಗಳಲ್ಲಿ ಬಿದ್ದಿದ್ದು, ಮಳೆಯಿಂದ ಅದು ನೆನೆದಿದೆ. ಇದರಿಂದ ಗೆದ್ದಲು ಹಿಡಿಯುವ ಇಲ್ಲವೇ ಕೊಳೆಯುವ ಆತಂಕ ಎದುರಾಗಿದೆ.

ಹೈನುಗಾರಿಕೆ ಮಾಡುವ ರೈತರಿಗೆ ಬೇಸಿಗೆಯಲ್ಲಿ ರಾಗಿ ಹುಲ್ಲು ಮುಖ್ಯ ಮೇವಾಗಿದ್ದು, ಹೀಗೆ ಮಳೆಯಲ್ಲಿ ನೆನೆದು ಕೊಳೆತು ಹೋದರೆ ಅದು ರಾಸುಗಳ ಆರೋಗ್ಯದ ಮೇಲೂ, ಅವು ಹಾಲು ಕೊಡುವುದರ ಮೇಲೂ ಪರಿಮಾಣ ಬೀರಲಿದೆ ಎಂದು ಹಾಲು ಉತ್ಪಾದಕ ರೈತ ಕುಮಾರಸ್ವಾಮಿ ತಿಳಿಸಿದ್ದಾರೆ.

‘ಚಂಡಮಾರುತದ ಪರಿಣಾಮ ಮಳೆಯಾಗಬಹುದೆಂದು ಹೆದರಿ ಬಹುತೇಕ ರೈತರು ಇನ್ನೂ ರಾಗಿ ಕಟಾವು ಮಾಡಿಸಿಲ್ಲ. ತೆನೆಯಿಂದಲೇ ರಾಗಿ ಕಾಳು ಉದುರುವ, ಹುಲ್ಲು ಕಪ್ಪಾಗುವ ಸಾಧ್ಯತೆ ಇದೆ’ ಎಂದು ಹರೀಶ್ ಆತಂಕ ತೋಡಿಕೊಂಡರು.

ಹೋಬಳಿಯ ರೈತರು ಬೆಳೆ ವಿಮೆ ಮಾಡಿಸಬೇಕು. ಅತಿವೃಷ್ಟಿ, ಅನಾವೃಷ್ಟಿ ಸಂದರ್ಭದಲ್ಲಿ ನೆರವಾಗುತ್ತದೆ ಎಂದು ಕೃಷಿ ಅಧಿಕಾರಿ ರವಿಕುಮಾರ್ ಸಲಹೆ ನೀಡಿದರು.

ಐವಿ ದ್ರಾವಣ: ಕಂಪನಿ ವಿರುದ್ಧ ಪ್ರಾಸಿಕ್ಯೂಷನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ಬಂಗಾಳದ ‘ಪಶ್ಚಿಮ್ ಬಂಗಾ ಫಾರ್ಮಾಸ್ಯುಟಿಕಲ್ಸ್’ ಕಂಪನಿ ಪೂರೈಸಿರುವ ‘ರಿಂಗರ್ಸ್ ಲ್ಯಾಕ್ಟೇಟ್’ ಐವಿ ದ್ರಾವಣವು ಪ್ರಮಾಣಿತ ಗುಣಮಟ್ಟ ಹೊಂದಿರದ ಕಾರಣ ಕಂಪನಿ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯದ ಒಂಬತ್ತು ಜಿಲ್ಲಾ ವೃತ್ತಗಳಲ್ಲಿ ಹೆಚ್ಚುವರಿ ಔಷಧ ನಿಯಂತ್ರಕರು ದೂರು ದಾಖಲಿಸಿಕೊಂಡಿದ್ದಾರೆ.

ಐವಿ ದ್ರಾವಣವು ಬಳ್ಳಾರಿ ಜಿಲ್ಲಾಸ್ಪತ್ರೆಯಲ್ಲಿ ಬಾಣಂತಿಯರ ಸಾವಿಗೆ ಕಾರಣವಾಗಿದೆ ಎನ್ನಲಾಗಿದೆ. ರಾಜ್ಯದ ಔಷಧ ನಿಯಂತ್ರಕರು ನಡೆಸಿದ ಪರೀಕ್ಷೆಯಲ್ಲಿ ದ್ರಾವಣದ 22 ಬ್ಯಾಚ್‌ಗಳು ಪ್ರಮಾಣಿತ ಗುಣಮಟ್ಟ ಹೊಂದಿಲ್ಲ ಎಂಬ ವರದಿ ಬಂದಿತ್ತು. ಇದಕ್ಕೆ ಸಂಬಂಧಿಸಿದಂತೆ 13 ಬ್ಯಾಚ್‌ಗಳ ವರದಿ ಪ್ರಶ್ನಿಸಿ, ಕಂಪನಿಯವರು ಕೇಂದ್ರೀಯ ಔಷಧ ಪ್ರಯೋಗಾಲಯದ ಮೆಟ್ಟಿಲೇರಿದ್ದರು. ಅವುಗಳಲ್ಲಿ ನಾಲ್ಕು ಬ್ಯಾಚ್‌ಗಳು ಗುಣಮಟ್ಟ ಹೊಂದಿವೆಯೆಂದು ಕೇಂದ್ರೀಯ ಔಷಧ ಪ್ರಯೋಗಾಲಯ ವರದಿ ನೀಡಿತ್ತು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಡಿ.4ರಂದು ಅಧಿಕಾರಿಗಳೊಂದಿಗೆ ಸಭೆ ನಡೆಸಿ ಪ್ರಾಸಿಕ್ಯೂಷನ್‌ಗೆ ಸೂಚನೆ ನೀಡಿದ್ದರು. ಹೀಗಾಗಿ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲಾವೃತ್ತದಲ್ಲಿ ತಲಾ ಮೂರು, ಹಾವೇರಿ, ಗದಗ ಹಾಗೂ ಬೆಂಗಳೂರು ಜಿಲ್ಲಾ ವೃತ್ತದಲ್ಲಿ ತಲಾ ಒಂದು ದೂರನ್ನು ಹೆಚ್ಚುವರಿ ಔಷಧ ನಿಯಂತ್ರಕರು ದಾಖಲಿಸಿದ್ದಾರೆ.

ಕಾಸರಗೋಡಿನಲ್ಲಿ ‘ಕನ್ನಡ ಸ್ನೇಹ ಮಿಲನ’ ನಾಳೆ

ಬೆಂಗಳೂರು: ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಹಾಗೂ ವಿಕಾಸ ಟ್ರಸ್ಟ್ ವತಿಯಿಂದ ‘ಬೆಂಗಳೂರು-ಕಾಸರಗೋಡು ಕನ್ನಡ ಸ್ನೇಹ ಮಿಲನ’ ಕಾಸರಗೋಡಿನಲ್ಲಿ ಡಿ.14ರಂದು ನಡೆಯಲಿದೆ.

ಬೇಕಲ ಗೋಕಲಂ ಗೋಶಾಲೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಬಿಬಿಎಂಪಿ ನೌಕರರ ಸಾಂಸ್ಕೃತಿಕ ಸಂಘದ ಸದಸ್ಯರಿಗೆ ‘ಕಾಸರಗೋಡು ಪ್ರಶಸ್ತಿ’ ಪ್ರದಾನ ಮಾಡಲಾಗುತ್ತದೆ. ವಿಕಾಸ ಟ್ರಸ್ಟ್ ಅಧ್ಯಕ್ಷ ರವಿನಾರಾಯಣ ಗುಣಾಜೆ, ಬಿಬಿಎಂಪಿ ಸಂಘದ ಅಧ್ಯಕ್ಷ ಎ. ಅಮೃತ್ ರಾಜ್, ಕಾಸರಗೋಡು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿಲ್ಪಾ ದ್ಯಾವಯ್ಯ ಭಾಗವಹಿಸಲಿದ್ದಾರೆ. ಗಡಿಭಾಗದಲ್ಲಿ ನಡೆಯುವ ‘ಕನ್ನಡ ಸ್ನೇಹ ಮಿಲನ’ ಕಾರ್ಯಕ್ರದಲ್ಲಿ ನೆಲ, ಜಲ, ಭಾಷೆಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

ಸಂಚಾರ ಮಾರ್ಗ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಮಾರಸ್ವಾಮಿ ಲೇಔಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಉತ್ತರಹಳ್ಳಿ ರಸ್ತೆಯಲ್ಲಿ ವೀರಾಂಜನೇಯ ದೇವಸ್ಥಾನದ ಜಾತ್ರೆ ಹಾಗೂ ಚಿನ್ನದ ರಥೋತ್ಸವ ನಡೆಯಲಿದ್ದು, ಡಿ.13ರ ಬೆಳಿಗ್ಗೆ 11.30ರಿಂದ ಮಧ್ಯಾಹ್ನ 1ರವರೆಗೆ ಸಂಚಾರ ಮಾರ್ಗದಲ್ಲಿ ಬದಲಾವಣೆ ಮಾಡಲಾಗಿದೆ.

ಸುಬ್ರಮಣ್ಯಪುರ ಮುಖ್ಯರಸ್ತೆಯ ಹಳೆ ಅಂಚೆ ಕಚೇರಿ ಜಂಕ್ಷನ್‌ನಿಂದ ಪಟ್ಟಾಲಮ್ಮ ದೇವಸ್ಥಾನದವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಪರ್ಯಾಯ ಮಾರ್ಗ: ಕೆಂಗೇರಿ ಕಡೆಯಿಂದ ಎಲೆಕ್ಟ್ರಾನಿಕ್ಸ್ ಸಿಟಿ ಕಡೆಗೆ ತೆರಳುವ ವಾಹನಗಳು ಪಟ್ಟಾಲಮ್ಮ ದೇವಸ್ಥಾನದ ಹತ್ತಿರ ಬಲ ತಿರುವು ಪಡೆದು ಅಂಚೆ ಕಚೇರಿ ಮೂಲಕ ಸಾಗಬೇಕು. ಕೋಣನಕುಂಟೆ ಕಡೆಯಿಂದ ಕೆಂಗೇರಿ ಕಡೆಗೆ ಚಲಿಸುವ ವಾಹನಗಳು ಅಂಚೆ ಕಚೇರಿ ಹತ್ತಿರ ಎಡ ತಿರುವು ಪಡೆದು ಪಟ್ಟಾಲಮ್ಮ ದೇವಸ್ಥಾನದ ಮೂಲಕ ಸಂಚರಿಸಬಹುದು.

ಕೆಂಗೇರಿಯಿಂದ ಬನಶಂಕರಿ ಕಡೆಗೆ ಚಲಿಸುವ ವಾಹನಗಳು ಕದಿರೇನಹಳ್ಳಿ ಬಳಿ ಬಲ ತಿರುವು ಪಡೆದು ಚನ್ನಮ್ಮ ವೃತ್ತದ ಕಡೆಗೆ ಸಂಚರಿಸುವುದು. ಮೆಜೆಸ್ಟಿಕ್‌ನಿಂದ ಉತ್ತರಹಳ್ಳಿ ಕಡೆಗೆ ಸಾಗುವ ವಾಹನಗಳು ಚಿಕ್ಕಲ್ಲಸಂದ್ರದಲ್ಲಿ ಬಲ ತಿರುವು ಪಡೆದು ಸಂಚರಿಸಬೇಕು ಎಂದು ಡಿಸಿಪಿ ಶಿವಪ್ರಕಾಶ ದೇವರಾಜ ತಿಳಿಸಿದ್ದಾರೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಸಂಖ್ಯೆ: ಅ.ಇಂ(ವಿ)/ಪ್ರ(ನಿ)/ಬೆಂ.ಮ.ಕ್ಷೇ.ವ.(ಉ)/ಕಾನಿಇಂ(ಕ)/ಸಕಾನಿಇಂ-3/ಎಫ್-98(19)/24-25/6795-96

ದಿನಾಂಕ: 12.12.2024

ಕವಿಪ್ರನಿನಿಯ, ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂ(ವಿ)/ಪ್ರ(ನಿ)/ಬೆಂ.ಮ.ಕ್ಷೇ.ವ(ಉ)/ಕಾನಿಇಂ(ಕ)/ಸಕಾಇಂ-3/24-25/ಇಪಿಆರ್-31 ದಿನಾಂಕ: 05.12.2024ರ ಅನ್ವಯ “ವಿವಿಧ ಉಪ-ಕೇಂದ್ರಗಳಿಗೆ ಅವಶ್ಯವಿರುವ 66ಕೆ.ವಿ ಹೆಚ್.ವಿ. ಬುಷಿಂಗ್ ಸರಬರಾಜು ಮಾಡಲು” ಬಿಡ್‌ಗಳನ್ನು ಆಹ್ವಾನಿಸಿದೆ.

ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು ಕವಿಪ್ರನಿನಿ ವೆಬ್‌ಸೈಟ್: https://kptcl.karnataka.gov.inಗೆ “E Procurement KPTCL” ಹೈಪರ್‌ಲಿಂಕ್‌ನಲ್ಲಿ ಅಥವಾ https://kppp.karnataka.gov.in ಇಲ್ಲಿಗೆ ದಿನಾಂಕ: 16.12.2024 ಅಥವಾ ತದನಂತರ ಲಾಗಿನ್ ಆಗಿ ಪಡೆದುಕೊಳ್ಳಬಹುದು.

ಸಹಿ/- ಅಧೀಕ್ಷಕ ಇಂಜಿನಿಯರ್, ವಿದ್ಯುತ್, ಪ್ರಸರಣ(ನಿರ್ವಹಣೆ), ಬೆಂ.ಮ.ಕ್ಷೇ.ವ., ಉತ್ತರ ವೃತ್ತ, ಕ.ವಿ.ಪ್ರ.ನಿ.ನಿ., ನೆಲ ಮಹಡಿ, ಕಚೇರಿ ಸಂಕೀರ್ಣ, ಆನಂದರಾವ್ ವೃತ್ತ, ಬೆಂಗಳೂರು-560 009.

ಕರ್ನಾಟಕ ಸರ್ಕಾರ

ಮಕ್ಕಳ ಕಲ್ಯಾಣ ಸಮಿತಿ-2, ದಂಡಾಧಿಕಾರಿಗಳ ಪೀಠ, ಬೆಂಗಳೂರು ನಗರ ಜಿಲ್ಲೆ ಸ್ವಕ್ಷತ್ರ ಟ್ರಸ್ಟ್, ಚಾಮರಾಜ ಪೇಟೆ ಬೆಂಗಳೂರು- 560018

ಪಾಲಕರ ಪತ್ತೆಗೆ ನೆರವು ದಿನಾಂಕ : 11/12/2024

ಮಕ್ಕಳ ಕಲ್ಯಾಣ ಸಮಿತಿ-2 ಬೆಂಗಳೂರು ನಗರ ಜಿಲ್ಲಾ ಕಛೇರಿಯ ಆದೇಶದ ಮೇರೆಗೆ ಈ ಕೆಳಕಂಡ ಮಗು ನಮ್ಮ ಸಂಸ್ಥೆಯ ಪಾಲನೆಯಲ್ಲಿದ್ದು, ಮಗುವಿನ ಹೇಳಿಕೆಯ ಮೇರೆಗೆ ತಾಯಿ ಮೃತ ಪಟ್ಟಿದ್ದು, ತಂದೆ-ತಾಯಿಯ ಹೆಸರು ಮಾತ್ರ ನಮ್ಮಲ್ಲಿ ಲಭ್ಯವಿದೆ. ಮಗುವಿನ ಯಾವುದೇ ಸಂಬಂಧಿಕರ ಬಗ್ಗೆ ನಮ್ಮಲ್ಲಿ ಮಾಹಿತಿ ಇಲ್ಲ. ಆದ್ದರಿಂದ ಈ ಮಗುವಿನ ಬಗ್ಗೆ ಯಾವುದೇ ಮಾಹಿತಿ ಇದ್ದಲ್ಲಿ ಅಥವಾ ಸೂಕ್ತ ದಾಖಲೆ ಇದ್ದಲ್ಲಿ, ನಮ್ಮನ್ನು ಕೂಡಲೇ ಸಂಪರ್ಕಿಸಬೇಕಾಗಿ ಸಾರ್ವಜನಿಕರಲ್ಲಿ ವಿನಂತಿ. **ದೂರವಾಣಿ: 9686661097, 9611254845**

ಮಗುವಿನ ವಿವರಗಳು: ಮಗುವಿನ ಹೆಸರು: **ಐಶ್ವರ್ಯ,** ವಯಸ್ಸು: **13,** ತಂದೆ: **ಅಬೂಬಕ್ಕರ್** (ಮಗುವಿನ ಹೇಳಿಕೆಯ ಮೇರೆಗೆ), ತಾಯಿ: **ಚಿತ್ರಾ** (ಮಗುವಿನ ಹೇಳಿಕೆಯ ಮೇರೆಗೆ) ಹುಟ್ಟಿದ ದಿನಾಂಕ: **01/10/2011,** ದೇಹದ ಬಣ್ಣ ಮತ್ತು ಗುರುತಿಸುವ ವಿವರ: **ಗೋಧಿ ಬಣ್ಣ, ಬಲ ಕಣ್ಣಿನ ಒಳ ಭಾಗದಲ್ಲಿ ಕಪ್ಪು ಮಚ್ಚೆ ಇದೆ.** ಮಾನಸಿಕ ದೈಹಿಕ ಸ್ಥಿತಿ: **ಸೌಮ್ಯ ಬೌದ್ಧಿಕ ಅಸಾಮರ್ಥ್ಯತೆ,** ದಿನಾಂಕದಿಂದ ಪ್ರಸ್ತುತ : 24/01/2023

ಕೇಂದ್ರ ರೇಷ್ಮೆ ಮಂಡಳಿ

(ಜವಳಿ ಸಚಿವಾಲಯ - ಭಾರತ ಸರ್ಕಾರ)

ಸಿಎಸ್‌ಬಿ ಕಾಂಪ್ಲೆಕ್ಸ್, ಬಿಟಿಎಂ, ಮಡಿವಾಳ, ಬೆಂಗಳೂರು-560 068

ಫೋನ್: +91 80 26282699 ಫ್ಯಾಕ್ಸ್: +91 80 26681511 ಇಮೇಲ್: estab.csb@nic.in

No.CSB-5(8)/2022-ES.II **ವಾಕ್-ಇನ್-ಸಂದರ್ಶನ** ದಿನಾಂಕ: 12.12.2024

ಆಸಕ್ತ ಅಭ್ಯರ್ಥಿಗಳು ದಿನಾಂಕ 24.12.2024 ರಂದು ಬೆಳಿಗ್ಗೆ 11 ಘಂಟೆಗೆ ಬೆಂಗಳೂರಿನ ಸಿ.ಎಸ್.ಬಿ. ಯಲ್ಲಿ ನಡೆಯಲಿರುವ ರೇಷ್ಮೆ ಸಹಾಯಕ ಹುದ್ದೆಗಳು (2) ವಾಕ್-ಇನ್-ಸಂದರ್ಶನಕ್ಕೆ ಹಾಜರಾಗಬಹುದು.

ಯೋಜನೆ ಮತ್ತು ಪಾವತಿ	ಅವಧಿ	ಅರ್ಹತೆ	ದಿನಾಂಕ ಮತ್ತು ಸಮಯ ಸಂದರ್ಶನಕ್ಕಾಗಿ
ರೇಷ್ಮೆ ಸಹಾಯಕ: 2 ಹುದ್ದೆಗಳು ಡೇಟಾ ಸಂಕಲನ, ತಂತ್ರಜ್ಞಾನ ರಕ್ಷಣೆ ಮತ್ತು ಮೇಲ್ವಿಚಾರಣೆಗಾಗಿ. ಸಂಬಳ: Rs. 21,000/- (ಕ್ರೋಢೀಕೃತ)	ಜನವರಿ 2025 ರಿಂದ ಡಿಸೆಂಬರ್ 2025	ರೇಷ್ಮೆ/ಕೃಷಿ ವಿಜ್ಞಾನದಲ್ಲಿ 4 ವರ್ಷಗಳ ಪೂರ್ಣಾವಧಿ ಪದವಿ (B.Sc) ಅಥವಾ ರೇಷ್ಮೆ ಕೃಷಿಯಲ್ಲಿ ಪಿಜಿ ಡಿಪ್ಲೊಮಾದೊಂದಿಗೆ 3 ವರ್ಷಗಳ ಪೂರ್ಣಾವಧಿ ಪದವಿ (B.Sc)	24.12.2024 ರಂದು ಬೆಳಿಗ್ಗೆ 11.00 ಘಂಟೆಗೆ; ವರದಿ ಮಾಡುವ ಸಮಯ: ಬೆಳಿಗ್ಗೆ 10.30 ಘಂಟೆಗೆ

ಹೆಚ್ಚಿನ ಮಾಹಿತಿಗಾಗಿ CSB ವೆಬ್‌ಸೈಟ್‌ಗೆ ಭೇಟಿ ನೀಡಿ: www.csb.gov.in

CBC: 41109/12/0020/2425 ಸಕ್ಷಮ ಪ್ರಾಧಿಕಾರ

पावरग्रिड POWERGRID

ಪ್ರಕಟಣೆ

1. 2019-24ನೇ ಸಾಲಿನ ಪ್ರಸರಣ ದರವನ್ನು ಸರಿಪಡಿಸಲು ಮತ್ತು “ದಕ್ಷಿಣ ಪ್ರಾಂತ್ಯದಲ್ಲಿನ ಎನ್‌ಎಲ್‌ಸಿ-2 ಪ್ರಸರಣ ವ್ಯವಸ್ಥೆ” ಅಡಿಯಲ್ಲಿನ ಅಸೆಟ್‌ಗಳ 2024-29ನೇ ಸಾಲಿನ ಟ್ಯಾರಿಫ್ ಬ್ಲಾಕ್‌ಗಾಗಿ ಪ್ರಸರಣ ದರಪಟ್ಟಿ ಇತ್ಯರ್ಥಗೊಳಿಸಲು ಅರ್ಜಿ
2. ಮೇಲೆ ತಿಳಿಸಲಾಗಿರುವ ಪ್ರಸರಣ ವ್ಯವಸ್ಥೆಯ ಫಲಾನುಭವಿಗಳು: (ಎ) ಟ್ಯಾಂಜೆಡ್ಕೊ (ಬಿ) ಟಿಎಸ್‌ಎನ್‌ಪಿಡಿಸಿಎಲ್ (ಸಿ) ಕೆಎಸ್‌ಇಬಿ (ಡಿ) ಟಿಎಸ್‌ಎಸ್‌ಪಿಡಿಸಿಎಲ್ (ಇ) ಗೋವಾ ವಿದ್ಯುತ್ ಇಲಾಖೆ (ಎಫ್) ಪುದುಚೆರಿ ವಿದ್ಯುತ್ ಇಲಾಖೆ (ಜಿ) ಎಪಿಇಡಿಸಿಎಲ್ (ಎಚ್) ಎಪಿಎಸ್‌ಪಿಡಿಸಿಎಲ್ (ಐ) ಸಿಇಎಸ್‌ಸಿ (ಜೆ) ಮೆಸ್ಕಾಂ (ಕೆ) ಬೆಸ್ಕಾಂ (ಎಲ್) ಜೆಸ್ಕಾಂ (ಎಂ) ಹೆಸ್ಕಾಂ (ಎನ್) ಎಪಿಸಿಪಿಡಿಸಿಎಲ್ (ಒ) ಕೆಪಿಟಿಸಿಎಲ್
3. ದರಪಟ್ಟಿ ವಿವರಗಳು:

ಎ) 2019-24 ಬ್ಲಾಕ್ — ಲಕ್ಷ ರೂ.ಗಳಲ್ಲಿ

ಸ್ವತ್ತಿನ ವಿವರ	ಡಿಒಸಿಒ/ ಇಸಿಒಡಿ	31.03.2024 ರಂತೆಗಿನ ಪೂರ್ಣಗೊಳಿಸುವ ವೆಚ್ಚ	2019-20	2020-21	2021-22	2022-23	2023-24
			ಸರಿಪಡಿಸುವ ಆಧಾರದ ಮೇರೆಗಿನ ಪರಿಷ್ಕೃತ ಎಎಫ್‌ಸಿ				
ಅಸೆಟ್-1(ಎ) (ಒರಿಜಿನಲ್ ಅಸೆಟ್)	01.10.1991	47277.28	6752.24	6746.25	6796.08	6872.72	6889.46
ಅಸೆಟ್-1(ಬಿ) (ಹೊಸ ಪರಿಕರಗಳು)			201.75	537.41	725.11	889.31	1367.03

ಬಿ) 2024-29 ಬ್ಲಾಕ್ — ಲಕ್ಷ ರೂ.ಗಳಲ್ಲಿ

ಸ್ವತ್ತಿನ ವಿವರ	31.03.2029 ರಂತೆಗಿನ ಪೂರ್ಣಗೊಳಿಸುವ ವೆಚ್ಚ	2024-25	2025-26	2026-27	2027-28	2028-29
		ವಾರ್ಷಿಕ ನಿಗದಿತ ಶುಲ್ಕ (ಎಎಫ್‌ಸಿ)				
ಅಸೆಟ್-1(ಎ) (ಒರಿಜಿನಲ್ ಅಸೆಟ್)	49805.31	6330.18	4144.27	4196.19	4250.06	4313.40
ಅಸೆಟ್-1(ಬಿ) (ಹೊಸ ಪರಿಕರಗಳು)		1810.74	1954.59	2097.17	2327.74	2571.78

4. ದರಪಟ್ಟಿಗಳನ್ನು ಇತ್ಯರ್ಥಪಡಿಸಲು ಸಲ್ಲಿಸಲಾಗಿರುವ ಅರ್ಜಿ ಪ್ರತಿಯನ್ನು ಅರ್ಜಿದಾರರ www.powergrid.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.
5. ಅರ್ಜಿಯಲ್ಲಿ ಅಡಕಗೊಂಡಿರುವ ದರಪಟ್ಟಿ ಇತ್ಯರ್ಥಕ್ಕೆ ಸಂಬಂಧಿತ ಪ್ರಸ್ತಾವಣೆಗಳ ಕುರಿತಾಗಿ ಯಾವುದೇ ಸಲಹೆಗಳು ಮತ್ತು ಆಕ್ಷೇಪಣೆಗಳಿದ್ದಲ್ಲಿ, ಫಲಾನುಭವಿ ಸೇರಿದಂತೆ ಯಾವುದೇ ವ್ಯಕ್ತಿಯು, ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 30 ದಿನಗಳೊಳಗೆ, ಕಾರ್ಯದರ್ಶಿ, ಕೇಂದ್ರೀಯ ವಿದ್ಯುತ್ ನಿಯಂತ್ರಣ ಆಯೋಗ, 6ನೇ, 7ನೇ ಮತ್ತು 8ನೇ ಮಹಡಿ, ಟವರ್ ಬಿ, ವರ್ಲ್ಡ್ ಟ್ರೇಡ್ ಸೆಂಟರ್, ನೌರೋಜಿ ನಗರ, ನವದೆಹಲಿ-110029 (ಅಥವಾ ಆಯೋಗದ ಕಚೇರಿ ಇರುವ ಇನ್ನೊಂದು ವಿಳಾಸಕ್ಕೆ) ಇವರ ಸಮ್ಮುಖದಲ್ಲಿ ತಮ್ಮ ಸಲಹೆ ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಬೇಕು ಹಾಗೂ ಒಂದು ಪ್ರತಿಯನ್ನು ಅರ್ಜಿದಾರರ ಕಾರ್ಪೊರೇಟ್ ಕಚೇರಿ ವಿಳಾಸಕ್ಕೆ ಕೂಡ ರವಾನಿಸಬೇಕು.

ಸ್ಥಳ: ಗುರುಗ್ರಾಮ

ದಿನಾಂಕ: 09.12.2024 — ಸಹಿ/- ಚೀಫ್ ಜನರಲ್ ಮ್ಯಾನೇಜರ್ (ವಾಣಿಜ್ಯ)

PG/NOTICE/2024/D360

ಪವರ್ ಗ್ರಿಡ್ ಕಾರ್ಪೊರೇಶನ್ ಆಫ್ ಇಂಡಿಯಾ ಲಿಮಿಟೆಡ್

(ಭಾರತ ಸರ್ಕಾರದ ಉದ್ದಿಮೆ)

ನೋಂದಾಯಿತ ಕಚೇರಿ: ಬಿ-9, ಕುತುಬ್ ಇನ್‌ಸ್ಟಿಟ್ಯೂಷನಲ್ ಏರಿಯಾ, ಕತ್ವಾರಿಯಾ ಸರಾಯ್, ನವದೆಹಲಿ-110016.

ಕಾರ್ಪೊರೇಟ್ ಕಚೇರಿ: “ಸೌದಾಮಿನಿ”, ಪ್ಲಾಟ್ ನಂ. 2, ಸೆಕ್ಟರ್-29, ಗುರುಗ್ರಾಮ-122001, (ಹರ್ಯಾಣ)

www.powergrid.in, ಸಿಐಎನ್: L40101DL1989GOI038121

ಮಹಾರತ್ನ ಸಾರ್ವಜನಿಕ ಕ್ಷೇತ್ರ ಘಟಕ

IDEMI

INSTITUTE FOR DESIGN OF ELECTRICAL MEASURING INSTRUMENTS

ವಿಸ್ತರಣೆ ಕೇಂದ್ರ, ಬೆಂಗಳೂರು

ಕ್ರಮ ಸಂಖ್ಯೆ	ಕೋರ್ಸ್ ಹೆಸರು	ಅವಧಿ	ಅರ್ಹತೆ
1	ಗ್ರಾಫಿಕ್ಸ್ ಮತ್ತು ವೆಬ್ ಡಿಸೈನರ್ ಸಹಾಯಕ (NSQF - 4)	600 Hrs	PUC/12th
2	ಮಲ್ಟಿಮೀಡಿಯಾ ಮತ್ತು ಅನಿಮೇಷನ್ ಅಸೋಸಿಯೇಟ್ (NSQF Level 4)	600 Hrs	PUC/12th
3	VFX ಅಸೋಸಿಯೇಟ್ (NSQF Level 4)	600 Hrs	PUC/12th
4	ಜೂನಿಯರ್ ವೆಬ್ ಡಿಸೈನರ್ | UI/UX (NSQF Level 4)	390 Hrs	PUC/12th
5	ಚಲನಚಿತ್ರ ಸಂಯೋಜಕ ಸಹಾಯಕ (NSQF Level 4)	600 Hrs	PUC/12th
6	3D ಅನಿಮೇಟರ್ ಸಹಾಯಕ (NSQF Level 3)	600 Hrs	10th + 2
7	ಸೀನಿಯರ್ ತಂತ್ರಜ್ಞ ಮೆಕಾಟ್ರಾನಿಕ್ಸ್ (NSQF Level 4.5)	600 Hrs	10th + 3
8	3D ಮುದ್ರಣ*	96 Hrs	10th + 2
9	ಮೊಬೈಲ್ ದುರಸ್ತಿ ಸೇವೆ ಸ್ನಾಮ್ಸಂಗ್*	480 Hrs	10th + 2
10	ಗೃಹೋಪಯೋಗಿ ಉಪಕರಣಗಳ ದುರಸ್ತಿ ಸೇವೆ*	610 Hrs	10th + 2
11	ಆಡಿಯೋ/ವೀಡಿಯೋ(AV) ಉಪಕರಣಗಳ ಸೇವೆ*	480 Hrs	10th + 2
12	PLC ಪ್ರೋಗ್ರಾಮಿಂಗ್*	96 Hrs	10th + 2
13	ಅಡ್ವಾನ್ಸ್ ಡಿಪ್ಲೋಮಾ ಇನ್ ಆಟೋಮೇಷನ್ ಕಂಟ್ರೋಲ್*	180 Hrs	10th + 2
14	ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ನೆಟ್‌ವರ್ಕಿಂಗ್*	96 Hrs	10th

SC, ST, OBC, EWS ಮತ್ತು ಮಹಿಳೆಯರಿಗೆ ಉಚಿತ

*NSQF ವಿನಾಯಿತಿ ಮತ್ತು SC/ST ಗಾಗಿ ಉಚಿತ | ನೋಂದಣಿ ಶುಲ್ಕ: ₹ 1100/-

https://bit.ly/EC-BLR-MeitY-24-25

ಅಗತ್ಯವಿರುವ ದಾಖಲೆಗಳು: ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣಪತ್ರ, ಶಿಕ್ಷಣ ಪ್ರಮಾಣಪತ್ರಗಳು, 3 ಪಾಸ್‌ಪೋರ್ಟ್ ಗಾತ್ರದ ಫೋಟೋಗಳು

ಹೆಚ್ಚಿನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ: 9019870803 / 9481236511

c/o MSME-DFO, West of Chord Road, Rajaji Nagar Industrial Estate, Bangalore, Karnataka 560010

E-Mail: ecbengaluru@idemi.org, training@idemi.org Website: www.idemi.org

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

JOB OPPORTUNITIES

Teachers/ Professors

TEACHERS REQUIRED for Maths and Science contact on whatsapp 9901501185 or email at kenmoreschool@gmail.com for Kenmore school

Hotel

WANTED RESTAURANT MANAGER, COOKS, ASSISTANT COOKS, WAITERS, CASHIERS. Good Salary + Accommodation. UNCLE'S KITCHEN, Bannerghatta Road. 99000-54468

General

WANTED COMPUTER OPERATOR Kannada/ English Knowledge Social Media Contact PANCHASHEELA POLYTECHNIC Rajarajeshwari nagara Bengaluru. 9845655761

Wanted

PERSONAL ASSISTANT FEMALE WANTED Experienced. Salary Rs. 50,000 + Incentive. Bangalore. Contact: 8660118916.

Raosaheb Wangde Master Charitable Trust's

DNYANSHREE INSTITUTE OF ENGINEERING AND TECHNOLOGY

A/P- Sonvadi-Gajvadi, Sajjangad Road, Satara. Tal. - Satara. Dist. - Satara.

NAAC B+ 1st Cycle

(PERMANENT NON-GRANTABLE)

Affiliated to Dr. Babasaheb Ambedkar Technological University, Lonere- 402 103

RECRUITMENT

Applications are invited from eligible candidates for the following Permanent Non grantable positions :

B.Tech Engineering

Sr.No	Subject/ Department	Professor	Associate Professor	Assistant Professor
1	Civil Engineering	01	01	01
2	Computer Science & Engineering	02	03	09
3	Electrical Engineering	01	01	03
4	Electronics and Telecommunication Engineering	01	02	05
5	Mechanical Engineering	01	02	01
6	Engineering Mathematics	-	-	02
7	Engineering Physics	-	-	01
8	Engineering Chemistry	-	-	02
9	Communication Skill	-	-	02
10	LIBRARIAN	-	-	01
11	Workshop Superintendent	-	-	01
12	Physical Director	-	-	01
	Total	06	09	29

The reservations for the above posts are as follows:

Sr.No.	Designation	No.of Post	SC	ST	VJ	NT-B	NT-C	NT-D	SBC	OBC	EWS	SEBC	OPEN
1	Professors	06	01	00	01	00	00	00	00	01	00	01	02
2	Associate Professors	09	01	01	01	00	00	00	00	01	01	01	03
3	Assistant Professors + LIBRARIAN	27	03	03	01	01	01	01	01	05	02	02	07
4	Workshop Superintendent	01	-	-	-	-	-	-	-	-	-	-	01
5	Physical Director	01	-	-	-	-	-	-	-	-	-	-	01
	Total	44											

Conditions:

1) Educational Qualifications, Experience, Pay Scales etc. applicable for the post is as per the norms specified by AICTE/ PCI/ COA, Govt. of Maharashtra & Dr. Babasaheb Ambedkar Technological University, Lonere, Dist.-Raigad & as modified from time to time.
2) Those who are in service should apply through proper channel.
3) Application received after the last date will not be considered. The College will not be responsible for any delay including postal delay, if any.
4) Incomplete applications or applications without the attested copies of all the supporting documents will not be entertained.
5) No T.A., D.A. will be paid for attending the interview.
6) The applications giving full particulars and attested copies of all the supporting documents should reach to the undersigned within 21 days from the date of publication of this advertisement.

Secretary
Raosaheb Wangde Master Charitable Trust, Mumbai.

Website : www.dnyanshree.edu.in and Contact Number : 8600009009 Email : admindiet@dnyanshree.edu.in

REAL ESTATE SELLING

Farm House/ Land/ Resorts

Residential/ Commercial

Sites

Flat

Jigani

2 BHK East Facing Semi furnished Flat at DLF WOODLAND HEIGHTS Sale Contact Owner 9740019001.

Out-Station

AGRICULTURE LAND and Godown for Sale: 8 Acars @ Gadag Road, Hubli and 1,43,600 sq.ft. Godown @ Harihar. 9481928895

Srirampura

SALE 30X100 north facing, 2mins from Srirampuram metro, clear title, 18000/sqft, 9739732433

J P Nagar

BDA CORNER Plots for Sale at JP Nagar 8th & 9th Phase, Contact: Owner 9740019001.

Mysore

SITES @MYSORE DTCP Facing State Highway `A`Khatha,RERA, 100%Completed Layout, Rs.1700-2050 PerSft, 85%Loan Immediate Registration, Near HD Kote Road, 10Minutes to Airport,Ring Road, 15Minutes to Palace, 9845287802 /8050001571

Vishweshwariah Layout

BDA CORNER Plots for Sale at M. Vishveshwariah Layout 2nd Block, Contact: Owner 9740019001.

BUILDERS ESSENTIAL

Doors & Windows

STEEL DOOR with hardware now available @13000 Contact 9482111666

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Industrial And Factory

INDUSTRIAL SHED FOR RENT
12500 Sq. Ft. Shed complete with power, water & Road facility at Kakati Indl. Area, Belagavi is for Rent. Ideal for Warehouse, Industry, etc.
99862 93159 82963 88890

BUSINESS

Business to Business

Finance

WE ARRANGE Mortgage, Purchase, Construction & Completion of Construction, Takeover Loans from Banks. Contact: 9353705002

CAUTION NOTICE
Readers are advised to make appropriate through enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats,Con verted& Agriculture Lands Call:7204995189

PERSONAL

Change of Name

CHANGE OF NAME
I, MOHAMED SAMI residing at No.301, Block No. 18, KHB Apartment, Shirke, Kengeri Upanagara, Bangalore-560060, have changed my name to MOHAMMED SAMI vide affidavit dated 09/12/2024, before notary Ravi, Bangalore. Henceforth I shall be called MOHAMMED SAMI only.

Lost

DOCUMENT LOST
I, Manjunath HK Residing at # 398, 4th A Main, Maruthi Layout, Vasanthapura, Bangalore-560061 have lost my original Sale Deed near Vasanthapura Bearing Document No. Identification : JAN 1-1895- 2013-14, Book1, CD No JAYD 173 if anybody found please call: 7975167797 or nearby Police Station.

DH Classifieds ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com BOOK NOW
Book your ad with us now! For more details contact: 9845114560 | 9901641752

CONNECT

ನೈಟಿಂಗೇಲ್ ಮೆಡಿಕಲ್ ಟ್ರಸ್ಟ್
8P6, ಕಸ್ತೂರಿನಗರ, 3ನೇ ಎ ಕ್ರಾಸ್ ರಸ್ತೆ, ಪೂರ್ವ NGEF ಲೇಔಟ್, ಬಾಣಸವಾಡಿ, ಬೆಂಗಳೂರು - 560043

ಉಚಿತ ನರ್ಸಿಂಗ್ ಸಹಾಯಕರ ತರಬೇತಿ

ಹಿರಿಯ ನಾಗರಿಕರ ಯೋಗಕ್ಷೇಮಕ್ಕಾಗಿ ಕಾರ್ಯ ನಿರ್ವಹಿಸುತ್ತಿರುವ ಪ್ರತಿಷ್ಠಿತ, ಲಾಭರಹಿತ ಸಂಸ್ಥೆಯಾದ ನೈಟಿಂಗೇಲ್ ಮೆಡಿಕಲ್ ಟ್ರಸ್ಟ್ **ಉಚಿತ ನರ್ಸಿಂಗ್ ಸಹಾಯಕರ ತರಬೇತಿ** ಯನ್ನು ನೀಡುತ್ತದೆ.

- ಅವಧಿ: 1 ತಿಂಗಳು
- ಪ್ರಾಯೋಗಿಕ ಅನುಭವ
- ಗೃಹ ಆರೈಕೆ ಮತ್ತು ಆರೋಗ್ಯ ಸಂಸ್ಥೆಗಳಲ್ಲಿ ಉತ್ತಮ ಸಂಬಳದೊಂದಿಗೆ ಉದ್ಯೋಗಾವಕಾಶಗಳು
- ಸ್ಟೈಪೆಂಡ್ 5000 ರೂಪಾಯಿಗಳು
- ಉದ್ಯೋಗ ನಿಯೋಜನೆಯಲ್ಲಿ ಸಹಕಾರ ಮತ್ತು ಪ್ರಮಾಣಪತ್ರ
- ತರಬೇತಿ ಸ್ಥಳ:- ಕಸ್ತೂರಿನಗರ, ಬಾಣಸವಾಡಿ

ಅರ್ಹತೆ:- ಅಭ್ಯರ್ಥಿಯು 10 ನೇ ತರಗತಿ ಉತ್ತೀರ್ಣರಾಗಿರಬೇಕು ಮತ್ತು ವಯಸ್ಸು 18 ರಿಂದ 40 ರ ಒಳಗಿರಬೇಕು.

ಆಸಕ್ತರು 08042426565 ಅಥವಾ 9243737217 ಗೆ ಕರೆ ಮಾಡಿ.

ಸೀಮಿತ ಸೀಟುಗಳು ಲಭ್ಯ ಮೊದಲ ಬ್ಯಾಚ್ ನ ತರಬೇತಿ ಡಿಸೆಂಬರ್16, 2024 ರಿಂದ ಪ್ರಾರಂಭವಾಗುತ್ತದೆ.

ISF MEGA SALE IS NOW AT BANGALORE

LEADING EXPORTERS OF FOOTWEAR AND LEATHER PRODUCTS
DEC 6 TO 16
10 AM - 9 PM
WILL BE ON SALE: SHOES SANDALS HANDBAGS WALLETS BELTS JACKETS
SAFINA PLAZA - GULMOHAR HALL INFANTRY ROAD, BANGALORE 560001

SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 13.50 CRORES.
Call: 96322-37557/ 96069-07557

ಟೆಕಿ ಆತ್ಮಹತ್ಯೆ ಪ್ರಕರಣ: ಆರೋಪಿಗಳು ಹೊರ ರಾಜ್ಯಕ್ಕೆ ತೆರಳಿರುವ ಶಂಕೆ

ಬಂಧನ ಭೀತಿ: ಅತುಲ್ ಪತ್ನಿ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಫ್ಟ್‌ವೇರ್ ಎಂಜಿನಿಯರ್ ಅತುಲ್ ಸುಭಾಷ್ (34) ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಉತ್ತರ ಪ್ರದೇಶಕ್ಕೆ ತೆರಳಿರುವ ಮಾರತ್‌ಹಳ್ಳಿ ಠಾಣೆ ಪೊಲೀಸರ ತಂಡ, ಆರೋಪಿಗಳಿಗಾಗಿ ಹುಡುಕಾಟ ನಡೆಸಿದೆ.

ಪ್ರಕರಣದ ತನಿಖಾಧಿಕಾರಿ ಆಗಿರುವ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಜ್ಞಾನದೇವ್ ನೇತೃತ್ವದ ತಂಡ ಜೌನಾಪುರ ತಲುಪಿದೆ. ಆದರೆ, ಅತುಲ್ ಸುಭಾಷ್ ಪತ್ನಿ ನಿಖಿತಾ ಸಿಂಘಾನಿಯಾ, ತಾಯಿ ನಿಶಾ ಸಿಂಘಾನಿಯಾ, ಸಹೋದರ ಅನುರಾಗ್ ಸಿಂಘಾನಿಯಾ ಹಾಗೂ ಸಂಬಂಧಿ ಸುಶೀಲ್ ಸಿಂಘಾನಿಯಾ ಅವರು ತಮ್ಮ ಮನೆಗೆ ಬೀಗ ಹಾಕಿ ಪರಾರಿಯಾಗಿದ್ದಾರೆ. ನಿಶಾ ಮತ್ತು ಅನುರಾಗ್ ಅವರು ಬೈಕ್‌ನಲ್ಲಿ ತೆರಳಿದರು ಎಂದು ಸ್ಥಳೀಯರು ತಿಳಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅತುಲ್ ಸುಭಾಷ್

‘ಆರೋಪಿಗಳು ಹೊರ ರಾಜ್ಯಕ್ಕೆ ಪರಾರಿಯಾಗಿರುವ ಸಾಧ್ಯತೆ ಇದೆ. ಮೊದಲು ನೋಟಿಸ್ ಜಾರಿಗೊಳಿಸಿ ಮೃತನ ಪತ್ನಿಯ ವಿಚಾರಣೆ ನಡೆಸಲಾಗುವುದು. ವಿಚಾರಣೆಗೆ ಸಹಕರಿಸದಿದ್ದರೆ ಕಾನೂನು ಕ್ರಮ ಜರುಗಿಸಲಾಗುವುದು. ಬಳಿಕ ಬಿಹಾರಕ್ಕೆ ತೆರಳಲಿರುವ ಪೊಲೀಸರು, ಅತುಲ್ ಸುಭಾಷ್ ಅವರ ಪೋಷಕರು, ಸಹೋದರನಿಂದ ಹೇಳಿಕೆ ದಾಖಲಿಸಿಕೊಳ್ಳಲಿದ್ದಾರೆ’ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

‘ಅತುಲ್ ವಿರುದ್ಧ ನಿಖಿತಾ 9 ಪ್ರಕರಣಗಳನ್ನು ದಾಖಲಿಸಿದ್ದಳು. ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾಗಲು ಬೆಂಗಳೂರಿನಿಂದ ಜೌನಾಪುರಕ್ಕೆ 40 ಬಾರಿ ಹೋಗಿದ್ದ, ಆಕೆಯ ಮನೆಯವರಿಂದ ತುಂಬಾ ಕಷ್ಟಪಟ್ಟಿದ್ದ’ ಎಂದು ಅತುಲ್ ಪೋಷಕರು ಆರೋಪಿಸಿದ್ದಾರೆ.

ಅತುಲ್ ಸುಭಾಷ್ ಸಹೋದರ ಬಿಕಾಸ್ ಕುಮಾರ್ ನೀಡಿದ ದೂರಿನ ಅನ್ವಯ ಮಾರತ್ ಹಳ್ಳಿ ಠಾಣೆಯಲ್ಲಿ ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಾಯ್ದೆ 108 (ಆತ್ಮಹತ್ಯೆಗೆ ಪ್ರಚೋದನೆ) ಆರೋಪದಡಿ ಎಫ್‌ಐಆರ್ ದಾಖಲಾಗಿದೆ.

‘ಅತುಲ್ ಸುಭಾಷ್, ನಿಖಿತಾ ಸಿಂಘಾನಿಯಾಗೆ 2019ರಲ್ಲಿ ಮದುವೆಯಾಗಿತ್ತು. ದಂಪತಿಗೆ 4 ವರ್ಷದ ಗಂಡು ಮಗು ಇದೆ. ಆದರೆ ತನ್ನ ತಾಯಿ ಹಾಗೂ ಸಹೋದರನ ಕುಮ್ಮಕ್ಕಿನಿಂದ ಅತುಲ್ ವಿರುದ್ಧ ನಿಕಿತಾ ಸುಳ್ಳು ದೂರು ದಾಖಲಿಸಿದ್ದಳು ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಆರೋಪಿಗಳು ಅತುಲ್ ಸುಭಾಷ್‌ಗೆ ಪುತ್ರನ ಭೇಟಿಗೂ ಅವಕಾಶ ನೀಡದೆ ₹30 ಲಕ್ಷಕ್ಕೆ ಬೇಡಿಕೆಯಿಟ್ಟಿದ್ದರು. ಅಲ್ಲದೆ, ಪ್ರಕರಣದ ನ್ಯಾಯಾಲಯದ ಕಲಾಪಗಳಿಗೆ ಅತುಲ್ ಸುಭಾಷ್ ಹಾಜರಾದ ಸಂದರ್ಭದಲ್ಲಿ, ‘₹3 ಕೋಟಿ ಕೊಡು, ಇಲ್ಲದಿದ್ದರೆ ಬದುಕಿರಬೇಡ’ ಎಂದು ಅಣಕಿಸುತ್ತಿದ್ದರು. ಇದರಿಂದ ಮಾನಸಿಕವಾಗಿ ಹಾಗೂ ದೈಹಿಕವಾಗಿ ನೊಂದು ಅತುಲ್ ಸುಭಾಷ್ ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಬಿಕಾಸ್ ಕುಮಾರ್ ತಮ್ಮ ದೂರಿನಲ್ಲಿ ಉಲ್ಲೇಖಿಸಿದ್ದಾರೆ’ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ನ್ಯಾಯಕ್ಕಾಗಿ ಆಗ್ರಹ

ಟೆಕಿ ಅತುಲ್ ಸುಭಾಷ್ ಆತ್ಮಹತ್ಯೆ ಪ್ರಕರಣ ಸಾಮಾಜಿಕ ಮಾಧ್ಯಮಗಳಲ್ಲೂ #JusticeForAtulSubhash ಮತ್ತು #BengaluruSuicideCase ಹ್ಯಾಶ್‌ಟ್ಯಾಗ್‌ಗಳು ಟ್ರೆಂಡ್ ಆಗಿವೆ.

ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲೂ ಬಳಕೆದಾರರು ನ್ಯಾಯಕ್ಕಾಗಿ ಬೇಡಿಕೆ ಇರಿಸಿದ್ದಾರೆ.

ಭಾರತದಲ್ಲಿ ನ್ಯಾಯ ವ್ಯವಸ್ಥೆಯು ಹದಗೆಟ್ಟಿದ್ದು, ನ್ಯಾಯಾಂಗ ವ್ಯವಸ್ಥೆಯೇ ಸಂಪೂರ್ಣವಾಗಿ ಬದಲಾಗಬೇಕಿದೆ ಎಂದು ಮತ್ತೊಬ್ಬ ಬಳಕೆದಾರರು ಅಭಿಪ್ರಾಯಪಟ್ಟಿದ್ದಾರೆ.

ಅತುಲ್ ಸುಭಾಷ್ ಅವರ ಪತ್ನಿಯನ್ನು ಕೆಲಸದಿಂದ ತೆಗೆದು ಹಾಕುವಂತೆಯೂ ಬೇಡಿಕೆ ಬಲವಾಗಿ ಕೇಳಿಬಂದಿದೆ. ಆತ್ಮಹತ್ಯೆಗೂ ಮುನ್ನ ಅತುಲ್ ಸುಭಾಷ್ ಮಾಡಿದ್ದ 90 ನಿಮಿಷಗಳ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

ರಾಷ್ಟ್ರಪತಿ, ‘ಸುಪ್ರೀಂ’ ನ್ಯಾಯಮೂರ್ತಿಗೆ ಇ–ಮೇಲ್

ಅತುಲ್ ಸುಭಾಷ್ ಅವರು ಆತ್ಮಹತ್ಯೆಗೂ ಮುನ್ನ ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗೆ ಇ-ಮೇಲ್ ಕಳುಹಿಸಿದ್ದರು ಎಂಬ ವಿಚಾರ ಪೊಲೀಸ್ ತನಿಖೆ ವೇಳೆ ಗೊತ್ತಾಗಿದೆ.

‘ಡಿಸೆಂಬರ್ 9ರಂದು ರಾತ್ರಿ 1.31ಕ್ಕೆ ಅತುಲ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗೆ ಇ-ಮೇಲ್ ಕಳುಹಿಸಿದ್ದು, ‘ನಿಮ್ಮ ಕೈಯಲ್ಲಿ ದೊಡ್ಡ ಅಧಿಕಾರ ಇದೆ. ಮನಸ್ಸು ಮಾಡಿದರೆ ದೇಶದಲ್ಲಿ ಬದಲಾವಣೆ ತರಬಹುದು’ ಎಂದು ಉಲ್ಲೇಖಿಸಿದ್ದಾರೆ.

‘ತನ್ನ ಮೇಲೆ ಸುಳ್ಳು ಪ್ರಕರಣ ದಾಖಲಿಸಿ, ಸೆಕ್ಷನ್‌ಗಳನ್ನು ಹಾಕಿದ್ದಾರೆ. ನ್ಯಾಯಾಂಗ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆ ತರಬೇಕು ಎಂಬ ವಿಚಾರವನ್ನು ತಿಳಿಸಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಜಾತಿ–ಧರ್ಮದ ಹೆಸರಲ್ಲಿ ರಾಜಕಾರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಾಜದಲ್ಲಿರುವ ಪ್ರತಿಯೊಬ್ಬರಿಗೂ ಗುಣಮಟ್ಟದ ಶಿಕ್ಷಣ, ಆರೋಗ್ಯ ಸೇರಿದಂತೆ ಮೂಲ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಯೋಚಿಸಬೇಕಿದ್ದ ರಾಜಕೀಯ ಪಕ್ಷಗಳು, ಜಾತಿ–ಧರ್ಮದ ಆಧಾರದ ಮೇಲೆ ರಾಜಕಾರಣ ಮಾಡುತ್ತಿವೆ’ ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯ ಘಟಕದ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ಹೇಳಿದರು.

‘ದೆಹಲಿ, ಪಂಜಾಬ್ ರಾಜ್ಯಗಳಲ್ಲಿ ಸಂವಿಧಾನದ ಮೂಲ ಆಶಯದಂತೆ ನಡೆದುಕೊಂಡ ಪರಿಣಾಮ ಅಲ್ಲಿ ಯಾವುದೇ ರೀತಿಯ ಜಾತಿ–ಧರ್ಮದ ಹೋರಾಟಗಳು ನಡೆಯುವುದಿಲ್ಲ. ಆದರೆ ಕರ್ನಾಟಕದ ರಾಜಕಾರಣಿಗಳು ಮತಬ್ಯಾಂಕ್ ರಾಜಕಾರಣವನ್ನು ಮುಂದುವರೆಸುವ ಮೂಲಕ ತಾವೇ ಹೋರಾಟದ ನೇತೃತ್ವವನ್ನು ವಹಿಸಿಕೊಳ್ಳುತ್ತಿದ್ದಾರೆ. ಶಾಲೆ, ಆರೋಗ್ಯ ಸೇವೆಗಳನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಹೋರಾಟಗಳು ಮಾಡುತ್ತಿಲ್ಲ’ ಎಂದು ದೂರಿದರು.

‘₹170 ಕೋಟಿ ಖರ್ಚು ಮಾಡಿ ಸಮೀಕ್ಷೆ ನಡೆಸಿದರೂ, ಜೆಡಿಎಸ್, ಕಾಂಗ್ರೆಸ್, ಬಿಜೆಪಿ (ಜೆಸಿಬಿ) ಪಕ್ಷಗಳು ಅಧಿಕಾರದಲ್ಲಿದ್ದರೂ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಜಾತಿ ವರದಿಯನ್ನು ಮುಚ್ಚಿಟ್ಟು ಸದಾಕಾಲ ಇಂತಹ ಜಾತಿ ಹೋರಾಟಗಳನ್ನು ನಡೆಸಿ ತಮ್ಮ ತಮ್ಮ ಪಕ್ಷಗಳ ಮತ ಬ್ಯಾಂಕನ್ನು ಭದ್ರಪಡಿಸಿಕೊಳ್ಳುತ್ತಾರೆ’ ಎಂದು ಆರೋಪಿಸಿದರು.

‘ರಾಜ್ಯ ಸರ್ಕಾರವು ಹೋರಾಟಗಾರರ ಮೇಲೆ ದಬ್ಬಾಳಿಕೆಯ ಹಾಗೂ ದಮನಕಾರಿ ನೀತಿಯನ್ನು ಕೈಬಿಡಬೇಕು. ಹೋರಾಟಗಾರರ ಬೇಡಿಕೆಗೆ ಸ್ಪಂದಿಸಬೇಕೆಹೊರತು,ಸರ್ಕಾರವೇಲಾಠಿಚಾರ್ಜ್‌ನಂತಹ ಬಲಪ್ರಯೋಗ ಮಾಡಿದ್ದಲ್ಲಿ ಯಾವುದೇ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ’ ಎಂದು ತಿಳಿಸಿದ್ದಾರೆ.

CAKE SHOW NOW AT PALACE GROUND
ವಾರ್ಷಿಕ ಕೇಕ್ ಉತ್ಸವ
ಈಗ ತ್ರಿಪುರ ವಾಸಿನಿ, ಅರಮನೆ ಮೈದಾನದಲ್ಲಿ
Millex presents
50th ANNUAL
CAKE SHOW
Association with
GREAT TASTES Since 1905
IBCA
National Consumer Fair
OVER 25+ CAKES
Dream Castle in Cake
13th Dec - 1st Jan 2025 | Daily : 11am - 9pm | Call: 8722200087
TRIPURA VASINI, PALACE GROUNDS, BENGALURU

ಪ್ರಕಟಣೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಸನ್ಮಾನ್ಯ ಉಪಮುಖ್ಯಮಂತ್ರಿಗಳು

ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿರುವ ಕಬ್ಬಿನ ತೂಕದ ಯಂತ್ರಗಳಲ್ಲಿನ ಲೋಪದೋಷಗಳಿಂದಾಗಿ ಕಬ್ಬಿನ ತೂಕದಲ್ಲಿ ವ್ಯತ್ಯಾಸ ಆಗುತ್ತಿದೆ ಮತ್ತು ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಅನ್ಯಾಯವಾಗುತ್ತಿದೆ ಎಂದು ಕಬ್ಬು ಬೆಳಗಾರರು ಹಾಗೂ ಕಬ್ಬು ಬೆಳೆಗಾರರ ಸಂಘಗಳು ದೂರುಗಳನ್ನು ಸಲ್ಲಿಸುತ್ತಿದ್ದಾರೆ. ಕಾರ್ಖಾನೆಗಳು ಈ ರೀತಿ ಮಾಡುವುದರಿಂದ ಕಬ್ಬು ಬೆಳಗಾರರಿಗೆ, ಕಬ್ಬು ಕಟಾವು ಮಾಡುವ ಹಾಗೂ ಕಬ್ಬು ಸಾಗಾಣಿಕೆ ಮಾಡುವವರಿಗೆ ನಷ್ಟ ಉಂಟಾಗುತ್ತದೆ ಎಂದು ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಜರುಗಿದ ರೈತರ ಸಭೆಯಲ್ಲಿ ದೂರುಗಳು ದಾಖಲಾಗುತ್ತಿವೆ. ರೈತರು ಬೆಳೆದಂತಹ ಕಬ್ಬಿಗೆ ಕಾರ್ಖಾನೆಗಳು ತೂಕದಲ್ಲಿ ಮಾಡುತ್ತಿರುವ ಮೋಸವನ್ನು ಕಟ್ಟುನಿಟ್ಟಾಗಿ ತಡೆಯಲು ಸರ್ಕಾರ ಈಗಾಗಲೆ ಎಲ್ಲಾ ಕಾರ್ಖಾನೆಗಳಲ್ಲಿ ಅನಲಾಗ್ ತೂಕದ ಯಂತ್ರಗಳನ್ನು ಬದಲಾಯಿಸಿ ಡಿಜಿಟಲ್ ಲೋಡ್‌ಸೆಲ್ ತೂಕದ ಯಂತ್ರಗಳನ್ನು ಅಳವಡಿಲು ಕ್ರಮವಹಿಸಿದೆ. ಎಪಿಎಂಸಿ ವತಿಯಿಂದ ರಾಜ್ಯದ ವಿವಿಧೆಡೆ ಈಗಾಗಲೆ 15 ಕಡೆಗಳಲ್ಲಿ ಡಿಜಿಟಲ್ ತೂಕದ ಯಂತ್ರಗಳನ್ನು ಅಳವಡಿಸಲು ಆಡಳಿತಾತ್ಮಕ ಮಂಜುರಾತಿ ನೀಡಲಾಗಿದೆ.

ಆದಾಗ್ಯೂ ಕಬ್ಬಿನ ತೂಕದಲ್ಲಿ ಮೋಸ/ವ್ಯತ್ಯಾಸ ಕಂಡುಬಂದಲ್ಲಿ ರೈತರು ಹಾಗೂ ಕಬ್ಬು ಬೆಳೆಗಾರರ ಸಂಘಗಳು ತಮ್ಮ ದೂರುಗಳನ್ನು ನೇರವಾಗಿ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ/ಉಪ ನಿರ್ದೇಶಕರು, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ರವರಿಗೆ ಸಲ್ಲಿಸುವುದು ಅಥವಾ ಈ ಕೆಳಗಿನ ವಿಳಾಸಕ್ಕೆ ನೇರವಾಗಿ ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸಿದಲ್ಲಿ ಸೂಕ್ತ ಕ್ರಮ ಜರುಗಿಸಲಾಗುವುದು.

ಸನ್ಮಾನ್ಯ ಸಚಿವರು ರೈತರನ್ನು ಉದ್ದೇಶಿಸಿ ಮಾತನಾಡುತ್ತಿರುವುದು

ಶ್ರೀ ಶಿವಾನಂದ ಎಸ್. ಪಾಟೀಲ್
ಸನ್ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ
ಹಾಗೂ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರು

ಮಾನ್ಯ ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಸಚಿವರನ್ನು ಸಂಪರ್ಕಿಸಬೇಕಾದ ವಿಳಾಸ
ಕೊಠಡಿ ಸಂಖ್ಯೆ 06–07 ನೆಲ ಮಹಡಿ,
ವಿಕಾಸಸೌಧ ಬೆಂಗಳೂರು –560001
ಫೋನ್: 08022374818 –22034715,
ಇ–ಮೇಲ್: mtsagok@gmail.com

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರನ್ನು ಸಂಪರ್ಕಿಸಬೇಕಾದ ವಿಳಾಸ
ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ,
ಸಿ.ಟಿ.ಎಸ್ ನಂ:4125/1ಬಿ, ಗಣೇಶಪುರ ರಸ್ತೆ,ಲಕ್ಮೀ ಟೆಕ್,
ಬೆಳಗಾವಿ–590009.ಫೋ.ನಂ: 0831–2434339
ಇ–ಮೇಲ್: canecommissioner@gmail.com

ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಇವರನ್ನು ಸಂಪರ್ಕಿಸುವ ವಿಳಾಸ,
ಕರ್ನಾಟಕ ಸರ್ಕಾರದ ಸಚಿವಾಲಯ, ಕೊಠಡಿ ಸಂಖ್ಯೆ: 135, ಮೊದಲನೇ ಮಹಡಿ,
ವಿಕಾಸ ಸೌಧ, ಬೆಂಗಳೂರು–560001. ದೂರವಾಣಿ: 080–22034625 ಫ್ಯಾಕ್ಸ್: 080–22353932
ಇ–ಮೇಲ್: secymines-ci@karnataka.gov.in

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ
ಕಾರ್ಮಿಕ ಇಲಾಖೆ

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

2023–24 ಮತ್ತು 2024–25ನೇ ಸಾಲಿನ ಶೈಕ್ಷಣಿಕ ಧನ ಸಹಾಯ ಪಡೆಯಲು ಅರ್ಹ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ತಮ್ಮ ಮಕ್ಕಳ ಅರ್ಜಿಗಳನ್ನು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ (ಎಸ್.ಎಸ್.ಪಿ) ಮೂಲಕ ಅರ್ಜಿಯನ್ನು ಸಲ್ಲಿಸಲು **ದಿನಾಂಕ: 31–12–2024ರ ವರೆಗೆ** ವಿಸ್ತರಿಸಿದೆ.

ಎಲ್ಲಾ ನೋಂದಾಯಿತ ಕಟ್ಟಡ ಕಾರ್ಮಿಕರು ಇ–ಕಾರ್ಡ್ ಪಡೆಯಲು https://kbocwwb.karnataka.gov.in ತಂತ್ರಾಂಶದಲ್ಲಿ ನೋಂದಣಿ ಸಂಖ್ಯೆ (Registration Number) ಮತ್ತು ಉಲ್ಲೇಖ ಸಂಖ್ಯೆ (Reference Number) ಯನ್ನು ನಮೂದಿಸಿ ಕಡ್ಡಾಯವಾಗಿ **ದಿನಾಂಕ: 31–12–2024 ರೊಳಗೆ** ಆಧಾರ್ ಕಾರ್ಡ್ ಸಂಖ್ಯೆಯನ್ನು ಲಿಂಕ್ ಮಾಡಲು ಸೂಚಿಸಿದೆ. ಅಲ್ಲದೇ ಎಲ್ಲಾ ನೋಂದಾಯಿತ ಕಟ್ಟಡ ಕಾರ್ಮಿಕರು ತಮ್ಮ ಆಧಾರ್ ಸಂಖ್ಯೆಯನ್ನು ಬ್ಯಾಂಕ್ ಖಾತೆಯೊಂದಿಗೆ ಜೋಡಣೆ ಮಾಡಿ ಎನ್.ಪಿ.ಸಿ.ಐ ಮ್ಯಾಪಿಂಗ್ (NPCI Mapping) ಮಾಡಿಸುವುದು ಕಡ್ಡಾಯವಾಗಿರುತ್ತದೆ.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ ಹಾಗೂ ಮಾನ್ಯ ಕಾರ್ಮಿಕ ಸಚಿವರು ಮತ್ತು ಮಂಡಳಿಯ ಅಧ್ಯಕ್ಷರಾದ ಶ್ರೀ ಸಂತೋಷ್ ಎಸ್. ಲಾಡ್ ರವರು ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯ ಸಂದರ್ಭದಲ್ಲಿ ಮಕ್ಕಳೊಂದಿಗಿರುವ ಸಾಂದರ್ಭಿಕ ಚಿತ್ರ.

ಈ ಹಿಂದೆ ಪ್ರೀ ಮೆಟ್ರಿಕ್ (1 ರಿಂದ 10ನೇ ತರಗತಿ) ತರಗತಿಗಳಲ್ಲಿ ಶೈಕ್ಷಣಿಕ ಧನಸಹಾಯಕ್ಕಾಗಿ ಎಸ್.ಎಸ್.ಪಿ ತಂತ್ರಾಂಶದ ಮೂಲಕ ಕರ್ನಾಟಕ ಸರ್ಕಾರದ ಯಾವುದಾದರೂ ಇಲಾಖೆಗೆ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿ ವಿದ್ಯಾರ್ಥಿವೇತನ ಪಡೆದಿದ್ದಲ್ಲಿ ಅಂತಹ ವಿದ್ಯಾರ್ಥಿಗಳ ಅರ್ಜಿಗಳನ್ನು ಮುಂದಿನ ವರ್ಷ ಸ್ವಯಂ ಚಾಲಿತ ನವೀಕರಣದ (Auto renewal) ಮೂಲಕ ಎಸ್.ಎಸ್.ಪಿ ತಂತ್ರಾಂಶದಲ್ಲಿ ಸ್ವೀಕರಿಸುವುದರಿಂದ ಪುನಃ ಪ್ರೀ ಮೆಟ್ರಿಕ್ ಶೈಕ್ಷಣಿಕ ಧನಸಹಾಯಕ್ಕಾಗಿ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.

ಶ್ರೀಮತಿ ಭಾರತಿ ಡಿ., ಭಾ.ಆ.ಸೇ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಮತ್ತು ಕಾರ್ಯದರ್ಶಿಗಳು
ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ
ಕಾರ್ಮಿಕರ ಕಲ್ಯಾಣ ಮಂಡಳಿ

ಡಾ. ಎನ್.ವಿ. ಪ್ರಸಾದ್, ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು
ಕಾರ್ಮಿಕ ಇಲಾಖೆ

ಎಲ್ಲ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ನಿರಂತರ “ಪ್ರಯತ್ನಿಸಿ ಶ್ರಮಿಸುವುದು”– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

There can't be a better time than now to bring home your new Kia. Your favorite tech-loaded, inspiring Kia now comes with astounding benefits and privileges. Visit your nearest dealership today.

Exclusive ownership benefits

Exchange & Loyalty Benefits* up to ₹60 000 (On Seltos)	Extended Warranty** up to 5 years (On Seltos and Carens)	Additional Benefits^ up to ₹60 000 (On Seltos, Sonet and Carens)

Hassle-free exchange services: New car with old EMI# - packaged exchange deal on your new car | Car evaluation at your convenience | Best price for your old car | Hassle-free transfer of ownership | Complete assurance of your car going into the right hands

Exclusive scrappage benefits of up to ₹20 000/-~.
Additional benefits for select corporates (consumer, accessory, extended warranty and maintenance package benefits).
Kia cars are now available through Canteen Stores Department (CSD) & Kendriya Police Kalyan Bhandar (KPKB).

For more information, visit our dealership or contact:
1800 108 5000 | 093195 91407 | www.kia.com/in | Book Kia | kiacare@kiaindia.net | Look for "Kia India" @

Terms & condition apply. *Exchange and loyalty benefits is a split of ₹40 000 exchange benefit and loyalty benefit up to ₹20 000 for existing Kia customers. **Limited period offer. Applicable on all trims of Seltos and select trims of Carens. 3 years standard warranty and 2 years extended warranty. ^Additional benefit amount is for highest variant and same may vary from model to model. Applicable on select trims of Seltos, Sonet and Carens. #Depending on the old car age & quality, old car price to be considered as down payment. Balance will be converted into EMI for full tenure, combined with finance & insurance benefits. ~Defined benefit is 1.5% of the value of Ex-showroom price of the purchased car or up to ₹20 000 which-ever is lower. The product shown is for representation purposes only. Actual features, colors, and specifications may not be part of standard fitment and may vary. Kia India Pvt. Ltd. reserves the right to make any changes with respect to the trims, colors, specifications, and other details of any model as mentioned or to modify/discontinue any offer/scheme/service without prior notice. These are meant to keep you safe on the roads. Visit your nearest Kia dealership for more details. Kia urges you to follow traffic rules.

VST Kia: Palace Road: Tel: 9606988123; Yeshwanthpur: Tel: 9606988124 **Taapasi Kia:** Kalyan Nagar, Tel: 8095537777; Kormangala, Tel: 9071177333 **Epitome Kia:** Whitefield, Tel: 9606970216; Yelahanka, Tel: 7406343339; Kolar, Tel: 8951903224; Avalahalli, Tel: 7022317666 **Naara Kia:** J.P Nagar, Tel: 7406528200; Kanakapura Road, Bangalore, Tel: 9071010099 **PPS Kia:** Mysore Road, Tel: 6309990010; Tumkur, Tel: 6303622210 **JSP Kia:** Hosur Road, Tel: 9606011244; Bellandur, Tel: 9071077717; Sarjapur, Tel: 9513138856 **Advaith Kia:** Lalbagh Main Road | Banashankari | Basaveshwar Nagar | Magadi Road, Tel: 9611006006

ಕೊಡಿಗೇಹಳ್ಳಿಯ ಬಾಲಾಜಿ ನಗರದ ಫ್ಲ್ಯಾಟ್‌ನಲ್ಲಿ ಘಟನೆ • ಸ್ಥಳದಲ್ಲಿ ದೊರೆತ ಮರಣ ಪತ್ರ • ಸಹೋದರನಿಂದ ದೂರು

ಇಬ್ಬರು ಮಕ್ಕಳ ಕೊಂದು ತಾಯಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡಿಗೇಹಳ್ಳಿಯ ಬಾಲಾಜಿ ಲೇಔಟ್‌ನ ಅಪಾರ್ಟ್‌ಮೆಂಟ್‌ವೊಂದರ ಫ್ಲ್ಯಾಟ್‌ನಲ್ಲಿ ಇಬ್ಬರು ಮಕ್ಕಳನ್ನು ಉಸಿರುಗಟ್ಟಿಸಿ ಕೊಲೆ ಮಾಡಿ ತಾಯಿಯೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಪುತ್ರ ಶ್ರೇಯಾನ್ (6) ಹಾಗೂ ಪುತ್ರಿ ಚಾರ್ವಿ(ಒಂದು ವರ್ಷ ಒಂಬತ್ತು ತಿಂಗಳು) ಕೊಲೆಯಾದವರು. ಇಬ್ಬರು ಮಕ್ಕಳನ್ನು ಕೊಲೆ ಮಾಡಿದ ಬಳಿಕ ತಾಯಿ ಕುಸುಮಾ (35) ಅವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ತುಮಕೂರು ಜಿಲ್ಲೆಯ ಮಧುಗಿರಿಯ ಸುರೇಶ್ (40) ಅವರು ಯಶವಂತಪುರ ನಿವಾಸಿ ಕುಸುಮಾ ಅವರನ್ನು 2015ರಲ್ಲಿ ವಿವಾಹ ಆಗಿದ್ದರು. ದಂಪತಿ ಬಾಲಾಜಿ ಲೇಔಟ್‌ನ ಫ್ಲ್ಯಾಟ್‌ನಲ್ಲಿ ನೆಲಸಿದ್ದರು. ಸುರೇಶ್ ಅವರು ವೈಟ್‌ಫೀಲ್ಡ್‌ನ ಖಾಸಗಿ ಕಂಪನಿಯಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದರು. ಚಿಕ್ಕ ಮಕ್ಕಳಿದ್ದ ಕಾರಣಕ್ಕೆ ಕುಸುಮಾ ಅವರು ಕೆಲವು ತಿಂಗಳಿಂದ ಕೆಲಸಕ್ಕೆ ಹೋಗುತ್ತಿರಲಿಲ್ಲ' ಎಂದು ಮೂಲಗಳು ಹೇಳಿವೆ.

ಸ್ಥಳದಲ್ಲಿ ದೊರೆತ ಮರಣ ಪತ್ರ: ಘಟನಾ ಸ್ಥಳದಲ್ಲಿ ಮರಣ ಪತ್ರ ದೊರೆತಿದೆ. ಅದನ್ನು ವಶಕ್ಕೆ ಪಡೆದುಕೊಂಡು ಪರಿಶೀಲಿಸಲಾಗುತ್ತಿದೆ. 'ನಮ್ಮ ಸಾವಿಗೆ ನಾವೇ ಕಾರಣ. ಅಭಿನಂದನೆಗಳು... ವಿನ್ ಯುವರ್ ಈಗೋ... ಜೀವನ ಪೂರ್ತಿ ಇದು ನೆನಪಿನಲ್ಲಿ ಇರಬೇಕು' ಎಂದು ಆ ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಮರಣ ಪತ್ರದ ನೈಜತೆ ಪರಿಶೀಲನೆಗಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕುಸುಮಾ ಅವರ ಸಹೋದರ ದೂರು ನೀಡಿದ್ದು, ಪ್ರಕರಣದ ಕುರಿತು ತನಿಖೆ ನಡೆಯುತ್ತಿದೆ. ಸುರೇಶ್ ಅವರನ್ನು ವಿಚಾರಣೆಗೆ ಒಳಪಡಿಸಲಾಗುವುದು. ಮರಣೋತ್ತರ ಪರೀಕ್ಷೆ ನಡೆಸಿ ಮೃತ ದೇಹಗಳನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ. ವರದಿ ಬಂದ ಬಳಿಕ ಮಕ್ಕಳ ಸಾವು ಹೇಗಾಯಿತು ಎಂಬುದು ಗೊತ್ತಾಗಲಿದೆ' ಎಂದಿವೆ.

'ಬುಧವಾರ ಬೆಳಿಗ್ಗೆ ಸುರೇಶ್ ಕೆಲಸಕ್ಕೆ ತೆರಳಿದ್ದರು. ಸಂಜೆ ಮನೆಗೆ ಬಂದು ನೋಡಿದಾಗ ಮಕ್ಕಳನ್ನು ಕೊಂದು ತಾಯಿ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ. ಸುರೇಶ್ ಅವರೇ ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಲಾಯಿತು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಕುಸುಮಾ ಕುಟುಂಬ

ಕೌಟುಂಬಿಕ ಕಲಹವೇ ಕಾರಣ?

'ಮದುವೆಯಾದ ಆರಂಭದಲ್ಲಿ ದಂಪತಿ ನಡುವೆ ಯಾವುದೇ ಭಿನ್ನಾಭಿಪ್ರಾಯ ಇರಲಿಲ್ಲ. ಕ್ರಮೇಣ ಭಿನ್ನಾಭಿಪ್ರಾಯ ಉಂಟಾಗಿತ್ತು ಎನ್ನಲಾಗಿದೆ. ಕೌಟುಂಬಿಕ ಕಲಹವೇ ಕೃತ್ಯಕ್ಕೆ ಕಾರಣ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

ಎರಡು ದಿನಗಳ ಹಿಂದೆ ಗಲಾಟೆ: 'ಎರಡು ದಿನಗಳ ಹಿಂದೆ ದಂಪತಿ ಮಧ್ಯೆ ಗಲಾಟೆ ನಡೆದಿತ್ತು. ಗಲಾಟೆಯಿಂದ ಕುಸುಮಾ ಅವರು ನೊಂದುಕೊಂಡಿದ್ದರು ಎನ್ನಲಾಗಿದೆ. ಇದೇ ವಿಚಾರಕ್ಕೆ ಮಕ್ಕಳನ್ನು ಕೊಲೆ ಮಾಡಿ, ಅವರೂ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ' ಎಂದು ಮೂಲಗಳು ಹೇಳಿವೆ.

ಕೊಡಿಗೇಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಕಲಿ ದಾಖಲೆ ಕಾನ್‌ಸ್ಟೆಬಲ್ ವಿರುದ್ಧ ಎಫ್‌ಐಆರ್

ಬೆಂಗಳೂರು: ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ (ಸಿವಿಲ್) ನೇಮಕಾತಿಗೆ ನಕಲಿ ಅಂಕಪಟ್ಟಿ ಸಲ್ಲಿಸಿದ್ದ ಆರೋಪದಡಿ ಪೊಲೀಸ್ ಕಾನ್‌ಸ್ಟೆಬಲ್ ಒಬ್ಬರ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಭಾರತಿ ನಗರ ಪೊಲೀಸ್ ಠಾಣೆಯಲ್ಲಿ ಸಿವಿಲ್ ಪೊಲೀಸ್ ಕಾನ್‌ಸ್ಟೆಬಲ್ ಆಗಿ ಕೆಲಸ ಮಾಡುತ್ತಿರುವ ಪೈಗಂಬರ್ ನದಾಫ್ ವಿರುದ್ಧ ಪ್ರಕರಣ ದಾಖಲಾಗಿದೆ. ನಗರ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಇರುವ ನೇಮಕಾತಿ ವಿಭಾಗದ ಅಧಿಕಾರಿಯೊಬ್ಬರು ನೀಡಿದ ದೂರಿನ ಅನ್ವಯ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

'2021–22ನೇ ಸಾಲಿನಲ್ಲಿ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿತ್ತು. ಪಿಎಸ್‌ಐ (ಸಿವಿಲ್) ಹುದ್ದೆಗೆ ಇಬ್ಬರು ಹಾಗೂ ಸಿವಿಲ್ ಪೊಲೀಸ್ ಕಾನ್‌ಸ್ಟೆಬಲ್ (ಸಿಪಿಸಿ) ಹುದ್ದೆಗೆ ಏಳು ಮಂದಿ ಕ್ರೀಡಾ ಕೋಟಾದಡಿ ಆಯ್ಕೆ ಆಗಿದ್ದರು. ಆಯ್ಕೆಯಾದ ಅಭ್ಯರ್ಥಿಗಳು ಸಲ್ಲಿಸಿದ್ದ ದಾಖಲಾತಿಗಳ ನೈಜತೆ ಪರೀಕ್ಷೆಗಾಗಿ ಕಚೇರಿಗೆ ಕಳುಹಿಸಲಾಗಿತ್ತು. ನದಾಫ್ ಸಲ್ಲಿಸಿದ್ದ ಅಂಕಪಟ್ಟಿ ನಕಲಿ ಎಂಬುದು ಪರಿಶೀಲನೆ ವೇಳೆ ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

'ಕ್ರೀಡಾ ಕೋಟಾದಡಿ ಸಿಪಿಸಿ ಹುದ್ದೆಗೆ ನೇಮಕವಾಗಿ ಭಾರತಿ ನಗರ ಠಾಣೆಯಲ್ಲಿ ಪೈಗಂಬರ ನದಾಫ್ ಕೆಲಸ ಮಾಡುತ್ತಿದ್ದರು. ಮತ್ತೆ ಕ್ರೀಡಾ ಕೋಟಾದಡಿ ಪಿಎಸ್‌ಐ ಹುದ್ದೆಗೂ ಅವರು ಆಯ್ಕೆ ಆಗಿದ್ದರು. ಅವರು ಸಲ್ಲಿಸಿದ್ದ ಪದವಿ ಅಂಕಪಟ್ಟಿಗಳ ನೈಜತೆ ಪರಿಶೀಲನೆಗಾಗಿ ಮೈಸೂರು ವಿಶ್ವವಿದ್ಯಾಲಯಕ್ಕೆ ರವಾನೆ ಮಾಡಲಾಗಿತ್ತು. ದಾಖಲೆಗಳನ್ನು ಪರಿಶೀಲಿಸಿದ ವಿ.ವಿ ಸಿಬ್ಬಂದಿ 'ವಿ.ವಿ ವಿತರಣೆ ಮಾಡಿದ ಅಂಕಪಟ್ಟಿಗಳೂ ಅಲ್ಲ' ಎಂಬುದಾಗಿ ವರದಿ ನೀಡಿದ್ದಾರೆ ಎಂದು ಗೊತ್ತಾಗಿದೆ. ವರದಿ ನೀಡಿದ ಬಳಿಕ ಪೊಲೀಸರಿಗೆ ದೂರು ನೀಡಲಾಗಿದೆ.

ಅಪರಾಧ ಸುದ್ದಿಗಳು

ಪ್ರತ್ಯೇಕ ಅಪಘಾತ: ಟೆಕಿ ಸೇರಿ ಮೂವರ ಸಾವು

ಬೆಂಗಳೂರು: ಹಲಸೂರು ಗೇಟ್ ಹಾಗೂ ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದ ಅಪಘಾತದಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಸೇರಿದಂತೆ ಮೂವರು ಮೃತಪಟ್ಟಿದ್ದಾರೆ.

ಹಲಸೂರು ಗೇಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನಕ್ಕೆ ಹಿಂದಿನಿಂದ ಬಂದ ಟಿಪ್ಪರ್‌ವೊಂದು ಡಿಕ್ಕಿ ಹೊಡೆದ ಪರಿಣಾಮ ಟೆಕಿ, ಆಂಧ್ರಪ್ರದೇಶದ ಕುಮಾರ್ ಕೂರಕೂಲ(24) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕುಮಾರ್, ಇಲ್ಲಿನ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು.

ಮಾರತ್‌ಹಳ್ಳಿಯಲ್ಲಿ ನೆಲಸಿದ್ದ ಕುಮಾರ್ ಅವರು ಗುರುವಾರ ಬೆಳಿಗ್ಗೆ ಕೆ.ಆರ್.ಮಾರುಕಟ್ಟೆ ಕಡೆಗೆ ತೆರಳುತ್ತಿದ್ದರು. ಎಸ್‌ಜೆಪಿ ಜಂಕ್ಷನ್ ಬಳಿ ಅಪಘಾತ ಸಂಭವಿಸಿದೆ. ಟಿಪ್ಪರ್ ಡಿಕ್ಕಿಯಾದ ಬಳಿಕ ಕುಮಾರ್, ವಾಹನದಿಂದ ಕೆಳಕ್ಕೆ ಬಿದ್ದಿದ್ದರು. ಅವರ ತಲೆಯ ಮೇಲೆಯೇ ಟಿಪ್ಪರ್ ಚಕ್ರಗಳು ಹರಿದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಇಬ್ಬರ ಸಾವು: ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕೋಳಿ ಸಾಗಿಸುತ್ತಿದ್ದ ಟ್ಯಾಂಕರ್ ಹಾಗೂ ಟಿಪ್ಪರ್ ವಾಹನದ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ನಲ್ಲೂರಹಳ್ಳಿ ಸಿದ್ದಾಪುರದ ಆಯುರ್ವೇದಿಕ್ ಆಸ್ಪತ್ರೆ ಎದುರು ಅಪಘಾತ ಸಂಭವಿಸಿದೆ.

ಕ್ಯಾಂಟರ್ ಚಾಲಕ, ಆಂಧ್ರಪ್ರದೇಶದ ಲಕ್ಷ್ಮಿನಾರಾಯಣ(30) ಹಾಗೂ ಇದೇ ವಾಹನದಲ್ಲಿದ್ದ ಮಣಿಪುರದ ನಿವಾಸಿ ಮೋಹಿನ್ ಜೋಯಿದ್ (22) ಮೃತಪಟ್ಟವರು.

ಸುದ್ದಿ 2 ನಿಮಿಷ

ತಮಿಳುನಾಡಿನ ದಿಂಡಿಗಲ್‌ನಲ್ಲಿ ಆಸ್ಪತ್ರೆಗೆ ಬೆಂಕಿ: ಆರು ಸಾವು

ದಿಂಡಿಗಲ್ (ತಮಿಳುನಾಡು) (ಪಿಟಿಐ): ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಗುರುವಾರ ಸಂಭವಿಸಿದ ಅಗ್ನಿ ಅವಘಡದಲ್ಲಿ ಬಾಲಕ ಸೇರಿದಂತೆ ಆರು ಮಂದಿ ಮೃತಪಟ್ಟಿದ್ದಾರೆ ಎಂದು ಪೊಲೀಸ್ ಮತ್ತು ಅಗ್ನಿಶಾಮಕ ದಳದ ಅಧಿಕಾರಿಗಳು ತಿಳಿಸಿದ್ದಾರೆ.

ಎಲ್ಲ ಆರು ಮಂದಿ ಲಿಫ್ಟ್‌ನಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ಅವರನ್ನು ಕೂಡಲೇ ಆಸ್ಪತ್ರೆಗೆ ಸಾಗಿಸಲಾಯಿತಾದರೂ ಎಲ್ಲರೂ ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದರು.

ಲಿಫ್ಟ್‌ನಲ್ಲಿ ಇದ್ದ ಎಲ್ಲರೂ ಉಸಿರುಗಟ್ಟಿ ಮೃತಪಟ್ಟಿದ್ದಾರೆ.

ಅಗ್ನಿಶಾಮದ ದಳದ ಸಿಬ್ಬಂದಿ ಹಾಗೂ ರಕ್ಷಣಾ ಕಾರ್ಯಾಚರಣೆಯಲ್ಲಿ ಪಾಲ್ಗೊಂಡವರು ಆಸ್ಪತ್ರೆಯಲ್ಲಿದ್ದ ಇತರ 30 ಒಳರೋಗಿಗಳನ್ನು ರಕ್ಷಿಸಿದ್ದಾರೆ. ಅವರನ್ನು ಸಮೀಪದ ಸರ್ಕಾರಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ.

ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಕಾಣಿಸಿಕೊಂಡಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿರುವುದಾಗಿ ಪೊಲೀಸ್ ಮೂಲಗಳು ಹೇಳಿವೆ. ಬೆಂಕಿ ಹಾಗೂ ದಟ್ಟ ಹೊಗೆ ಆಸ್ಪತ್ರೆಗೆ ಆವರಿಸಿಕೊಂಡಿರುವ ದೃಶ್ಯವನ್ನು ಸ್ಥಳೀಯ ಸುದ್ದಿ ವಾಹಿನಿಗಳು ಪ್ರಸಾರ ಮಾಡಿವೆ.

ಅಂತರರಾಷ್ಟ್ರೀಯ ಒಲಿಂಪಿಯಾಡ್ ಆರು ವಿದ್ಯಾರ್ಥಿಗಳಿಗೆ ಚಿನ್ನದ ಪದಕ

ಬೆಂಗಳೂರು: ರುಮೇನಿಯಾದ ಬುಕಾರೆಸ್ಟ್‌ನಲ್ಲಿ ನಡೆದ ಅಂತರ ರಾಷ್ಟ್ರೀಯ ಕಿರಿಯರ ವಿಜ್ಞಾನ ಒಲಿಂಪಿಯಾಡ್ ಸ್ಪರ್ಧೆಯಲ್ಲಿ ಇಂಡಿಯನ್ ಅಸೋಸಿಯೇಷನ್ ಆಫ್ ಫಿಸಿಕ್ಸ್ ಟೀಚರ್ ಸಂಸ್ಥೆಯ (ಐಎಪಿಟಿ) 'ಜೂನಿಯರ್ ಸೈನ್ಸ್ ಒಲಿಂಪಿಯಾಡ್'ನ ಆರು ವಿದ್ಯಾರ್ಥಿಗಳು ಚಿನ್ನದ ಪದಕ ಪಡೆದುಕೊಂಡಿದ್ದಾರೆ.

ಕೇಂದ್ರ ಪರಮಾಣು ಶಕ್ತಿ ಇಲಾಖೆಯ ನಿಧಿ ಅಡಿಯಲ್ಲಿ ಐಎಪಿಟಿ, ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡಿತ್ತು. ದೇಶದ ವಿವಿಧ ಭಾಗಗಳ 40 ಸಾವಿರ ಪ್ರೌಢಶಾಲೆ ವಿದ್ಯಾರ್ಥಿಗಳು ಪ್ರಥಮ ಹಂತದಲ್ಲಿ ಭಾಗವಹಿಸಿದ್ದರು. ಅಂತಿಮ ಹಂತಕ್ಕೆ ಆಯ್ಕೆಯಾದ ಭವ್ಯಾ ಗುನ್ವಾಲ್, ಹರ್ಷಿತ್ ಸಿಂಗ್ಲಾ, ಜಿನಾನ್ಯ ಶಾ, ಮಾನಸಾ ಗೋಯಲ್, ಪ್ರಣೀತ್ ಮಾಥೂರ್, ಶ್ವೇತಾಂಕ್ ಅಗರವಾಲ್ ಅವರು ಡಿ.2ರಿಂದ 11ರವರೆಗೆ ನಡೆದ ಅಂತರರಾಷ್ಟ್ರೀಯ ಒಲಿಂಪಿಯಾಡ್ ಸ್ಪರ್ಧೆಯಲ್ಲಿ ಪಾಲ್ಗೊಂಡು ಚಿನ್ನದ ಪದಕಗಳನ್ನು ಗೆದ್ದಿದ್ದಾರೆ. ಸ್ಪರ್ಧೆಯಲ್ಲಿ ಭಾರತ ಅತ್ಯುತ್ತಮ ದೇಶವೆಂದು ಘೋಷಿಸಲಾಯಿತು ಎಂದು ಐಎಪಿಟಿ ಪ್ರಕಟಣೆ ತಿಳಿಸಿದೆ.

ಪದಕ ವಿಜೇತ ವಿದ್ಯಾರ್ಥಿಗಳನ್ನು ರಾಜಾಜಿನಗರದ ವಿದ್ಯಾವರ್ಧಕ ಸಂಘದ ಸಪ್ತರ್ಷಿಧಾಮ ಬಿ. ಪಾರ್ಥಸಾರಥಿ ಸಭಾಂಗಣದಲ್ಲಿ ಡಿ.13ರಂದು ಸನ್ಮಾನಿಸಲಾಗುವುದು. ಭಾರತೀಯ ವಿಜ್ಞಾನ ಸಂಸ್ಥೆಯ ಡೀನ್ ಪಿ.ಎಸ್. ಅನಿಲ್‌ಕುಮಾರ್, ವಿವಿಎಸ್ ಅಧ್ಯಕ್ಷ ಪಿ.ಜಿ. ದ್ವಾರಕಾನಾಥ್, ಉಪಾಧ್ಯಕ್ಷ ಎನ್.ಎಚ್. ಲಕ್ಷ್ಮೀನರುಷು, ಐಎಪಿಟಿ ಅಧ್ಯಕ್ಷ ಪಿ.ಕೆ. ಅಹ್ಲುವಾಲಿಯಾ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದೆ.

ಸಿಬಿಐ ಹೆಸರಿನಲ್ಲಿ ಪ್ರಾಂಶುಪಾಲೆಗೆ ವಂಚನೆ

ಬೆಂಗಳೂರು: ಸಿಬಿಐ ಅಧಿಕಾರಿ ಹೆಸರಿನಲ್ಲಿ ನಗರದ ಕಾಲೇಜಿನ ಪ್ರಾಂಶುಪಾಲರೊಬ್ಬರಿಂದ ಸೈಬರ್ ವಂಚಕರು ₹24 ಲಕ್ಷ ಸುಲಿಗೆ ಮಾಡಿದ್ದಾರೆ. ಈ ಕುರಿತು ವೈಟ್‌ಫೀಲ್ಡ್ ವಿಭಾಗದ ಸಿಇಎನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಬಿಐ ಅಧಿಕಾರಿ ಅಶೀಶ್ ಶರ್ಮಾ ಹೆಸರಿನಲ್ಲಿ ಪ್ರಾಂಶುಪಾಲೆಗೆ ಬೆದರಿಸಿ ಕಿಡಿಗೇಡಿಗಳು ಹಣ ವಸೂಲಿ ಮಾಡಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

'ನವೆಂಬರ್ 22 ರಂದು ಪ್ರಾಂಶುಪಾಲೆ ಮೊಬೈಲ್‌ಗೆ ಕರೆ ಮಾಡಿದ ವ್ಯಕ್ತಿ, ತನ್ನನ್ನು ಸಿಬಿಐ ಅಧಿಕಾರಿ ಅಶೀಶ್ ಶರ್ಮಾ ಎಂದು ಪರಿಚಯಿಸಿಕೊಂಡಿದ್ದ. ಬಳಿಕ ನಿಮ್ಮ ಮೊಬೈಲ್ ನಂಬರ್ ಅನ್ನು ಬಳಸಿ ಮಾನವ ಕಳ್ಳಸಾಗಣಿಕೆ ಮತ್ತು ಅಕ್ರಮ ಹಣ ಸಾಗಣಿಕೆ ನಡೆಯುತ್ತಿದೆ. 180 ಮಕ್ಕಳು ಸಿಂಗಪುರದಲ್ಲಿ ಸಿಲುಕಿರುವ ವರದಿ ಬಂದಿದೆ ಎಂದು ಹೇಳಿದ್ದಾನೆ' ಎಂದು ಪೊಲೀಸರು ತಿಳಿಸಿದರು.

'ಅಪರಿಚಿತ ವ್ಯಕ್ತಿ ಸಹಾಯ ಮಾಡುವುದಾಗಿ ಸಂತ್ರಸ್ತೆಗೆ ಅಭಯ ನೀಡಿದ್ದಾನೆ. ಈ ಬಗ್ಗೆ ನಿಮ್ಮೊಂದಿಗೆ ದೆಹಲಿ ಪೊಲೀಸರು ಮಾತನಾಡಲಿದ್ದಾರೆ ಎಂದು ಕರೆ ಸ್ಥಗಿತಗೊಳಿಸಿದ್ದಾನೆ. ಕೆಲ ನಿಮಿಷದಲ್ಲೇ ಸಂತ್ರಸ್ತೆಯ ವಾಟ್ಸ್ ಆ್ಯಪ್‌ಗೆ ದೆಹಲಿ ಪೊಲೀಸರ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಕಳುಹಿಸಿದ ಮತ್ತೊಬ್ಬ ಅಪರಿಚಿತ, ಪ್ರಕರಣ ಕುರಿತು ವಿಚಾರಣೆಗೆ ಬರುವಂತೆ ಸೂಚಿಸಿದ' ಎಂದು ಹೇಳಿದರು.

'ಅಕ್ರಮ ಹಣ ಸಾಗಾಣಿಕೆ ಆರೋಪ ಸಂಬಂಧ ಬ್ಯಾಂಕ್ ಖಾತೆ ಪರಿಶೀಲಿಸಬೇಕಿದೆ ಎಂದು ಸಂತ್ರಸ್ತೆಯ ಬ್ಯಾಂಕ್ ವಿವರ ಕಲೆ ಹಾಕಿದ್ದಾನೆ. ಬ್ಯಾಂಕ್ ಖಾತೆಯಲ್ಲಿರುವ ಹಣವನ್ನು ಸರ್ಕಾರದ ಖಾತೆಗೆ ವರ್ಗಾವಣೆ ಮಾಡಬೇಕು. ತನಿಖೆ ಮುಗಿದ ಬಳಿಕ ಆ ಹಣವನ್ನು ಮರಳಿಸುತ್ತೇವೆ ಎಂದು ಆರೋಪಿ ಹೇಳಿದ್ದಾನೆ. ಆರೋಪಿ ಸೂಚಿಸಿದ ಬ್ಯಾಂಕ್ ಖಾತೆಗೆ ₹24.36 ಲಕ್ಷ ಹಣವನ್ನು ಪ್ರಾಂಶುಪಾಲೆ ಆರ್‌ಟಿಜಿಎಸ್ ಮಾಡಿದ್ದಾರೆ. ಹಣ ವರ್ಗಾವಣೆ ಬಳಿ ಕರೆ ಸ್ಥಗಿತಗೊಳಿಸಲಾಗಿದೆ' ಎಂದು ವಿವರಿಸಿದರು.

ವ್ಹೀಲಿ: ಬಾಲಕನ ಪೋಷಕರ ವಿರುದ್ಧ ಎಫ್‌ಐಆರ್

ಬೆಂಗಳೂರು: ದ್ವಿಚಕ್ರ ವಾಹನದಲ್ಲಿ ವ್ಹೀಲಿ ನಡೆಸುತ್ತಿದ್ದ ಬಾಲಕನ ಪೋಷಕರ ವಿರುದ್ಧ ಪುಲಕೇಶಿನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಬಾಲಕ ಹಾಗೂ ಅವರ ಪೋಷಕರ ವಿರುದ್ಧ ಬಾಲನ್ಯಾಯ ಕಾಯ್ದೆ(ಜೆ.ಜೆ.ಆ್ಯಕ್ಟ್) ಅಡಿ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ ಎಂದು ಸಂಚಾರ ಪೂರ್ವ ವಿಭಾಗದ ಡಿಸಿಪಿ ಕುಲದೀಪ್ ಕುಮಾರ್ ಆರ್. ಜೈನ್ ಅವರು ತಿಳಿಸಿದ್ದಾರೆ.

'ಬಾಣಸವಾಡಿ ಮುಖ್ಯರಸ್ತೆಯಲ್ಲಿ ಬುಧವಾರ ಬಾಲಕ ದ್ವಿಚಕ್ರ ವಾಹನದಲ್ಲಿ ವ್ಹೀಲಿ ನಡೆಸುತ್ತಿದ್ದ. ಅದೇ ವೇಳೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪುಲಕೇಶಿನಗರದ ಸಂಚಾರ ಪೊಲೀಸ್ ಠಾಣೆಯ ಸಿಬ್ಬಂದಿ ದ್ವಿಚಕ್ರ ವಾಹನವನ್ನು ಜಪ್ತಿ ಮಾಡಿಕೊಂಡರು. ಪುಲಕೇಶಿನಗರ ಕಾನೂನು ಹಾಗೂ ಸುವ್ಯವಸ್ಥೆಯ ಠಾಣೆಗೆ ಬಾಲಕನನ್ನು ಹಸ್ತಾಂತರ ಮಾಡಲಾಗಿದ್ದು, ಅವರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ' ಎಂದು ಮೂಲಗಳು ಹೇಳಿವೆ.

ವಿವಾಹಿತ ಮಹಿಳೆ ಕೊಂದು ಯುವಕ ಆತ್ಮಹತ್ಯೆ

ಬೆಂಗಳೂರು: ವೈಟ್‌ಫೀಲ್ಡ್‌ನಲ್ಲಿ ನೆಲಸಿದ್ದ ವಿವಾಹಿತ ಮಹಿಳೆಗೆ ಪ್ರೀತಿಸುವಂತೆ ಪೀಡಿಸುತ್ತಿದ್ದ ಯುವಕನೊಬ್ಬ ಆಕೆ ಪ್ರೀತಿ ನಿರಾಕರಿಸಿದ್ದಕ್ಕೆ ಸಿಟ್ಟಿಗೆದ್ದು ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾನೆ. ಬಳಿಕ ತಾನೂ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಪಶ್ಚಿಮ ಬಂಗಾಳದ ಮೊಹುವಾ ಮಂಡಲ್(26) ಕೊಲೆಯಾದ ಮಹಿಳೆ. ಕೃತ್ಯ ಎಸಗಿದ ಬಳಿಕ ಮಿಥುನ್ ಮಂಡಲ್(26) ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದರು.

ಪಶ್ಚಿಮ ಬಂಗಾಳದ ಮೊಹುವಾ ಮಂಡಲ್ ಹಾಗೂ ಅವರ ಪತಿ ಹರಿಪ್ರಸಾದ್ ಮಂಡಲ್ ಮೂರು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ವೈಟ್‌ಫೀಲ್ಡ್ ಸಮೀಪದ ಶೆಡ್‌ನಲ್ಲಿ ತಮ್ಮ ಮಗುವಿನ ಜತೆ ವಾಸ ಆಗಿದ್ದರು. ಮೊಹುವಾ, ಖಾಸಗಿ ಕಾಲೇಜಿನಲ್ಲಿ ಸ್ವಚ್ಛತಾ ಕೆಲಸ ಮಾಡುತ್ತಿದ್ದರು. ಹರಿಪ್ರಸಾದ್ ಅವರು ರ‍್ಯಾಪಿಡೊ ಬೈಕ್ ಓಡಿಸುತ್ತಿದ್ದರು. ಎರಡೂವರೆ ವರ್ಷಗಳ ಹಿಂದೆ ನಗರಕ್ಕೆ ಬಂದು ಪಿ.ಜಿಯಲ್ಲಿ ವಾಸವಾಗಿದ್ದ ಆರೋಪಿ ಮಿಥುನ್ ಮಂಡಲ್, ಮೊಹುವಾ ಮಂಡಲ್ ಅವರು ಕೆಲಸ ಮಾಡುತ್ತಿದ್ದ ಕಾಲೇಜಿನಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಸೇರಿಕೊಂಡಿದ್ದ ಎಂದು ಪೊಲೀಸರು ತಿಳಿಸಿದರು.

'ಮಿಥುನ್ ಹಾಗೂ ಮೊಹುವಾ ಅವರು ಒಂದೇ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದ ಕಾರಣಕ್ಕೆ ಪರಸ್ಪರ ಪರಿಚಯ ಆಗಿದ್ದರು. ಬಳಿಕ ಆರೋಪಿ ಪ್ರೀತಿಸುವಂತೆ ಒತ್ತಾಯ ಮಾಡುತ್ತಿದ್ದ. ಅದನ್ನು ಮೊಹುವಾ ತಿರಸ್ಕರಿಸಿ ಬುದ್ಧಿಮಾತು ಹೇಳಿದ್ದರು. ಆದರೂ ಆರೋಪಿ, ಗಂಡ ಮತ್ತು ಮಗುವನ್ನು ಬಿಟ್ಟು ತನ್ನೊಂದಿಗೆ ಬರುವಂತೆ ಪದೇ ಪದೇ ಒತ್ತಾಯಿಸುತ್ತಿದ್ದ. ಆ ಕಾಲೇಜು ಬಿಟ್ಟು ಬೇರೊಂದು ಕಡೆ ಕೆಲಸಕ್ಕೆ ಮಹಿಳೆ ಸೇರಿಕೊಂಡಿದ್ದರು' ಎಂದು ಮೂಲಗಳು ಹೇಳಿವೆ.

'ಬುಧವಾರ ಸಂಜೆ ಮಹಿಳೆಯನ್ನು ಭೇಟಿ ಮಾಡಿದ್ದ ಆರೋಪಿ, ತನ್ನೊಂದಿಗೆ ಬರುವಂತೆ ಬಲವಂತ ಮಾಡಿದ್ದ. ಆರೋಪಿ ಜತೆಗೆ ತೆರಳುವುದಕ್ಕೆ ಮೊಹುವಾ ನಿರಾಕರಿಸಿದ್ದರು. ಆರೋಪಿ ತನ್ನ ಬಳಿಯಿದ್ದ ಚಾಕುನಿಂದ ಆಕೆಯ ಹೊಟ್ಟೆ ಹಾಗೂ ಎದೆ ಭಾಗಕ್ಕೆ ಇರಿದು ಪರಾರಿ ಆಗಿದ್ದ. ಬಳಿಕ ಆರೋಪಿ, ನಲ್ಲೂರು ಕೆರೆ ಸಮೀಪ ಆತ್ಮಹತ್ಯೆ ಮಾಡಿಕೊಂಡಿದ್ದಾನೆ' ಎಂದು ಪೊಲೀಸರು ತಿಳಿಸಿದರು.

ವೈಟ್‌ಫೀಲ್ಡ್ ಠಾಣೆಯಲ್ಲಿ ಕೊಲೆ ಮತ್ತು ಆತ್ಮಹತ್ಯೆ ಎರಡು ಪ್ರಕರಣಗಳು ದಾಖಲಾಗಿವೆ.

ಬೆಂಗಳೂರು ರೇಸ್

ರಾಂಕ್ವೆಲಿನೊ ಗೆಲ್ಲುವ ನಿರೀಕ್ಷೆ

ಬೆಂಗಳೂರು 2000 ಗಿನ್ನೀಸ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರಾಂಕ್ವೆಲಿನೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಕೋಲ್ಡ್‌ಪ್ಲೇ 1, ಬ್ಲೈಂಡ್ ಫೈತ್ 3, ಮೋಸ್ಟ್ ಅಂಡ್ ಮೋರ್ 2
2ನೇ ರೇಸ್: ಎಕ್ಸ್ಟ್ರಾ ಆರ್ಡಿನರಿ 1, ಸ್ಟಾರ್ ಕೊಮೆಟ್ 2, ಮೆಗಾ ಸಕ್ಸಸ್ 6
3ನೇ ರೇಸ್: ಮಾರ್ಥ 1, ಡೇಸ್ ಡೇಟ್ 6, ಸ್ಟೆಂಟೋರಿಯನ್ 2
4ನೇ ರೇಸ್: ಸ್ವೆಲ್ಲಾಂಟಿಸ್ 1, ಡೈನಾಮಿಕ್ ಫೋರ್ಸ್ 5, ಫ್ರೀ ಟು ಪ್ಲೇ 3
5ನೇ ರೇಸ್: ರಾಂಕ್ವೆಲಿನೊ 8, ಪಾಸಿಟಾನೊ 7, ಮೇನ್ ಮ್ಯಾಜಿಕ್ 5
6ನೇ ರೇಸ್: ರೈಕೊ 9, ಪ್ರೈಸ್‌ಲೆಸ್ ಪ್ರಿನ್ಸ್ 1, ಟ್ರೂ ಪಂಚ್ 7
7ನೇ ರೇಸ್: ಈಸ್ಟರ್ನ್ ಗೋಲ್ಡ್ 7, ಇನ್‌ಸ್ಟ್ರಕ್ಟರ್ 5, ಭರತ್ 2

ಉತ್ತಮ ಬೆಟ್: ಮಾರ್ಥ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಸ್ಟೀವರ್ಡ್ಸ್, ಸಮಿತಿ ಸದಸ್ಯರ ಆಯ್ಕೆ

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಗುರುವಾರ ನಡೆದ 63ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಿ.ಮಹೇಶ್ ಮೇಡಪ್ಪ, ಎಲ್.ಶಿವಶಂಕರ್ ಮತ್ತು ಆರ್.ಮಂಜುನಾಥ್ ರಮೇಶ್ ಅವರನ್ನು ಸ್ಟೀವರ್ಡ್ಸ್‌ಗಳಾಗಿ ಹಾಗೂ ಸಿ.ಎ. ಪ್ರಶಾಂತ್ ಮತ್ತು ದಯಾನಂದ್ ಆರ್.ಮಾಂಡ್ರೆ ಅವರನ್ನು ಸಮಿತಿಯ ಸದಸ್ಯರನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ಬೆಂಗಳೂರು ಟರ್ಫ್ ಕ್ಲಬ್ ಲಿಮಿಟೆಡ್ ಪ್ರಕಟಣೆ ತಿಳಿಸಿದೆ.

ಜೋಡಿ ಕೊಲೆ: ನೇಪಾಳದ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕದ ಕೈಗಾರಿಕಾ ಪ್ರದೇಶದಲ್ಲಿ ಮುಚ್ಚಿದ ಕಾರ್ಖಾನೆಯ ಆವರಣದಲ್ಲಿ ಸೆಕ್ಯೂರಿಟಿ ಗಾರ್ಡ್ ಹಾಗೂ ಗಾರ್ಮೆಂಟ್ಸ್ ಉದ್ಯೋಗಿಯನ್ನು ಕೊಲೆ ಮಾಡಿದ್ದ ಇಬ್ಬರನ್ನು ಯಲಹಂಕ ನ್ಯೂಟೌನ್ ಠಾಣೆ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ನೇಪಾಳದ ಸಂಗಮ್(26) ಮತ್ತು ಸಮೀರ್(26) ಬಂಧಿತರು. ಡಿ.8ರಂದು ತಡರಾತ್ರಿ ನೇಪಾಳದ ಬಿಕ್ರಂ ಬಿಸ್ವಜಿತ್(24) ಮತ್ತು ಬಿಹಾರದ ಚೋಟು ತೂರಿ(33) ಎಂಬವರನ್ನು ಆರೋಪಿಗಳು ಕಲ್ಲು, ಕಬ್ಬಿಣದ ರಾಡು ಹಾಗೂ ಟೈಲ್ಸ್ ಪೀಸ್‌ಗಳಿಂದ ಹಲ್ಲೆ ನಡೆಸಿ ಕೊಲೆ ಮಾಡಿ ಪರಾರಿ ಆಗಿದ್ದರು.

ಸಮೀರ್



ಸಂಗಮ್

ನೇಪಾಳದಿಂದ ಮೂರು ವರ್ಷಗಳ ಹಿಂದೆ ಬಿಕ್ರಂ ಬಿಸ್ವಜಿತ್, ಇಬ್ಬರು ಆರೋಪಿಗಳು ಹಾಗೂ ಯುವತಿ ನಗರಕ್ಕೆ ಬಂದಿದ್ದರು. ಆರೋಪಿಗಳಿಬ್ಬರು ಖಾಸಗಿ ಕಂಪನಿಯಲ್ಲಿ ಸೆಕ್ಯೂರಿಟಿ ಗಾರ್ಡ್ ಕೆಲಸ ಮಾಡಿಕೊಂಡಿದ್ದರು. ಯುವತಿ ಕೂಡ ನಗರದಲ್ಲಿ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದರು.

'ಸಂಗಮ್ ಪ್ರೀತಿಸುತ್ತಿದ್ದ ಯುವತಿಗೆ ಬಿಕ್ರಂ ಬಿಸ್ವಜಿತ್ ಪದೇ ಪದೇ ಕರೆ ಮಾಡುವುದು, ಅಶ್ಲೀಲ ಸಂದೇಶ ಕಳುಹಿಸುತ್ತಿದ್ದ. ಜತೆಗೆ, ವಿಡಿಯೊ ಕರೆ ಮಾಡುತ್ತಿದ್ದ ಎನ್ನಲಾಗಿದೆ. ಈ ವಿಚಾರವನ್ನು ಯುವತಿ ಸಂಗಮ್‌ಗೆ ತಿಳಿಸಿದ್ದರು. ಕೋಪಗೊಂಡಿದ್ದ ಸಂಗಮ್, ಒಂದೆರಡು ಬಾರಿ ಬಿಕ್ರಂಗೆ ಎಚ್ಚರಿಕೆ ನೀಡಿದ್ದ. ಬಿಕ್ರಂ ಕರೆ ಮಾಡುವುದನ್ನು ಮುಂದುರಿಸಿದ್ದ' ಎಂದು ಮೂಲಗಳು ಹೇಳಿವೆ.

'ಭಾನುವಾರ ಬಿಕ್ರಂ ಮತ್ತು ಚೋಟು ತೂರಿ ಮದ್ಯದ ಪಾರ್ಟಿ ಮಾಡುತ್ತಿದ್ದರು. ಆಗ ಸ್ಥಳಕ್ಕೆ ಬಂದಿದ್ದ ಆರೋಪಿಗಳು, ಪಾರ್ಟಿಯಲ್ಲಿ ಭಾಗಿ ಆಗಿದ್ದರು. ಬಳಿಕ, ಆರೋಪಿಗಳು ಯುವತಿಗೆ ನೀಡುತ್ತಿದ್ದ ಕಿರುಕುಳ ಪ್ರಸ್ತಾಪಿಸಿ ಗಲಾಟೆ ಮಾಡಿದ್ದರು. ನಂತರ, ಇಬ್ಬರು ಆರೋಪಿಗಳು ಹಲ್ಲೆ ನಡೆಸಿ ಕೊಲೆ ಮಾಡಿದ್ದರು' ಎಂದು ಮೂಲಗಳು ತಿಳಿಸಿವೆ.

ಸಮುದ್ರದಲ್ಲಿ ಮುಳುಗಿ ಮೃತಪಟ್ಟ 4 ವಿದ್ಯಾರ್ಥಿನಿಯರ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಮುಳಬಾಗಿಲು (ಕೋಲಾರ): ಮುರುಡೇಶ್ವರ ಸಮುದ್ರದಲ್ಲಿ ಮುಳುಗಿ ಮೃತಪಟ್ಟ ಮುಳಬಾಗಿಲು ತಾಲ್ಲೂಕಿನ ಎಂ.ಕೊತ್ತೂರು ಬಳಿಯ ಮೊರಾರ್ಜಿ ವಸತಿ ಶಾಲೆಯ ನಾಲ್ವರು ವಿದ್ಯಾರ್ಥಿನಿಯರ ಅಂತ್ಯಕ್ರಿಯೆ ಆಯಾಯ ಗ್ರಾಮಗಳಲ್ಲಿ ಗುರುವಾರ ನಡೆಯಿತು.

ಶೈಕ್ಷಣಿಕ ಪ್ರವಾಸಕ್ಕೆಂದು ಖುಷಿಯಿಂದ ತೆರಳಿದ್ದ ಮಕ್ಕಳು ಶವವಾಗಿ ಬಂದಿದ್ದು, ನಾಲ್ಕೂ ಗ್ರಾಮಗಳು ಶೋಕ ಸಾಗರದಲ್ಲಿ ಮುಳುಗಿದ್ದವು. ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು.

ಗ್ರಾಮದ ಅಕ್ಕಪಕ್ಕದ ಮನೆಯವರು ಪೋಷಕರ ಸಮಾಧಾನಪಡಿಸಲು ಯತ್ನಿಸಿದರು.

ಇತ್ತ ವಸತಿ ಶಾಲೆಯಲ್ಲಿ ದುಃಖ ಮಡುಗಟ್ಟಿದ್ದು, ಘಟನೆಯಿಂದ ಆಘಾತಕ್ಕೆ ಒಳಗಾಗಿರುವ ಸಹಪಾಠಿ ವಿದ್ಯಾರ್ಥಿಗಳು ಕಣ್ಣೀರಿಟ್ಟರು.

ಮದ್ಯಪಾನ ಮಾಡಿದ್ದ ಶಿಕ್ಷಕ?

ಪ್ರವಾಸಕ್ಕೆ ಮಕ್ಕಳನ್ನು ಕರೆದೊಯ್ದಿದ್ದ ಶಿಕ್ಷಕರಲ್ಲಿ ಒಬ್ಬರು ಮದ್ಯಪಾನ ಮಾಡಿದ್ದರು ಎಂಬ ಅನುಮಾನ ವ್ಯಕ್ತವಾಗಿದೆ. ಈ ಸಂಬಂಧ ಮುರುಡೇಶ್ವರದಲ್ಲಿ ನಾಲ್ವರು ಶಿಕ್ಷಕರನ್ನು ರಕ್ತ ಪರೀಕ್ಷೆಗೆ ಒಳಪಡಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

11,938 ಹೆಕ್ಟೇರ್ 'ಪರಿಸರ ಸೂಕ್ಷ್ಮ'

• ಮಂಜುನಾಥ ಹೆಬ್ಬಾರ್

ನವದೆಹಲಿ: ಕರ್ನಾಟಕದ ಭೀಮಗಢ ವನ್ಯಜೀವಿಧಾಮದ ಸುತ್ತಲಿನ 11,938 ಹೆಕ್ಟೇರ್ ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ಅಂತಿಮ ಅಧಿಸೂಚನೆ ಹೊರಡಿಸಿದೆ.

ಇದರಲ್ಲಿ 11,413 ಹೆಕ್ಟೇರ್ ಮೀಸಲು ಅರಣ್ಯವಾಗಿದ್ದರೆ, 525 ಹೆಕ್ಟೇರ್ ಕಂದಾಯ ಜಮೀನು. 2023ರ ಆಗಸ್ಟ್ ತಿಂಗಳಲ್ಲಿ ಕರಡು ಅಧಿಸೂಚನೆ ಹೊರಡಿಸಲಾಗಿತ್ತು. ಆಕ್ಷೇಪಣೆ ಸಲ್ಲಿಸಲು 60 ದಿನಗಳ ಕಾಲಾವಕಾಶ ನೀಡಲಾಗಿತ್ತು. ಇದೀಗ ಸಚಿವಾಲಯವು ಅಂತಿಮ ಅಧಿಸೂಚನೆ ಹೊರಡಿಸಿದೆ. ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿ 119 ಚದರ ಕಿ.ಮೀ.

ಈ ವನ್ಯಜೀವಿಧಾಮವು ಮಹದಾಯಿ ನದಿಯ ಜಲಾನಯನ ಪ್ರದೇಶದಲ್ಲಿದೆ. ದಾಂಡೇಲಿ ವನ್ಯಜೀವಿಧಾಮ ಹಾಗೂ ಗೋವಾದ ಮಹದಾಯಿ ವನ್ಯಜೀವಿಧಾಮದೊಂದಿಗೆ ಗಡಿ ಹಂಚಿಕೊಂಡಿದೆ. ಈ ವನ್ಯಜೀವಿಧಾಮದ ವಿಸ್ತೀರ್ಣ 19,402 ಹೆಕ್ಟೇರ್. ಪರಿಸರ ಸೂಕ್ಷ್ಮ ಪ್ರದೇಶವು 13 ಗ್ರಾಮಗಳನ್ನು ಒಳಗೊಂಡಿದೆ. ಕೆಲವೊಂದು ಗ್ರಾಮಗಳಲ್ಲಿ ಪರಿಸರ ಸೂಕ್ಷ್ಮ ಪ್ರದೇಶ 3.3 ಕಿ.ಮೀ. ವರೆಗೆ ಇದೆ.

ಪರಿಸರ ಸೂಕ್ಷ್ಮ ಪ್ರದೇಶಕ್ಕಾಗಿ ಕರ್ನಾಟಕ ಸರ್ಕಾರವು ಎರಡು ವರ್ಷಗಳೊಳಗೆ ವಲಯ ಮಹಾಯೋಜನೆ ಸಿದ್ಧಪಡಿಸಿ ಜಾರಿಗೆ ತರಬೇಕು. ಸ್ಥಳೀಯ ಜನರು ಹಾಗೂ ವಿವಿಧ ಇಲಾಖೆಗಳ ಸಹಕಾರದಲ್ಲಿ ಈ ಕಾರ್ಯ ನಡೆಸಬೇಕು ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

'ಇದು ಹಲವು ವರ್ಷಗಳ ಸಂಘಟಿತ ಪ್ರಯತ್ನದ ಫಲವಾಗಿದೆ. ಬೆಳಗಾವಿ ಸಿಸಿಎಫ್ ಮಂಜುನಾಥ್ ಚವ್ಹಾಣ್, ಡಿಸಿಎಫ್‌ಗಳಾದ ಹರ್ಷ ಭಾನು, ಶಂಕರ್ ಕಲ್ಲೋಳಿಕರ್, ಎಸಿಎಫ್ ಸಂತೋಷ್ ಚವ್ಹಾಣ್, ಆರ್‌ಎಫ್‌ಒ ರಾಕೇಶ್ ಅರ್ಜುನವಾಡ್ ಅವರ ಶ್ರಮ ಸಾಕ್ಷಿದೆ. ಬಹಳಷ್ಟು ಸುತ್ತಿನ ಚರ್ಚೆಗಳು, ಹಿರಿಯ ಅಧಿಕಾರಿಗಳ ಸಲಹೆಗಳು ಹಾಗೂ ಸೂಚನೆಗಳಿಂದ ಇದು ಸಾಧ್ಯವಾಗಿದೆ' ಎಂದು ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ ಕುಲಕರ್ಣಿ ಹೇಳಿದರು.

ಮೇಲ್ವಿಚಾರಣಾ ಸಮಿತಿ

ಪರಿಸರ ಸೂಕ್ಷ್ಮ ಪ್ರದೇಶದ ಮೇಲ್ವಿಚಾರಣೆಗೆ ಬೆಳಗಾವಿ ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಬೆಳಗಾವಿ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳು, ವನ್ಯಜೀವಿ ತಜ್ಞರು ಸೇರಿ 16 ಮಂದಿ ಸದಸ್ಯರಾಗಿರುವರು.

'ಪರಿಸರ ಸೂಕ್ಷ್ಮ ವಲಯವು ಪರಿಸರಕ್ಕೆ ಹಾನಿ ಉಂಟು ಮಾಡುವ ಚಟುವಟಿಕೆಗಳನ್ನು ನಿರ್ಬಂಧಿಸಲು ಮತ್ತು ನಿಯಂತ್ರಿಸಲು ಇರುತ್ತದೆಯೇ ಹೊರತು ಸ್ಥಳೀಯ ಜನರ ನಿತ್ಯದ ಯಾವುದೇ ಚಟುವಟಿಕೆಗಳಿಗೆ ತೊಂದರೆ ಆಗುವುದಿಲ್ಲ. ಅರಣ್ಯ ಇಲಾಖೆ ಈ ಕುರಿತು ಜಾಗೃತಿ ಮೂಡಿಸಬೇಕು ಮತ್ತು ಯಾರೂ ಈ ಕುರಿತು ವದಂತಿಗಳನ್ನು ಹರಡಬಾರದು' ಎಂದು ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ ಕುಲಕರ್ಣಿ ಮನವಿ ಮಾಡಿದರು.

ನೀರಾವರಿ ಯೋಜನೆಗೆ ನಿರ್ಬಂಧ

- ಈಗಿರುವ ಹಾಗೂ ಹೊಸ ವಾಣಿಜ್ಯ ಗಣಿಗಾರಿಕೆ, ಕಲ್ಲುಗಣಿಗಾರಿಕೆ, ಕಲ್ಲು ಪುಡಿ ಮಾಡುವ ಘಟಕಗಳಿಗೆ ಪೂರ್ಣ ನಿಷೇಧ
- ಮಾಲಿನ್ಯಕಾರಕ ಕೈಗಾರಿಕೆಗಳ ಸ್ಥಾಪನೆಗೆ ನಿರ್ಬಂಧ
- ಯಾವುದೇ ಹೊಸ ಉಷ್ಣ ವಿದ್ಯುತ್, ಪರಮಾಣು ವಿದ್ಯುತ್ ಹಾಗೂ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವಂತಿಲ್ಲ
- ಯಾವುದೇ ಅಪಾಯಕಾರಿ ವಸ್ತುಗಳ ಬಳಕೆ ಅಥವಾ ಉತ್ಪಾದನೆ ಅಥವಾ ಸಂಸ್ಕರಣೆಗೆ ನಿರ್ಬಂಧ
- ಹೊಸದಾಗಿ ಘನತ್ಯಾಜ್ಯ ವಿಲೇವಾರಿ ಘಟಕ ಮತ್ತು ಜೈವಿಕ ವೈದ್ಯಕೀಯ ತ್ಯಾಜ್ಯ ಸುಡುವ ಘಟಕಕ್ಕಿಲ್ಲ ಅವಕಾಶ

ಮಹಾಕುಂಭ ಮೇಳ: ಧಾರ್ಮಿಕ ವಿಧಿಗಳನ್ನು ನೆರವೇರಿಸಲಿರುವ ಪ್ರಧಾನಿ ನರೇಂದ್ರ ಮೋದಿ

ವಿವಿಧ ಯೋಜನೆಗಳ ಉದ್ಘಾಟನೆ ಇಂದು

• ಎಸ್. ಸಂಪತ್

ಪ್ರಯಾಗ್‌ರಾಜ್: ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಜನವರಿ 13ರಿಂದ ಆರಂಭವಾಗಲಿರುವ ಮಹಾಕುಂಭ ಮೇಳ- 2025ಕ್ಕೆ ಭರದಿಂದ ಸಿದ್ಧತೆಗಳು ನಡೆಯುತ್ತಿದ್ದು, ರೈಲ್ವೆ ಇಲಾಖೆಯ ₹1,609 ಕೋಟಿ ಮೊತ್ತದ ವಿವಿಧ ಕಾಮಗಾರಿಗಳೂ ಸೇರಿದಂತೆ ಸುಮಾರು ₹7,000 ಕೋಟಿ ಮೊತ್ತದ ಹಲವು ಅಭಿವೃದ್ಧಿ ಯೋಜನೆಗಳನ್ನು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಉದ್ಘಾಟಿಸಲಿದ್ದಾರೆ. ಅಲ್ಲದೆ ಅವರು ಈ ವೇಳೆ ಮೇಳದ ಕೆಲ ಧಾರ್ಮಿಕ ವಿಧಿಗಳನ್ನೂ ನೆರವೇರಿಸಲಿದ್ದಾರೆ.

ಪ್ರಧಾನಿ ಅವರು ಶುಕ್ರವಾರ ಮಧ್ಯಾಹ್ನ 12.15ರ ಸುಮಾರಿಗೆ ಬರಲಿದ್ದು, ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳ ತ್ರಿವೇಣಿ ಸಂಗಮದಲ್ಲಿ ಪೂಜೆ ಸಲ್ಲಿಸಲಿದ್ದಾರೆ. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು, ಗುರುವಾರ ಪ್ರಯಾಗ್‌ರಾಜ್‌ಗೆ ಭೇಟಿ ನೀಡಿ, ಸಿದ್ಧತಾ ಕಾರ್ಯಗಳನ್ನು ಪರಿಶೀಲಿಸಿದರು.

ಸಿಸಿಟಿವಿ ಕಣ್ಗಾವಲು: ಪ್ರಯಾಗ್‌ರಾಜ್ ಮತ್ತು ಅದರ ವ್ಯಾಪ್ತಿಯಲ್ಲಿ ಬರುವ 9 ರೈಲು ನಿಲ್ದಾಣಗಳಲ್ಲೂ ಸಿ.ಸಿ.ಟಿ.ವಿ ಕ್ಯಾಮೆರಾಗಳ ಮೂಲಕ ಕಣ್ಗಾವಲು ಇಡಲಾಗಿದೆ. ಈ ನಿಲ್ದಾಣಗಳಲ್ಲಿ ಒಟ್ಟಾರೆ 1,186 ಸಿಸಿಟಿವಿ ಕ್ಯಾಮೆರಾಗಳು ಕಾರ್ಯ ನಿರ್ವಹಿಸುತ್ತಿವೆ. ಇದರಲ್ಲಿ ಕುಂಭಮೇಳಕ್ಕೆಂದೇ ಹೊಸದಾಗಿ ಅಳವಡಿಸಿರುವ 500 ಕ್ಯಾಮೆರಾಗಳೂ ಸೇರಿವೆ. ಈ ಪೈಕಿ 100 ಕ್ಯಾಮೆರಾಗಳು ಮುಖಚಹರೆ ಗುರುತಿಸುವ ವ್ಯವಸ್ಥೆಯನ್ನು (ಎಫ್‌ಆರ್‌ಎಸ್) ಹೊಂದಿವೆ. ಪ್ರಯಾಣಿಕರಲ್ಲಿ ಯಾರಾದರೂ ಅಪರಾಧ ಹಿನ್ನೆಲೆಯವರಿದ್ದರೆ ಕೂಡಲೇ ಈ ಕ್ಯಾಮೆರಾಗಳು ಕಂಟ್ರೋಲ್ ರೂಮ್‌ಗೆ ಮಾಹಿತಿ ರವಾನಿಸುತ್ತವೆ ಎಂದು ರೈಲ್ವೆ ಸುರಕ್ಷಾ ಅಧಿಕಾರಿ ಪಿ.ಎಸ್. ಸಂದೀಪ್ ಕುಮಾರ್ ವಿವರಿಸಿದರು.

ವೇಟಿಂಗ್ ಏರಿಯಾ: 'ಕುಂಭಮೇಳಕ್ಕೆ ಬರುವ ಪ್ರಯಾಣಿಕರ ಸುರಕ್ಷತೆಗೆ ಒತ್ತು ನೀಡಿದ್ದೇವೆ. ಅವರನ್ನು ಸುರಕ್ಷಿತವಾಗಿ ಮರಳಿ ಕಳುಹಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಇದಕ್ಕಾಗಿ ಪ್ರಯಾಣಿಕರಿಗೆ ವೇಟಿಂಗ್ ಏರಿಯಾಗಳನ್ನು ರೂಪಿಸಲಾಗಿದ್ದು, ಅಲ್ಲಿ ಅವರಿಗೆ ಯಾವುದೇ ತೊಂದರೆ ಆಗದಂತೆ ಮೂಲ ಸೌಕರ್ಯ ಕಲ್ಪಿಸಿದ್ದೇವೆ. ಅಲ್ಲಿ ಉಪಹಾರ, ಸಹಾಯ ಕೇಂದ್ರ, ಶೌಚಾಲಯ, ಟಿಕೆಟ್ ಕೌಂಟರ್‌ಗಳ ವ್ಯವಸ್ಥೆ ಮಾಡಲಾಗಿದೆ ಎಂದು ಪ್ರಯಾಗ್‌ರಾಜ್ ಜಂಕ್ಷನ್‌ನ ನಿರ್ದೇಶಕ ವಿ.ಕೆ. ದ್ವಿವೇದಿ ಮಾಹಿತಿ ನೀಡಿದರು.

ಮಹಾ ಕುಂಭಮೇಳಕ್ಕಾಗಿ ಪ್ರಯಾಗ್‌ರಾಜ್‌ನ ಗೋಡೆಗಳ ಮೇಲೆ ಆಕರ್ಷಕ ಚಿತ್ರಗಳನ್ನು ಬಿಡಿಸಲಾಗಿದೆ —ಪಿಟಿಐ ಚಿತ್ರ

3,000 ವಿಶೇಷ ರೈಲು

ಮಹಾ ಕುಂಭಮೇಳದ ಅವಧಿಯಲ್ಲಿ ರೈಲ್ವೆ ಇಲಾಖೆಯು 10,000 ರೆಗ್ಯುಲರ್ ರೈಲುಗಳ ಜತೆಗೆ ಹೆಚ್ಚುವರಿಯಾಗಿ 3,000 ವಿಶೇಷ ರೈಲುಗಳ ಸಂಚಾರಕ್ಕೆ ವ್ಯವಸ್ಥೆ ಮಾಡಿದೆ ಎಂದು ಉತ್ತರ ಮಧ್ಯ ರೈಲ್ವೆಯ ಮುಖ್ಯ ಜನ ಸಂಪರ್ಕ ಅಧಿಕಾರಿ ಶಶಿಕಾಂತ ತ್ರಿಪಾಠಿ ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

ಜ. 13ರಿಂದ ಕುಂಭಮೇಳ

12 ವರ್ಷಗಳಿಗೊಮ್ಮೆ ನಡೆಯುವ ಕುಂಭಮೇಳವು ಈ ಬಾರಿ 2025ರ ಜ. 13ರಿಂದ ಫೆ.26ರ ವರೆಗೆ ಜರುಗಲಿದೆ. 45 ದಿನಗಳ ವರೆಗೆ ನಡೆಯುವ ಈ ಧಾರ್ಮಿಕ ಮಹೋತ್ಸವದಲ್ಲಿ ಕೋಟ್ಯಂತರ ಜನರು ಭಾಗವಹಿಸುವ ನಿರೀಕ್ಷೆಯಿದೆ. ಈ ಸಂಬಂಧ ರೈಲ್ವೆ ಇಲಾಖೆಯೂ ಪ್ರಯಾಣಿಕರ ಅನುಕೂಲಕ್ಕಾಗಿ ಅಗತ್ಯ ಸಿದ್ಧತಾ ಕಾರ್ಯಗಳನ್ನು ಕೈಗೊಂಡಿದೆ.

ಏನೆಲ್ಲ ಉದ್ಘಾಟನೆ?

ಏಳು ರೈಲ್ವೆ ಮೇಲ್ಸೇತುವೆ, ಮೂರು ಕೆಳಸೇತುವೆ, ದ್ವಿಪಥ ಮಾರ್ಗ, ಗಂಗಾ ನದಿಗೆ ನಿರ್ಮಿಸಿರುವ ಸೇತುವೆ, ಕಲುಷಿತ ನೀರಿನ ಶುದ್ಧೀಕರಣ ಘಟಕ, ಕುಡಿಯುವ ನೀರು, ವಿದ್ಯುತ್ ಪೂರೈಕೆ ಸೇರಿ ಹಲವು ಯೋಜನೆಗಳು, ಹನುಮಾನ್ ಮಂದಿರ ಸೇರಿ ಪ್ರಮುಖ ದೇವಾಲಯಗಳ ಕಾರಿಡಾರ್‌ಗಳನ್ನು ಪ್ರಧಾನಿ ಮೋದಿ ಶುಕ್ರವಾರ ಉದ್ಘಾಟಿಸಲಿದ್ದಾರೆ.

ಸರ್ಕಾರದಿಂದ ₹ 4.18 ಕೋಟಿಗೆ ಖರೀದಿ; ರಾಜ್ಯಪಾಲರ ಹೆಸರಿಗೆ ನೋಂದಣಿ

ನಿಜಲಿಂಗಪ್ಪ ನಿವಾಸ ನೋಂದಣಿ ಪೂರ್ಣ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮಾಜಿ ಮುಖ್ಯಮಂತ್ರಿ, ದಿವಂಗತ ಎಸ್.ನಿಜಲಿಂಗಪ್ಪ ಅವರ ನಿವಾಸವನ್ನು ಸರ್ಕಾರದ ಹೆಸರಲ್ಲಿ ಖರೀದಿಸುವ ಪ್ರಕ್ರಿಯೆ ಗುರುವಾರ ಪೂರ್ಣಗೊಂಡಿತು. ವಿ.ಪಿ. ಬಡಾವಣೆಯಲ್ಲಿರುವ ಮನೆಯನ್ನು ಹಿರಿಯ ಪುತ್ರ ಎಸ್.ಎನ್. ಕಿರಣ್ ಶಂಕರ್ ಸರ್ಕಾರದ ಪರವಾಗಿ ರಾಜ್ಯಪಾಲರ ಹೆಸರಿಗೆ ನೋಂದಣಿ ಮಾಡಿಸಿದರು.

ನಿಜಲಿಂಗಪ್ಪ ಅವರ ನಿವಾಸವನ್ನು ಸ್ಮಾರಕವನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಸರ್ಕಾರದ ವತಿಯಿಂದಲೇ ಖರೀದಿಸುವ ಪ್ರಯತ್ನಗಳು 18 ವರ್ಷಗಳಿಂದ ಪ್ರಗತಿಯಲ್ಲಿದ್ದವು. ಆದರೆ, ವಿವಿಧ ಕಾರಣಗಳಿಂದ ಸಾಧ್ಯವಾಗಿರಲಿಲ್ಲ. 2022ರಲ್ಲಿ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದಾಗ ನಿವಾಸ ಖರೀದಿಸುವ ಪ್ರಯತ್ನ ಅಂತಿಮ ಹಂತಕ್ಕೆ ಬಂದಿತ್ತು.

117 X 130 ಅಡಿ ವಿಸ್ತೀರ್ಣದ ನಿವೇಶನ, ಮನೆ ಖರೀದಿಗೆ ₹ 4.24 ಕೋಟಿ, ಸ್ಮಾರಕ ಅಭಿವೃದ್ಧಿಗೆ ₹ 76 ಲಕ್ಷ ಸೇರಿ ಒಟ್ಟು ₹ 5 ಕೋಟಿ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿತ್ತು. ಲೋಕೋಪಯೋಗಿ ಇಲಾಖೆ ಖಾತೆಯಲ್ಲಿ ಈ ಅನುದಾನದ ಮೊತ್ತ ಇತ್ತು.

> **ಮನೆಯನ್ನು ಖರೀದಿಸಿ ಸಂರಕ್ಷಿಸುವ ಉದ್ದೇಶದಿಂದ ಈ ಹಿಂದೆ ಬಿಡುಗಡೆ ಮಾಡಿದ್ದ ₹4,18,49,016 ಮೊತ್ತಕ್ಕೆ ರಾಜ್ಯ ಸರ್ಕಾರದ ಪರವಾಗಿ ರಾಜ್ಯಪಾಲರ ಹೆಸರಿಗೆ ಖರೀದಿ ಮಾಡಲಾಗಿದೆ**
> **ಟಿ.ವೆಂಕಟೇಶ್,** ಜಿಲ್ಲಾಧಿಕಾರಿ

ಆಸ್ತಿ ನೋಂದಣಿ ವಿಚಾರದಲ್ಲಿ ತಾಂತ್ರಿಕ ತೊಡಕುಗಳು ಎದುರಾಗಿದ್ದ ಕಾರಣ ಖರೀದಿ ಪ್ರಕ್ರಿಯೆ ಅಂತಿಮಗೊಂಡಿರಲಿಲ್ಲ. ಅಧಿಕಾರಿಗಳ ವಿಳಂಬ ಧೋರಣೆಯಿಂದ ಬೇಸತ್ತಿದ್ದ ನಿಜಲಿಂಗಪ್ಪ ಅವರ ಹಿರಿಯ ಪುತ್ರ ಎಸ್.ಎನ್. ಕಿರಣ್‌ಶಂಕರ್ ಈಚೆಗೆ 'ನಿಜಲಿಂಗಪ್ಪ ಅವರ ಮನೆ ಮಾರಾಟಕ್ಕಿದೆ' ಎಂಬುದಾಗಿ ಜಾಹೀರಾತು ನೀಡಿದ್ದರು. ಸಾರ್ವಜನಿಕ ವಲಯದಲ್ಲಿ ಈ ವಿಚಾರ ಚರ್ಚೆಗೊಳಗಾಗಿತ್ತು, ಸರ್ಕಾರದ ವಿರುದ್ಧ ಆಕ್ರೋಶವೂ ವ್ಯಕ್ತವಾಗಿತ್ತು.

ಚಿತ್ರದುರ್ಗ ತಹಶೀಲ್ದಾರ್ ನಾಗವೇಣಿ ಅವರಿಗೆ ಎಸ್‌ನಿಜಲಿಂಗಪ್ಪ ಅವರ ಮನೆಯ ದಾಖಲೆ ಪತ್ರಗಳನ್ನು ಹಿರಿಯ ಪುತ್ರ ಎಸ್‌ಎನ್‌ ಕಿರಣ್ ಶಂಕರ್ ಗುರುವಾರ ಹಸ್ತಾಂತರಿಸಿದರು

ಈ ಬೆಳವಣಿಗೆಯಿಂದ ಎಚ್ಚೆತ್ತುಕೊಂಡ ಸರ್ಕಾರ ಅಧಿಕಾರಿಗಳ ಸಭೆ ನಡೆಸಿ ಮನೆ ಖರೀದಿಸುವ, ಸಂರಕ್ಷಿಸುವ, ಸ್ಮಾರಕವನ್ನಾಗಿ ಅಭಿವೃದ್ಧಿಗೊಳಿಸುವ ನಿರ್ಧಾರ ಪ್ರಕಟಿಸಿತ್ತು. ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ಶಿವರಾಜ ತಂಗಡಗಿ ಅವರು ತಿಂಗಳೊಳಗೆ ನೋಂದಣಿ ಮಾಡಿಸಿಕೊಳ್ಳುವುದಾಗಿ ತಿಳಿಸಿದ್ದರು. ಇದೀಗ ನೋಂದಣಿ ಪ್ರಕ್ರಿಯೆ ಪೂರ್ಣಗೊಂಡಿದೆ.

ಈ ನಿವಾಸ ಅಮೆರಿಕದಲ್ಲಿರುವ ನಿಜಲಿಂಗಪ್ಪ ಅವರ ಮೊಮ್ಮಗ ವಿನಯ್ ಅವರ ಹೆಸರಿನಲ್ಲಿತ್ತು. ಅವರು ತಮ್ಮ ತಂದೆ, ನಿಜಲಿಂಗಪ್ಪ ಅವರ ಪುತ್ರ ಎಸ್.ಎನ್.ಕಿರಣ್ ಶಂಕರ್ ಅವರಿಗೆ ಜಿಪಿಎ (ಜನರಲ್ ಪವರ್ ಆಫ್ ಅಟಾರ್ನಿ) ನೀಡಿದ್ದರು. ಅದನ್ನು ಪರಿಗಣಿಸಿ ನಗರದ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಪಕ್ರಿಯೆ ಪೂರ್ಣಗೊಳಿಸಲಾಯಿತು.

'ಮಧ್ಯಾಹ್ನ 1ರಿಂದ 1.30ರ ವೇಳೆಗೆ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸಿ ತಹಶೀಲ್ದಾರ್ ನಾಗವೇಣಿ ಅವರಿಗೆ ನಿಜಲಿಂಗಪ್ಪ ಅವರ ಹಿರಿಯ ಪುತ್ರ ಎಸ್.ಎನ್. ಕಿರಣ್ ಶಂಕರ್ ಪತ್ರವನ್ನು ಹಸ್ತಾಂತರಿಸಿದರು. ಸರ್ಕಾರ ₹ 4.18 ಕೋಟಿಗೆ ಮನೆ ಖರೀದಿ ಮಾಡಿದೆ' ಎಂದು ಎಸ್ಸೆನ್ ಸ್ಮಾರಕ ಟ್ರಸ್ಟ್ ಸಂಯೋಜಕ ಎಸ್.ಷಣ್ಮುಖಪ್ಪ ತಿಳಿಸಿದ್ದಾರೆ.

ಕಾರಂಜಾ: ಮೂವರಿಂದ ವಿಷ ಸೇವನೆ

ಬೀದರ್: ಕಾರಂಜಾ ಯೋಜನೆಯಲ್ಲಿ ಜಮೀನು ಕಳೆದುಕೊಂಡವರಿಗೆ ವೈಜ್ಞಾನಿಕ ಪರಿಹಾರ ನೀಡಬೇಕು ಎಂದು ಆಗ್ರಹಿಸಿ ಜಿಲ್ಲಾ ಉಸ್ತುವಾರಿ ಸಚಿವರ ಕಚೇರಿ ಎದುರು ಕಾರಂಜಾ ಮುಳುಗಡೆ ಸಂತ್ರಸ್ತರ ಹೋರಾಟ ಸಮಿತಿಯಿಂದ ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸ್ಥಳದಲ್ಲಿ ಗುರುವಾರ ಮೂವರು ರೈತರು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದರು.

'ಪರಿಹಾರ ಕೊಡಿ, ಇಲ್ಲವೇ ಆತ್ಮಹತ್ಯೆಗೆ ಅವಕಾಶ ಕೊಡಿ' ಎಂದು ಘೋಷಣೆ ಕೂಗುತ್ತ ಬುಧವಾರ ಪ್ರತಿಭಟನೆ ನಡೆಸಿದ್ದರು. ಆತ್ಮಹತ್ಯೆಗೆ ಯತ್ನಿಸಿದ ರೈತರನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ಈ ಸಂದರ್ಭದಲ್ಲಿ ಪೊಲೀಸ್ ವಾಹನದಲ್ಲಿ ಬೀದರ್ ತಾಲ್ಲೂಕಿನ ರೇಕುಳಗಿಯ ರೈತ ನಾಗಶೆಟ್ಟಿ ವಿಷ ಸೇವನೆಗೆ ಯತ್ನಿಸಿ, ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾಗಿದ್ದರು.

ಇದಾದ ಮರುದಿನ ಮೂವರು ರೈತರು ಧರಣಿ ಸ್ಥಳದಲ್ಲಿ ವಿಷ ಸೇವಿಸಿದ್ದಾರೆ. ಸ್ಥಳದಲ್ಲಿದ್ದ ಪೊಲೀಸರು, ಅಸ್ವಸ್ಥರಾದ ಹೋರಾಟ ಸಮಿತಿ ಅಧ್ಯಕ್ಷ ಚಂದ್ರಶೇಖರ ಪಾಟೀಲ, ರೈತರಾದ ರಾಜಪ್ಪ ಕೋಸಂ ಹಾಗೂ ರಾಜಶೇಖರ ಅಲಗೋಲ ಅವರನ್ನು ತಕ್ಷಣವೇ ಬ್ರಿಮ್ಸ್‌ಗೆ ದಾಖಲಿಸಿದ್ದಾರೆ.

'ಮೂವರು ರೈತರು ಅಸ್ವಸ್ಥರಾಗಿದ್ದು, ಅವರಿಗೆ ಬ್ರಿಮ್ಸ್‌ನ ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ದತ್ತ ಜಯಂತಿಗೆ ಚಾಲನೆ

ಚಿಕ್ಕಮಗಳೂರು: ವಿಶ್ವ ಹಿಂದೂ ಪರಿಷತ್, ಬಜರಂಗದಳದ ವತಿಯಿಂದ ಆಯೋಜಿಸಿರುವ ದತ್ತ ಜಯಂತಿ ಉತ್ಸವದ ಆರಂಭದ ದಿನವಾದ ಗುರುವಾರ ಅನಸೂಯಾ ದೇವಿ ಸಂಕೀರ್ತನಾ ಯಾತ್ರೆ ನಡೆಯಿತು.

ನಗರದ ಬೋಳರಾಮೇಶ್ವರ ದೇವಾಲಯ ಆವರಣದಿಂದ ಕಾಲ್ನಡಿಗೆ ಮೂಲಕ ಹೊರಟ ಸಂಕೀರ್ತನಾ ಯಾತ್ರೆ, ಐ.ಜಿ. ರಸ್ತೆ, ರತ್ನಗಿರಿ ರಸ್ತೆಯ ಶ್ರೀರಾಮ ದೇವಸ್ಥಾನ ಹಾದು ಕಾಮಧೇನು ಗಣಪತಿ ದೇವಾಲಯ ತಲುಪಿತು.

ಸಾವಿರಕ್ಕೂ ಹೆಚ್ಚು ಮಹಿಳೆಯರು ಕೊರಳಿಗೆ ಕೇಸರಿ ಶಾಲು ಧರಿಸಿ, ಅನಸೂಯಾ ದೇವಿಯ ಚಿತ್ರಪಟ ಹಿಡಿದು ಸಾಗಿದರು. ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಭಾಗವಹಿಸಿದ್ದರು. ಬಳಿಕ ವಾಹನಗಳಲ್ಲಿ ಶ್ರೀಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾಕ್ಕೆ ತೆರಳಿದರು. ಅಲ್ಲಿ ಅನಸೂಯಾ ದೇವಿ ಪೂಜೆ, ಗಣಪತಿ ಪೂಜೆ, ದುರ್ಗಾಹೋಮ, ಕಲಾಶಾಭಿಷೇಕ ಮಾಡಿದರು. ಸಣ್ಣದಾಗಿ ಬರುತ್ತಿದ್ದ ಮಳೆ ಮತ್ತು ಕೊರೆಯುವ ಚಳಿಯ ನಡುವೆ ಸರತಿಯಲ್ಲಿ ಸಾಗಿ ದತ್ತ ಪಾದುಕೆ ದರ್ಶನ ಪಡೆದರು. ಸಂಕೀರ್ತನಾ ಯಾತ್ರೆ ಉದ್ದಕ್ಕೂ ಪೊಲೀಸರು ಬಿಗಿ ಬಂದೋಬಸ್ತ್ ಒದಗಿಸಿದ್ದರು. ಶುಕ್ರವಾರ ಶೋಭಾಯಾತ್ರೆ ನಡೆಯಲಿದ್ದು, ಶನಿವಾರ ಶ್ರೀಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾಕ್ಕೆ ತೆರಳಿ ದತ್ತ ಪಾದುಕೆ ದರ್ಶನವನ್ನು ಭಕ್ತರು ಪಡೆಯಲಿದ್ದಾರೆ.

ಚಿಕ್ಕಮಗಳೂರಿನಲ್ಲಿ ಅನಸೂಯಾ ದೇವಿ ಜಯಂತಿ ಅಂಗವಾಗಿ ನಡೆದ ಸಂಕೀರ್ತನಾ ಯಾತ್ರೆಯಲ್ಲಿ ಸಾವಿರಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದರು
ಪ್ರಜಾವಾಣಿ ಚಿತ್ರ: ಎ.ಎನ್‌.ಮೂರ್ತಿ

ಸಿಎಂ ವಿರುದ್ಧ ಇನ್ನೊಂದು ಪ್ರಕರಣಕ್ಕೆ ಮನವಿ

ಮೈಸೂರು: 'ಜಾರಿ ನಿರ್ದೇಶನಾಲಯವು ಲೋಕಾಯುಕ್ತ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಿಗೆ ಬರೆದಿರುವ ಪತ್ರ ಆಧರಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇತರರ ವಿರುದ್ಧ ಮತ್ತೊಂದು ಪ್ರಕರಣ ದಾಖಲಿಸಬೇಕು' ಎಂದು ಕೋರಿ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಇಲ್ಲಿನ ಲೋಕಾಯುಕ್ತ ಎಸ್.ಪಿ. ಕಚೇರಿಗೆ ಗುರುವಾರ ಮನವಿ ಪತ್ರ ಸಲ್ಲಿಸಿದರು.

'ವಿಜಯ ಮದನಲಾಲ್ ಇತರರು ಹಾಗೂ ಯುನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಅಕ್ರಮ ಹಣ ವರ್ಗಾವಣೆ ಕಾಯ್ದೆ ಬಗ್ಗೆ ವಿವರವಾದ ತೀರ್ಪು ನೀಡಿದೆ. ಅದರ 53ನೇ ಕಂಡಿಕೆಯಲ್ಲಿ ವಿವರಿಸಿರುವಂತೆ ಜಾರಿ ನಿರ್ದೇಶನಾಲಯವು ಈ ರೀತಿ ಮಾಹಿತಿ ನೀಡಿದಾಗ ಮೊದಲೊಂದು ಪ್ರಕರಣವು ಬಾಕಿ ಇದ್ದರೂ ಮತ್ತೊಂದು ಪ್ರಕರಣ ದಾಖಲಿಸುವ ಬಗ್ಗೆ ತಿಳಿಸಿದೆ. ಅದರಂತೆ ಇ.ಡಿ. ಮಾಹಿತಿ ಆಧರಿಸಿ ಲೋಕಾಯುಕ್ತ ಅಧಿಕಾರಿಗಳು ಸಿದ್ದರಾಮಯ್ಯ ಹಾಗೂ ಇತರರ ವಿರುದ್ಧ ಇನ್ನೊಂದು ಪ್ರಕರಣ ದಾಖಲಿಸಬೇಕು' ಎಂದು ಪತ್ರದಲ್ಲಿ ಕೋರಿದ್ದಾರೆ.

ಬಹಿಷ್ಕಾರ: ಗ್ರಾಮಕ್ಕೆ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ತಾಲ್ಲೂಕಿನ ಲಿಂಗರಾಜಪುರದಲ್ಲಿ ಬಹಿಷ್ಕಾರಕ್ಕೊಳಗಾದ ಉಪ್ಪಾರ ಸಮುದಾಯದ ಗೋವಿಂದಶೆಟ್ಟಿ ಅವರ ಕುಟುಂಬ ಮತ್ತು ಬಹಿಷ್ಕಾರದ ಬೆದರಿಕೆ ಎದುರಿಸುತ್ತಿರುವ ಸಿದ್ದರಾಜು ಅವರ ಕುಟುಂಬದ ಸದಸ್ಯರನ್ನು ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಪೊಲೀಸ್ ಅಧಿಕಾರಿಗಳ ತಂಡ ಗುರುವಾರ ಭೇಟಿ ಮಾಡಿ ಮಾಹಿತಿ ಸಂಗ್ರಹಿಸಿತು.

ಎರಡೂ ಕುಟುಂಬಗಳ ಸದಸ್ಯರು ಅಧಿಕಾರಿಗಳ ಮುಂದೆ ಅಳಲು ತೋಡಿಕೊಂಡರು. ಬಹಿಷ್ಕಾರ ಸಂಬಂಧ ಸಂತ್ರಸ್ತರು ನೀಡಿರುವ ದೂರುಗಳು ಹಾಗೂ ಅಧಿಕಾರಿಗಳು ಕೈಗೊಂಡ ಕ್ರಮಗಳ ಬಗ್ಗೆಯೂ ಮಾಹಿತಿ ಸಂಗ್ರಹಿಸಲಾಯಿತು.

ನಂತರ 'ಪ್ರಜಾವಾಣಿ' ಜೊತೆ ಮಾತನಾಡಿದ ಸಿದ್ದರಾಜು, 'ಉಪ್ಪಾರ ಸಮುದಾಯದಲ್ಲಿ ಬಹಿಷ್ಕಾರದಂತಹ ಅಮಾನವೀಯ ಪದ್ಧತಿ ಇಂದಿಗೂ ಜೀವಂತವಾಗಿದೆ. ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ನೊಂದವರಿಗೆ ನ್ಯಾಯ ಕೊಡಿಸಬೇಕು. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು' ಎಂದು ಒತ್ತಾಯಿಸಿದರು.

ಪ್ರಜಾವಾಣಿ ರಸಪ್ರಶ್ನೆ

ದಾವಣಗೆರೆಯ ಕುವೆಂಪು ಕನ್ನಡ ಭವನದಲ್ಲಿ ಗುರುವಾರ ನಡೆದ ದಾವಣಗೆರೆ ವಲಯ ಮಟ್ಟದ 'ಪ್ರಜಾವಾಣಿ ರಸಪ್ರಶ್ನೆ ಚಾಂಪಿಯನ್‌ಶಿಪ್' ವಿಜೇತರಾದ ತರಳಬಾಳು ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳಾದ ಬೃಂದಾ ಮತ್ತು ಮಾನಸಿ ಅವರಿಗೆ ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕರಾದ ವಿನಯ್‌ಕುಮಾರ್ ಜಿ.ಬಿ ಪ್ರಶಸ್ತಿ ಮತ್ತು ಪ್ರಮಾಣ ಪತ್ರವನ್ನು ವಿತರಿಸಿದರು. ಕ್ವಿಜ್ ಮಾಸ್ಟರ್ ಮೇಘವಿ ಮಂಜುನಾಥ್, ಪೈಲಟ್ ಪೆನ್ಸ್ ಸಂಸ್ಥೆಯ ಸೋಮಶೇಖರ್. ಕೆ ಇದ್ದಾರೆ
ಪ್ರಜಾವಾಣಿ ಚಿತ್ರ

'ವಕ್ಫ್ ಆಸ್ತಿ ಚರ್ಚೆ ಅಗತ್ಯ'

ಮಂಗಳೂರು: 'ರಾಜ್ಯದಲ್ಲಿ ನೀರಾವರಿ ಯೋಜನೆಗಳ ಅನುಷ್ಠಾನ, ಪಟ್ಟಣಗಳ ವಿಸ್ತರಣೆ ಮುಂತಾದ ಸಂದರ್ಭಗಳಲ್ಲಿ ವಕ್ಫ್‌ಗೆ ಸಂಬಂಧಿಸಿದ ಅನೇಕ ಆಸ್ತಿಗಳು ಸರ್ಕಾರದ ಪಾಲಾಗಿವೆ. ಕೆಲವು ಆಸ್ತಿಗಳು ಕೊಡುಗೆಯ ಹೆಸರಿನಲ್ಲಿ ಸಾರ್ವಜನಿಕರ ಕೈಸೇರಿವೆ. ಈ ಎರಡೂ ಲೋಪಗಳನ್ನು ಸರಿಪಡಿಸಲು ಎಲ್ಲ ಧರ್ಮದವರು ಕುಳಿತು ಮಾತನಾಡಬೇಕಾಗಿದೆ' ಎಂದು ರಾಜ್ಯ ವಕ್ಫ್ ಮಂಡಳಿಯ ನಿವೃತ್ತ ಕಾರ್ಯನಿರ್ವಹಣಾಧಿಕಾರಿ ಮುಜೀಬುಲ್ಲಾ ಝಫಾರಿ ಅಭಿಪ್ರಾಯಪಟ್ಟರು.

ಸುನ್ನಿ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ (ಎಸ್‌ಎಂಎ) ನಗರದಲ್ಲಿ ಗುರುವಾರ ಆಯೋಜಿಸಿದ್ದ ವಕ್ಫ್ ಜಾಗೃತಿ ಸಮಾವೇಶದಲ್ಲಿ ಮಾತನಾಡಿದ ಅವರು, 'ವಕ್ಫ್ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ವಕ್ಫ್‌ನ ಬಲ ಕುಂದಿಸುವ ಪ್ರಯತ್ನವನ್ನು ಕೇಂದ್ರ ಸರ್ಕಾರ ಮಾಡುತ್ತಿದೆ. ತಿದ್ದುಪಡಿಯಲ್ಲಿ ಅನೇಕ ವಿಷಯಗಳು ಕಾನೂನಿಗೆ ವಿರುದ್ಧವಾಗಿರುವುದರಿಂದ ವಕ್ಫ್ ಪರವಾಗಿ ಹೋರಾಟ ಮಾಡುವವರಿಗೆ ಜಯ ಖಚಿತ' ಎಂದರು.

ಕರ್ನಾಟಕದಲ್ಲಿ 1.17 ಲಕ್ಷ ಆಸ್ತಿಗಳು ವಕ್ಫ್‌ಗೆ ಸೇರಿದ್ದವು. ಅದರಲ್ಲಿ 79 ಸಾವಿರ ಆಸ್ತಿಗಳು 'ಇನಾಂ' ರೂಪದಲ್ಲಿ ಸಾರ್ವಜನಿಕರ ಪಾಲಾಗಿವೆ. ವಕ್ಫ್ ಎಂದರೆ ಶಾಶ್ವತ ಎಂದು ಅರ್ಥ. ಆದ್ದರಿಂದ ಈ ಆಸ್ತಿಗಳನ್ನು ವಾಪಸ್ ಪಡೆಯಲು ಕಾನೂನಿನ ಬಲವಿದೆ. ಹೀಗಾಗಿ ಈಗ ನೀಡಿರುವ ನೋಟಿಸ್ ಕಾನೂನು ಬಾಹಿರ. ಇನಾಂ ಮೂಲಕ ಲಭಿಸಿದ ಆಸ್ತಿ, ಕಬಳಿಸುವ ಉದ್ದೇಶದಿಂದ ಪಡೆದುಕೊಂಡದ್ದಲ್ಲ. ಆದ್ದರಿಂದ ರೈತರನ್ನೂ ದೂರುವಂತಿಲ್ಲ ಎಂದರು.

'ಪ್ರಾಸಿಕ್ಯೂಟರ್‌ಗಳಿಗೆ ಇ.ಡಿ. ನಿರ್ದೇಶನ ಸಲ್ಲ'

ನವದೆಹಲಿ (ಪಿಟಿಐ): ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಅದರ ನಿರ್ದೇಶಕರು ಹಣದ ಅಕ್ರಮ ವರ್ಗಾವಣೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಸೂಚನೆಗಳನ್ನು ತಮ್ಮ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳಿಗೆ ನೀಡಬಹುದು. ಆದರೆ ಅವರು ಕೋರ್ಟ್‌ನಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬ ಬಗ್ಗೆ ನಿರ್ದೇಶನ ನೀಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಸುಪ್ರೀಂ ಕೋರ್ಟ್ ನೀಡಿರುವ ಈ ಸ್ಪಷ್ಟನೆಯು, ನ್ಯಾಯಾಲಯದ ಅಧಿಕಾರಿಗಳಾಗಿ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳು ಹೊಂದಿರುವ ಸ್ವಾತಂತ್ರ್ಯವನ್ನು ಒತ್ತಿಹೇಳಿದೆ. ಅಲ್ಲದೆ, ತನಿಖಾ ಸಂಸ್ಥೆಗಳು ನ್ಯಾಯಾಲಯದ ಪ್ರಕ್ರಿಯೆಗಳಲ್ಲಿ ಪ್ರಭಾವ ಬೀರುವುದನ್ನು |ಮಿತಿಗೊಳಿಸುತ್ತದೆ.

ನಿಧನ ವಾರ್ತೆ

ಮಾಜಿ ಶಾಸಕ ಆರ್.ನಾರಾಯಣ್

ತುಮಕೂರು: ಮಾಜಿ ಶಾಸಕ ಹಾಗೂ ಕಾಂಗ್ರೆಸ್ ಹಿರಿಯ ಮುಖಂಡ ಆರ್. ನಾರಾಯಣ್ (82) ಗುರುವಾರ ಬೆಳಗ್ಗೆ ನಿಧನರಾದರು.

ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆಸ್ಪತ್ರೆಯಲ್ಲೇ ಕೊನೆಯುಸಿರೆಳೆದರು. ಅವಿವಾಹಿತರಾಗಿದ್ದ ಅವರು ಒಬ್ಬಂಟಿಯಾಗಿ ನಗರದ ಸಿಎಸ್‌ಐ ಲೇಔಟ್‌ನಲ್ಲಿರುವ ಮನೆಯಲ್ಲಿ ವಾಸವಿದ್ದರು. ಬೆಳ್ಳಾವಿ ವಿಧಾನಸಭಾ ಕ್ಷೇತ್ರದಿಂದ ಮೂರು ಬಾರಿ (1989, 1994 ಹಾಗೂ 1999) ಶಾಸಕರಾಗಿ ಆಯ್ಕೆ ಆಗಿದ್ದರು. ಎಸ್.ಎಂ.ಕೃಷ್ಣ ನೇತೃತ್ವದ ಸರ್ಕಾರದಲ್ಲಿ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ನಗರದ ಗಾರ್ಡನ್ ರಸ್ತೆಯ ಚಿತಾಗಾರದಲ್ಲಿ ಗುರುವಾರ ಸಂಜೆ ಅಂತ್ಯಕ್ರಿಯೆ ನೆರವೇರಿತು.

ಮಾಜಿ ಶಾಸಕ ಕೇಶವರಾವ್ ನಿಟ್ಟೂರಕರ್

ಭಾಲ್ಕಿ (ಬೀದರ್ ಜಿಲ್ಲೆ): ಸ್ವಾತಂತ್ರ್ಯ ಹೋರಾಟಗಾರ, ವಿಧಾನ ಪರಿಷತ್ ಮಾಜಿ ಸದಸ್ಯ ಕೇಶವರಾವ್ ನಿಟ್ಟೂರಕರ್ (102) ಗುರುವಾರ ಬೀದರ್ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಭಾಲ್ಕಿ ತಾಲ್ಲೂಕಿನ ನಿಟ್ಟೂರ್ (ಬಿ) ಗ್ರಾಮದವರಾದ ಕೇಶವರಾವ್ ನಿಟ್ಟೂರಕರ್ ಐದು ದಶಕಗಳ ಕಾಲ ವಕೀಲಿ ವೃತ್ತಿ ಮಾಡಿದ್ದರು. 1958, 1960 ಹಾಗೂ 1966ರಲ್ಲಿ ವಿಧಾನ ಪರಿಷತ್ ಸದಸ್ಯರಾಗಿದ್ದರು. 1958ರಿಂದ 1960ರವರೆಗೆ ವಿಧಾನ ಪರಿಷತ್ ಉಪ ಸಭಾಪತಿಯಾಗಿ ಕೆಲಸ ನಿರ್ವಹಿಸಿದ್ದರು.

ಅವರಿಗೆ ಮೂವರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಗುರುವಾರ ಸಂಜೆ ಭಾಲ್ಕಿಯಲ್ಲಿ ಸಕಲ ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ ನಡೆಯಿತು.

ಸಮಾಜ ಕಲ್ಯಾಣ ಇಲಾಖೆ
ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ
AMBEDKAR DEVELOPMENT CORPORATION

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಪರಿಶಿಷ್ಟ ಜಾತಿಯವರ ಆರ್ಥಿಕ ಅಭಿವೃದ್ಧಿಗಾಗಿ ಕಲ್ಯಾಣ ಯೋಜನೆಗಳು
2024-2025ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳಿಗೆ ಅರ್ಜಿ ಆಹ್ವಾನ

ಸ್ವಯಂ ಉದ್ಯೋಗ ನೇರಸಾಲ-ಕುರಿ ಸಾಕಾಣಿಕೆ

ಸ್ವಯಂ ಉದ್ಯೋಗ ನೇರಸಾಲ ಯೋಜನೆಯಡಿ ಎಲ್ಲಾ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ **ಕುರಿ ಸಾಕಾಣಿಕೆ** ಉದ್ದೇಶಕ್ಕಾಗಿ ಸಹಾಯಧನ ಹಾಗೂ ಸಾಲ ಮಂಜೂರು ಮಾಡಲಾಗುವುದು.

- ಘಟಕ ವೆಚ್ಚ : ರೂ. 1.00 ಲಕ್ಷ
- ಸಹಾಯಧನ : ರೂ. 50,000/-
- ಸಾಲ: ರೂ. 50,000/-

ಈಗಾಗಲೇ ಅರ್ಜಿ ಸಲ್ಲಿಸಿರುವವರು ಉದ್ದೇಶ ಬದಲಾವಣೆಗೆ ಇಚ್ಛಿಸಿದಲ್ಲಿ ನೇರವಾಗಿ ವೆಬ್‌ಸೈಟ್ ವಿಳಾಸ https://swdcorp.karnataka.gov.in/ADCLPortal ನಲ್ಲಿ ಉದ್ದೇಶ ಬದಲಾವಣೆ ಮಾಡಬಹುದಾಗಿರುತ್ತದೆ. ಅಥವಾ ಸಂಬಂಧಿಸಿದ ಜಿಲ್ಲಾ ಕಛೇರಿಗಳಲ್ಲಿ ಮನವಿ ಪತ್ರ ಸಲ್ಲಿಸಬಹುದಾಗಿರುತ್ತದೆ.



ಡಾ. ಹೆಚ್. ಸಿ. ಮಹದೇವಪ್ಪ, ಮಾನ್ಯ ಸಮಾಜ ಕಲ್ಯಾಣ ಇಲಾಖೆ ಸಚಿವರು ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ **ಶ್ರೀ ಆರ್. ಸಂಪತ್ ರಾಜ್** ರವರೊಂದಿಗೆ ನಿಗಮದ ಯೋಜನೆಗಳ ಬಗ್ಗೆ ಚರ್ಚಿಸುತ್ತಿರುವುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ :
29.12.2024 ರವರೆಗೆ

https://sevasindhu.karnataka.gov.in ನಲ್ಲಿ ನೇರವಾಗಿ ಅಥವಾ ಕೆಳಕಂಡ ಸಂಸ್ಥೆಗಳ ಸಹಯೋಗದೊಂದಿಗೆ ಸಹಾ ಅರ್ಜಿ ಸಲ್ಲಿಸಬಹುದು.
KARNATAKA One · ಗ್ರಾಮ ಒನ್ · BANGALORE One

2023-24 ಮತ್ತು 2024-25 ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿರುವವರು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.

ಸ್ವಾವಲಂಬಿ ಸಾರಥಿ-ಫುಡ್ ಕಾರ್ಟ್

ಸ್ವಾವಲಂಬಿ ಸಾರಥಿ ಯೋಜನೆಯಡಿ **ಫುಡ್ ಕಾರ್ಟ್** ಉದ್ದೇಶಕ್ಕಾಗಿ ಜಿಲ್ಲಾ ಕೇಂದ್ರಗಳ ವ್ಯಾಪ್ತಿಯಲ್ಲಿ ಮಾತ್ರ ಬ್ಯಾಂಕ್‌ಗಳ ಸಹಯೋಗದೊಂದಿಗೆ ಯೋಜನೆ ಅನುಷ್ಠಾನ.

- ಸಾಲದ ಮೊತ್ತಕ್ಕೆ ಶೇ.75 ರಷ್ಟು ಅಥವಾ ಗರಿಷ್ಠ ರೂ. 4.00 ಲಕ್ಷಗಳ ಸಹಾಯಧನ
- ಉಳಿದ ಮೊತ್ತ ಬ್ಯಾಂಕ್ ಸಾಲ

ಹೆಚ್ಚಿನ ಮಾಹಿತಿಗಾಗಿ ನಿಗಮದ ಜಿಲ್ಲಾ ವ್ಯವಸ್ಥಾಪಕರುಗಳ ಕಛೇರಿ ಅಥವಾ ನಿಗಮಗಳ ವೆಬ್‌ಸೈಟ್ ಅಥವಾ ಕಲ್ಯಾಣಮಿತ್ರ ಏಕೀಕೃತ ಎಸ್.ಸಿ / ಎಸ್.ಟಿ ಸಹಾಯವಾಣಿ 9482-300-400 ಸಂಪರ್ಕಿಸುವುದು.

ನುಡಿದಂತೆ ನಡೆದಿದ್ದೇವೆ... ಶಕ್ತಿ · ಗೃಹಜ್ಯೋತಿ · ಅನ್ನಭಾಗ್ಯ · ಗೃಹಲಕ್ಷ್ಮಿ · ಯುವನಿಧಿ

ವ್ಯವಸ್ಥಾಪಕ ನಿರ್ದೇಶಕರು	ಆಯುಕ್ತರು	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು	ಅಧ್ಯಕ್ಷರು
ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ	ಸಮಾಜ ಕಲ್ಯಾಣ ಇಲಾಖೆ	ಸಮಾಜ ಕಲ್ಯಾಣ ಇಲಾಖೆ	ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ

ಸಿನಿಮಾ ಪುರವಣಿ

ರಚಿತಾರಾಮ್

ರೀಷ್ಮಾ ನಾಣಯ್ಯ

‘ಕನ್ನಡ ಸಿನಿಮಾ ನನ್ನ ಆದ್ಯತೆ’

17ನೇ ವಯಸ್ಸಿನಲ್ಲಿ ಚಿತ್ರರಂಗಕ್ಕೆ ಕಾಲಿಟ್ಟು ಸದ್ಯ ಪತ್ರಿಕೋದ್ಯಮದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವ ನಟಿ ರೀಷ್ಮಾ ನಾಣಯ್ಯ ‘ಯುಐ’ ಹಾಗೂ ‘ಕೆಡಿ’ ಸಿನಿಮಾ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಧನಂಜಯ ಜೊತೆಗೆ ‘ಅಣ್ಣ ಫ್ರಂ ಮೆಕ್ಸಿಕೋ’ದಲ್ಲಿ ರೀಷ್ಮಾ ಅಭಿನಯಿಸುತ್ತಿದ್ದು, ‘ಸಿನಿಮಾ ಪುರವಣಿ’ ಜೊತೆಗೆ ಅವರು ಮಾತಿಗೆ ಸಿಕ್ಕಾಗ...

ಅಭಿಲಾಷ್ ಪಿ.ಎಸ್.

• ಶಿಕ್ಷಣ ಹಾಗೂ ಏಳು ಸಿನಿಮಾಗಳ ಪಯಣ ಹೇಗಿತ್ತು?

ಪ್ರೇಮ್ ಅವರು ನಿರ್ದೇಶಿಸಿದ ‘ಏಕ್ ಲವ್ ಯಾ’ ಸಿನಿಮಾದಲ್ಲಿ ಅಭಿನಯಿಸುವಾಗ ನನಗೆ 17 ವರ್ಷ. ಆ ಸಿನಿಮಾ 2022ರಲ್ಲಿ ಬಿಡುಗಡೆಯಾದಾಗ 18 ವರ್ಷ. ಆಗ ನಾನಿನ್ನೂ ಪದವಿ ಓದುತ್ತಿದ್ದೆ. ಇದೀಗ ಪತ್ರಿಕೋದ್ಯಮದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿದ್ದೇನೆ. ಶಿಕ್ಷಣದ ಜೊತೆಗೆ ಸಿನಿಮಾ ಪಯಣವೂ ಮುಂದುವರಿದಿದೆ. ಆರಂಭದಲ್ಲಿ ಶಿಕ್ಷಣದ ಜೊತೆಗೆ ಸಿನಿಮಾ ಮಾಡುವುದು ಕಷ್ಟ ಆಗುತ್ತಿತ್ತು. ಪರೀಕ್ಷೆಯ ಸಂದರ್ಭದಲ್ಲಿ ಅತ್ತಿದ್ದೂ ಇದೆ. ಕ್ರಮೇಣ ಇದಕ್ಕೆ ಹೊಂದಿಕೊಂಡೆ. ಕುಟುಂಬದ ಬೆಂಬಲ ಈ ಪಯಣದಲ್ಲಿ ಮುಖ್ಯವಾಗಿತ್ತು. ಹೀಗಾಗಿಯೇ ‘ಏಕ್ ಲವ್ ಯಾ’ ಬಳಿಕ ಆರು ಸಿನಿಮಾಗಳನ್ನು ಮಾಡಿದೆ. ಮುಂದೆ ಸಿನಿಮಾವೇ ನನ್ನ ಪಯಣ. 2025ರಿಂದ ಸಿನಿಮಾದತ್ತಲೇ ನನ್ನ ಚಿತ್ತವಿರಲಿದೆ.

• ‘ಯುಐ’ ಲೋಕದಲ್ಲಿ ರೀಷ್ಮಾ ಪಾತ್ರವೇನು?

ಪಾತ್ರದ ಬಗ್ಗೆ ಕಿಂಚಿತ್ತೂ ಮಾಹಿತಿಯನ್ನು ನೀಡಬಾರದು ಎಂದು ನಿರ್ದೇಶಕರು ಹೇಳಿದ್ದಾರೆ. ಚಿತ್ರದಲ್ಲಿ ನನ್ನ ತೆರೆ ಅವಧಿ ನನಗೆ ಮುಖ್ಯವಾಗುವುದಿಲ್ಲ. ಉಪೇಂದ್ರ ಅವರು ನಿರ್ದೇಶಕರಾಗಿ ಹಲವು ಹಿಟ್ ಸಿನಿಮಾಗಳನ್ನು ನೀಡಿದ್ದಾರೆ. ನಾನು ಸಿನಿಪಯಣ ಆರಂಭಿಸಿದ ಈ ಸಣ್ಣ ಅವಧಿಯಲ್ಲೇ ಉಪೇಂದ್ರ ಅವರ ಜೊತೆ ಕೆಲಸ ಮಾಡುವ ಅವಕಾಶ ದೊರಕಿದೆ. ನನ್ನ ನಟನೆಯ ಮೇಲೆ ನಂಬಿಕೆಯಿಟ್ಟು ಪಾತ್ರ ನೀಡಿರುವುದೇ ಖುಷಿ. ಈ ಬಗ್ಗೆ ನನಗೆ ಹೆಮ್ಮೆಯೂ ಇದೆ. ನಟನೆ ಮತ್ತು ನಿರ್ದೇಶನದ ವಿಚಾರದಲ್ಲಿ ಅವರಿಂದ ಬಹಳಷ್ಟು ಕಲಿತಿದ್ದೇನೆ. ಉಪೇಂದ್ರ ಅವರು 24x7 ಭಿನ್ನವಾಗಿ ಯೋಚಿಸುತ್ತಲೇ ಇರುತ್ತಾರೆ. ಅವರ ಯೋಚನೆಗೆ ತಕ್ಕ ನಟನೆ ಮಾಡುವ ಜವಾಬ್ದಾರಿ ನಮ್ಮ ಮೇಲೆ ಇತ್ತು.

• ‘ಟ್ರೋಲ್..’ ಹಾಡಿನ ಗುಟ್ಟೇನು?

‘ಚೀಪ್..ಚೀಪ್’ ಲಿರಿಕಲ್ ಹಾಡಿನ ತುಣುಕು ರಿಲೀಸ್ ಆದಾಗ, ‘ಟ್ರೋಲ್’ ಹಾಡು ಬಿಡುಗಡೆಯಾಗಲಿದೆ ಎಂದು ನಾನೂ ನಿರೀಕ್ಷೆ ಮಾಡಿರಲಿಲ್ಲ. ಒಂದೂ ದೃಶ್ಯವನ್ನು ತೋರಿಸದೆ ನೇರವಾಗಿ ಸಿನಿಮಾವನ್ನು ಪ್ರೇಕ್ಷಕರಿಗೆ ತೋರಿಸಬೇಕು ಎನ್ನುವ ಆಸೆ ಉಪೇಂದ್ರ ಅವರಿಗೆ ಇತ್ತು. ಮೊದಲು ಆಡಿಯೊ ಟೀಸರ್ ಒಂದನ್ನು ಬಿಡುಗಡೆ ಮಾಡಿ ಉಪೇಂದ್ರ ಅವರು ಎಲ್ಲರ ತಲೆಕೆಡಿಸಿದರು. ನಂತರ ಏಕಾಏಕಿ ‘ಟ್ರೋಲ್’ ಹಾಡು ರಿಲೀಸ್ ಆಯಿತು. ಆರಂಭದಲ್ಲಿ ಎಲ್ಲರೂ ಹಾಡಿನ ಬಗ್ಗೆ ನಕಾರಾತ್ಮಕವಾಗಿ ಮಾತನಾಡಿದರು. ಆದರೆ ಕೇಳುತ್ತಾ ಕೇಳುತ್ತಾ ಎಲ್ಲರೂ ಹೊಗಳಲು ಆರಂಭಿಸಿದರು. ಅದು ವೈರಲ್ ಕೂಡಾ ಆಯಿತು. ಅದರೊಳಗೆ ಹಲವು ಅರ್ಥಗಳಿವೆ. ಆ ಹಾಡಿನ ಪ್ರತಿ ಫ್ರೇಮ್‌ನಲ್ಲೂ ವಿಷಯಗಳು ಹಲವಾರು ಇವೆ. ಈ ಹಾಡು ಸಿನಿಮಾದಲ್ಲಿ ಏಕೆ ಬರುತ್ತದೆ, ಎಲ್ಲಿ ಬರುತ್ತದೆ, ಅದರ ಅವಶ್ಯವೇನಿತ್ತು ಎನ್ನುವುದು ಸಿನಿಮಾ ನೋಡಿದಾಗ ತಿಳಿಯುತ್ತದೆ. ಆ ಹಾಡಿನ ಚಿತ್ರೀಕರಣ ಸಂದರ್ಭದಲ್ಲಿ ಕೆಲವೆಡೆ ಸಾಹಿತ್ಯ ಬೇರೆಯೇ ಇತ್ತು. ನಾಲ್ಕೈದು ದಿನಗಳ ಅಂತರದಲ್ಲಿ ಆ ಸಂದರ್ಭದಲ್ಲಿ ವೈರಲ್ ಆಗಿದ್ದ ‘ನಾನು ನಂದಿನಿ...’, ‘ಬೆಳ್ಳುಳ್ಳಿ ಕಬಾಬ್..’ ಹೀಗೆ ಹಲವು ವಾಕ್ಯಗಳನ್ನು ಸೇರಿಸಿ ಹಾಡು ಸಿದ್ಧಪಡಿಸಲಾಗಿದೆ. ‘ಟ್ರೋಲ್..’ ಹಾಡಿನ ವಿಡಿಯೊ ನೋಡಿದಾಗಲೇ ಈ ಬದಲಾವಣೆ ನನ್ನ ಗಮನಕ್ಕೆ ಬಂದದ್ದು. ಇದುವೇ ಉಪೇಂದ್ರ ಅವರ ಕೆಲಸದ ಶೈಲಿ. ಅವರ ನಡೆಯನ್ನು ಊಹಿಸಲೂ ಸಾಧ್ಯವಾಗುವುದಿಲ್ಲ. ಎಲ್ಲರಿಗೂ ಶಾಕ್ ನೀಡಿ ಹೊಸತನ್ನು ತಯಾರಿಸುವ ಕೈಚಳಕ ಅವರಲ್ಲಿದೆ.

• ಉಪೇಂದ್ರ ಅವರ ಯಾವ ಸಿನಿಮಾ ನಿಮಗೆ ಇಷ್ಟ?

ಅವರು ನಿರ್ದೇಶಿಸಿದ ಸಿನಿಮಾಗಳು ರಿಲೀಸ್ ಆದಾಗ ನಾನಿನ್ನೂ ವಿದ್ಯಾರ್ಥಿನಿಯಾಗಿದ್ದೆ. ಸಿನಿಮಾ ರಂಗಕ್ಕೆ ಬಂದ ಮೇಲೆ ಅವರ ಸಿನಿಮಾಗಳನ್ನು ನೋಡಿದ್ದೇನೆ. ಒಂದೇ ಬಾರಿ ಅವುಗಳು ಅರ್ಥವಾಗುವುದು ಬಹಳ ಕಷ್ಟ. ‘ಯುಐ’ ನಮ್ಮ ತಲೆಯಲ್ಲಿರುವ ಹುಳ ತೆಗೆಯುವ ಸಿನಿಮಾ ಎಂದು ಉಪೇಂದ್ರ ಅವರು ಹೇಳಿದ್ದಾರೆ. ನನ್ನ ತಲೆಯೊಳಗೆ ಅದೆಷ್ಟು ಹುಳಗಳು ಇದ್ದಾವೆ ಎನ್ನುವುದನ್ನು ನೋಡಬೇಕು. ನಮ್ಮ ತಲೆಯಲ್ಲಿ ಎಷ್ಟು ಹುಳಗಳು ಇದ್ದಾವೆ ಅಷ್ಟು ಬಾರಿ ಈ ಸಿನಿಮಾ ನೋಡಬೇಕು. ಉಪೇಂದ್ರ ಅವರು ನಿರ್ದೇಶಿಸಿದ್ದ ‘ಓಂ’ ನನ್ನ ನೆಚ್ಚಿನ ಸಿನಿಮಾ. ❖

ಹೊಸ ಪ್ರಾಜೆಕ್ಟ್‌ಗಳು...

‘ಪ್ರೇಮ್ ಅವರು ನಿರ್ದೇಶಿಸುತ್ತಿರುವ, ಧ್ರುವ ಸರ್ಜಾ ಅವರ ‘ಕೆಡಿ’ ಸಿನಿಮಾದ ಶೂಟಿಂಗ್ ಅಂತಿಮ ಹಂತದಲ್ಲಿದೆ. ಎರಡು ಹಾಡುಗಳ ಚಿತ್ರೀಕರಣ ಬಾಕಿ ಇದ್ದು, ಇದರಲ್ಲಿ ಒಂದು ವಿದೇಶದಲ್ಲಿ ಚಿತ್ರೀಕರಣಗೊಳ್ಳಲಿದೆ. ಈ ಸಿನಿಮಾದಲ್ಲಿ ನಟನೆಯ ಸಾಮರ್ಥ್ಯ ಪ್ರದರ್ಶಿಸಲು ಹೆಚ್ಚಿನ ಅವಕಾಶ ದೊರೆತಿದೆ. ಇದರ ಮೇಲೆ ನನಗೆ ನಂಬಿಕೆಯೂ ಹೆಚ್ಚು ಇದೆ. ಧನಂಜಯ ಅವರ ‘ಅಣ್ಣ ಫ್ರಂ ಮೆಕ್ಸಿಕೋ’ ಚಿತ್ರದ ಚಿತ್ರೀಕರಣ ನಡೆಯುತ್ತಿದೆ. ಹಾಡಿನ ಚಿತ್ರೀಕರಣ ಮುಗಿದಿದೆ. ತೆಲುಗು, ತಮಿಳಿನಿಂದಲೂ ಅವಕಾಶಗಳು ಬರುತ್ತಿವೆ. ಯಾವುದನ್ನೂ ಒಪ್ಪಿಕೊಂಡಿಲ್ಲ. ಕನ್ನಡ ನನ್ನ ಆದ್ಯತೆ. ಕನ್ನಡದಲ್ಲೂ ಕಥೆ ಕೇಳುತ್ತಿದ್ದೇನೆ’ ಎನ್ನುತ್ತಾರೆ ರೀಷ್ಮಾ.

ರಚಿತಾರಾಮ್‌ಗೆ ಬುಲ್ ಬುಲ್ ಅಂದ್ರೇನೇ ಇಷ್ಟ

ಸ್ಯಾಂಡಲ್‌ವುಡ್‌ನ ಸಕ್ಸಸ್ ಜೋಡಿ ಎಂದು ಗುರುತಿಸಿಕೊಂಡಿರುವ ಸತೀಶ್ ನೀನಾಸಂ ಹಾಗೂ ರಚಿತಾರಾಮ್ ‘ಅಯೋಗ್ಯ-2’ ಸಿನಿಮಾ ಮೂಲಕ ಮತ್ತೆ ಪ್ರೇಕ್ಷಕರೆದುರಿಗೆ ಬರುತ್ತಿದ್ದಾರೆ. ಮಹೇಶ್ ಕುಮಾರ್ ನಿರ್ದೇಶನದ ಈ ಚಿತ್ರದ ಮುಹೂರ್ತ ಇತ್ತೀಚೆಗೆ ಬೆಂಗಳೂರಿನ ದೊಡ್ಡ ಗಣಪತಿ ದೇವಸ್ಥಾನದಲ್ಲಿ ನಡೆಯಿತು.

ಮುನೇಗೌಡ ಅವರು ತಮ್ಮ ಎಸ್ ವಿ ಸಿ ಪ್ರೊಡಕ್ಷನ್‌ನಡಿ ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ‘ಅಯೋಗ್ಯ-2’ ಚಿತ್ರಕ್ಕೆ ಕ್ಲ್ಯಾಪ್ ಮಾಡುವ ಮೂಲಕ ಚಿತ್ರೀಕರಣಕ್ಕೆ ಚಾಲನೆ ನೀಡಿದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸತೀಶ್ ನೀನಾಸಂ, ‘ಸಿನಿಮಾಗಳಿಗೆ ನಿರ್ಮಾಪಕರಿಲ್ಲ ಎನ್ನುವ ಕೂಗು ಇದೆ. ಆದರೆ ‘ಅಯೋಗ್ಯ-2’ಗೆ ಕೋಟಿ ಕೋಟಿ ಸುರಿಯಲು ಸಿದ್ಧವಿರುವ ನಿರ್ಮಾಪಕರ ಸಾಲು ದೊಡ್ಡದಿತ್ತು. ಒಮ್ಮೆ ಸಿನಿಮಾ ಆರಂಭವಾದ ಮೇಲೆ ಪದೇ ಪದೇ ಸಮಸ್ಯೆಗಳು ಆಗಬಾರದು. ಎರಡನೇ ಭಾಗ ಎಂದ ಮೇಲೆ ಸಂಭಾವನೆಯಿಂದ ಹಿಡಿದು ಎಲ್ಲವೂ ದುಪ್ಪಟ್ಟು ಆಗಿರುತ್ತದೆ. ಹೀಗಿರುವ ಸಿನಿಮಾವನ್ನು ಹೊರುವಂತಹ ಸಾಮರ್ಥ್ಯ ಆ ನಿರ್ಮಾಪಕರಿಗೆ ಇರಬೇಕು. ಅಲ್ಲಿಂದೊಂದಿಷ್ಟು, ಇಲ್ಲಿಂದೊಂದಿಷ್ಟು ಹಣ ತಂದು ನಂತರ ಕಷ್ಟ ಆಗುತ್ತಿದೆ, ಸಿನಿಮಾ ಮಾಡಲು ಸಾಧ್ಯವಾಗುತ್ತಿಲ್ಲ ಎನ್ನುವಂತಹವರನ್ನು ತುಂಬಾ ಸಿನಿಮಾದಲ್ಲಿ ನೋಡಿದ್ದೇವೆ. ಹೀಗಾಗಿಯೇ ಒಂದು ವರ್ಷದಿಂದ ಈ ಸಿನಿಮಾದ ಸ್ಕ್ರಿಪ್ಟ್ ಹಿಡಿದು ಕಾಯುತ್ತಿದ್ದೆವು. ಮುನೇಗೌಡ ಅವರ ಖಡಕ್ ಮಾತು, ಧೈರ್ಯ, ಬ್ಯಾಂಕ್ ಬ್ಯಾಲೆನ್ಸ್ ನಮಗೂ ಧೈರ್ಯ ತಂದಿತು. ಗುಣಮಟ್ಟದಲ್ಲಿ ಎಲ್ಲಿಯೂ ತಗ್ಗದೆ ಹೆಜ್ಜೆ ಇಡಲಿದ್ದೇವೆ. ಕನ್ನಡಕ್ಕೆ ಮಹೇಶ್ ಅವರ ರೀತಿಯ ನಿರ್ದೇಶಕರು ಬೇಕು. ನಮ್ಮ ನಿರ್ದೇಶಕರು ಬೇರೆ ಭಾಷೆಗಳಿಗೆ ಹೋಗುತ್ತಿದ್ದಾರೆ. ನಮ್ಮ ಇಂಡಸ್ಟ್ರಿ ಬೆಳೆಯಬೇಕಲ್ಲವೇ? ನಮ್ಮ ನಿರ್ದೇಶಕರು ಇಲ್ಲೇ ಇದ್ದುಕೊಂಡು ಬೇರೆಡೆಗೆ ಮುಟ್ಟಲಿ’ ಎಂದರು.

ರಚಿತಾರಾಮ್ ಮಾತನಾಡಿ, ‘ಅಯೋಗ್ಯ ಸೀಕ್ವೆಲ್‌ನಲ್ಲಿ ಹಿಂದಿನ ಸಿನಿಮಾದ ಎಲ್ಲರೂ ಇದ್ದೇವೆ. ಹೊಸಮುಖಗಳೂ ಇವೆ. ಮೊದಲ ಭಾಗಕ್ಕೆ ಒಳ್ಳೆಯ ಪ್ರತಿಕ್ರಿಯೆ ದೊರಕಿತ್ತು. ಆ ಸಿನಿಮಾದ ‘ಏನಮ್ಮಿ ಏನಮ್ಮಿ’ ಹಾಡಿಗೆ ಪರ್ಯಾಯ ಇಲ್ಲವೇ ಇಲ್ಲ. ಅದು ಮಾಸ್ಟರ್‌ಪೀಸ್. ಈ ಸಿನಿಮಾದಲ್ಲಿ ನನಗೆ ಲೇಡಿ ಸೂಪರ್‌ಸ್ಟಾರ್ ಎನ್ನುವ ಬಿರುದು ನೀಡಲಾಗಿದೆ. ಆದರೆ ನಾನು ಯಾವಾಗಲೂ ಅಭಿಮಾನಿಗಳ ಪ್ರೀತಿಯ ಬುಲ್ ಬುಲ್ ಆಗಿಯೇ ಇರುತ್ತೇನೆ’ ಎಂದರು.

‘ಅಯೋಗ್ಯ-2 ಮಾಡಬೇಕು ಎನ್ನುವುದು ಆರು ವರ್ಷಗಳ ಕನಸು. ಮೊದಲ ಭಾಗಕ್ಕಿಂತ ಸೀಕ್ವೆಲ್ ಅನ್ನು ಇನ್ನಷ್ಟು ಅದ್ದೂರಿಯಾಗಿ ಮಾಡಲಿದ್ದೇವೆ. 23 ದಿನ ನಿರಂತರವಾಗಿ ಚಿತ್ರೀಕರಣ ನಡೆಯಲಿದ್ದು, ಮುಂದಿನ ವರ್ಷವೇ ಬಿಡುಗಡೆಗೆ ನಿರ್ಧರಿಸಿದ್ದೇವೆ’ ಎಂದು ಮಾಹಿತಿ ನೀಡಿದರು ನಿರ್ದೇಶಕ ಮಹೇಶ್.

ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ ನಿರ್ದೇಶನವಿರಲಿದೆ. ರವಿಶಂಕರ್, ಶಿವರಾಜ್ ಕೆ.ಆರ್. ಪೇಟೆ ಸೇರಿದಂತೆ ‘ಅಯೋಗ್ಯ’ ಸಿನಿಮಾದಲ್ಲಿ ಅಭಿನಯಿಸಿದ ಬಹುತೇಕ ಕಲಾವಿದರು ಸೀಕ್ವೆಲ್‌ನಲ್ಲೂ ಇರಲಿದ್ದಾರೆ. ಸೀಕ್ವೆಲ್‌ನಲ್ಲಿ ಮಂಜು ಪಾವಗಡ ಹೊಸಮುಖ. ಮಾಸ್ತಿ ಸಂಭಾಷಣೆ, ವಿಶ್ವಜಿತ್ ರಾವ್ ಛಾಯಾಚಿತ್ರಗ್ರಹಣ ಸಿನಿಮಾಗೆ ಇರಲಿದೆ. ❖

ಜ.10ಕ್ಕೆ ಶರಣ್ ಛೂಮಂತರ್

ಸಂಕ್ರಾಂತಿಗೆ ತಮಿಳು, ತೆಲುಗು ಸಿನಿಮಾಗಳ ಬಿಡುಗಡೆ ಸಾಮಾನ್ಯ. ಕಳೆದ ಜನವರಿಯಲ್ಲಿ ಸಂಕ್ರಾಂತಿ ಸಮಯದಲ್ಲಿ ಒಂದೇ ಒಂದು ಕನ್ನಡ ಸಿನಿಮಾ ತೆರೆಕಂಡಿರಲಿಲ್ಲ. ಈ ವರ್ಷ ಈ ಅವಧಿಯಲ್ಲೇ ‘ಛೂಮಂತರ್’ ಸಿನಿಮಾ ಬಿಡುಗಡೆಗೆ ಚಿತ್ರತಂಡ ನಿರ್ಧರಿಸಿದೆ.

ಜ.10ರಂದು ಶರಣ್ ನಟನೆಯ ‘ಛೂಮಂತರ್’ ಬಿಡುಗಡೆಯಾಗಲಿದೆ. ತರುಣ್ ಸ್ಟುಡಿಯೋಸ್ ಲಾಂಛನದಲ್ಲಿ ತರುಣ್ ಶಿವಪ್ಪ ಹಾಗೂ ಮಾನಸ ತರುಣ್ ನಿರ್ಮಿಸಿರುವ, ನವನೀತ್ ನಿರ್ದೇಶನದ ಚಿತ್ರ ಇದಾಗಿದೆ. ಇತ್ತೀಚೆಗೆ ಚಿತ್ರದ ಟೀಸರ್ ಬಿಡುಗಡೆಯಾಯಿತು. ಜ.10ರಂದೇ ರಾಮ್ ಚರಣ್ ನಟನೆಯ ‘ಗೇಮ್ ಚೇಂಜರ್’ ರಿಲೀಸ್ ಆಗುತ್ತಿದ್ದು, ತಮಿಳಿನಲ್ಲಿ ಅಜಿತ್ ನಟನೆಯ ಎರಡು ಸಿನಿಮಾಗಳು ಇದೇ ದಿನ ರಿಲೀಸ್ ಆಗುವ ಸಾಧ್ಯತೆ ಇದೆ.

‘ಸುಮಾರು ವರ್ಷಗಳಿಂದ ಸಂಕ್ರಾಂತಿ ಸಮಯಕ್ಕೆ ಕನ್ನಡ ಸಿನಿಮಾಗಳು ಬಿಡುಗಡೆಯಾಗುತ್ತಿಲ್ಲ. ಪೊಂಗಲ್ ದಿನ ಬೇರೆ ಭಾಷೆಗಳ ಸಿನಿಮಾಗಳು ಬಿಡುಗಡೆಯಾಗುತ್ತಿದ್ದವು. ನಾವು ಕನ್ನಡ ಪ್ರೇಕ್ಷಕರಿಗಾಗಿ ಧೈರ್ಯ ಮಾಡಿ ಬಿಡುಗಡೆ ಮಾಡುತ್ತಿದ್ದೇವೆ. ಸಂಕ್ರಾಂತಿ ಕನ್ನಡ ಸಿನಿಮಾ ಬಿಡುಗಡೆಗೆ ಸೂಕ್ತವಾದ ದಿನ ಎಂದು ಈ ಸಿನಿಮಾ ನಿರೂಪಿಸಲಿದೆ. ಉತ್ತಮ ಕಥಾಹಂದರ ಹೊಂದಿರುವ ಈ ಚಿತ್ರ ಗೆದ್ದೇ ಗೆಲ್ಲುತ್ತದೆ ಎಂಬ ನಂಬಿಕೆ ನನ್ನದು ಹಾಗೂ ಚಿತ್ರತಂಡದ್ದು’ ಎನ್ನುತ್ತಾರೆ ಶರಣ್.

‘ಶರಣ್ ಅವರು ಎರಡು ಮೂರು ಸಿನಿಮಾಗಳನ್ನು ನನ್ನನ್ನು ಬಿಟ್ಟು ಮಾಡಿದರು. ಇದನ್ನು ಹೊರತುಪಡಿಸಿ ಉಳಿದ ಸಿನಿಮಾಗಳಲ್ಲಿ ಅವರ ಜೊತೆ ನಾನು ನಟಿಸಿದ್ದೇನೆ. ನನ್ನ ಹಾಗೂ ಶರಣ್ ಅವರ ಕಾಂಬಿನೇಷನ್‌ನಲ್ಲಿ ಈ ಹಿಂದೆ ಬಂದ ಸಿನಿಮಾಗಳಿಗಿಂತ ಭಿನ್ನ ಜಾನರ್‌ನ ಸಿನಿಮಾ ಇದು. ಪೂರ್ತಿ ಸಿನಿಮಾದಲ್ಲಿ ನಾನು ಶರಣ್ ಅವರು ಜೊತೆಯಲ್ಲಿದ್ದೇವೆ’ ಎಂದರು ನಟ ಚಿಕ್ಕಣ್ಣ.

‘ಇದೊಂದು ಡಾರ್ಕ್ ಹ್ಯೂಮರ್ ಜಾನರ್‌ನ ಹಾರಾರ್ ಚಿತ್ರ. ಉತ್ತರಾಖಂಡ, ಶ್ರೀಲಂಕಾ, ಮೈಸೂರು, ಬೆಂಗಳೂರು ಮುಂತಾದ ಕಡೆ ಅರವತ್ತು ದಿನ ಈ ಚಿತ್ರದ ಚಿತ್ರೀಕರಣ ಮಾಡಿದ್ದೇವೆ. ಬೆಂಗಳೂರಿನಲ್ಲಿ ಅದ್ದೂರಿ ಸೆಟ್‌ನಲ್ಲಿ ಹೆಚ್ಚಿನ ಚಿತ್ರೀಕರಣ ನಡೆದಿದೆ. ರವಿವರ್ಮ ಸಾಹಸ ನಿರ್ದೇಶನ ಮಾಡಿದ್ದಾರೆ. ಅನೂಪ್ ಅವರ ಛಾಯಾಗ್ರಹಣ ಹಾಗೂ ಶರಣ್ ಅವರು ಸೇರಿದಂತೆ ಎಲ್ಲಾ ಕಲಾವಿದರ ಅಭಿನಯ ಅದ್ಭುತವಾಗಿದೆ’ ಎಂದರು ನವನೀತ್.

ಮೇಘನಾ ಗಾಂವ್ಕರ್, ಅದಿತಿ ಪ್ರಭುದೇವ, ಪ್ರಭು ಮುಂಡ್ಕರ್, ದಿಲೀಪ್ ರಾಜ್, ಧರ್ಮ, ನರಸಿಂಹ ಜಾಲಹಳ್ಳಿ, ರಜನಿ ಭಾರದ್ವಾಜ್ ಚಿತ್ರದ ತಾರಾಬಳಗದಲ್ಲಿದ್ದಾರೆ. ❖

ರಜನಿ ಭಾರದ್ವಾಜ್, ಅದಿತಿ ಪ್ರಭುದೇವ, ಶರಣ್, ಮೇಘನಾ ಗಾಂವ್ಕರ್

ದಾಸರಹಳ್ಳಿ ಟ್ರೇಲರ್ ರಿಲೀಸ್

ಧರ್ಮ ಕೀರ್ತಿರಾಜ್ ನಟನೆಯ, ಎಂ.ಆರ್. ಶ್ರೀನಿವಾಸ್ ನಿರ್ದೇಶನದ ‘ದಾಸರಹಳ್ಳಿ’ ಸಿನಿಮಾದ ಟ್ರೇಲರ್ ಬಿಡುಗಡೆಯಾಗಿದೆ.

ಪಿ.ಉಮೇಶ ನಿರ್ಮಾಣದ ಈ ಚಿತ್ರ ಮಾಸ್ ಜಾನರ್‌ನಲ್ಲಿದೆ. ‘ತಾಯಿ ಬೆಂಬಲ ಇದ್ದರೂ ತಂದೆ ಬೆಂಬಲ ಇಲ್ಲದೆ ಹೋದರೆ ಮಕ್ಕಳು ಏನಾಗುತ್ತಾರೆ ಎಂಬ ಕಥೆಯನ್ನು ಈ ಚಿತ್ರದಲ್ಲಿ ಹೇಳಲಾಗಿದೆ. ಹಿರಿಯ ಕಲಾವಿದರು ನಮ್ಮ ಸಿನಿಮಾದಲ್ಲಿ ನಟಿಸಿದ್ದಾರೆ. ಥ್ರಿಲ್ಲರ್ ಮಂಜು ಹಾಗೂ ಕೌರವ ವೆಂಕಟೇಶ್ ಅವರು ನಟನೆಯ ಜೊತೆ ಸಾಹಸ ನಿರ್ದೇಶನವನ್ನೂ ಮಾಡಿದ್ದಾರೆ’ ಎಂದರು ನಿರ್ದೇಶಕ ಎಂ. ಆರ್. ಶ್ರೀನಿವಾಸ್.

‘ಈ ಸಿನಿಮಾದಲ್ಲಿ ಒಂದೊಳ್ಳೆಯ ಸಂದೇಶವಿದೆ. ಚಿತ್ರದಲ್ಲಿ ನಾಲ್ಕು ಕಥೆಗಳಿದ್ದು, ಒಂದೊಂದು ಕಥೆಯೂ ನೋಡುಗರನ್ನು ಕಾಡುತ್ತದೆ. ಸಿನಿಮಾವನ್ನು ಫೆಬ್ರುವರಿಗೆ ಬಿಡುಗಡೆ ಮಾಡಲು ಯೋಜನೆಯಿದೆ’ ಎನ್ನುತ್ತಾರೆ ಧರ್ಮ ಕೀರ್ತಿರಾಜ್.

ಧರ್ಮ ಕೀರ್ತಿರಾಜ್‌ಗೆ ಜೋಡಿಯಾಗಿ ನೇಹಾ ನಟಿಸಿದ್ದು, ಇದು ಇವರ ಚೊಚ್ಚಲ ಸಿನಿಮಾ. ವೈಷ್ಣವಿ ವಸುಂಧರೆ ಕ್ರಿಯೇಷನ್ಸ್ ಬ್ಯಾನರ್‌ನಡಿ ಈ ಸಿನಿಮಾ ನಿರ್ಮಾಣವಾಗಿದೆ. ಉಮೇಶ್ ರಾಜ್, ಜಾಗ್ವಾರ್ ಸಣ್ಣಪ್ಪ, ಎಂ.ಎಸ್.ಉಮೇಶ್, ಹೊನ್ನವಳ್ಳಿ ಕೃಷ್ಣ, ಬಿರಾದಾರ್, ಬೆಂಗಳೂರು ನಾಗೇಶ್, ಶಿವಕುಮಾರ್ ಆರಾಧ್ಯ, ಮಿಮಿಕ್ರಿ ಗೋಪಿ, ಮಜಾ ಟಾಕೀಸ್ ಪವನ್, ಪದ್ಮಾವಸಂತಿ ಚಿತ್ರದಲ್ಲಿದ್ದಾರೆ. ಎಂ. ಎಸ್. ತ್ಯಾಗರಾಜ ಸಂಗೀತ, ಸಿ. ನಾರಾಯಣ್ ಮತ್ತು ಬಾಲು ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ❖

ಧರ್ಮ, ನೇಹಾ

ಹೃತಿಕಾ ಶ್ರೀನಿವಾಸ್

ಡಿ.27ಕ್ಕೆ ‘ಔಟ್ ಆಫ್ ಸಿಲಬಸ್’ ಬಿಡುಗಡೆ

ಪ್ರದೀಪ್ ದೊಡ್ಡಯ್ಯ ನಟಿಸಿ, ನಿರ್ದೇಶನ ಮಾಡಿರುವ ‘ಔಟ್ ಆಫ್ ಸಿಲಬಸ್’ ಸಿನಿಮಾ ಡಿ.27ರಂದು ಬಿಡುಗಡೆಯಾಗಲಿದೆ.

ಇತ್ತೀಚೆಗೆ ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭ ನಡೆಯಿತು. ಇದೇ ಸಂದರ್ಭದಲ್ಲಿ ಚಿತ್ರತಂಡ ರಿಲೀಸ್ ದಿನಾಂಕ ಘೋಷಣೆ ಮಾಡಿತು. ಕನ್ನಡದ ಹಲವು ನಿರ್ದೇಶಕರ ಜೊತೆ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ ಪ್ರದೀಪ್. ವಿಜಯಕಲಾ ಸುಧಾಕರ್, ತನುಷ್ ಎಸ್.ವಿ. ಹಾಗೂ ದೇಸಾಯಿ ಗೌಡ ಜಂಟಿಯಾಗಿ ನಿರ್ಮಾಣ ಮಾಡಿರುವ ಈ ಸಿನಿಮಾದಲ್ಲಿ ಪ್ರದೀಪ್ ದೊಡ್ಡಯ್ಯಗೆ ನಾಯಕಿಯಾಗಿ ಹೃತಿಕಾ ಶ್ರೀನಿವಾಸ್ ನಟಿಸಿದ್ದಾರೆ. ‘ಯುವ ಜನತೆಯನ್ನು ಕೇಂದ್ರವಾಗಿಟ್ಟು, ಭರ್ಜರಿ ಮನರಂಜನೆ ಕೊಡುವ ಎಲ್ಲ ಅಂಶಗಳನ್ನು ಈ ಸಿನಿಮಾ ಒಳಗೊಂಡಿದೆ’ ಎಂದಿದೆ ಚಿತ್ರತಂಡ.

ಅಚ್ಯುತ್ ಕುಮಾರ್, ಯೋಗರಾಜ್ ಭಟ್, ರಾಮಕೃಷ್ಣ, ಚಿತ್ಕಲಾ ಬಿರಾದಾರ್, ಮಂಜು ಪಾವಗಡ, ಮಹಾಂತೇಶ್ ಹಿರೇಮಠ ಮತ್ತಿತರ ಕಲಾವಿದರು ಚಿತ್ರದಲ್ಲಿದ್ದಾರೆ. ದೇವ ವಡ್ಡೆ ಛಾಯಾಚಿತ್ರಗ್ರಹಣ, ಉಮೇಶ್ ಆರ್. ಬಿ. ಸಂಕಲನ ಚಿತ್ರಕ್ಕಿದೆ. ❖

‘ಯುಐ’ ವಾರ್ನರ್ ಮೆಚ್ಚಿದ ಅಮೀರ್

ಅಮೀರ್ ಖಾನ್, ಉಪೇಂದ್ರ

ಜಿ.ಮನೋಹರನ್ ಮತ್ತು ಕೆ.ಪಿ.ಶ್ರೀಕಾಂತ್ ನಿರ್ಮಾಣದ, ಉಪೇಂದ್ರ ನಿರ್ದೇಶಿಸಿ, ನಟಿಸಿರುವ ‘ಯುಐ’ ಸಿನಿಮಾ ಡಿ.20ರಂದು ಬಿಡುಗಡೆಯಾಗುತ್ತಿದೆ. ಇತ್ತೀಚೆಗೆ ಚಿತ್ರತಂಡ ‘ವಾರ್ನರ್’ ಎಂಬ ವಿಡಿಯೊ ರಿಲೀಸ್ ಮಾಡಿತ್ತು. ಇದನ್ನು ವೀಕ್ಷಿಸಿ ಬಾಲಿವುಡ್ ನಟ ಅಮೀರ್ ಖಾನ್ ಕೂಡಾ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

‘ನಾನು ಉಪೇಂದ್ರ ಅವರ ದೊಡ್ಡ ಫ್ಯಾನ್. ಅವರ ಸಿನಿಮಾ ಡಿ.20ಕ್ಕೆ ರಿಲೀಸ್ ಆಗುತ್ತಿದೆ. ‘ಯುಐ’ ಚಿತ್ರದ ಟ್ರೇಲರ್ ಅದ್ಭುತವಾಗಿದ್ದು ನಾನು ಮೂಕವಿಸ್ಮಿತನಾದೆ. ಈ ಸಿನಿಮಾ ದೊಡ್ಡಮಟ್ಟದಲ್ಲಿ ಹಿಟ್ ಆಗಲಿದೆ, ಹಿಂದಿ ಪ್ರೇಕ್ಷಕರೂ ಸಿನಿಮಾವನ್ನು ನೋಡಿ ಮೆಚ್ಚಿಕೊಳ್ಳಲಿದ್ದಾರೆ. ಟ್ರೇಲರ್ ನೋಡಿ ನನಗೂ ಶಾಕ್ ಆಯಿತು. ಉಪೇಂದ್ರ ಅವರಿಗೆ ಶುಭವಾಗಲಿ’ ಎಂದು ಅಮೀರ್ ಖಾನ್ ಹೇಳಿದ್ದಾರೆ. ❖

ಜನವರಿಯಲ್ಲಿ ಅಪಾಯವಿದೆ ಎಚ್ಚರಿಕೆ

‘ಅಣ್ಣಯ್ಯ’ ಧಾರಾವಾಹಿ ಮೂಲಕ ಗುರುತಿಸಿಕೊಂಡಿರುವ ವಿಕಾಶ್ ಉತ್ತಯ್ಯ ನಾಯಕನಾಗಿ ನಟಿಸಿರುವ, ಅಭಿಜಿತ್ ತೀರ್ಥಹಳ್ಳಿ ನಿರ್ದೇಶನದ ‘ಅಪಾಯವಿದೆ ಎಚ್ಚರಿಕೆ’ ಸಿನಿಮಾ ಜನವರಿಯಲ್ಲಿ ತೆರೆಕಾಣಲಿದೆ.

ಈ ಸಿನಿಮಾವನ್ನು ವಿ.ಜಿ.ಮಂಜುನಾಥ್ ಹಾಗೂ ಪೂರ್ಣಿಮಾ ಎಂ.ಗೌಡ ನಿರ್ಮಾಣ ಮಾಡಿದ್ದಾರೆ. ಇತ್ತೀಚೆಗೆ ಈ ಚಿತ್ರದ ಮೋಷನ್ ಪೋಸ್ಟರ್ ಬಿಡುಗಡೆಯಾಯಿತು.

‘ಚಿತ್ರರಂಗಕ್ಕೂ ನನಗೂ ಹತ್ತು ವರ್ಷಗಳ ನಂಟು. ಸಹ ನಿರ್ದೇಶಕನಾಗಿ ಕೆಲಸ ಮಾಡಿದ ಅನುಭವ ಇರುವ ನಾನು, ಈ ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕನಾಗುತ್ತಿದ್ದೇನೆ. ಪಂಚಭೂತಗಳ ಆಧಾರದ ಮೇಲೆ ಈ ಚಿತ್ರದ ಕಥೆ ಹೆಣೆಯಲಾಗಿದೆ. ವಿಕಾಶ್ ಉತ್ತಯ್ಯ ‘ಸೂರಿ’ ಎಂಬ ಪಾತ್ರದಲ್ಲಿ, ರಾಘವ್ ಕೊಡಚಾದ್ರಿ ಹಾಗೂ ಮಿಥುನ್ ತೀರ್ಥಹಳ್ಳಿ ವಿಕಾಶ್ ಅವರ ಸ್ನೇಹಿತರಾಗಿ ಕಾಣಿಸಿಕೊಂಡಿದ್ದಾರೆ. ರಾಧಾ ಭಗವತಿ ‘ರಾಧಾ’ ಎಂಬ ಹೆಸರಿನಲ್ಲಿ ಬ್ರಾಹ್ಮಣ ಹುಡುಗಿಯ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಸಸ್ಪೆನ್ ಅಡ್ವೆಂಚರ್ ಹಾರಾರ್ ಜಾನಾರ್‌ನಲ್ಲಿ ಈ ಚಿತ್ರವಿದೆ’ ಎಂದರು ಅಭಿಜಿತ್ ತೀರ್ಥಹಳ್ಳಿ. ❖

ರಾಧಾ ಭಗವತಿ

ಕಿರುತೆರೆಯಲ್ಲಿ ‘ಕೆರೆಬೇಟೆ’ ಶೀಘ್ರ

ಇತ್ತೀಚೆಗೆ ಗೋವಾದಲ್ಲಿ ನಡೆದ ಭಾರತದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ (ಇಫಿ) ಇಂಡಿಯನ್ ಪನೋರಮಾ ವಿಭಾಗದಲ್ಲಿ ಪ್ರದರ್ಶನಗೊಂಡ ‘ಕೆರೆಬೇಟೆ’ ಸಿನಿಮಾ ಶೀಘ್ರದಲ್ಲೇ ಕಿರುತೆರೆಯಲ್ಲಿ ಪ್ರಸಾರವಾಗಲಿದೆ.

ಪವನ್ ಒಡೆಯರ್ ಜೊತೆ ‘ಗೂಗ್ಲಿ’, ‘ರಣವಿಕ್ರಮ’, ‘ನಟಸಾರ್ವಭೌಮ’ ಹೀಗೆ ಹಲವು ಸಿನಿಮಾಗಳಲ್ಲಿ ಸಹ ನಿರ್ದೇಶಕನಾಗಿ ಕೆಲಸ ಮಾಡಿದ್ದ ರಾಜ್‌ಗುರು ಬಿ. ಅವರ ನಿರ್ದೇಶನದ ಚೊಚ್ಚಲ ಸಿನಿಮಾ ಇದಾಗಿದ್ದು, ಗೌರಿಶಂಕರ್ ನಾಯಕನಾಗಿ ನಟಿಸಿದ್ದಾರೆ. ‘ಚಿತ್ರದ ಹಿಂದಿ ಡಬ್ಬಿಂಗ್ ಹಕ್ಕುಗಳು ಎರಡು ತಿಂಗಳ ಮುಂಚೆಯೇ ಮಾರಾಟವಾಗಿತ್ತು. ಇದೀಗ ಚಿತ್ರದ ತೆಲುಗು, ಮಲಯಾಳ, ತಮಿಳು ಡಬ್ಬಿಂಗ್ ಹಕ್ಕುಗಳು ಹಾಗೂ ಕನ್ನಡ ಅವತರಣಿಕೆಯ ಸ್ಯಾಟಲೈಟ್ ಡಿಜಿಟಲ್ ಹಕ್ಕುಗಳು ಒಳ್ಳೆಯ ಬೆಲೆಗೆ ಮಾರಾಟವಾಗಿದೆ’ ಎಂದು ಚಿತ್ರತಂಡ ತಿಳಿಸಿದೆ. ❖

ಗೌರಿಶಂಕರ್

ಟಿಪ್ಪು ಜನ್ಮ ದಿನಾಚರಣೆಗೆ ನಿಷೇಧ ಇದೆಯೇ: ಬಾಂಬೆ ಹೈಕೋರ್ಟ್ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಮುಂಬೈ: ಮೈಸೂರು ಹುಲಿ ಎಂದೇ ಪ್ರಖ್ಯಾತಿ ಪಡೆದ ಟಿಪ್ಪು ಸುಲ್ತಾನ್ ಜನ್ಮದಿನ ಆಚರಿಸದಿರಲು ಯಾವುದಾದರೂ ನಿರ್ಬಂಧವಿದೆಯೇ ಎಂದು ಮಹಾರಾಷ್ಟ್ರ ಸರ್ಕಾರವನ್ನು ಬಾಂಬೆ ಹೈಕೋರ್ಟ್ ಪ್ರಶ್ನಿಸಿದೆ.

ಟಿಪ್ಪು ಸುಲ್ತಾನ್ (1791ರ ಡಿ1–1799ರ ಮೇ4) ಬ್ರಿಟಿಷರ ವಿರುದ್ಧ ಆಂಗ್ಲೋ–ಮೈಸೂರು ಯುದ್ಧಗಳಲ್ಲಿ ಸೆಣಸಿದ್ದ ಹೋರಾಟಗಾರ. ಪ್ರಕರಣದ ಅರ್ಜಿದಾರರಾದ, ಅಖಿಲ ಭಾರತ ಮಜ್ಲಿಸ್‌–ಎ–ಇತ್ತೆಹಾದುಲ್ ಮುಸ್ಲಿಮೀನ್‌ನ (ಎಐಎಂಐಎಂ) ಪುಣೆ ಅಧ್ಯಕ್ಷರೂ ಆದ ಫೈಯಾಜ್ ಶೇಖ್ ಅವರು, 'ನ.26 ರಂದು ಮೌಲಾನಾ ಅಬುಲ್ ಕಲಾಂ ಆಜಾದ್ ಅವರ ಜನ್ಮದಿನ, ಸಂವಿಧಾನದ ದಿನ ಹಾಗೂ ಟಿಪ್ಪು ಜನ್ಮ ದಿನ ಆಚರಿಸಲು ಅನುಮತಿ ನೀಡಿ' ಎಂದು ಕೋರಿದ್ದರು. ಆದರೆ, ಪುಣೆ ಗ್ರಾಮಾಂತರ ಪೊಲೀಸರು ಟಿಪ್ಪು ಜನ್ಮ ದಿನ ಆಚರಣೆಗೆ ಅನುಮತಿ ನಿರಾಕರಿಸಿದ್ದರು.

ನ್ಯಾಯಮೂರ್ತಿ ರೇವತಿ ಮೋಹಿತೆ–ಡೇರೆ ಮತ್ತು ನ್ಯಾಯಮೂರ್ತಿ ಶಿವಕುಮಾರ್ ಡಿಗೆ ಅವರನ್ನೊಳಗೊಂಡ ಬಾಂಬೆ ಹೈಕೋರ್ಟ್‌ನ ವಿಭಾಗೀಯ ಪೀಠವು ಅರ್ಜಿಯ ವಿಚಾರಣೆ ನಡೆಸಿತ್ತು.

'ಟಿಪ್ಪು ಸುಲ್ತಾನ್ ಜನ್ಮ ದಿನ ಆಚರಿಸಲು ನಿಷೇಧವಿದೆಯೇ? ಜನ್ಮ ದಿನಾಚರಣೆ ಸಂದರ್ಭ ಅನುಮತಿ ನೀಡದಿರಲು ಯಾವುದೇ ಕಾರಣವಿಲ್ಲ. ಆದರೆ, ಕೆಲವೊಂದು ನಿರ್ಬಂಧ ವಿಧಿಸಬಹುದು. ದುಷ್ಕೃತ್ಯ ಉಂಟಾದಲ್ಲಿ ಕ್ರಮ ಕೈಗೊಳ್ಳಬಹುದು. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು ನಿಮ್ಮ ಜವಾಬ್ದಾರಿ' ಎಂದು ಪೀಠ ಹೇಳಿದೆ.

ವಿಡಿಯೊ ಕಾನ್ಫರನ್ಸ್ ಮೂಲಕ ಹಾಜರಾದ ಪುಣೆ ಗ್ರಾಮಾಂತರ ಪೊಲೀಸ್ ಅಧೀಕ್ಷಕ ಪಂಕಜ್ ದೇಶಮುಖ್, ಕಳೆದ ವರ್ಷದ ಟಿಪ್ಪು ಸುಲ್ತಾನ್ ಜಯಂತಿ ಆಚರಣೆ ವೇಳೆ ಅಪರಾಧ ಘಟನೆಗಳು ನಡೆದಿವೆ ಎಂದು ತಿಳಿಸಿದರು.

ನಾಗಲಕ್ಷ್ಮಿ ಚೌಧರಿ ಬಳ್ಳಾರಿ ಜಿಲ್ಲಾ ಆಸ್ಪತ್ರೆಗೆ ಭೇಟಿ, ಪರಿಶೀಲನೆ

'₹5 ಲಕ್ಷ ಪರಿಹಾರ ಸಾಲದು'

ಪ್ರಜಾವಾಣಿ ವಾರ್ತೆ

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌದರಿ ಅವರು ಬಳ್ಳಾರಿ ಜಿಲ್ಲಾ ಆಸ್ಪತ್ರೆಯ ಕುಡಿಯುವ ನೀರಿನ ಟ್ಯಾಂಕ್‌ಅನ್ನು ಪರಿಶೀಲಿಸಿದರು

ಬಳ್ಳಾರಿ: 'ಬಾಣಂತಿಯರ ಸಾವಿಗೆ ಪರಿಹಾರ ರೂಪದಲ್ಲಿ ಘೋಷಿಸಲಾದ ₹5 ಲಕ್ಷ ಪರಿಹಾರವನ್ನು ಒಪ್ಪಲಾಗದು. ರಾಜ್ಯ ಸರ್ಕಾರವು ಮೃತ ಬಾಣಂತಿಯರ ಮಕ್ಕಳ ಜವಾಬ್ದಾರಿ ಹೊರಬೇಕು. ಅವರಿಗೆ ಭದ್ರತೆ, ಉನ್ನತ ಶಿಕ್ಷಣ ಮತ್ತು ನೌಕರಿ ಒದಗಿಸುವ ಹೊಣೆ ಹೊರಬೇಕು' ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌದರಿ ಆಗ್ರಹಿಸಿದರು.

ಬಾಣಂತಿಯರ ಸರಣಿ ಸಾವು ಸಂಭವಿಸಿದ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲಾ ಆಸ್ಪತ್ರೆಗೆ ಗುರುವಾರ ಭೇಟಿ ನೀಡಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಆರಂಭದಲ್ಲಿ ಸರ್ಕಾರವು ₹2ಲಕ್ಷ ಪರಿಹಾರ ಘೋಷಿಸಿತ್ತು. ಆದನ್ನು ಪರಿಷ್ಕರಿಸಲು ನಾನು ಮುಖ್ಯಮಂತ್ರಿಯವರಿಗೆ ಕೋರಿದ್ದೆ. ಸರ್ಕಾರವು ಸಕಲ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು' ಎಂದು ಹೇಳಿದರು.

'ಔಷಧ ಖರೀದಿಯಲ್ಲೂ ಕಡಿಮೆ ಬಿಡ್‌ನ ಟೆಂಡರ್ ಪದ್ಧತಿ ಅನುಸರಿಸಲಾಗುತ್ತದೆ. ಇದು ಸರಿಯಲ್ಲ. ಜೀವದ ವಿಷಯದಲ್ಲಿ ನಾವು ಗುಣಮಟ್ಟದೊಂದಿಗೆ ರಾಜಿ ಮಾಡಿಕೊಳ್ಳಬಾರದು' ಎಂದರು.

ಜಿಲ್ಲಾ ಆಸ್ಪತ್ರೆಯಲ್ಲಿನ ವ್ಯವಸ್ಥೆ ಮತ್ತು ಕಾರ್ಯನಿರ್ವಹಣೆ ಬಗ್ಗೆ ವೈದ್ಯರು ಮತ್ತು ರೋಗಿಗಳಿಂದ ಮಾಹಿತಿ ಪಡೆದರು. ಶುಚಿತ್ವ ಕಾಪಾಡದಿರುವ ಮತ್ತು ಕೆಲ ನಿಯಮಗಳನ್ನು ಪಾಲಿಸದಿರುವ ಬಗ್ಗೆ ವೈದ್ಯಕೀಯ ಸಿಬ್ಬಂದಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ನಂತರ ಮೃತ ಬಾಣಂತಿಯರ ಮನೆಗೆ ತೆರಳಿ, ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು.

ದಾಳಿ ಹೊಣೆ ಹೊತ್ತುಕೊಂಡ ಗೋದಾರಾ

ಗುರುಗ್ರಾಮ (ಪಿಟಿಐ): ಇಲ್ಲಿನ ಕ್ಲಬ್‌ವೊಂದರ ಮುಂಭಾಗದಲ್ಲಿ ಮಂಗಳವಾರ ಮುಂಜಾನೆ ನಡೆದ ಕಚ್ಚಾ ಬಾಂಬ್ ಸ್ಫೋಟದ ದಾಳಿಯ ಹೊಣೆಯನ್ನು ಪಾತಕಿ ರೋಹಿತ್ ಗೋದಾರಾ ಹೊತ್ತುಕೊಂಡಿದ್ದಾನೆ.

ಈತ, ಕುಖ್ಯಾತ ಪಾತಕಿಗಳಾದ ಗೋಲ್ಡಿ ಬ್ರಾರ್ ಹಾಗೂ ಲಾರೆನ್ಸ್ ಬಿಷ್ಣೋಯಿಯ ಸಹಚರ ಎನ್ನಲಾಗಿದೆ.

'ರಾಮ್– ರಾಮ್ ಜೈ ಶ್ರೀರಾಮ್. ನಾನು ರೋಹಿತ್ ಗೋದಾರಾ. ಗೋಲ್ಡಿ ಬ್ರಾರ್‌ನ ಸಹಚರ. ಚಂಡೀಗಢ ಹಾಗೂ ಗುರುಗ್ರಾಮದ ಸೆಕ್ಟರ್ 29ರಲ್ಲಿನ ಕ್ಲಬ್‌ಗಳ ಮುಂಭಾಗದಲ್ಲಿ ನಡೆದ ಸ್ಫೋಟಗಳ ರೂವಾರಿ' ಎಂದು ರೋಹಿತ್ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾನೆ.

ಈ ಎರಡು ದಾಳಿಗಳು ಕೇವಲ 'ಟ್ರೈಲರ್' ಆಗಿದ್ದು, ಬಡವರ ಸುಲಿಗೆ ಮಾಡುವವರು ಹಾಗೂ ತೆರಿಗೆ ವಂಚನೆ ಮಾಡಿ ಕೋಟ್ಯಂತರ ರೂಪಾಯಿ ಸಂಪಾದಿಸುತ್ತಿರುವ ಕ್ಲಬ್‌ಗಳ ಮಾಲೀಕರು ಹಾಗೂ ಹವಾಲಾ ದಂಧೆಕೋರರನ್ನು ಸುಮ್ಮನೆ ಬಿಡುವುದಿಲ್ಲ ಎಂದು ಆತ ಎಚ್ಚರಿಸಿದ್ದಾನೆ.

ಸ್ಫೋಟ ಪ್ರಕರಣ ಸಂಬಂಧ, ಗುರುಗ್ರಾಮ ಪೊಲೀಸರು ಸಚಿನ್ ತಾಲಿಯಾನ್ ಎಂಬಾತನನ್ನು ಬಂಧಿಸಿದ್ದಾರೆ. ವಿಚಾರಣೆ ವೇಳೆ ಆತ ಹಲವು ಸಂಗತಿಗಳನ್ನು ಬಾಯಿಬಿಟ್ಟಿದ್ದು, ಅವುಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಸೀದಿ ಸಮೀಕ್ಷೆಗೆ 'ಸುಪ್ರೀಂ' ತಡೆ

ಒಂದನೇ ಪುಟದಿಂದ...

ಯಾವುದೇ ಪೂಜಾ ಸ್ಥಳದ ಸ್ವರೂಪದಲ್ಲಿ ಬದಲಾವಣೆ ತರುವುದನ್ನು ಈ ಕಾಯ್ದೆಯು ನಿಷೇಧಿಸಿದೆ. ಹಾಗೆಯೇ, ಪೂಜಾ ಸ್ಥಳಗಳ ಧಾರ್ಮಿಕ ಸ್ವರೂಪವು 1947ರ ಆಗಸ್ಟ್ 15ರಂದು ಹೇಗಿತ್ತೋ ಅದೇ ರೀತಿಯಲ್ಲಿ ಇರಬೇಕು ಎಂದು ಕಾಯ್ದೆಯು ಹೇಳುತ್ತದೆ.

ಆದರೆ, ರಾಮ ಜನ್ಮಭೂಮಿ – ಬಾಬರಿ ಮಸೀದಿಗೆ ಸಂಬಂಧಿಸಿದ ವಿವಾದವನ್ನು ಈ ಕಾಯ್ದೆಯ ವ್ಯಾಪ್ತಿಯಿಂದ ಹೊರಗಿರಿಸಲಾಗಿತ್ತು.

1991ರ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಬೇಕು ಎಂಬ ಕೋರಿಕೆ ಇರುವ ಹಲವು ಅರ್ಜಿಗಳು ಇವೆ. ದೇಶದಲ್ಲಿ ಕೋಮು ಸೌಹಾರ್ದವನ್ನು ಕಾಪಾಡಲು ಹಾಗೂ ಹಿಂದೂ ಗುಂಪುಗಳು ಕೇಳುತ್ತಿರುವ ಮಸೀದಿಗಳನ್ನು ಈಗಿರುವ ಸ್ಥಿತಿಯಲ್ಲೇ ಉಳಿಸಿಕೊಳ್ಳಲು ಇದು ಅಗತ್ಯ ಎಂದು ಅರ್ಜಿಗಳು ಹೇಳುತ್ತವೆ.

1991ರ ಕಾಯ್ದೆಯು ಎಷ್ಟರಮಟ್ಟಿಗೆ ಕಾನೂನುಬದ್ಧ, ಅದರ ಮಿತಿಗಳು ಏನು ಮತ್ತು ವ್ಯಾಪ್ತಿ ಏನು ಎಂಬುದನ್ನು ತಾನು ಪರಿಶೀಲನೆ ನಡೆಸುವುದಾಗಿ ತ್ರಿಸದಸ್ಯ ಪೀಠವು ಹೇಳಿದೆ. ಹೀಗಾಗಿ, ತಾನು ಮುಂದಿನ ಸೂಚನೆ ನೀಡುವವರೆಗೆ ಇತರ ನ್ಯಾಯಾಲಯಗಳು ಈ ವಿಚಾರವಾಗಿ ಮಧ್ಯಪ್ರವೇಶ ಮಾಡಬಾರದು ಎಂಬುದನ್ನು ಕೂಡ ಪೀಠವು ಸ್ಪಷ್ಟಪಡಿಸಿದೆ.

ಕಕ್ಷಿದಾರರು ಅರ್ಜಿಗಳ ವಿಚಾರದಲ್ಲಿ ಒತ್ತಾಯ ಮಾಡಿದರೆ, ವಿಷಯವನ್ನು ಹೈಕೋರ್ಟ್‌ಗೆ ರವಾನಿಸಬಹುದು ಎಂದು ಹೇಳಿದೆ.

'ಬಾಕಿ ಇರುವ ಅರ್ಜಿಗಳ ವಿಚಾರದಲ್ಲಿ ನ್ಯಾಯಾಲಯಗಳು ಪರಿಣಾಮ ಬೀರುವಂತಹ ಮಧ್ಯಂತರ ಅಥವಾ ಅಂತಿಮ ಆದೇಶ ನೀಡಬಾರದು. ಮುಂದಿನ ಸೂಚನೆ ಬರುವವರೆಗೆ ಸಮೀಕ್ಷೆ ನಡೆಸಲೂ ಆದೇಶಿಸಬಾರದು' ಎಂದು ಪೀಠವು ಸ್ಪಷ್ಟಪಡಿಸಿದೆ.

ವಕೀಲರ ವಿರೋಧ, ಸಿಜೆಐ ಸಮರ್ಥನೆ

ಹಿಂದೂ ಕಕ್ಷಿದಾರರೊಬ್ಬರ ಪರವಾಗಿ ಹಾಜರಿದ್ದ ಹಿರಿಯ ವಕೀಲ ಜೆ. ಸಾಯಿ ದೀಪಕ್ ಅವರು, ತ್ರಿಸದಸ್ಯ ಪೀಠದ ಸೂಚನೆಯನ್ನು ವಿರೋಧಿಸಿದರು. ಇಂತಹ ಸೂಚನೆ ನೀಡುವುದಕ್ಕೂ ಮೊದಲು ಪೀಠವು ಸಂಬಂಧಪಟ್ಟ ಎಲ್ಲರ ವಾದ ಆಲಿಸಬೇಕಿತ್ತು ಎಂದರು. ಆದರೆ ಇದನ್ನೊಪ್ಪದ ಸಿಜೆಐ, ವಿಸ್ತೃತವಾದ ವಿಚಾರವೊಂದನ್ನು ಸುಪ್ರೀಂ ಕೋರ್ಟ್ ಪರಿಶೀಲಿಸುತ್ತಿರುವಾಗ, ಅದರ ಬಗ್ಗೆ ಯಾವುದೇ ಆದೇಶ ನೀಡಬಾರದು ಎಂದು ಇತರ ನ್ಯಾಯಾಲಯಗಳಿಗೆ ಸೂಚಿಸುವುದು ಸಹಜ ಎಂದು ಹೇಳಿದರು.

ಕೇಂದ್ರ ಸರ್ಕಾರದ ಪ್ರತಿಕ್ರಿಯೆ ಇಲ್ಲದೆ ಈ ಅರ್ಜಿಯ ಬಗ್ಗೆ ಕೋರ್ಟ್ ತೀರ್ಪು ಹೇಳಲು ಆಗದು ಎಂದು ಹೇಳಿದ ಪೀಠವು, ನಾಲ್ಕು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸಬೇಕು ಎಂದು ಕೇಂದ್ರಕ್ಕೆ ಸೂಚನೆ ನೀಡಿತು.

'ಸೆಕ್ಷನ್ 3 ಮತ್ತು 4ರ ಬಗ್ಗೆ ಪ್ರಶ್ನೆ'

ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆಯ ಸೆಕ್ಷನ್ 3 ಮತ್ತು ಸೆಕ್ಷನ್ 4ರ ವಿಚಾರವಾಗಿ ಸಮಸ್ಯೆ ಇದೆ ಎಂದು ಅರ್ಜಿಗಳ ವಿಚಾರಣೆ ಸಂದರ್ಭದಲ್ಲಿ ತ್ರಿಸದಸ್ಯ ಪೀಠ ಹೇಳಿದೆ.

ಪೂಜಾ ಸ್ಥಳಗಳ ಧಾರ್ಮಿಕ ಸ್ವರೂಪದಲ್ಲಿ ಬದಲಾವಣೆ ತರುವಂತೆ ಇಲ್ಲ ಎಂದು ಸೆಕ್ಷನ್ 3ರಲ್ಲಿ ಹೇಳಲಾಗಿದೆ. ಪೂಜಾ ಸ್ಥಳಗಳ ಧಾರ್ಮಿಕ ಸ್ವರೂಪ ಹೇಗಿರಬೇಕು ಎಂಬುದರ ಬಗ್ಗೆ ವಿವರಣೆ ಸೆಕ್ಷನ್ 4ರಲ್ಲಿ ಇದೆ.

ಅತ್ಯಾಚಾರ ಆರೋಪ ಇಬ್ಬರು ಪೊಲೀಸರ ಅಮಾನತು

ಬಳ್ಳಾರಿ: ಪತಿಯ ಕಿರುಕುಳದ ವಿರುದ್ಧ ದೂರು ದಾಖಲಿಸಲು ಠಾಣೆಗೆ ಬಂದ ಮಹಿಳೆಯೊಬ್ಬರನ್ನು ಲೈಂಗಿಕವಾಗಿ ಬಳಸಿಕೊಂಡ ಆರೋಪದ ಮೇಲೆ ಇಬ್ಬರು ಪೊಲೀಸರ ವಿರುದ್ಧ ಅತ್ಯಾಚಾರ ಮತ್ತು ವಂಚನೆ ಪ್ರಕರಣ ದಾಖಲಾಗಿದೆ.

'ಕೌಲ್ ಬಜಾರ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಸೈಯದ್ ಇಮ್ರಾನ್ ಮತ್ತು ಅವರ ಅಕ್ಕನ ಮಗ, ಬಳ್ಳಾರಿ ಸಂಚಾರ ಠಾಣೆಯ ಸಿಬ್ಬಂದಿ ಆಜಾದ್ ವಿರುದ್ಧ ಬಳ್ಳಾರಿಯ ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆಜಾದ್ ಅವರ ಬಂಧನವಾಗಿದ್ದು, ಇಮ್ರಾನ್ ಪರಾರಿಯಾಗಿದ್ದಾರೆ . ಇಬ್ಬರನ್ನೂ ಅಮಾನತು ಮಾಡಲಾಗಿದೆ' ಎಂದು ಎಸ್‌ಪಿ ಡಾ. ಶೋಭಾರಾಣಿ ವಿ.ಜೆ ತಿಳಿಸಿದ್ದಾರೆ.

ದೂರುದಾರ ಮಹಿಳೆಯ ಪತಿ ಆಕೆಯನ್ನು ಮನೆಯಿಂದ ಹೊರಹಾಕಿದಾಗ, ಇಮ್ರಾನ್ ಆಕೆಗೆ ₹15,000 ನೀಡಿ ಮನೆ ಮಾಡಿಕೊಳ್ಳಲು ನೆರವಾಗಿದ್ದರು. ಬಳಿಕ ಆರೋಪಿಗಳು ಲೈಂಗಿಕವಾಗಿ ಬಳಸಿಕೊಂಡಿದ್ದರು ಎನ್ನಲಾಗಿದೆ.

'ಶಾಶ್ವತ ಪರಿಹಾರಕ್ಕೆ ಸಮಯ ಬೇಕು'

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ಉಂಟಾಗಿರುವ ಬಿಕ್ಕಟ್ಟಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿವೆ. ಆದರೆ, ಸದ್ಯದ ಪರಿಸ್ಥಿತಿಯಲ್ಲಿ ಇದಕ್ಕೆ ಇನ್ನಷ್ಟು ಸಮಯ ಬೇಕಾಗುತ್ತದೆ ಎಂದು ಮಣಿಪುರ ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಹೇಳಿದ್ದಾರೆ.

ನೂಪಿ ಲ್ಯಾನ್ ಅವರ ಸ್ಮರಣಾರ್ಥ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಪೊಲೀಸ್ ಠಾಣೆಗಳಲ್ಲಿ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯ್ದೆ ಮರು ಹೇರಿಕೆಯನ್ನು ವಾಪಸ್ ಪಡೆಯುವ ಹಾಗೂ ಅದರ ಬಗ್ಗೆ ಪರಾಮರ್ಶಿಸುವ ಬಗ್ಗೆ ಕೇಂದ್ರ ಸರ್ಕಾರವನ್ನು ಕೇಳಿಕೊಳ್ಳಲಾಗಿದೆ. ರಾಜ್ಯದಲ್ಲಿ ಶಾಂತಿ ಮತ್ತು ನೆಮ್ಮದಿ ಮರುಸ್ಥಾಪಿಸುವ ಸರ್ಕಾರದ ಪ್ರಯತ್ನಕ್ಕೆ ಸಾರ್ವಜನಿಕರಿಂದಲೂ ಸಹಕಾರ ಬೇಕು' ಎಂದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಮುಖ್ಯ ಅಭಿಯಂತರರ ಕಛೇರಿ, ಗ್ರಾಕುನೀ&ನೈ ಇಲಾಖೆ, 1ನೇ ಮಹಡಿ, ಇ–ಬ್ಲಾಕ್, ಕೆಹೆಚ್‌ಬಿ ಕಾಂಪ್ಲೆಕ್ಸ್, ಕಾವೇರಿ ಭವನ, ಬೆಂಗಳೂರು–560009. ದೂ: 080–22533700 ಇಮೇಲ್: cerws14@gmail.com
ನಂ. ಗ್ರಾಕುನೀನೈ/2024–25/ಎಸ್‌ಇ0644 ದಿನಾಂಕ: 12–12–2024
ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕರ್ನಾಟಕ ಸರ್ಕಾರ, ಇವರು **"ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ನವೀಕರಿಸಬಹುದಾದ ಇಂಧನದ ಬಳಕೆ ಕುರಿತು ಆಯ್ದ ಬಹು ಗ್ರಾಮ ನೀರು ಸರಬರಾಜು ಯೋಜನೆಗಳು ಮತ್ತು ಕಾರ್ಯಸಾಧ್ಯತಾ / ಸ್ಕೋಪಿಂಗ್ ಅಧ್ಯಯನದ ಇಂಧನ ಲೆಕ್ಕಪರಿಶೋಧನೆ ಕೈಗೊಳ್ಳಲು ಇಂಧನ ಲೆಕ್ಕಪರಿಶೋಧನಾ ಏಜೆನ್ಸಿಯ ಆಯ್ಕೆಗಾಗಿ"** ಅರ್ಹ ಬಿಡ್‌ದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ **(https://kppp.karnataka.gov.in)** ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಮತ್ತು ಆರ್ಥಿಕ ಬಿಡ್) ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಿದ್ದಾರೆ. ಇಎಂಡಿ: **ರೂ. 1,00,000/–** .
ಇ–ಪೋರ್ಟಲ್ ಮೂಲಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **23.12.2024.**
ಸಹಿ/– ಟೆಂಡರ್ ಆಹ್ವಾನ ಪ್ರಾಧಿಕಾರ, ಗ್ರಾಕುನೀ&ನೈಇಲಾಖೆ, ಬೆಂಗಳೂರು.
DIPR/CP/YC/3740/2024-25

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಹಾಲಿಂಗಪುರ.
ಸಂಖ್ಯೆ: ಕೃಉಮಾಸ(ಮ)/458/2024–25 ದಿನಾಂಕ:12–12–2024
ಇ–ಟೆಂಡರ ಪ್ರಕಟಣೆ
2024–25 ನೇ ಸಾಲಿನಲ್ಲಿ ಮಹಾಲಿಂಗಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಈ ಕೆಳಕಾಣಿಸಿದ ಕಾಮಗಾರಿಗೆ 1 ನೇ ದರ್ಜೆ ಹಾಗೂ ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ 02 ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ವೆಬ್‌ಸೈಟ್ https:/kppp.karnataka.gov.in. ನಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿರುತ್ತದೆ.

ಕ್ರ ಸಂ	ಕಾಮಗಾರಿ ಹೆಸರು	Amount put to tender Excluding of GST (Rs)	Earnest Money Deposit (Rs)	Tender Processing Fee (Rs)	Period of completion (Including Monsoon)
1	Supplying, Installing, Testing, Commissioning, Stamping as per Technical Specification of Electronic Weigh bridge (80MT Capacity) including all necessary Civil (Foundation, Ramp, Control room, Approach road etc,,) AT MMY MAHALINGAPUR OF APMC_ MAHALINGAPUR	59,72,594 =00	1,19,500 =00	As Per Kppp	90 Days

–: ಟೆಂಡರ ಪ್ರಕ್ರಿಯೆ ವೇಳಾಪಟ್ಟಿ :–1) ಪ್ರೀ ಬಿಡ್ ದಿನಾಂಕ & ಸಮಯ ದಿನಾಂಕ: 24–12–2024 ಬೆಳಿಗ್ಗೆ 11.30 ಗಂಟೆಗೆ 2) ಭರ್ತಿ ಮಾಡಿದ ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ:30–12–2024 ಸಂಜೆ 5.30 ಗಂಟೆಗೆ 3)ತಾಂತ್ರಿಕ ಬಿಡ್ ತೆರೆಯುವ ದಿನಾಂಕ:01–01–2025 ಬೆಳಿಗ್ಗೆ 11.00 ಗಂಟೆಗೆ 4)ಆರ್ಥಿಕ ಬಿಡ್ ತೆರೆಯುವ ದಿನಾಂಕ:10–01–2025 ಮಧ್ಯಾಹ್ನ 12.00 ಗಂಟೆಗೆ ಇ.ಎಂ.ಡಿ. ಮೊತ್ತ ಹಾಗೂ ಟೆಂಡರ್ ಷರತ್ತು ನಿಬಂಧನೆಗಳು ಇ–ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಇರುತ್ತದೆ. ಹೆಚ್ಚಿನ ಮಾಹಿತಿಯನ್ನು, ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಕಾರ್ಯದರ್ಶಿಯವರಿಂದ ಅಥವಾ https:/kppp.karnataka.gov.in ವೆಬ್‌ಸೈಟ್‌ನಲ್ಲಿ ಹಾಗೂ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರಮೆಂಟ ಸಹಾಯವಾಣಿ 080–22501216/25501227 ಪಡೆಯಬಹುದಾಗಿದೆ.
ಸಹಿ/–(ಬಿ.ಎಸ್.ಬಾವಿಹಾಳ) ಕಾರ್ಯದರ್ಶಿ ಕೃಉಮಾಸ ಮಹಾಲಿಂಗಪುರ
ಸಹಿ/–(ಬಿ.ಎಸ್.ರೆಡ್ಡಿ) ಆಡಳಿತಾಧಿಕಾರಿಗಳು ಕೃಉಮಾಸ ಮಹಾಲಿಂಗಪುರ
DIPR/BGK/RO-NO-386/KSMCA/2024-25

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಎಂ.ಪಿ. ವಿಭಾಗ, ರಾಮನಗರ
ಟೆಂಡರ್ ಪ್ರಕಟಣೆ ಸಂಖ್ಯೆ: 12/2024-25, ದಿನಾಂಕ: 10-12-2024
ಕಾವೇರಿ ನೀರಾವರಿ ನಿಗಮ ನಿಯಮಿತ ಅಡಿಯಲ್ಲಿ ಅರ್ಹ ಗುತ್ತಿಗೆದಾರರಿಂದ https://kppp.karnataka.gov.in ಮುಖಾಂತರ 4701 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರಸ್ತೆ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ಟೆಂಡರ್ ಅನ್ನು ಆಹ್ವಾನಿಸಲಾಗಿರುತ್ತದೆ. ಕಾಮಗಾರಿಗಳ ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ, ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ, ಇ.ಎಂ.ಡಿ. ಮುಂತಾದ ಇತರೆ ಮಾಹಿತಿಗಳನ್ನು https://kppp.karnataka.gov.in ಯಿಂದ download ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಎಂ.ಪಿ. ವಿಭಾಗ, ರಾಮನಗರ
ಕಛೇರಿ ದೂ. ಸಂ: 080–27271259
ಇ–ಮೇಲ್: eempdrmgm@gmail.com

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ.
ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಉಪ ವಿಭಾಗ, ಬಾಗಲಕೋಟೆ.
Mail id - aee.misd.bgk@gmail.com
ಕ್ರಮ.ಸಂ./ಸ.ಕಾ.ಪಾ.ಇಂ./ಸ.ನೀ.&ಅಂ.ಅ.ಇ.ಉ.ವಿ./ಬಿ.ಜಿ.ಕೆ./ಅ.ಗೈ.ಹಾ/2024–25/ ದಿನಾಂಕ: 12–12–2024
ಪ್ರಕಟಣೆ
ಅಂತಿಮ ನೋಟಿಸ್
ಶ್ರೀ.ಶಿವಾಜಿ.ಜೆ.ಬನಸೋಡೆ ಸಾ||ಚಡಚಣ ಹುದ್ದೆ:ಸಹಾಯಕ ಇಂಜಿನೀಯರ ತಾವು ದಿನಾಂಕ: **29/07/2024**ರಿಂದ ಇಲ್ಲಿಯವರೆಗೆ ಕಛೇರಿ ಕರ್ತವ್ಯಕ್ಕೆ ಅನಧೀಕೃತ ಗೈರು ಹಾಜರಿದ್ದು & ದೂರವಾಣಿ ಸಂಪರ್ಕಕ್ಕೂ ಸಿಗದೆ ಇರುವುದು ಹಾಗೂ ತಮಗೆ ನೀಡಲಾದ ನೋಟಿಸಗಳಿಗೆ ತಾವು ಇದುವರೆಗೆ ಉತ್ತರಿಸದೇ ಇದ್ದು ಈ ಕಛೇರಿ ಸಂಪರ್ಕಕ್ಕೆ ಬಂದಿರುವುದಿಲ್ಲ, ಆದ್ದರಿಂದ ತಾವು ಒಂದು ವಾರದೊಳಗೆ ಈ ಕಛೇರಿಯ ಕರ್ತವ್ಯಕ್ಕೆ ಹಾಜರಾಗಲು ತಮಗೆ ಈ ಪ್ರತಿಕಾ ಪ್ರಕಟಣೆ ಮೂಲಕ ಅಂತಿಮವಾಗಿ ಸೂಚಿಸಿದೆ. ತಪ್ಪಿದ್ದಲ್ಲಿ ತಮ್ಮ ಮೇಲೆ ಕೆ.ಸಿ.ಎಸ್.ಆರ್ ಹಾಗೂ ಸಿ.ಸಿ.ಎ ನಿಯಮಾವಳಿಗಳ ನಿಯಮದಡಿ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಈ ಪ್ರತಿಕಾ ಪ್ರಕಟಣೆ ಮೂಲಕ ತಿಳಿಸಿ ಪ್ರಕಟಿಸಿದೆ.
ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಉಪ ವಿಭಾಗ, ಬಾಗಲಕೋಟೆ.
ವಾ.ಸಾ.ಇ/ಬಾಗಲಕೋಟ/381/ದೇಶಪಾಂಡೆಪಬ್ಲಿಸಿಟಿ/2024–25

ಸಮಗ್ರ ಶಿಕ್ಷಣ ಕರ್ನಾಟಕ
ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ,– ರಾಯಚೂರು
No: A1/SSKR/Smart Class/KPS/Imp/2024-25 ದಿನಾಂಕ :11.12.2024
ಟೆಂಡರ್ ಪ್ರಕಟಣೆ
ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2023–24ನೇ ಸಾಲಿಗೆ ಮಹತ್ವಾಕಾಂಕ್ಷಿ ತಾಲೂಕಗಳಿಗೆ ಸ್ಮಾರ್ಟ್ ಕ್ಲಾಸ್ ರೂಮ್ ಗಳ ಅಭಿವೃದ್ಧಿ ಚಟುವಡಿಕೆಯಡಿ ಕೆಪಿಎಸ್ ಶಾಲೆಗಳಿಗೆ ಐಸಿಟಿ ಸ್ಮಾರ್ಟ್ ಕ್ಲಾಸ್ ಗೆ 10 ಕೆಪಿಎಸ್ ಶಾಲೆಗಳಿಗೆ LED DISPLAY-29, UPS-1KV-29, LAPTOP-10, PROJECTOR-10, UPS 5KV-01, PRINTER CUM SCANNER-10, AND ALL IN ONE COMPUTRE-10, ಇವುಗಳನ್ನು ಖರೀದಿಸಲು ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳವರು ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ http://www.kppp.karnataka.gov.in ಮೂಲಕ ಟೆಂಡರ್‌ನಲ್ಲಿ ಭಾಗವಹಿಸಲು ಕೋರಲಾಗಿದೆ. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** 22.12.2024. **ಟೆಂಡರ್‌ನ ಮೊತ್ತ:** 85.50 ಲಕ್ಷ
ಸಹಿ/– ಉಪ ನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಸಮಗ್ರ ಶಿಕ್ಷಣ ಕರ್ನಾಟಕ–ರಾಯಚೂರು
DIP/RCR/592/KSMCA/593/2024-25

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಜೆಸ್ಕಾಂ ಗುಲಬರ್ಗಾ. ಪಿನ್ ನಂ.585102, ದೂರವಾಣಿ ಸಂಖ್ಯೆ: 08472 256881
ಇ.ಮೇಲ್: eeprojectsgescom@gmail.com CIN: U04010KA2002SGC030436
ಸಂಖ್ಯೆ:–ಜೆಸ್ಕಾಂ/ಮು.ಅ.ವಿ(ಕಾ)/ಅ.ಅ.ವಿ(ಯೋ)/ಕಾ.ನಿ.ಅ./ಸ.ಕಾ.ನಿ.ಅ.(ಯೋ)/ಸ.ಅ–2/2024–25/46717–28 ದಿನಾಂಕ: 12–12–2024
:: ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ) ::
ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತದಿಂದ ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಖಂಡೇರಾಯನಪಲ್ಲಿ ಗ್ರಾಮದಲ್ಲಿ ಹೊಸದಾಗಿ 33/11ಕೆ.ವಿ., ವಿದ್ಯುತ್ ಉಪ–ಕೇಂದ್ರ ಮತ್ತು 9.5 ಕೀ. ಮೀ 33 ಕೆ.ವಿ ವಿದ್ಯುತ್ ಮಾರ್ಗವನ್ನು 33 ಕೆ.ವಿ ಮುಧೋಳ ವಿದ್ಯುತ್ ಉಪ–ಕೇಂದ್ರದಿಂದ ನಿರ್ಮಿಸುವುದು ಹಾಗೂ 8 ಕೀ.ಮೀ 11 ಕೆ.ವಿ ವಿದ್ಯುತ್ ಲಿಂಕ್ ಲೈನ್‌ಗಳನ್ನು ನಿರ್ಮಿಸಲು ಎಲ್ಲಾ ವಸ್ತುಗಳ ಪೂರೈಕೆ, ನಿರ್ಮಾಣ, ಪರೀಕ್ಷೆ ಮತ್ತು ಕಾರ್ಯಾರಂಭ ಸೇರಿದಂತೆ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ ಕೈಗೆತ್ತಿಕೊಳ್ಳಲು ಸ್ಪರ್ಧಾತ್ಮಕ ಬಿಡ್ಡಿಂಗ್ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಅರ್ಹ ಬಿಡ್‌ರುಗಳಿಂದ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ.
1) ಟೆಂಡರ್ ಸಂಖ್ಯೆ : **No:GESCOM/CEE(O)/SEE(Proj)/EEE/AEE/AE-2/2024-25 / K-Palli/466,** 2) ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ) : **8.26**, 3) ಕಂಪನಿ ಹೆಸರು : **ಜೆಸ್ಕಾಂ**
ಬಿಡ್ಡು ದಾಖಲೆಗಳು ದಿನಾಂಕ: 20.12.2024 ರಂದು ಅಥವಾ ನಂತರ https://kppp.karnataka.gov.in ನಲ್ಲಿ ಲಭ್ಯವಿರುತ್ತವೆ. ಬಿಡ್ಡದಾರರು ಟೆಂಡರ್‌ಗಳಲ್ಲಿ ಭಾಗವಹಿಸಲು ಹೆಚ್ಚಿನ ವಿವರಗಳಿಗಾಗಿ ನಿಗಮ ಕಛೇರಿ, ಯೋಜನೆಗಳ ಶಾಖೆ, ಜೆಸ್ಕಾಂ, ಕಲಬುರಗಿರವರಿಂದ ಪಡೆಯಬಹುದಾಗಿದೆ.
ಸಹಿ/– ಮುಖ್ಯ ಇಂಜಿನಿಯರ್ (ವಿ), (ಕಾರ್ಯಚರಣೆ), ನಿಗಮ ಕಛೇರಿ, ಜೆಸ್ಕಾಂ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/715/ಕೆ.ಎಸ್.ಎಂ.ಸಿ.&ಎ/2024–25

ಕರ್ನಾಟಕ ಸರಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ
ಜಿಲ್ಲಾ ಆಡಳಿತ ಆವರಣ, ಕೊಪ್ಪಳ,
ಕೊಪ್ಪಳ – 583231. ದೂರವಾಣಿ ಸಂಖ್ಯೆ : 08539–221660, E – Mail: dhokoppal@gmail.com
ಕ್ರ.ಸಂ/ಜಿ.ಆ.ಕು.ಕ.ಇ/ಕೊಪ್ಪಳ/ಎನ್.ಕ್ಯೂ.ಎ.ಎಸ್./ಉಪ/15ನೇಹ2024–25/510 ದಿನಾಂಕ: 12–12–2024
ಅಲ್ಪಾವಧಿ ಮರು– ಇ–ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಮೂಲಕ) ದ್ವಿಲಕೋಟೆ ಪದ್ಧತಿ.
ವಿಷಯ:– 2024–25ನೇ ಸಾಲಿನ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿನ ಎನ್.ಕ್ಯೂ.ಎ.ಎಸ್. ಕಾರ್ಯಕ್ರಮದಡಿಯಲ್ಲಿ ರೋಗನಿರ್ಣಯ ಉಪಕರಣಗಳನ್ನು ಆಯ್ದ 35 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮತ್ತು 3 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಖರೀದಿಸಲು ಟೆಂಡರ ಪ್ರಕಟಣೆ ನೀಡಲು ಕೋರಿ.
ಉಲ್ಲೇಖ:– ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಕೊಪ್ಪಳ ಇವರ ಕಡತ ಅನುಮೋದನೆಯನ್ವಯ.
ಕೊಪ್ಪಳಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆ ಅಡಿಯಲ್ಲಿ 2024–25ನೇ ಸಾಲಿನ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಎನ್.ಕ್ಯೂ.ಎ.ಎಸ್. ಕಾರ್ಯಕ್ರಮದಡಿಯಲ್ಲಿ ರೋಗನಿರ್ಣಯ ಉಪಕರಣಗಳನ್ನು ಆಯ್ದ 35 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮತ್ತು 3 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಖರೀದಿಸಲು ಟೆಂಡರ ಕರೆಯಲಾಗಿದ್ದು, (ಇಂಡೆಂಟ್ ಸಂಖ್ಯೆ: DHFWS/2024-25/IND0715/CALL-2) ಸದರಿ ಟೆಂಡರನ್ನು ಕರ್ನಾಟಕ ಪಾರದರ್ಶಕ ಅಧಿನಿಯಮ 1999 ನಿಯಮಗಳು 2000 ರ ಮೇರೆಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಮರು ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೊತ್ತ ರೂ.1,13,28,700/– ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವಿಳಾಸ http://kppp.karnataka.gov.in ರಲ್ಲಿ ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು. ಇ–ಪೋರ್ಟಲ್‌ನಲ್ಲಿ ಕಾಣಿಸಿದ ಷರತ್ತು ಮತ್ತು ನಿಬಂಧನೆಗಳು ಹಾಗೂ ಇತರೆ ವಿವರಗಳನ್ನು ಗಮನಿಸಿ ಕ್ರಮ ವಹಿಸುವುದು. ವಿವರ ಈ ಕೆಳಕಂಡತೆ ಇರುತ್ತದೆ.
01.ಟೆಂಡರ ಎನ್.ಐ.ಟಿ. ಪಬ್ಲಿಷನ್ ದಿನಾಂಕ **13/12/2024 ಬೆಳಿಗ್ಗೆ 11:00**. 02.ಟೆಂಡರ ಕುರಿತು ಮಾಹಿತಿ ಪಡೆಯಲು ಕೊನೆಯ ದಿನಾಂಕ ಮತ್ತು ಸಮಯ **20/12/2024 ಬೆಳಿಗ್ಗೆ 17:00**. 03.ದ್ವಿ ಲಕೋಟೆ ಪದ್ಧತಿಯಂತೆ ಇ– ಪೋರ್ಟಲ್‌ನಲ್ಲಿ ಟೆಂಡರನ್ನು ಸಲ್ಲಿಸುವ ಕಡೆಯ ದಿನಾಂಕ **21/12/2024 ಬೆಳಿಗ್ಗೆ 17:00**. 04.ಸದರಿ ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ **23/12/2024 ಬೆಳಿಗ್ಗೆ 11:00**. 05.ಸದರಿ ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ **24/12/2024 ಬೆಳಿಗ್ಗೆ 11:00.**
ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಕೊಪ್ಪಳ
ಡಿಐಪಿಆರ್/ಕೊಪ್ಪಳ/598/ಕೆಎಸ್‌ಎಂಸಿಎ/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಚೇರಿ, ಪುಲಿಕೇಶಿನಗರ ವಿಭಾಗ, ಬಿಬಿಎಂಪಿ ಕಚೇರಿ ಕಟ್ಟಡ, ರಾಬರ್ಟ್‌ಸನ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು.
ಸಂಖ್ಯೆ: ಕಾಪಾಅ/ಪುನ/ಟೆಂಡರ್/10/2024–25 ದಿನಾಂಕ: 12.12.2024
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
ದ್ವಿಲಕೋಟೆ ಪದ್ಧತಿ (ಜಿಓಕೆ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಪುಲಿಕೇಶಿನಗರ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಆಯುಕ್ತರು, ಬಿಬಿಎಂಪಿ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗಾಗಿ ಬಿಬಿಎಂಪಿ ಅಥವಾ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೊಂದಾಯಿತಗೊಂಡ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೊತ್ತ (ರೂ. ಗಳಲ್ಲಿ)	ಇಎಂಡಿ ಮೊತ್ತ (ರೂ. ಗಳಲ್ಲಿ)
1	ಕುಶಾಲನಗರ (ಬ್ಲಾಕ್ ನಂ. 26–2), ವಾರ್ಡ್ ನಂ. 70ರ (ಹಳೇ ವಾರ್ಡ್ ನಂ. 31) ಅಶೋಕನಗರದಲ್ಲಿರುವ ಅಂಗನವಾಡಿ ಕೇಂದ್ರಕ್ಕೆ ಹೆಚ್ಚುವರಿ ಕಾಮಗಾರಿಗಳು. (ಪ.ಪಂಗಡಕ್ಕೆ ಮೀಸಲಿಟ್ಟ ಕಾಮಗಾರಿ).	100.00	75,000/-
2	ಸಗಾಯಪುರಂ (ಬ್ಲಾಕ್ ನಂ. 55 & ಬಿ56), ವಾರ್ಡ್ ನಂ. 74ರ (ಹಳೇ ವಾರ್ಡ್ ನಂ. 60) ಎಂ.ಎಸ್. ಬಿಲ್ಡಿಂಗ್ ಮತ್ತು ಪಿ.ಕೆ. ಕಾಲೋನಿಯಲ್ಲಿ ಚರಂಡಿಗಳು ಮತ್ತು ರಸ್ತೆಗಳ ಸುಧಾರಣೆ ಕಾಮಗಾರಿ.	100.00	1,50,000/-
3	ಪುಲಿಕೇಶಿನಗರ ವಾರ್ಡ್ ನಂ. 78ರಲ್ಲಿನ ಎಂ.ಎಂ. ರಸ್ತೆಯಲ್ಲಿ ಶಾಸಕರ ಕಛೇರಿ ಕಟ್ಟಡದ ನಿರ್ಮಾಣಕ್ಕೆ ಹೆಚ್ಚುವರಿ ಕಾಮಗಾರಿಗಳು.	99.00	1,98,000/-

ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ : **180 ದಿನಗಳು (ಮಳೆಗಾಲ ಸೇರಿದಂತೆ).**
ಟೆಂಡರ್ ದಿನಾಂಕಗಳು : (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ **https://kppp.karnataka.gov.in**ನಿಂದ **ದಿನಾಂಕ: 18.12.2024ರ ಸಂಜೆ 4.00 ಗಂಟೆಯಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಮೇಲಿನ ಕಚೇರಿಯಲ್ಲಿ ಪೂರ್ವ–ಬಿಡ್ ಸಭೆಯ ದಿನಾಂಕ: **21.12.2024ರಂದು ಮಧ್ಯಾಹ್ನ 3.30 ಗಂಟೆಗೆ.** (3) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **30.12.2024ರ ಸಂಜೆ 4.00 ಗಂಟೆಯವರೆಗೆ ಅಥವಾ ಮುಂಚಿತವಾಗಿ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **ಸಾಧ್ಯವಾದಲ್ಲಿ 31.12.2024ರಂದು ಸಂಜೆ 4.30 ಗಂಟೆಗೆ ಅಥವಾ ಮುಂದಿನ ಕೆಲಸದ ದಿನದಂದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಕೆಪಿಪಿ ಪೋರ್ಟಲ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಪುಲಿಕೇಶಿನಗರ ವಿಭಾಗ

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಕಂಪನಿ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–3 ರವರ ಕಛೇರಿ, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗಳೂರು–560 052.
ಸಂಖ್ಯೆ: ಡಿಜಿಎಂ–3/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/07/24–25 ದಿನಾಂಕ: 12.12.2024
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ವ್ಯವಸ್ಥಾಪಕ ನಿರ್ದೇಶಕರು, ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು, ಇವರ ಪರವಾಗಿ ಉಪ ಪ್ರಧಾನ ವ್ಯವಸ್ಥಾಪಕರು–3, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ, ಇವರು ಅರ್ಹ ಟೆಂಡರ್‌ದಾರರಿಂದ ಯೋಜನಾ ನಿರ್ವಹಣೆ ಸಲಹಾ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ (https://kppp.karnataka.gov.in) ಮೂಲಕ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಕೆಸಿ–6 ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಅನುಸಾರ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತಾ ಅಗತ್ಯತೆಗಳನ್ನು ಗಮನಿಸಲು ಟೆಂಡರ್ದಾರರಿಗೆ ಸೂಚಿಸಲಾಗಿದೆ. ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ದಸ್ತಾವೇಜಿನಲ್ಲಿ ಇತರೆ ಮಾಹಿತಿಗಳನ್ನು ಪರಿವೀಕ್ಷಿಸಬಹುದು. ಅಗತ್ಯ ಮಾಹಿತಿ/ದಾಖಲೆಗಳೊಂದಿಗೆ ಅರ್ಹತಾ ದಾಖಲೆಗಳನ್ನು 26.12.2024, 16.00 ಗಂಟೆಗೆ ಅಥವಾ ಅದಕ್ಕೂ ಮೊದಲು ಟೆಂಡರ್ ದಸ್ತಾವೇಜುವಿನ ಅನುಸಾರ ಕೆಪಿಪಿ ಪೋರ್ಟಲ್ https://kppp.karnataka.gov.in ನಲ್ಲಿ ಅಪ್‌ಲೋಡ್ ಮಾಡುವುದು ಮತ್ತು ತಾಂತ್ರಿಕ ಬಿಡ್ ಹೊಂದಿರುವ ಮೊದಲ ಫೋಲ್ಡರ್ ಅನ್ನು ಇ–ಪೋರ್ಟಲ್ ಮೂಲಕ 27.12.2024 ರಂದು 16.30 ಗಂಟೆಯ ನಂತರ ನಿಗದಿತ ಸ್ಥಳದಲ್ಲಿ, ಟೆಂಡರ್‌ದಾರರು ಅಥವಾ ಹಾಜರಾಗಲು ಬಯಸುವ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುತ್ತದೆ. ನಿರ್ದಿಷ್ಟಪಡಿಸಿದಂತೆ ಟೆಂಡರ್ ತೆರೆಯುವ ದಿನಾಂಕದಂದು ಕಚೇರಿಯನ್ನು ಮುಚ್ಚಿದರೆ, ಟೆಂಡರ್ ಅನ್ನು ಮುಂದಿನ ಕೆಲಸದ ದಿನದಂದು ಅದೇ ಸಮಯದಲ್ಲಿ ಮತ್ತು ಸ್ಥಳದಲ್ಲಿ ತೆರೆಯಲಾಗುತ್ತದೆ. ಯಾವುದೇ ತಿದ್ದುಪಡಿ/ಬದಲಾವಣೆಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು–3, ಬಿಎಸ್‌ಡಬ್ಲ್ಯೂಎಂಎಲ್
ವಾಸಾಸಂಇ/ವಾಪ್ರ/3745/ಆಕಾರ್/2024–25

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ Karnataka One State. Many worlds
(ಕರ್ನಾಟಕ ಸರ್ಕಾರದ ಒಂದು ಅಂಗ ಸಂಸ್ಥೆ)
ಕಾರ್ಯನಿರ್ವಾಹಕ ಕಛೇರಿ, ನೆಲಮಹಡಿ, ಬಿ.ಎಂ.ಟಿ.ಸಿ, ಯಶವಂತಪುರ ಟಿ.ಟಿ.ಎಂ.ಸಿ ಬಸ್ ನಿಲ್ದಾಣ, ಯಶವಂತಪುರ ವೃತ್ತ, ಬೆಂಗಳೂರು–560022.
ದೂರವಾಣಿ: 080–43344334 ಫ್ಯಾಕ್ಸ್: (080) 43344376, ವೆಬ್‌ಸೈಟ್: www.kstdc.co
ಸಂ: ಕರಾಪ್ರಅನಿ/ಪ್ರೊ/27/2020–21/2024–25/2015 ದಿನಾಂಕ: 10.12.2024
ಟೆಂಡರ್ ಅಧಿಸೂಚನೆ
ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದಿಂದ ನಿರ್ವಹಣೆ ಮಾಡುತ್ತಿರುವ ಹೋಟೆಲ್ ಘಟಕಗಳಿಗೆ ಅವಶ್ಯಕವಿರುವ ಕುಡಿಯುವ ನೀರಿನ ಬಾಟಲ್‌ಗಳನ್ನು ಸರಬರಾಜು ಮಾಡಲು ಆಸಕ್ತ/ಅರ್ಹ ಸೇವಾದಾರರನ್ನು ಆಯ್ಕೆ ಮಾಡುವ ಸಲುವಾಗಿ ಟೆಂಡರ್‌ನ್ನು ಆಹ್ವಾನಿಸಲಾಗುತ್ತಿದ್ದು, ವಿವರ ಈ ಕೆಳಗಿನಂತಿದೆ.
ಟೆಂಡರ್ ಸಂಖ್ಯೆ: KSTDC/2024-25/ SE00. **ವಿವರಣೆ:** ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದಿಂದ ನಿರ್ವಹಣೆ ಮಾಡುತ್ತಿರುವ ಹೋಟೆಲ್ ಘಟಕಗಳಿಗೆ ಅವಶ್ಯಕವಿರುವ ಕುಡಿಯುವ ನೀರಿನ ಬಾಟಲ್‌ಗಳನ್ನು ಸರಬರಾಜು ಮಾಡಲು ಆಸಕ್ತ/ಅರ್ಹ ಸೇವಾದಾರರನ್ನು ಆಯ್ಕೆ ಮಾಡುವ ಕುರಿತು. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **26.12.2024 at 16.00PM.**
ಆಸಕ್ತ/ಅರ್ಹ ಸರಬರಾಜುದಾರ ಸಂಸ್ಥೆಗಳು ಟೆಂಡರ್ ದಾಖಲೆಗಳಿಗಾಗಿ ಇ–ಪ್ರೊಕ್ಯೂರ್ಮೆಂಟ್ ಜಾಲತಾಣ **https://kppp.karnataka.gov.in** ನ್ನು ಭೇಟಿ ನೀಡಲು ಕೋರಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: +918023010900/01, ಇ–ಮೇಲ್:hphelpdesk.blr@intarvo.com ನ್ನು ಸಂಪರ್ಕಿಸುವುದು.
ಸಹಿ/– ಪ್ರಧಾನ ವ್ಯವಸ್ಥಾಪಕರು (ಆಡಳಿತ), ಕ.ರಾ.ಪ್ರ.ಅ.ನಿ.ನಿಯಮಿತ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ,, ಸಿ.ವಿ. ರಾಮನ್‌ನಗರ ವಿಭಾಗ, 8ನೇ ಅಡ್ಡರಸ್ತೆ, 12ನೇ ಎ ಮುಖ್ಯರಸ್ತೆ, ಹೆಚ್‌ಎಎಲ್ 2ನೇ ಹಂತ, ಇಂದಿರಾನಗರ, ಬೆಂಗಳೂರು–560038.
ಸಂಖ್ಯೆ: ಕಾಪಾಅ/ಸಿವಿರಾನಗರ/ಕೆಪಿಪಿ/08/2024–25 ದಿನಾಂಕ: 10.12.2024
ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಈ ಕೆಳಗಿನ ಸಹಿದಾರರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್ /ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿ–ಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
	ಪರಿಶಿಷ್ಟ ಜಾತಿಗೆ ಮೀಸಲಾದ ಕಾಮಗಾರಿಗಳು
1	ವಾರ್ಡ್ ಸಂಖ್ಯೆ–110 ಬೈಯ್ಯಪ್ಪನಹಳ್ಳಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆ ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. **ಕಾಮಗಾರಿಯ ಅಂದಾಜು ಮೊತ್ತ: ₹.50,00,000.00, ಇಎಂಡಿ ಸರ್ಕಾರದ ಆದೇಶದ ಪ್ರಕಾರ: ₹.50,000.00**
2	ವಾರ್ಡ್ ಸಂಖ್ಯೆ–110 ಅಂಬೇಡ್ಕರ್‌ನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆ ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. **ಕಾಮಗಾರಿಯ ಅಂದಾಜು ಮೊತ್ತ: ₹.50,00,000.00, ಇಎಂಡಿ ಸರ್ಕಾರದ ಆದೇಶದ ಪ್ರಕಾರ: ₹.50,000.00**
	ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಕಾಮಗಾರಿಗಳು
3	ವಾರ್ಡ್ ಸಂಖ್ಯೆ–114 ಸುಧಾಮನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆ ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. **ಕಾಮಗಾರಿಯ ಅಂದಾಜು ಮೊತ್ತ: ₹.50,00,000.00, ಇಎಂಡಿ ಸರ್ಕಾರದ ಆದೇಶದ ಪ್ರಕಾರ: ₹.50,000.00**
	ವರ್ಗ ಕಾಯ್ದಿರಿಸದ ಕಾಮಗಾರಿಗಳು
4	ವಾರ್ಡ್ ಸಂಖ್ಯೆ–110 ಗಜೇಂದ್ರನಗರ ಕೊಳಗೇರಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆ ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. **ಕಾಮಗಾರಿಯ ಅಂದಾಜು ಮೊತ್ತ: ₹.50,00,000.00, ಇಎಂಡಿ ಸರ್ಕಾರದ ಆದೇಶದ ಪ್ರಕಾರ: ₹.1,00,000.00**
5	ವಾರ್ಡ್ ಸಂಖ್ಯೆ–108 ಇಂದಿರಾ ಕಾಲೋನಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆ ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. **ಕಾಮಗಾರಿಯ ಅಂದಾಜು ಮೊತ್ತ: ₹.50,00,000.00, ಇಎಂಡಿ ಸರ್ಕಾರದ ಆದೇಶದ ಪ್ರಕಾರ: ₹.1,00,000.00**
6	ವಾರ್ಡ್ ಸಂಖ್ಯೆ–108 ದೊಡ್ಡಿಗುಂಟ, ಕಾಕ್ಸ್‌ಟೌನ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆ ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. **ಕಾಮಗಾರಿಯ ಅಂದಾಜು ಮೊತ್ತ: ₹.50,00,000.00, ಇಎಂಡಿ ಸರ್ಕಾರದ ಆದೇಶದ ಪ್ರಕಾರ: ₹.1,00,000.00**
7	ವಾರ್ಡ್ ಸಂಖ್ಯೆ–113 ಮರ್ಫಿಟೌನ್, ಜಯರಾಜನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆ ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. **ಕಾಮಗಾರಿಯ ಅಂದಾಜು ಮೊತ್ತ: ₹.100,00,000.00, ಇಎಂಡಿ ಸರ್ಕಾರದ ಆದೇಶದ ಪ್ರಕಾರ: ₹.2,00,000.00**
8	ವಾರ್ಡ್ ಸಂಖ್ಯೆ–113 ಲಕ್ಷ್ಮಿಪುರಂ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆ ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. **ಕಾಮಗಾರಿಯ ಅಂದಾಜು ಮೊತ್ತ : ₹.100,00,000.00, ಇಎಂಡಿ ಸರ್ಕಾರದ ಆದೇಶದ ಪ್ರಕಾರ: ₹.2,00,000.00**

ಟೆಂಡರ್ ವೇಳಾಪಟ್ಟಿ: (1) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **18.12.2024**ರ ಬೆಳಿಗ್ಗೆ **11:00** ಗಂಟೆಗೆ ನಡೆಸಲಾಗುವುದು. (2) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ **24.12.2024**ರ ಸಂಜೆ **4:00** ಗಂಟೆಯವರೆಗೆ. (3) ತಾಂತ್ರಿಕ ಪ್ರಸ್ತಾವನೆಗಳನ್ನು ದಿನಾಂಕ **26.12.2024**ರ ಬೆಳಿಗ್ಗೆ **11:00** ಗಂಟೆಗೆ ತೆರೆಯಲಾಗುವುದು. (6) ಆರ್ಥಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕವನ್ನು ತಾಂತ್ರಿಕ ಪ್ರಸ್ತಾವನೆಗಳಿಗೆ ಅನುಮೋದನೆ ದೊರೆತ ನಂತರ ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಸಿ.ವಿ.ರಾಮನ್‌ನಗರ ವಿಭಾಗ

ಸಿಐಎಸ್‌ಎಫ್ ಮಹಿಳಾ ತುಕಡಿಗೆ ಅನುಮೋದನೆ

ಬೆಂಗಳೂರು: ದೇಶದ ಭದ್ರತಾ ವ್ಯವಸ್ಥೆಯಲ್ಲಿ ಮಹಿಳೆಯರ ಸಬಲೀಕರಣದ ಉದ್ದೇಶದಿಂದ ಕೇಂದ್ರ ಕೈಗಾರಿಕಾ ಭದ್ರತಾ ಪಡೆಯಲ್ಲಿ (ಸಿಐಎಸ್‌ಎಫ್) ಮಹಿಳಾ ಬೆಟಾಲಿಯನ್ ಪ್ರಾರಂಭಿಸಲು ಕೇಂದ್ರ ಗೃಹ ಸಚಿವಾಲಯ ಅನುಮೋದನೆ ನೀಡಿದೆ.

ಸಿಐಎಸ್‌ಎಫ್‌ನಲ್ಲಿ ಸದ್ಯ ಶೇಕಡಾ 7ರಷ್ಟು ಮಹಿಳಾ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಈಗ ಮಹಿಳಾ ಬೆಟಾಲಿಯನ್ ಪ್ರಾರಂಭಿಸಲು ಅನುಮೋದನೆ ದೊರೆತಿದ್ದು, ದೇಶದಲ್ಲಿರುವ ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಭದ್ರತಾ ಪಡೆಗಳಲ್ಲಿ ಕಾರ್ಯನಿರ್ವಹಿಸುವ ಅವಕಾಶ ಸಿಗಲಿದೆ. ಮಹಿಳಾ ಸಿಬ್ಬಂದಿಯನ್ನು ವಿಐಪಿಗಳ ಭದ್ರತೆ, ವಿಮಾನ ನಿಲ್ದಾಣ, ಮೆಟ್ರೊ ನಿಲ್ದಾಣಗಳಲ್ಲಿ ನಿಯೋಜಿಸಲಾಗುತ್ತದೆ ಎಂದು ಸಿಐಎಸ್‌ಎಫ್ ಪ್ರಕಟಣೆ ತಿಳಿಸಿದೆ.

ಕೇಂದ್ರ ಸರ್ಕಾರದ ಡಿಜಿಟಲ್ ಇಂಡಿಯಾ ಉಪಕ್ರಮದ ಭಾಗವಾಗಿ ಸಿಐಎಸ್‌ಎಫ್ ಇ–ಸೇವಾ ಬುಕ್‌ಗೆ ಚಾಲನೆ ನೀಡಿದೆ. ಇಲ್ಲಿ ಸಿಐಎಸ್‌ಎಫ್‌ನಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾದ ದಿನಾಂಕದಿಂದ ಎಲ್ಲ ರೀತಿಯ ಪಿಂಚಣಿ ಸೌಲಭ್ಯಗಳು ಪಡೆಯಲು ಸಹಾಯಕವಾಗಲಿದೆ ಎಂದು ತಿಳಿಸಲಾಗಿದೆ.

ರೆಫರಲ್ ಆಸ್ಪತ್ರೆಯಲ್ಲಿ ಹಾಸಿಗೆ ಕೊರತೆ

ಗೋವಿಂದರಾಜನಗರ: ಗಂಭೀರ ಪ್ರಕರಣಗಳು ವಾಣಿವಿಲಾಸ ಆಸ್ಪತ್ರೆಗೆ ಶಿಫಾರಸು

• ಕೆ.ಎಸ್.ಸುನಿಲ್

ಬೆಂಗಳೂರು: ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ‘ಗೋವಿಂದರಾಜನಗರ ರೆಫರಲ್ ಆಸ್ಪತ್ರೆ’ (ಹೊಸಹಳ್ಳಿ)ಯಲ್ಲಿ ಹಾಸಿಗೆಗಳ ಕೊರತೆಯಿಂದ ಗರ್ಭಿಣಿಯರನ್ನು ದಾಖಲಿಸಿಕೊಳ್ಳಲು ಹಾಗೂ ಬಾಣಂತಿಯರ ಆರೈಕೆ ಮಾಡಲು ಸಮಸ್ಯೆ ಆಗಿದೆ.

ಆಸ್ಪತ್ರೆಯಲ್ಲಿ ತಿಂಗಳಿಗೆ ಸರಾಸರಿ 180ರಿಂದ 200 ಹೆರಿಗೆಗಳನ್ನು ವೈದ್ಯರು ಮಾಡಿಸುತ್ತಾರೆ. ಗಂಭೀರ ಪ್ರಕರಣಗಳನ್ನು ವಾಣಿವಿಲಾಸ ಆಸ್ಪತ್ರೆ ಸೇರಿದಂತೆ ಪ್ರಮುಖ ಹೆರಿಗೆ ಆಸ್ಪತ್ರೆಗಳಿಗೆ ಶಿಫಾರಸು ಮಾಡಲಾಗುತ್ತಿದೆ.

ಇಲ್ಲಿಗೆ ಬರುವ ಗರ್ಭಿಣಿಯರು ಹಾಗೂ ಮಕ್ಕಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದೆ. ಆದರೆ ಈ ಸುಸಜ್ಜಿತ ಆಸ್ಪತ್ರೆಯಲ್ಲಿ ಹಾಸಿಗೆಗಳ ಕೊರತೆಯೇ ದೊಡ್ಡ ಸಮಸ್ಯೆಯಾಗಿದೆ. ಇಂತಹ ಸಂದರ್ಭದಲ್ಲಿ ಬಾಣಂತಿಯರನ್ನು ಸಮೀಪದ ಮೂಡಲಪಾಳ್ಯ ಮತ್ತು ರಾಜಾಜಿನಗರದಲ್ಲಿರುವ (ತಲಾ 12 ಹಾಸಿಗೆ) ಆಸ್ಪತ್ರೆಗೆ ಅಂಬುಲೆನ್ಸ್‌ನಲ್ಲಿ ಕಳುಹಿಸಲಾಗುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಡಿ ಕಾರ್ಯನಿರ್ವಹಿಸುತ್ತಿರುವ ಗೋವಿಂದರಾಜನಗರ ರೆಫರಲ್ ಆಸ್ಪತ್ರೆಯು 34 ಹಾಸಿಗೆಗಳನ್ನು ಹೊಂದಿದ್ದು, ಇದು ತಾಯಿ, ಮಕ್ಕಳ ಆಸ್ಪತ್ರೆಯಾಗಿದೆ. ಹೆರಿಗೆ ಕೊಠಡಿ, ಪ್ರಸೂತಿ, ಸ್ತ್ರೀರೋಗ, ಮಕ್ಕಳ ಹಾಗೂ ಶಸ್ತ್ರಚಿಕಿತ್ಸಾ ವಿಭಾಗಗಳು ಇಲ್ಲಿವೆ. ನವಜಾತ ಶಿಶು ಆರೈಕೆ ಘಟಕ (ಎನ್‌ಐಸಿಯು) ಕೂಡ ಕಾರ್ಯನಿರ್ವಹಿಸುತ್ತಿದೆ.

ಆಸ್ಪತ್ರೆಯ ಹೊರರೋಗಿ ವಿಭಾಗಕ್ಕೆ ನಿತ್ಯ 75ರಿಂದ 100 ಮಂದಿ ಭೇಟಿ ನೀಡುತ್ತಿದ್ದಾರೆ. ‘ಆಯುಷ್ಮಾನ್ ಭಾರತ ಪ್ರಧಾನ ಮಂತ್ರಿ ಜನ ಆರೋಗ್ಯ’ ಯೋಜನೆ ಸೇರಿ ವಿವಿಧ ಯೋಜನೆಗಳಡಿ ತಾಯಿ ಮತ್ತು ಮಗುವಿಗೆ ಉಚಿತ ಚಿಕಿತ್ಸೆ ಒದಗಿಸಲಾಗುತ್ತಿದೆ. ಬಡ ಹಾಗೂ ಮಧ್ಯಮ ವರ್ಗದವರು ಮಾಗಡಿ, ಪೀಣ್ಯ, ಎ.ಡಿ. ಹಳ್ಳಿ, ದಾಸರಹಳ್ಳಿ, ತಾವರೆಕೆರೆ, ಕಾಮಾಕ್ಷಿಪಾಳ್ಯ, ಲಗ್ಗೆರೆ, ನಂದಿನಿ ಲೇಔಟ್ ಸೇರಿದಂತೆ ನಗರದ ವಿವಿಧ ಭಾಗಗಳಿಂದ ಈ ಆಸ್ಪತ್ರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ.

ಆಸ್ಪತ್ರೆಯಲ್ಲಿ ಕಾಯಂ ಹಾಗೂ ಹೊರ ಗುತ್ತಿಗೆ ನೌಕರರು ಸೇರಿ 30 ಮಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಆಯಕಟ್ಟಿನ ಸ್ಥಳದಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗಿದೆ. ‘ಆಸ್ಪತ್ರೆಯಲ್ಲಿ ಅಗತ್ಯ ವೈದ್ಯಕೀಯ ಸೌಲಭ್ಯ ಹೊಂದಿದ್ದು, ಯಾವುದೇ ಸಮಸ್ಯೆಯಾಗದಂತೆ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತದೆ. ದಿನದ 24 ಗಂಟೆಯೂ ತುರ್ತು ಚಿಕಿತ್ಸಾ ಘಟಕ ಕಾರ್ಯನಿರ್ವಹಿಸುತ್ತದೆ. ತಿಂಗಳಿಗೆ 180 ರಿಂದ 200 ಹೆರಿಗೆಗಳು ಆಗುತ್ತವೆ. ಗಂಭೀರ ಪ್ರಕರಣಗಳನ್ನು ಪ್ರಮುಖ ಹೆರಿಗೆ ಆಸ್ಪತ್ರೆಗೆ ಶಿಫಾರಸು ಮಾಡಲಾಗುತ್ತದೆ’ ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಮಂಜುಳಾ ತಿಳಿಸಿದರು.

‘ಹಾಸಿಗೆ ಸಂಖ್ಯೆ ಕಡಿಮೆ ಇರುವುದರಿಂದ ಇಲ್ಲಿ ಹೆರಿಗೆಯಾದವರನ್ನು ಸಮೀಪದ ಮೂಡಲಪಾಳ್ಯ ಮತ್ತು ರಾಜಾಜಿನಗರದದಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಕಳುಹಿಸಲಾಗುತ್ತದೆ. ಆಸ್ಪತ್ರೆಯಲ್ಲಿ ಸಿಬ್ಬಂದಿ ಕೊರತೆ ಇಲ್ಲ. ರೋಗಿಗಳಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳಲಾಗುತ್ತದೆ’ ಎಂದು ವಿವರಿಸಿದರು.

ಹಾಸಿಗೆ ಸಂಖ್ಯೆ ಹೆಚ್ಚಳ ಅಗತ್ಯ

ಆಸ್ಪತ್ರೆಗೆ ಬರುವ ತಾಯಂದಿರು ಮತ್ತು ಮಕ್ಕಳ ಸಂಖ್ಯೆ ಹೆಚ್ಚಳವಾಗುತ್ತಿದೆ. ಹಾಸಿಗೆ ಸಂಖ್ಯೆ ಹಾಗೂ ಸಿಬ್ಬಂದಿ ಸಂಖ್ಯೆಯನ್ನು ಶೀಘ್ರ ಹೆಚ್ಚಳ ಮಾಡಬೇಕಾಗಿದೆ. ಹಾಲಿ ಕಟ್ಟಡದಲ್ಲಿಯೇ ಹೆಚ್ಚುವರಿ 20 ಹಾಸಿಗೆ ವ್ಯವಸ್ಥೆ ಮಾಡಿದರೆ ರೋಗಿಗಳಿಗೆ ಅನುಕೂಲವಾಗುತ್ತದೆ ಎನ್ನುತ್ತಾರೆ ಆಸ್ಪತ್ರೆ ವೈದ್ಯರು.

ಜನಾರೋಗ್ಯ ಸತ್ಯದರ್ಶನ 3

ಗೋವಿಂದರಾಜನಗರದಲ್ಲಿರುವ ರೆಫರಲ್ ಆಸ್ಪತ್ರೆಯಿಂದ ಮಗುವಿನೊಂದಿಗೆ ಹೊರ ಬರುತ್ತಿರುವ ಬಾಣಂತಿ ಮತ್ತು ಕುಟುಂಬಸ್ಥರು ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

23,800 ಗೋವಿಂದರಾಜನಗರ ರೆಫರಲ್ ಆಸ್ಪತ್ರೆಗೆ 11 ತಿಂಗಳಿನಿಂದ ಭೇಟಿ ನೀಡಿದ ಹೊರ ರೋಗಿಗಳ ಸಂಖ್ಯೆ	2,190 ಆಸ್ಪತ್ರೆಯಲ್ಲಿ 11 ತಿಂಗಳಲ್ಲಿ ಆಗಿರುವ ಹೆರಿಗೆಗಳ ಸಂಖ್ಯೆ	34 ಆಸ್ಪತ್ರೆಯಲ್ಲಿರುವ ಒಟ್ಟು ಹಾಸಿಗೆಗಳು	30 ತಾಯಂದಿರ ಚಿಕಿತ್ಸೆಗೆ ಮೀಸಲಿರುವ ಹಾಸಿಗೆಗಳು	04 ಮಕ್ಕಳ ಚಿಕಿತ್ಸೆಗೆ ಮೀಸಲಿರುವ ಹಾಸಿಗೆಗಳು

> **ವೈದ್ಯಕೀಯ ಸಿಬ್ಬಂದಿ ಕೊರತೆ ಇಲ್ಲ. ಆಸ್ಪತ್ರೆಯಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ. ಯಾವುದೇ ಚಿಕಿತ್ಸೆಗೂ ಆಸ್ಪತ್ರೆ ಸಿಬ್ಬಂದಿಗೆ ಹಣ ನೀಡುವಂತಿಲ್ಲ**
> **ಡಾ.ಮಂಜುಳಾ**
> ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ

ಸುದ್ದಿ 2 ನಿಮಿಷ

ಸಂಚಾರ ಫಲಕಗಳಲ್ಲಿ ಕನ್ನಡ ಕಡೆಗಣನೆ: ಕ್ರಮಕ್ಕೆ ಆಗ್ರಹ

ಬೆಂಗಳೂರು: ನಗರದಲ್ಲಿ ಸಂಚಾರ ನಿಯಂತ್ರಣಕ್ಕಾಗಿ ಅಳವಡಿಸಿರುವ ಫಲಕಗಳಲ್ಲಿ ಕನ್ನಡ ಕಡೆಗಣಿಸಿರುವುದನ್ನು ಖಂಡಿಸಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವಂತೆ ಬೆಂಗಳೂರು ನಗರ ಪೊಲೀಸ್ ಕಮಿಷನರ್‌ಗೆ ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ಕಮಿಷನರ್ ಬಿ. ದಯಾನಂದ್ ಅವರಿಗೆ ಪತ್ರ ಬರೆದಿದ್ದಾರೆ. ‘ನಗರದ ಹಲವು ಸ್ಥಳಗಳಲ್ಲಿ ಅಳವಡಿಸಲಾಗಿರುವ ಮಾರ್ಗ ಸೂಚನಾ ಫಲಕಗಳಲ್ಲಿ ಕೇವಲ ಇಂಗ್ಲಿಷ್ ವಿಜೃಂಭಿಸುತ್ತಿದೆ. ಇದು ವಿಷಾದನೀಯ ಸಂಗತಿಯಾಗಿದ್ದು, ಸರ್ಕಾರಿ ವ್ಯವಸ್ಥೆಯೇ ಕನ್ನಡದ ಕುರಿತು ನಕಾರಾತ್ಮಕ ಧೋರಣೆ ತಳೆಯುವುದು ಖಂಡನೀಯ’ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

‘ಕನ್ನಡ ಕಡೆಗಣನೆ ಬಗ್ಗೆ ಕೂಡಲೇ ತನಿಖೆ ನಡೆಸಿ, ಕನ್ನಡ ವಿರೋಧಿ ಕೆಲಸ ಮಾಡಿರುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಶೀಘ್ರದಲ್ಲಿಯೇ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೆಂಗಳೂರು ನಗರ ಪೊಲೀಸ್ ಆಡಳಿತದಲ್ಲಿ ಕನ್ನಡ ಅನುಷ್ಠಾನದ ಕುರಿತಂತೆ ಪರಿಶೀಲನೆ ನಡೆಸಲಾಗುವುದು’ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಮಾರ್ಗ ಸೂಚನಾ ಫಲಕಗಳಲ್ಲಿ ಕನ್ನಡ ಕಡೆಗಣಿಸಿರುವುದನ್ನು ಮೈಸೂರಿನ ಕನ್ನಡ ಕ್ರಿಯಾ ಸಮಿತಿ, ಬೆಂಗಳೂರಿನ ಕನ್ನಡ ಗೆಳೆಯರ ಬಳಗ ಮತ್ತು ಕರ್ನಾಟಕ ವಿಕಾಸ ರಂಗವು ಈ ಹಿಂದೆ ಪ್ರಾಧಿಕಾರದ ಗಮನಕ್ಕೆ ತಂದಿದ್ದವು.



ಡಿ.13 ರಿಂದ 17ರವರೆಗೆ ಹನುಮ ಜಯಂತಿ ಮಹೋತ್ಸವ

ಬೆಂಗಳೂರು: ಯಶವಂತಪುರದ ದಾರಿ ಆಂಜನೇಯ ದೇವಸ್ಥಾನದಲ್ಲಿ ಡಿ.13 ರಿಂದ 17ರವರೆಗೆ ಹನುಮ ಜಯಂತಿ ಮಹೋತ್ಸವ ನಡೆಯಲಿದೆ.

ನಿತ್ಯವೂ ದೇವರಿಗೆ ಅಭಿಷೇಕ, ವಿಶೇಷ ಅಲಂಕಾರ, ಕಾರಣಿಕೆ, ಹೂವಿನ ಅಲಂಕಾರ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ. ವಿಶೇಷವಾಗಿ ಪ್ರತಿ ದಿನ ಪಂಚಾಮೃತ ಅಭಿಷೇಕ, ಸತ್ಯನಾರಾಯಣ ಪೂಜೆ, ಸಂಜೆ ದೀಪೋತ್ಸವ, ವಾಯುಸ್ತುತಿಪೂರ್ವಕ ಮಧು ಅಭಿಷೇಕ, ವಾಯುಸ್ತುತಿ ಪುನಶ್ಚರಣ, ಪವಮಾನ ಹೋಮ ಪೂಜಾ ಕೈಂಕರ್ಯಗಳು ನಡೆಯಲಿದೆ ಎಂದು ಶ್ರೀ ದಾರಿ ಆಂಜನೇಯ ಚಾರಿಟಬಲ್ ಟ್ರಸ್ಟ್ ಧರ್ಮದರ್ಶಿ ಅಂಬರೀಷ್ ತಿಳಿಸಿದ್ದಾರೆ.

ಡಿಸೆಂಬರ್ 17ರ ಸಂಜೆ ಯಶವಂತಪುರದ ಪ್ರಮುಖ ಬೀದಿಗಳಲ್ಲಿ ದೇವರ ರಥಯಾತ್ರೆ ನಡೆಯಲಿದ್ದು, ವಿಶ್ವ ಹಿಂದು ಪರಿಷತ್, ಭಜರಂಗದಳ, ಹನುಮಸೇನೆ ಸಂಘಟನೆಗಳು ರಥಯಾತ್ರೆಗೆ ಕೈಜೋಡಿಸಲಿವೆ. ನಿತ್ಯ ಸಂಜೆ ಭಕ್ತಿಗೀತೆ, ಶಾಸ್ತ್ರೀಯ ಸಂಗೀತ ಗಾಯನ, ನೃತ್ಯ, ಭಜನೆ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಆಯೋಜಕರು ಹೇಳಿದ್ದಾರೆ.

ಕಾರ್ಯಕ್ರಮದಲ್ಲಿ ಎಸ್‌.ಆರ್‌. ಬನ್ನೂರಮಠ ಅವರನ್ನು ವಿಶ್ವವಿದ್ಯಾಲಯದ ನಿರ್ದೇಶಕ ಬೆನ್ನಿ ಥಾಮಸ್ ಗೌರವಿಸಿದರು. ಪ್ರೊ. ಕೃಷ್ಣ ರಾಜ್ ಉಪಸ್ಥಿತರಿದ್ದರು

‘ಮಾನವ ಹಕ್ಕುಗಳ ರಕ್ಷಣೆ ಅಗತ್ಯ’

ಬೆಂಗಳೂರು: ‘ಪ್ರತಿಯೊಬ್ಬ ವ್ಯಕ್ತಿಗೆ ನೈಸರ್ಗಿಕವಾಗಿ ಬಂದಂತಹ ಹಕ್ಕುಗಳನ್ನು ಚಲಾಯಿಸುವುದರ ಜೊತೆಗೆ ಅವುಗಳು ಉಲ್ಲಂಘನೆಯಾಗದಂತೆ ನೋಡುಕೊಳ್ಳುವ ಜವಾಬ್ದಾರಿ ಎಲ್ಲರದ್ದಾಗಿದೆ’ ಎಂದು ಕೇರಳ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಸ್‌.ಆರ್‌. ಬನ್ನೂರಮಠ ಹೇಳಿದರು.

ಯಶವಂತಪುರದ ಕ್ರೈಸ್ಟ್ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗವು ನಗರದಲ್ಲಿ ಹಮ್ಮಿಕೊಂಡಿದ್ದ ಮಾನವ ಹಕ್ಕುಗಳ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಎರಡನೇ ಮಹಾಯುದ್ಧದ ಬಳಿಕ ಜಾಗತಿಕ ಮಾನವ ಹಕ್ಕುಗಳ ಚಳವಳಿ ಪ್ರಾರಂಭವಾಯಿತು. ಮಾನವ ಹಕ್ಕುಗಳ ಉಲ್ಲಂಘನೆಗೆ ಕಡಿವಾಣ ಹಾಕಲು ವಿಶ್ವ ಸಂಸ್ಥೆಯು ಮಾನವ ಹಕ್ಕುಗಳನ್ನು ಜಾರಿಗೆ ತಂದಿದ್ದು, ಅವುಗಳ ರಕ್ಷಣೆ ಮತ್ತು ಪಾಲನೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ’ ಎಂದರು. ಪರಿಸರ ಸಮಸ್ಯೆಗಳು ಮತ್ತು ಮಾನವ ಹಕ್ಕುಗಳ ಬಗ್ಗೆ ಮಾತನಾಡಿದ ಪ್ರೊ. ಕೃಷ್ಣ ರಾಜ್, ‘ಪರಿಸರವನ್ನು ಸಂರಕ್ಷಿ ಸುವ ಜವಾಬ್ದಾರಿಯನ್ನು ಮನುಕುಲ ಹೊಂದಿದೆ’ ಎಂದು ಕಿವಿಮಾತು ಹೇಳಿದರು.

ಜಾತಿ ಗಣತಿ: 18ಕ್ಕೆ ಬೆಳಗಾವಿ ಚಲೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂತರಾಜ ಆಯೋಗದ ವರದಿಯನ್ನು ಜಾರಿ ಮಾಡಲು ಆಗ್ರಹಿಸಿ ಡಿ.18ರಂದು ಬೆಳಗಾವಿ ಚಲೋ ನಡೆಸಲು ಹಿಂದುಳಿದ ಜಾತಿಗಳ ಒಕ್ಕೂಟ ನಿರ್ಧರಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಸಂಚಾಲಕ ಮಾವಳ್ಳಿ ಶಂಕರ್, ‘ಜಾತಿ ಗಣತಿಯ ವರದಿಯನ್ನು ಬಿಡುಗಡೆ ಮಾಡುವುದಾಗಿ ಕಾಂಗ್ರೆಸ್ ಪಕ್ಷ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ತಿಳಿಸಿತ್ತು. ಆದರೆ, ಇಲ್ಲಿವರೆಗೆ ಬಿಡುಗಡೆ ಮಾಡಿಲ್ಲ’ ಎಂದು ದೂರಿದರು.

ಈ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಡಿ.17ರ ಒಳಗೆ ಬಿಡುಗಡೆ ಮಾಡುವ ಮೂಲಕ ‘ನಾವು ನುಡಿದಂತೆ ನಡೆಯುವವರು’ ಎನ್ನುವುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಬೀತು ಮಾಡಬೇಕು. ಇಲ್ಲದೇ ಇದ್ದರೆ ಡಿ.18ರಂದು ಭಾರಿ ಸಂಖ್ಯೆಯಲ್ಲಿ ಬೆಳಗಾವಿ ಚಲೋ ನಡೆಸಲಾಗುವುದು ಎಂದು ಎಚ್ಚರಿಸಿದರು.

ಸಮೀಕ್ಷೆ ನಡೆಸಲಾಗಿದ್ದ ಸಮಯದಲ್ಲಿ ಎಲ್ಲರೂ ಭಾಗವಹಿಸಿ ತಮ್ಮ ಜಾತಿಗಳನ್ನು ನಮೂದು ಮಾಡುವಂತೆ ವೀರಶೈವ ಲಿಂಗಾಯತ ಮಹಾಸಭಾ ಆಗ ಹೇಳಿಕೆ ನೀಡಿತ್ತು. ಈಗ ಅದರ ಅಧ್ಯಕ್ಷರೇ ಸಮೀಕ್ಷೆ ವರದಿ ಬಿಡುಗಡೆಗೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಎಲ್ಲೋ ಕುಳಿತು ತಯಾರಿಸಿದ ವರದಿ ಎಂದು ಶಾಮನೂರು ಶಿವಶಂಕರಪ್ಪ ಅವರಂಥವರು ಕುಹಕವಾಡುವುದನ್ನು ಬಿಡಬೇಕು ಎಂದರು.

ವರದಿಯ ಶಿಫಾರಸುಗಳನ್ನು ಜಾರಿ ಮಾಡುವುದು ಆನಂತರದ ವಿಚಾರ. ಮೊದಲು ಬಿಡುಗಡೆ ಆಗಬೇಕು. ಅದರ ಮೇಲೆ ಚರ್ಚೆಗಳಾಗಬೇಕು. ತಪ್ಪಿದ್ದರೆ ಸರಿ ಮಾಡುವ ಕೆಲಸವಾಗಬೇಕು. ಆದರೆ ಬಲಿಷ್ಠ ಜಾತಿಗಳು ವರದಿ ಬಿಡುಗಡೆಗೇ ವಿರೋಧ ವ್ಯಕ್ತಪಡಿಸುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಣ್ಣೆಗೆರೆ ಆರ್. ವೆಂಕಟರಾಮಯ್ಯ, ಪದಾಧಿಕಾರಿಗಳಾದ ಬಿ.ಟಿ. ಲಲಿತಾ ನಾಯಕ್, ಎಂ.ವೀರಣ್ಣ, ಆರ್, ರಾಮಕೃಷ್ಣಪ್ಪ, ಜಿ.ಡಿ. ಗೋಪಾಲ್ ಭಾಗವಹಿಸಿದ್ದರು.

‘ಕಪ್ಪು ಪಟ್ಟಿ’ ಕಂಪನಿಯಿಂದಲೂ ಖರೀದಿ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಕೋವಿಡ್ ಸಂದರ್ಭದಲ್ಲಿ ತುರ್ತಾಗಿ ಪೂರೈಸಬೇಕಿದ್ದ ₹ 95.15 ಕೋಟಿ ಮೌಲ್ಯದ ವೈದ್ಯಕೀಯ ಉಪಕರಣಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಟಿಪಿ) ಕಾಯ್ದೆಯಡಿ ವಿನಾಯಿತಿ ನೀಡಿದ ನಂತರವೂ ಪೂರೈಕೆ ಮಾಡಿರಲಿಲ್ಲ ಎಂದು ಸಾರ್ವಜನಿಕ ಆರೋಗ್ಯ ಮೂಲಸೌಕರ್ಯ ಮತ್ತು ಆರೋಗ್ಯ ಸೇವೆಗಳ ನಿರ್ವಹಣೆಗೆ ಸಂಬಂಧಿಸಿದ ವರದಿಯಲ್ಲಿ ಮಹಾಲೇಖಪಾಲರು (ಸಿಎಜಿ) ಉಲ್ಲೇಖಿಸಿದ್ದಾರೆ.

ಅಲ್ಲದೆ, ಕೆಲವು ಆಸ್ಪತ್ರೆಗಳಲ್ಲಿ ಮೆಡಿಕಲ್ ಗ್ಯಾಸ್ ಪೈಪ್‌ಲೈನ್ ವ್ಯವಸ್ಥೆ ಕಾರ್ಯನಿರ್ವಹಿಸುತ್ತಿರಲಿಲ್ಲ. ಹೆರಿಗೆ ಸೇವೆ ನೀಡಲು ಅಗತ್ಯವಾದ ಮಾನವ ಸಂಪನ್ಮೂಲ, ಔಷಧಗಳು ಮತ್ತು ರೋಗ ಪತ್ತೆ ಸೌಲಭ್ಯಗಳ ಕೊರತೆಯ ಪರಿಣಾಮ ತಾಯಿ ಮತ್ತು ಶಿಶು ಮರಣ ಪ್ರಮಾಣ ಹೆಚ್ಚಿದೆ ಎಂದೂ ವರದಿಯಲ್ಲಿದೆ.

ಗುಣಮಟ್ಟದ ಪರೀಕ್ಷಾ ವರದಿಗಳ ಮಾಹಿತಿ ಇಲ್ಲದೆಯೇ ಹೆಚ್ಚಿನ ಔಷಧಗಳ ಪೂರೈಕೆಯನ್ನು ಸ್ವೀಕರಿಸಲಾಗಿದೆ. ಆರು ಪ್ರಕರಣಗಳಲ್ಲಿ ಔಷಧ ನಿಯಂತ್ರಕರು ನಡೆಸಿದ ಪರೀಕ್ಷಾ ಫಲಿತಾಂಶ ಮತ್ತು ನಿಗದಿಪಡಿಸಿದ ಪ್ರಯೋಗಾಲಯಗಳ ಪರೀಕ್ಷಾ ಫಲಿತಾಂಶಗಳು ಬೇರೆ ಬೇರೆ ಆಗಿದ್ದವು. ಗುಣಮಟ್ಟ ಪರೀಕ್ಷಾ ಫಲಿತಾಂಶ ಬರುವ ಮೊದಲೇ ಶೇ59ರಷ್ಟು ಔಷಧಿಗಳನ್ನು ಸೇವಿಸಲಾಗಿತ್ತು. ಹೀಗಾಗಿ ಗುಣಮಟ್ಟ ಪರೀಕ್ಷಾ ವಿಧಾನವೇ ನಿಷ್ಪರಿಣಾಮಕಾರಿಯಾಗಿತ್ತು ಎಂದೂ ವರದಿಯಲ್ಲಿದೆ.

₹228.36 ಕೋಟಿ ವೆಚ್ಚದಲ್ಲಿ ನಿರ್ಮಿಸಿದ ಕಟ್ಟಡಗಳನ್ನು ಪೂರ್ಣಗೊಳಿಸದ ಅಥವಾ ಹಸ್ತಾಂತರಿಸಲು ವಿಳಂಬವಾದ ಕಾರಣ ಮಾದರಿ ಆರೋಗ್ಯ ಸಂಸ್ಥೆಗಳಲ್ಲಿ ಚಟುವಟಿಕೆ ಆರಂಭವೇ ಆಗಿಲ್ಲ. ಪ್ರಧಾನ ಮಂತ್ರಿ ಜನೌಷಧಿ ಯೋಜನೆಯಡಿ ಮಾಡಿಕೊಂಡ ಒಪ್ಪಂದಂತೆ ಕಡಿಮೆ ದರದಲ್ಲಿ ಔಷಧಗಳನ್ನು ಖರೀದಿಸಲು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮಕ್ಕೆ (ಕೆಎಸ್‌ಎಂಎಸ್‌ಸಿಎಲ್) ಅವಕಾಶವಿತ್ತು. ಆ ಬಗ್ಗೆ ಗಮನಹರಿಸದ ಕಾರಣ 2018–20ರ ಅವಧಿಯಲ್ಲಿ 60 ಔಷಧಗಳನ್ನು ಹೆಚ್ಚಿನ ದರ ನೀಡಿ ಖರೀದಿಸಲಾಗಿದೆ. ಇದರಿಂದ ₹ 33.79 ಕೋಟಿ ಹೆಚ್ಚುವರಿ ವೆಚ್ಚ ಭರಿಸಬೇಕಾಗಿ ಬಂದಿತ್ತು ಎಂದೂ ವರದಿಯಲ್ಲಿದೆ.

2016–17ರಿಂದ 2021–22ರ ಅವಧಿಯಲ್ಲಿ ₹3.45 ಕೋಟಿ ಮೌಲ್ಯದ ಮನೋ ವೈದ್ಯಕೀಯ ಔಷಧಿಗಳು ಬಳಕೆಯಾಗದ ಕಾರಣ ₹32 ಲಕ್ಷ ಮೌಲ್ಯದ ಔಷಧಿಗಳ ಅವಧಿ ಮುಗಿದಿತ್ತು. ಮನೋ ವೈದ್ಯಕೀಯ ಆಸ್ಪತ್ರೆ ಗಳಲ್ಲಿ ಚಿಕಿತ್ಸೆ ನೀಡಲು ಅರ್ಹ ವೈದ್ಯರು ಲಭ್ಯ ಇಲ್ಲದೆ ಕಾರಣ ಈ ಔಷಧಗಳು ಬಳಕೆ ಆಗಿಲ್ಲ. ಕಪ್ಪು ಪಟ್ಟಿಗೆ ಸೇರಿಸಿದ್ದ ಎಂ ಫಾರ್ಮಸ್ಯುಟಿಕಲ್ ಸಂಸ್ಥೆಯಿಂದ ₹97 ಲಕ್ಷ ಮೌಲ್ಯದ ಔಷಧಗಳನ್ನು ಖರೀದಿಸಲಾಗಿತ್ತು. ಅಲ್ಲದೆ, 2019–23ರ ಅವಧಿಯಲ್ಲಿ ₹23.03ಕೋಟಿ ಮೌಲ್ಯದ ಅವಧಿ ಮುಗಿದ ಔಷಧಗಳು ವಿಲೇವಾರಿಯಾಗದೆ ರಾಜ್ಯದ 27 ಜಿಲ್ಲಾ ಉಗ್ರಾಣಗಳಲ್ಲಿ ದಾಸ್ತಾನು ಇದ್ದುವು ಎಂದೂ ವರದಿಯಲ್ಲಿ ಉಲ್ಲೇಖಿಸಲಾಗಿದೆ.

₹345 ಕೋಟಿ ಶುಲ್ಕ ಲೂಟಿ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಕೋವಿಡ್ ಸಮಯದಲ್ಲಿ ಮಕ್ಕಳ ಶಾಲಾ ಶುಲ್ಕವನ್ನು ಕಡಿತ ಮಾಡಿದ್ದರೂ, ಖಾಸಗಿ ಶಾಲೆಗಳು ವಿದ್ಯಾರ್ಥಿಗಳಿಂದ ₹345.80 ಕೋಟಿ ಹೆಚ್ಚುವರಿ ಶುಲ್ಕ ವಸೂಲಿ ಮಾಡಿರುವುದನ್ನು ಮಹಾಲೇಖಪಾಲರ ವರದಿ ಪತ್ತೆ ಮಾಡಿದೆ.

ನ್ಯಾಯಾಲಯದ ಆದೇಶದ ಪ್ರಕಾರ 2020–21ನೇ ಸಾಲಿನಲ್ಲಿ ಶೇ 85ರಷ್ಟು ಶುಲ್ಕವನ್ನು ಸಂಗ್ರಹಿಸಬೇಕಿತ್ತು. ಆದರೆ, ರಾಜ್ಯದ ಹಲವು ಶಾಲೆಗಳು ಆದೇಶವನ್ನು ಪಾಲಿಸಿಲ್ಲ. ಆರ್‌ಟಿಇ ವಿದ್ಯಾರ್ಥಿಗಳಿಂದಲೂ ಹೆಚ್ಚುವರಿ ಶುಲ್ಕ ವಸೂಲಿ ಮಾಡಲಾಗಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಸಲ್ಲಿಸಿದ್ದ ₹7.07 ಕೋಟಿ ಬಾಕಿ ಬಿಲ್ ಸರ್ಕಾರ ಮರುಪಾವತಿ ಮಾಡಿದೆ ಎಂದು ವರದಿ ಹೇಳಿದೆ.

ಎಲ್ಲ ಶಾಲೆಗಳು ಸುರಕ್ಷತಾ ಮಾರ್ಗಸೂಚಿ ಅನುಸರಿಸುವುದನ್ನು ಸರ್ಕಾರ ಖಚಿತಪಡಿಸಿಕೊಳ್ಳಬೇಕು. ಅಧಿಕಾರಿಗಳಿಗೆ ಹೊಣೆಗಾರಿಕೆ ನಿಗದಿ ಮಾಡಬೇಕು. ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ, ಮೂಲಸೌಕರ್ಯ ಖಚಿತತೆಗೆ ನಿಯಂತ್ರಕ ನಿಯಮಗಳನ್ನು ಅಳವಡಿಸಿಕೊಳ್ಳಬೇಕು. ಖಾಸಗಿ ಶಾಲೆಗಳು ಶುಲ್ಕ, ದೇಣಿಗೆ ಸಂಗ್ರಹಿಸುವಾಗ ಶಿಕ್ಷಣ ಕಾಯ್ದೆಯ ನಿಯಮ ಪಾಲನೆ ಮಾಡುವುದನ್ನು ಕಡ್ಡಾಯಗೊಳಿಸಬೇಕು ಎಂದು ಶಿಫಾರಸು ಮಾಡಲಾಗಿದೆ.



ಒಂದು ಶಾಲೆ ಮತ್ತೊಂದು ಶಾಲೆಯ ನಡುವಿನ ಅಂತರ, ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಾಲೆ ತೆರೆಯಲು ಶಾಲಾ ಶಿಕ್ಷಣ ಇಲಾಖೆ 2011ರ ಜನಗಣತಿಯನ್ನೇ ನೆಚ್ಚಿಕೊಂಡಿದೆ. ಇದರಿಂದ ಶಾಲೆ ಮತ್ತು ಮಕ್ಕಳ ಅನುಪಾತದಲ್ಲೂ ವ್ಯತ್ಯಾಸಗಳಾಗಿವೆ ಎಂಬುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.

16ಕ್ಕೆ ‘ಪ್ರಜಾವಾಣಿ’ ರಸಪ್ರಶ್ನೆ ಸ್ಪರ್ಧೆ

7ರಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಅವಕಾಶ

ಪ್ರಜಾವಾಣಿ QUIZ CHAMPIONSHIP

ಬೆಂಗಳೂರು: ಏಳರಿಂದ ಹತ್ತನೇ ತರಗತಿವರೆಗಿನ ವಿದ್ಯಾರ್ಥಿಗಳಿಗಾಗಿ ‘ಪ್ರಜಾವಾಣಿ’ ಹಮ್ಮಿಕೊಂಡಿರುವ ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆಯ ಬೆಂಗಳೂರು ವಲಯ ಮಟ್ಟದ ಸ್ಪರ್ಧೆಯು ಡಿ.16ರಂದು ಬೆಳಿಗ್ಗೆ 9ರಿಂದ ಜಯನಗರದ 4ನೇ ಬ್ಲಾಕ್‌ನಲ್ಲಿರುವ ಯುವಪಥದ ‘ವಿವೇಕ’ ಸಭಾಂಗಣದಲ್ಲಿ ನಡೆಯಲಿದೆ.

ವಲಯ ಮಟ್ಟದಲ್ಲಿ ನಡೆಯುವ ಈ ಸ್ಪರ್ಧೆಯಲ್ಲಿ ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಜಿಲ್ಲೆಗಳ 7 ರಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳು–ವಿದ್ಯಾರ್ಥಿನಿಯರು ಭಾಗವಹಿಸಬಹುದಾಗಿದೆ.

ಆಸಕ್ತರಿಗೆ ಉಚಿತ ಪ್ರವೇಶ ನೀಡಲಾಗಿದೆ. ಶಾಲೆಯ ಸಮ್ಮತಿಯೊಂದಿಗೆ ಕ್ಯೂಆರ್ ಕೋಡ್ ಬಳಸಿ ನೋಂದಣಿ ಮಾಡಿಕೊಳ್ಳಬಹುದು. ವಿಜೇತರು ರಾಜ್ಯಮಟ್ಟದಲ್ಲಿ ಸ್ಪರ್ಧೆಗೆ ಪಾಲ್ಗೊಳ್ಳುವ ಅರ್ಹತೆ ಪಡೆಯಲಿದ್ದಾರೆ.

ಸ್ಕ್ಯಾನ್ ಮಾಡಿ

ಸ್ಥಳದಲ್ಲೇ ನೋಂದಣಿಗೂ ಅವಕಾಶ: ‘ವಿವೇಕ’ ಸಭಾಂಗಣಕ್ಕೆ ಬಂದ ಬಳಿಕವೂ ನೋಂದಣಿ ಮಾಡಿಕೊಳ್ಳುವ ಅವಕಾಶವನ್ನು ವಿದ್ಯಾರ್ಥಿಗಳಿಗೆ ನೀಡಲಾಗಿದೆ. ಸ್ಥಳದಲ್ಲೇ ನೋಂದಣಿ ಮಾಡಿ ಸ್ಪರ್ಧಿಸಬಹುದು.

‘ವಕ್ಫ್ ವಿವಾದ ಹುಟ್ಟುಹಾಕಿದ್ದೇ ಯತ್ನಾಳ’

ಪ್ರಜಾವಾಣಿ ವಾರ್ತೆ

ಜಮೀರ್ ಅಹಮದ್

ಸುವರ್ಣ ವಿಧಾನಸೌಧ (ಬೆಳಗಾವಿ): ವಿಜಯಪುರದಲ್ಲಿ ನಡೆದ ವಕ್ಫ್ ಅದಾಲತ್‌ಗೆ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಗೈರು ಹಾಜರಾಗದೇ ಇದ್ದಿದ್ದರೆ ಗೊಂದಲಕ್ಕೆ ಅವಕಾಶವೇ ಇರುತ್ತಿರಲಿಲ್ಲ ಎಂದು ವಕ್ಫ್ ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಾಣ ಸ್ವಾಮಿ, ಬಿಜೆಪಿಯ ಶಶಿಲ್ ನಮೋಶಿ, ಜೆಡಿಎಸ್‌ನ ಎಸ್‌.ಎಲ್‌. ಭೋಜೇಗೌಡ ಅವರು ವಕ್ಫ್ ಆಸ್ತಿ ವಿವಾದ ಕುರಿತು ಎತ್ತಿದ ತಕರಾರುಗಳಿಗೆ ಅವರು ಉತ್ತರ ನೀಡಿದರು.

ವಿಜಯಪುರಕ್ಕೂ ಮೊದಲು ಬೀದರ್, ಧಾರವಾಡ, ಕಲಬುರಗಿ, ಯಾದಗಿರಿ ಸೇರಿದಂತೆ ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಭಾಗದ ಹಲವು ಜಿಲ್ಲೆಗಳಲ್ಲಿ ಅದಾಲತ್ ನಡೆಸಲಾಗಿತ್ತು. ಅಲ್ಲಿ ಎಲ್ಲೂ ಸಮಸ್ಯೆಯಾಗಲಿಲ್ಲ. ವಿಜಯಪುರದಿಂದ ಸಮಸ್ಯೆ ಆರಂಭವಾಯಿತು. ಅದಾಲತ್‌ಗೆ ಗೈರು ಹಾಜರಾಗಿದ್ದ ಯತ್ನಾಳ ಅವರು ನಾಲ್ಕು ದಿನಗಳ ನಂತರ ಪ್ರತಿಭಟನೆ ನಡೆಸಿದರು. ರೈತರ 1,200 ಎಕರೆ ಕಬಳಿಸಲಾಗುತ್ತಿದ ಎಂಬ ಆರೋಪ ಮಾಡಿದರು. ಇದರಿಂದ ಇತರೆಡೆಗೂ ವಿವಾದ ಹಬ್ಬಿತು ಎಂದರು.

ವಕ್ಫ್ ಮಂಡಳಿಗೆ ಸೇರಿದ 1.22 ಲಕ್ಷ ಎಕರೆಯಲ್ಲಿ ಉಳಿದಿರುವುದು ಸುಮಾರು 17 ಸಾವಿರ ಎಕರೆ ಮಾತ್ರ. ವಿಜಯಪುರದಲ್ಲಿ 11 ಎಕರೆಗೆ ನೋಟಿಸ್ ನೀಡಲಾಗಿತ್ತು. ವಕ್ಫ್ ಭೂಮಿ ಕಬಳಿಕೆ ಮಾಡಿರುವುದು ರೈತರಲ್ಲ, ಖಾಸಗಿ ವ್ಯಕ್ತಿಗಳು. ಅದೂ ಶೇ 90ರಷ್ಟು ಮುಸ್ಲಿಂ ಸಮುದಾಯದವರೇ ಕಬಳಿಸಿದ್ದಾರೆ. ನೋಟಿಸ್ ನೀಡುವುದು ದಶಕಗಳಿಂದಲೂ ನಡೆದುಕೊಂಡು ಬಂದಿದೆ. ಎಲ್ಲ ಸರ್ಕಾರಗಳ ಅವಧಿಯಲ್ಲೂ ನೋಟಿಸ್ ನೀಡಿವೆ. ಆದರೆ, ಈ ಬಾರಿ ರಾಜಕೀಯ ಲಾಭಕ್ಕಾಗಿ ವಿವಾದವಾಗಿಸಿದರು ಎಂದು ದೂರಿದರು.

ಪಂಚಾಯಿತಿಗಳಿಗೆ ₹ 43,782 ಕೋಟಿ ಕೊರತೆ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): 2017–18ರಿಂದ 2021–22ರ ಅವಧಿಯಲ್ಲಿ ರಾಜ್ಯ ಹಣಕಾಸು ಆಯೋಗದ ಶಿಫಾರಸಿನಂತೆ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆಯಾಗಿಲ್ಲ. ಇದರಿಂದಾಗಿ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ₹ 43,782.04 ಕೋಟಿಯಷ್ಟು ಕಡಿಮೆ ಅನುದಾನ ಬಿಡುಗಡೆಯಾಗಿದೆ ಎಂದು ಮಹಾಲೇಖಪಾಲರ (ಸಿಎಜಿ) ವರದಿ ಹೇಳಿದೆ.

ವಿಧಾನಸಭೆಯಲ್ಲಿ ಗುರುವಾರ ವರದಿಯನ್ನು ಮಂಡಿಸಿದ್ದು, ‘ರಾಜ್ಯ ಹಣಕಾಸು ಆಯೋಗವು ಮೇಲಿನ ಅವಧಿಯಲ್ಲಿ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ₹2,26,232.95 ಕೋಟಿ ಅನುದಾನ ಬಿಡುಗಡೆಗೆ ಶಿಫಾರಸು ಮಾಡಿತ್ತು. ಆದರೆ, ₹1,82,450.91 ಕೋಟಿ ಅನುದಾನ ಮಾತ್ರ ಬಿಡುಗಡೆ ಯಾಗಿದೆ’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಈ ಅವಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅನಿರ್ಬಂಧಿತ ಅನುದಾನದ ಬಿಡುಗಡೆಯಲ್ಲೂ ಕೊರತೆಯಾಗಿತ್ತು. ₹5,826.50 ಕೋಟಿಗಳಿಗೆ ಮಂಜೂರಾತಿ ಇದ್ದರೂ, ₹4,235.38 ಕೋಟಿಯನ್ನು ಮಾತ್ರ ಬಿಡುಗಡೆ ಮಾಡಲಾಗಿತ್ತು. ಅನಿರ್ಬಂಧಿತ ಅನುದಾನದ ಬಿಡುಗಡೆಯಲ್ಲಿ ಶೇಕಡ 10ರಿಂದ ಶೇ 50ರವರೆಗೂ ಏರುಪೇರು ಕಂಡುಬಂದಿದೆ ಎಂದು ಸಿಎಜಿ ಹೇಳಿದೆ.

ಚುನಾವಣೆ ವಿಳಂಬಕ್ಕೆ ಆಕ್ಷೇಪ: ಕ್ಷೇತ್ರಗಳ ಪುನರ್ವಿಂಗಡಣೆ ಅಧಿಕಾರವನ್ನು ರಾಜ್ಯ ಚುನಾವಣಾ ಆಯೋಗದಿಂದ ರಾಜ್ಯ ಸರ್ಕಾರವು 2021ರ ಅಕ್ಟೋಬರ್‌ನಲ್ಲಿ ಹಿಂಪಡೆದುಕೊಂಡ ಕಾರಣದಿಂದ ರಾಜ್ಯದ 233 ತಾಲ್ಲೂಕು ಪಂಚಾಯಿತಿಗಳು ಮತ್ತು 31 ಜಿಲ್ಲಾ ಪಂಚಾಯಿತಿಗಳಿಗೆ ಎರಡು ವರ್ಷಗಳಿಂದ ಚುನಾವಣಾ ಪ್ರಕ್ರಿಯೆ ನಡೆದಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದೆ.

ಎಲ್ಲ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳ ಕ್ಷೇತ್ರ ಪುನರ್ವಿಂಗಡಣೆ ಪ್ರಕ್ರಿಯೆಯನ್ನು ಆಯೋಗವು ಪೂರ್ಣಗೊಳಿಸಿತ್ತು. ಬಳಿಕ ಆಯೋಗದ ಅಧಿಕಾರವನ್ನು ಹಿಂಪಡೆಯಲಾಯಿತು. 12 ವಾರಗಳಲ್ಲಿ ಕ್ಷೇತ್ರಗಳ ಪುನರ್ವಿಂಗಡಣೆ ಪೂರ್ಣಗೊಳಿಸುವಂತೆ ಹೈಕೋರ್ಟ್ ನಿರ್ದೇಶನ ನೀಡಿದ್ದರೂ, ಅ ಕೆಲಸ ಆಗಿಲ್ಲ ಎಂದು ಸಿಎಜಿ ಹೇಳಿದೆ.

ನಗರದಲ್ಲಿ ಇಂದು

ಹನುಮ ಜಯಂತಿ ಮಹೋತ್ಸವ: ಬೆಳಿಗ್ಗೆ 6.30ಕ್ಕೆ ನವಗ್ರಹ ಶಾಂತಿ, 7.30ಕ್ಕೆ ರಾಮತಾರಕ ಹೋಮ, 11.30ಕ್ಕೆ ಕುಂಭಾಭಿಷೇಕ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ಆಯೋಜನೆ ಮತ್ತು ಸ್ಥಳ: ಆಂಜನೇಯಸ್ವಾಮಿ ದೇವಾಲಯ ನಾಗಸಂದ್ರ

ಹನುಮ ಜಯಂತ್ಯುತ್ಸವ, ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಬಾಬಾ ಬನಕಂಡಿ ನಾಗಾಸಾಧು ಮಹಾರಾಜ್, ಪ್ರಶಸ್ತಿ ಪುರಸ್ಕೃತರು: ಯಲ್ಲಪ್ಪ ಕೆ., ನಾರಾಯಣ ಸ್ವಾಮಿ ಜಿ., ಎಚ್. ಲೋಕೇಶ್ ಮೂರ್ತಿ, ಆಯೋಜನೆ ಮತ್ತು ಸ್ಥಳ: ಹಿರಣ್ಮಯಿ ಕಾಸ್ಮಿಕ್ ಸಲ್ಯೂಷನ್ಸ್, ಹಿರಣ್ಮಯ ಕಲಾ ಕುಟೀರ, ನಾಗಶೆಟ್ಟಿಹಳ್ಳಿ, ಬೆಳಿಗ್ಗೆ 7ರಿಂದ

ವಾರ್ಷಿಕ ಉದ್ಯಾನ ಮೇಳ, ಆರ್ಕಿಡ್ ಮೇಳ: ಆಯೋಜನೆ: ಎಪಿಡಿ ಸಂಸ್ಥೆ, ಸ್ಥಳ: ಎಪಿಡಿ ತೋಟಗಾರಿಕೆ ತರಬೇತಿ ಕೇಂದ್ರ, ಎಲ್‌ಐಸಿ ಕಾಲೊನಿ, ಜೀವನಬಿಮಾನಗರ, ಬೆಳಿಗ್ಗೆ 9ರಿಂದ

ಕರ್ನಾಟಕ ರಾಜ್ಯೋತ್ಸವ ಸಮಾರಂಭ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಮನು ಬಳಿಗಾರ್, ‘ಕನ್ನಡ ವಿದ್ಯಾಶ್ರೀ’ ಪ್ರಶಸ್ತಿ ಪ್ರದಾನ: ರಾಮಚಂದ್ರನ್ ಆರ್., ಕಾರ್ಮಿಕರಿಗೆ ‘ಕನ್ನಡಶ್ರೀ’ ಪ್ರಶಸ್ತಿ ಪ್ರದಾನ: ಅಬ್ದುಲ್ ಅಹದ್, ಶಿಲ್ಪ ಎಂ., ಸನ್ಮಾನಿತರು: ಪಿಚ್ಚಳ್ಳಿ ಶ್ರೀನಿವಾಸ್, ಆಯೋಜನೆ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಕನ್ನಡ ಕ್ರಿಯಾ ಸಮಿತಿ, ಸ್ಥಳ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಕೇಂದ್ರ ಕಚೇರಿ ಆವರಣ, ಶಾಂತಿನಗರ, ಸಂಜೆ 4

‘ಲಂಕಾದಹನ’ ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಭಾಗವತರು: ಶಂಕರ ಬಾಳ್ಕುದ್ರ, ಮದ್ದಳೆ: ಸಂಪತ್ ಆಚಾರ್ಯ, ಅವಿನಾಶ್ ಬೈಪಾಡಿತ್ತಾಯ, ಚೆಂಡೆ: ಮಂಜುನಾಥ ದೇವಾಡಿಗ, ಶಿಬಿನ್ ಶರ್ಮ ಶರವೂರು, ಮುಮ್ಮೇಳ: ಪ್ರಶಾಂತ ಬಾಸೊಳ್ಳಿ, ಪವನ್ ಆಚಾರ್ಯ, ರಾಜೇಂದ್ರ ಕಕ್ಕೆಪದವು, ರಮೇಶ್ ಬಾಬು, ಆಯೋಜನೆ: ಯಕ್ಷ ಸಂಭ್ರಮ ಹುಳಿಮಾವು, ಸ್ಥಳ: ದಕ್ಷಿಣಾಭಿಮುಖ ಪ್ರಸನ್ನ ಆಂಜನೇಯ ದೇವಸ್ಥಾನ, ಚಂದಾಪುರ ಬನಹಳ್ಳಿ, ಸಂಜೆ 6.15

ಆಚಾರ್ಯರ ಪುಣ್ಯಾರಾಧನೆ–4: ಸಾನ್ನಿಧ್ಯ: ಯತಿರಾಜ ಜೀಯರ್ ಸ್ವಾಮೀಜಿ, ‘ಬನ್ನಂಜೆ ಗೋವಿಂದಾಚಾರ್ಯ ಪುರಸ್ಕಾರ–2024’ ಪುರಸ್ಕೃತರು: ಬಿ.ಎಂ. ರಮೇಶ್, ‘ಶ್ರೀಮದ್ವಾಚಾರ್ಯರು ಮತ್ತು ಬನ್ನಂಜೆಯವರು’: ಗುರುರಾಜ ಕರಜಗಿ, ‘ಪಂಡಿತಾಚಾರ್ಯರು ಮತ್ತು ಗೋವಿಂದ ಪಂಡಿತಾಚಾರ್ಯರು’: ವಿಜಯಸಿಂಹ ಆಚಾರ್ಯರು, ‘ನನ್ನ ಪಿತಾಮಹ’ ನಾಟಕ ಪ್ರದರ್ಶನ: ನಿರ್ದೇಶನ: ಸುಚೇಂದ್ರ ಪ್ರಸಾದ್, ಆಯೋಜನೆ: ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನ, ಸ್ಥಳ: ಗಾಯನ ಸಮಾಜ, ಸಂಜೆ 4.30



ಗುರುರಾಜ ಕರಜಗಿ

‘ಡಖವ್’ ನಾಟಕ ಪ್ರದರ್ಶನ: ರಚನೆ ಮತ್ತು ನಿರ್ದೇಶನ: ಕೌಶಿಕ್ ಎಚ್.ಎ., ಡ್ರಮ್ಯಾಟರ್ಗ: ಸುಷ್ಮಾ ಎಸ್.ವಿ., ಆಯೋಜನೆ: ನಾಟಕ ಬೆಂಗ್ಳೂರು, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

‘ಬಸವಣ್ಣನ ಅನುಯಾಯಿಗಳಿಗೆ ಲಾಠಿ ಏಟು ಕೊಟ್ಟಿದ್ದೀರಿ, ನಿಮಗೆ ದಯೆಯೇ ಇಲ್ಲ’

ಸರ್ಕಾರ ಕ್ಷಮೆಯಾಚಿಸಲಿ: ಅಶೋಕ ಆಗ್ರಹ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ‘ಅನುಭವ ಮಂಟಪದ ತೈಲ ಚಿತ್ರವನ್ನು ವಿಧಾನಸಭೆಯ ಪ್ರವೇಶದಲ್ಲಿ ಅಳವಡಿಸಿದ್ದೀರಿ. ಆದರೆ, ಬಸವಣ್ಣನ ಅನುಯಾಯಿಗಳಿಗೆ ಲಾಠಿ ಏಟು ಕೊಟ್ಟಿದ್ದೀರಿ. ದಯೆಯೇ ಧರ್ಮದ ಮೂಲವಯ್ಯ ಎಂದವರು ದಯೆಯೇ ಇಲ್ಲದಂತೆ ಹೊಡೆದಿದ್ದೀರಿ. ಪಂಚಮಸಾಲಿ ಮೀಸಲಾತಿ ಹೋರಾಟ ಶಾಂತಿಯುತವಾಗಿ ನಡೆಯುತ್ತಿತ್ತು. ಈಗ ಬೆಂಕಿ ಹಚ್ಚಿದ್ದೀರಿ. ಈ ಬೆಂಕಿ ಮನೆ, ಊರು, ಸಮುದಾಯ, ರಾಜ್ಯವನ್ನೂ ವ್ಯಾಪಿಸಿಕೊಳ್ಳಬಹುದು’ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಎಚ್ಚರಿಸಿದರು.

ಪಂಚಮಸಾಲಿ ಸಮುದಾಯದವರ ಮೇಲೆ ನಡೆದ ಲಾಠಿ ಪ್ರಹಾರ ಖಂಡಿಸಿ ವಿಧಾನಸಭೆಯಲ್ಲಿ ಗುರುವಾರ ನಡೆದ ಪ್ರತಿಭಟನೆ ವೇಳೆ ಅವರು ಮಾತನಾಡಿದರು. ‘ಸರ್ಕಾರ ಪಂಚಮಸಾಲಿ ಲಿಂಗಾಯತ ಸಮುದಾಯದವರ ಕ್ಷಮೆ ಕೇಳಬೇಕು. ತಪ್ಪು ಮಾಡಿದ ಅಧಿಕಾರಿಗಳ ವಿರುದ್ಧ ತಕ್ಷಣ ಕ್ರಮ ಜರುಗಿಸಬೇಕು. ಪಂಚಮಸಾಲಿ ಹೋರಾಟಗಾರರ ವಿರುದ್ಧ ದಾಖಲಿಸಿದ ಎಲ್ಲ ಪ್ರಕರಣಗಳನ್ನು ಹಿಂಪಡೆಯಬೇಕು’ ಎಂದು ಆಗ್ರಹಿಸಿದರು.

ಅಮಿತ್ ಶಾಗೆ ಪತ್ರ ಬರೆಯುವೆ: ಯತ್ನಾಳ

‘ಪಂಚಮಸಾಲಿ ಪ್ರತಿಭಟನಕಾರರ ಮೇಲೆ ಮನುಷ್ಯತ್ವವೇ ಇಲ್ಲದಂತೆ ಪೊಲೀಸರು ಹೊಡೆದಿದ್ದಾರೆ. ಲಾಠಿ ಪ್ರಹಾರಕ್ಕೆ ಆದೇಶ ನೀಡಿದ ಎಡಿಜಿಪಿ ವಿರುದ್ಧ ಕ್ರಮ ತೆಗೆದುಕೊಳ್ಳದೇ ಇದ್ದರೆ ಕೇಂದ್ರ ಗೃಹ ಸಚಿವ ಅಮಿತ್ ಶಾಗೆ ಪತ್ರ ಬರೆಯುತ್ತೇನೆ’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಹೇಳಿದರು.

‘ಸದಾ ಕಾಲ ನಿಮ್ಮದೇ ಸರ್ಕಾರ ಅಧಿಕಾರದಲ್ಲಿ ಇರುವುದಿಲ್ಲ. ಮುಂದೆ ನಾವು ಅಧಿಕಾರಕ್ಕೆ ಬಂದಾಗ ಆ ಅಧಿಕಾರಿಯನ್ನು ಸುಮ್ಮನೆ ಬಿಡುವ ಪ್ರಶ್ನೆ ಇಲ್ಲ’ ಎಂದು ಯತ್ನಾಳ ಹೇಳಿದಾಗ, ಗೃಹ ಸಚಿವ ಜಿ.ಪರಮೇಶ್ವರ ಅವರು ಆಕ್ಷೇಪ ವ್ಯಕ್ತಪಡಿಸಿ, ‘ನೀವು ಅಧಿಕಾರಿಗೆ ಬೆದರಿಕೆ ಹಾಕುವುದು ಸರಿಯಲ್ಲ’ ಎಂದು ತರಾಟೆಗೆ ತೆಗೆದುಕೊಂಡರು.

‘ಲಾಠಿ ಪ್ರಹಾರಕ್ಕೆ ಆದೇಶ ನೀಡಿದ ಎಡಿಜಿಪಿ ಸಮವಸ್ತ್ರ ಧರಿಸಿರಲಿಲ್ಲ. ಲಾಠಿ ಪ್ರಹಾರಕ್ಕೆ ಆದೇಶ ನೀಡುವಲ್ಲಿ ಕಾನೂನು ಉಲ್ಲಂಘನೆ ಆಗಿದೆ. ವಸ್ತ್ರಸಂಹಿತೆ ಪಾಲಿಸದೇ ಇರುವುದೂ ಲೋಪ. ಆದ್ದರಿಂದ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು’ ಎಂದು ಯತ್ನಾಳ ಒತ್ತಾಯಿಸಿದರು.

ಲಾಠಿಚಾರ್ಜ್: ವಿಭೂತಿಪುರ ಶ್ರೀ ಖಂಡನೆ

ಬೆಂಗಳೂರು: ವೀರಶೈವ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡಲು ಆಗ್ರಹಿಸಿ ಬೆಳಗಾವಿ ಸುವರ್ಣ ವಿಧಾನಸೌಧದ ಬಳಿ ಪ್ರತಿಭಟನೆ ಮಾಡುತ್ತಿದ್ದ ಹೋರಾಟಗಾರರ ಮೇಲೆ ಸರ್ಕಾರ ಲಾಠಿ ಚಾರ್ಜ್ ಮಾಡಿರುವುದು ಖಂಡನೀಯ ಎಂದು ವಿಭೂತಿಪುರ ವೀರಸಿಂಹಾಸನ ಮಠದ ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

ಸಂವಿಧಾನದಲ್ಲಿ ಪ್ರತಿಯೊಬ್ಬರಿಗೂ ಹೋರಾಟ ಮಾಡುವ ಹಕ್ಕಿದೆ. ವೀರಶೈವ ಲಿಂಗಾಯತ ಸಮಾಜದಲ್ಲಿ ನೂರಕ್ಕೂ ಅಧಿಕ ಉಪಪಂಗಡಗಳಿವೆ. ಪಂಚಮಸಾಲಿ ಸಮಾಜದಲ್ಲಿ ಬಹುತೇಕರು ಕೃಷಿ ಕಾರ್ಮಿಕರು, ಆರ್ಥಿಕವಾಗಿ ದುರ್ಬಲರಾಗಿದ್ದಾರೆ. ಅಂತಹವರಿಗೆ ವಿದ್ಯಾಭ್ಯಾಸ, ಉದ್ಯೋಗ ಕ್ಷೇತ್ರದಲ್ಲಿ ಮೀಸಲಾತಿ ದೊರೆಯಬೇಕೆಂಬ ಕಾರಣಕ್ಕಾಗಿ ಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಹಲವು ವರ್ಷಗಳಿಂದ ಹೋರಾಟ ನಡೆಯುತ್ತಿದೆ. ಸರ್ಕಾರ ಹೋರಾಟಗಾರರನ್ನು ಕರೆದು ವಾಸ್ತವ ನೆಲೆಗಟ್ಟಿನಲ್ಲಿ ಚರ್ಚೆ ನಡೆಸಿ ಸಮಸ್ಯೆಗೆ ಪರಿಹಾರ ಒದಗಿಸಬೇಕೇ ಹೊರತು ಹೋರಾಟವನ್ನು ಹತ್ತಿಕ್ಕುವುದು, ಹೋರಾಟಗಾರರ ಮೇಲೆ ಪ್ರಕರಣವನ್ನು ದಾಖಲಿಸುವುದು ಉತ್ತಮ ಬೆಳವಣಿಗೆಯಲ್ಲ ಎಂದು ಬೇಸರ ಹೇಳಿದ್ದಾರೆ.

ವೀರಶೈವ ಲಿಂಗಾಯತ ಸಮಾಜದ ಎಲ್ಲ ಒಳಪಂಗಡದವರಿಗೂ ಕೇಂದ್ರದ ಒಬಿಸಿ ಮೀಸಲಾತಿ ದೊರೆಯಬೇಕೆಂಬ ಕೂಗು ಈ ಹಿಂದಿನಿಂದಲೂ ಇದೆ. ಅದಕ್ಕೂ ಸರ್ಕಾರ ಸ್ಪಂದಿಸಬೇಕು. ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು ಎಂದು ಸ್ವಾಮೀಜಿ ಒತ್ತಾಯಿಸಿದ್ದಾರೆ.

ಎರಡು ಕಾರಿಡಾರ್‌ಗಳ ಒಟ್ಟು ಉದ್ದ 44.65 ಕಿ.ಮೀ; 2029ಕ್ಕೆ ಪೂರ್ಣಗೊಳ್ಳುವ ನಿರೀಕ್ಷೆ

ಮೆಟ್ರೊ: 11 ಸಾವಿರ ಮರಗಳಿಗೆ ಕೊಡಲಿ

● ಮುತೀಉರ್ ರಹ್ಮಾನ್ ಸಿದ್ದೀಕಿ

ಬೆಂಗಳೂರು: ನಮ್ಮ ಮೆಟ್ರೊ 3ನೇ ಹಂತದ ಕಾಮಗಾರಿ ನಡೆಸಲು 11,137 ಮರಗಳಿಗೆ ಕೊಡಲಿಯೇಟು ಬೀಳಲಿದೆ.

ಜೆ.ಪಿ. ನಗರ–ಕೆಂಪಾಪುರ (ಕಾರಿಡಾರ್ 1) ಮತ್ತು ಹೊಸಹಳ್ಳಿ–ಕಡಬಗೆರೆ (ಕಾರಿಡಾರ್–2) ಕಾರಿಡಾರ್‌ಗಳಿರುವ 3ನೇ ಹಂತವು 44.65 ಕಿ.ಮೀ. ವ್ಯಾಪ್ತಿ ಹೊಂದಿದೆ. ಹೊಸದಾಗಿ ಬಿಡುಗಡೆ ಮಾಡಲಾಗಿರುವ ವಿಸ್ತೃತ ಯೋಜನಾ ವರದಿ (ಡಿಪಿಆರ್) ಪ್ರಕಾರ 11,137 ಮರಗಳನ್ನು ಕಡಿಯಬೇಕು ಇಲ್ಲವೇ ಅಲ್ಲಿಂದ ಸ್ಥಳಾಂತರಿಸಬೇಕಾಗಿದೆ. ಮರ ತೆರವು, ಜೊತೆಗೆ ಉತ್ಖನನ, ಸಾಮಗ್ರಿ ಸಾಗಣೆ, ನಿರ್ಮಾಣ ಚಟುವಟಿಕೆಗಳ ಸಮಯದಲ್ಲಿ ಉತ್ಪತ್ತಿಯಾಗುವ ದೂಳು, ಡೀಸೆಲ್ ಜನರೇಟರ್‌ಗಳ ಹೊಗೆ ಸೇರಿ ದಕ್ಷಿಣ, ಪಶ್ಚಿಮ ಮತ್ತು ವಾಯವ್ಯ ಬೆಂಗಳೂರಿನಲ್ಲಿ ಮಾಲಿನ್ಯ ಹೆಚ್ಚಲಿದೆ. ಪರಿಸರದ ಪರಿಸ್ಥಿತಿ ಹದಗೆಡಲಿದೆ.

‘ಸಾಧ್ಯವಿರುವ ಕಡೆಗಳಲ್ಲಿ ಹೆಚ್ಚಿನ ಗಿಡಮರ ಬೆಳೆಸಲು, ಮಿಯಾವಾಕಿ ಅರಣ್ಯ ನಿರ್ಮಿಸಲು ಯೋಜನೆ ರೂಪಿಸಲಾಗಿದೆ’ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ.ಮಹೇಶ್ವರರಾವ್ ಪ್ರತಿಕ್ರಿಯಿಸಿದರು.

ಪರಿಸರ ನಾಶವನ್ನು ತಗ್ಗಿಸಲು ಪರಿಸರ ಮೇಲ್ವಿಚಾರಣಾ ಯೋಜನೆಯಡಿಯಲ್ಲಿ ₹43.53 ಕೋಟಿ ವೆಚ್ಚದಲ್ಲಿ ಪರಿಹಾರ ಅರಣ್ಯೀಕರಣ ಮಾಡಲು ಬಿಎಂಆರ್‌ಸಿಎಲ್ ಪ್ರಸ್ತಾವ ಸಲ್ಲಿಸಿದೆ.

‘ಪರ್ಯಾಯ ಅರಣ್ಯೀಕರಣ ಪರಿಹಾರವಲ್ಲ. ಮರಗಳನ್ನು ಉಳಿಸಬೇಕು. ಪರಿಸರ ಪ್ರಭಾವದ ಮೌಲ್ಯಮಾಪನ ನಡೆಸಬೇಕು. ಸಾರ್ವಜನಿಕರೊಂದಿಗೆ ಸಮಾಲೋಚನೆ ನಡೆಸಬೇಕು’ ಎಂದು ಬೆಂಗಳೂರು ಪರಿಸರ ಟ್ರಸ್ಟ್‌ನ (ಬಿಇಟಿ) ಡಿ.ಟಿ. ದೇವರೆ ಒತ್ತಾಯಿಸಿದರು.

ಸುರಂಗ ಮಾರ್ಗಗಳು ಇರುವುದಿಲ್ಲ

ಕಿತ್ತಳೆ ಮಾರ್ಗ ಎಂದೂ ಕರೆಯಲಾಗುವ 3ನೇ ಹಂತದಲ್ಲಿ ಸುರಂಗ ಮಾರ್ಗಗಳು ಇರುವುದಿಲ್ಲ. ಸಂಪೂರ್ಣವಾಗಿ ಎತ್ತರಿಸಿದ ಮಾರ್ಗ ಇರಲಿದೆ. ಹೊರವರ್ತುಲ ರಸ್ತೆಯ ಪಶ್ಚಿಮ ಭಾಗ ಮತ್ತು ಮಾಗಡಿ ರಸ್ತೆಯ ಸುತ್ತಲಿನ ಭಾಗವನ್ನು ಮೆಟ್ರೊ ಸಂಪರ್ಕಿಸಲಿದೆ. 2029ರ ವೇಳೆಗೆ ಕಾಮಗಾರಿ ಪೂರ್ಣಗೊಳಿಸಿ ರೈಲು ಸಂಚಾರ ಆರಂಭಿಸುವ ಗುರಿಯನ್ನು ಇಟ್ಟುಕೊಂಡಿದೆ. ಆಗ ಬೆಂಗಳೂರಿನ ಮೆಟ್ರೊ ಜಾಲವು 222.2 ಕಿ.ಮೀ.ಗೆ ವಿಸ್ತರಿಸಲಿದೆ.

3ನೇ ಹಂತಕ್ಕೆ ಎಲ್ಲ ಹಂತದಲ್ಲಿ ಅನುಮೋದನೆಗೊಂಡಿದ್ದು, ಅಂತಿಮವಾಗಿ ಕೇಂದ್ರ ಸರ್ಕಾರ ಕೂಡ ಆಗಸ್ಟ್‌ನಲ್ಲಿ ಒಪ್ಪಿಗೆ ನೀಡಿದೆ. ಈ ಮಾರ್ಗ ಡಬಲ್ ಡೆಕರ್ (ಮೆಟ್ರೊ-ಕಮ್-ರೋಡ್) ಮಾದರಿಯಲ್ಲಿ ನಿರ್ಮಾಣವಾಗಲಿದೆ. ರಸ್ತೆಗಾಗಿ ಪ್ರತಿ ಕಿಲೋಮೀಟರ್‌ಗೆ ₹120 ಕೋಟಿ ವೆಚ್ಚವಾಗಲಿದೆ. 44.65 ಕಿ.ಮೀ. ರಸ್ತೆಗೆ ₹5,358 ಕೋಟಿ ವೆಚ್ಚ ಅಂದಾಜಿಸಲಾಗಿದೆ. ಬಿಬಿಎಂಪಿ ಅಥವಾ ರಾಜ್ಯ ಸರ್ಕಾರ ಈ ವೆಚ್ಚವನ್ನು ಭರಿಸಲಿದೆ. ಪ್ರಸ್ತಾವಕ್ಕೆ ತಾತ್ವಿಕ ಒಪ್ಪಿಗೆ ನೀಡಲಾಗಿದ್ದರೂ ರಾಜ್ಯ ಸಚಿವ ಸಂಪುಟದ ಅನುಮತಿಗಾಗಿ ಬಿಎಂಆರ್‌ಸಿಎಲ್ ಕಾಯುತ್ತಿದೆ.



₹15,611 ಕೋಟಿ ನಮ್ಮ ಮೆಟ್ರೊ 3ನೇ ಹಂತದ ಅಂದಾಜು ವೆಚ್ಚ

₹7,577 ಕೋಟಿ ಅದರಲ್ಲಿ ಬಾಹ್ಯ ಹಣಕಾಸು ಸಂಸ್ಥೆಗಳಿಂದ ಸಾಲ

32.15 ಕಿ.ಮೀ. (22 ನಿಲ್ದಾಣ) ಕಾರಿಡಾರ್ 1ರ ಉದ್ದ

12.5 ಕಿ.ಮೀ. (9 ನಿಲ್ದಾಣ) ಕಾರಿಡಾರ್ 2ರ ಉದ್ದ

ಉತ್ಥಾನ ಕಥಾಸ್ಪರ್ಧೆ: ಶಿರಸಿಯ ಗಣೇಶ ಭಟ್ಟಗೆ ಪ್ರಥಮ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉತ್ಥಾನ’ ಮಾಸಪತ್ರಿಕೆ ಆಯೋಜಿಸಿದ್ದ ರಾಜ್ಯಮಟ್ಟದ ವಾರ್ಷಿಕ ಕಥಾ ಸ್ಪರ್ಧೆಯ ಫಲಿತಾಂಶ ಪ್ರಕಟಗೊಂಡಿದ್ದು, ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಗಣೇಶ ಭಟ್ಟ ಕೊಪ್ಪಲತೋಟ ಅವರ ‘ತೀರ್ಪು’ ಕಥೆ ಪ್ರಥಮ ಬಹುಮಾನ ಪಡೆದಿದೆ.

ಈ ವರ್ಷ 412 ಕಥೆಗಳು ಸ್ಪರ್ಧೆಯಲ್ಲಿದ್ದವು. ಲೇಖಕ ಮತ್ತು ಪತ್ರಕರ್ತ ಎನ್.ಎಸ್. ಶ್ರೀಧರಮೂರ್ತಿ ಅವರು ಬಹುಮಾನಕ್ಕೆ ಕಥೆಗಳನ್ನು ಆಯ್ಕೆ ಮಾಡಿದ್ದಾರೆ. ಪ್ರಥಮ ಬಹುಮಾನ ₹ 15 ಸಾವಿರ ನಗದು ಒಳಗೊಂಡಿದೆ.

ಶಿವಮೊಗ್ಗ ಜಿಲ್ಲೆಯ ಸಾಗರದ ಮೃತ್ಯುಂಜಯ ಎಚ್. ಅವರ ‘ಕಥೆಯ ಪಾತ್ರದ ಎದುರು’ ಕಥೆ ದ್ವಿತೀಯ ಬಹುಮಾನ ಹಾಗೂ ದಾವಣಗೆರೆಯ ಹೊನ್ನಾಳಿಯ ಸದಾಶಿವ ಸೊರಟೂರು ಅವರ ‘ಮುರಿದ ಮರದ ಚಿಗುರು’ ಕಥೆಯು ತೃತೀಯ ಬಹುಮಾನವನ್ನು ಪಡೆದಿದೆ. ಈ ಬಹುಮಾನಗಳು ಕ್ರಮವಾಗಿ ₹ 12 ಸಾವಿರ ಹಾಗೂ ₹ 10 ಸಾವಿರ ನಗದು ಒಳಗೊಂಡಿವೆ.

ಗಣೇಶ ಭಟ್ಟ

ಐದು ಕಥೆಗಳು ಮೆಚ್ಚುಗೆಯ ಬಹುಮಾನಕ್ಕೆ ಆಯ್ಕೆಯಾಗಿವೆ.

ಬೆಂಗಳೂರಿನ ರಾಜನಹಳ್ಳಿಯ ಕಿರಣ್ ಪ್ರಸಾದ್ ಅವರ ‘ಸ್ಥಿತ್ಯಂತರ’, ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ವನರಾಗ ಶರ್ಮಾ ಅವರ ‘ನೆತ್ತರ ಬೀದಿಗುಂಟ’, ಬೆಂಗಳೂರಿನ ಭಾಗ್ಯರೇಖಾ ದೇಶಪಾಂಡೆ ಅವರ ‘ನಿಷ್ಕ್ರಮಣ’, ಜಯರಾಮಾಚಾರಿ ಅವರ ‘ಅನಿಕೇತನ’ ಹಾಗೂ ಪೂರ್ಣಿಮಾ ಭಟ್ಟ ಸಣ್ಣಕೇರಿ ಅವರ ‘ಸಾಂಗತ್ಯ’ ಕಥೆ ಮೆಚ್ಚುಗೆ ಬಹುಮಾನಕ್ಕೆ ಆಯ್ಕೆಯಾಗಿವೆ. ಈ ಬಹುಮಾನವು ತಲಾ ₹ 2 ಸಾವಿರ ನಗದು ಒಳಗೊಂಡಿವೆ ಎಂದು ‘ಉತ್ಥಾನ’ದ ಸಂಪಾದಕ ಅನಿಲ್ ಕುಮಾರ್ ಮೊಳಹಳ್ಳಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯತ್ನಾಳ ವಿರುದ್ಧದ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ಅವಹೇಳನಾಕಾರಿ ಹೇಳಿಕೆ ನೀಡಿದ ಆರೋಪದಡಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಅನ್ನು ಹೈಕೋರ್ಟ್ ರದ್ದುಪಡಿಸಿದೆ.

‘ನನ್ನ ವಿರುದ್ಧದ ಎಫ್‌ಐಆರ್ ರದ್ದುಗೊಳಿಸಬೇಕು’ ಎಂದು ಕೋರಿ ಯತ್ನಾಳ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ಪ್ರಕಟಿಸಿದರು.

‘ರಾಹುಲ್ ಗಾಂಧಿ ಅಮೆರಿಕದಲ್ಲಿ ಭಾರತದ ವಿರುದ್ಧ ಮಾತನಾಡಿದ್ದಾರೆ ಎಂದು ಟೀಕಿಸುವ ಭರದಲ್ಲಿ ಯತ್ನಾಳ್ ಅವರು, ರಾಹುಲ್ ಅವರ ಪೂರ್ವಜರ ವಿರುದ್ಧ ಅವಹೇಳನಕಾರಿ ಪದಗಳನ್ನು ಬಳಸಿ ನಿಂದಿಸಿದ್ದಾರೆ’ ಎಂದು ಆರೋಪಿಸಿ ಕಾಂಗ್ರೆಸ್ ಮುಖಂಡ ಎಸ್.ಮನೋಹರ್ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಇದರನ್ವಯ ಪೊಲೀಸರು ಯತ್ನಾಳ್ ವಿರುದ್ಧ ಭಾರತೀಯ ದಂಡ ಸಂಹಿತೆ–1860ರ ಕಲಂ 192 (ಗಲಭೆ ನಡೆಸುವುದಕ್ಕಾಗಿ ಉದ್ದೇಶಪೂರ್ವಕ ಪ್ರಚೋದನೆ), 196 (ಧರ್ಮ, ಜನಾಂಗ, ಜನ್ಮಸ್ಥಳ, ವಾಸಸ್ಥಳ, ಭಾಷೆ ಆಧಾರದಲ್ಲಿ ವಿವಿಧ ಗುಂಪುಗಳ ನಡುವೆ ದ್ವೇಷ ಹರಡುವುದು) 353(2) (ಸಾರ್ವಜನಿಕ ಕಿಡಿಗೇಡಿತನಕ್ಕೆ ಅವಕಾಶವಾಗುವಂತಹ ಹೇಳಿಕೆ) ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು.

ಸಂಸದ ತೇಜಸ್ವಿ ಸೂರ್ಯ ವಿರುದ್ಧದ ಪ್ರಕರಣ ರದ್ದುಪಡಿಸಿದ ಹೈಕೋರ್ಟ್

ಬೆಂಗಳೂರು: ‘ಜಮೀನಿನ ಪಹಣಿಯಲ್ಲಿ ವಕ್ಫ್ ಎಂದು ತೋರಿಸಿದ ಪರಿಣಾಮ ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಹರನಗಿರಿ ರೈತ ಚನ್ನಪ್ಪ ಸಿ.ಬಾಳಿಕಾಯಿ (24) ಉರುಫ್ ರುದ್ರಪ್ಪ ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂಬ ಮಾಹಿತಿಯನ್ನು ಸಾಮಾಜಿಕ ಜಾಲತಾಣದಲ್ಲಿ ಬಿತ್ತರಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಸಂಸದ ತೇಜಸ್ವಿ ಸೂರ್ಯ ವಿರುದ್ಧ ದಾಖಲಿಸಲಾಗಿದ್ದ ಎಫ್‌ಐಆರ್ ಅನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಕುರಿತಂತೆ ಕಾಯ್ದಿರಿಸಿದ್ದ ತೀರ್ಪನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ಪ್ರಕಟಿಸಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಹಾವೇರಿಯ ಸೆನ್ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತೆ–2023ರ (ಬಿಎನ್‌ಎಸ್) ಕಲಂ 353ರ (2) (ವಿವಿಧ ಗುಂಪುಗಳ ನಡುವೆ ದ್ವೇಷ ಬಿತ್ತುವ ಮತ್ತು ದ್ವೇಷಕ್ಕೆ ಪ್ರಚೋದನೆ ನೀಡುವ ಸುಳ್ಳು ಸುದ್ದಿ ಹರಡಿದ ಆರೋಪ) ಅಡಿ ಎಫ್‌ಐಆರ್ ದಾಖಲಿಸಲಾಗಿತ್ತು. ತೇಜಸ್ವಿ ಸೂರ್ಯ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ಮತ್ತು ರಾಜ್ಯ ಪ್ರಾಸಿಕ್ಯೂಷನ್ ಪರ ಬಿ.ಎಸ್.ಬೆಳ್ಳಿಯಪ್ಪ ವಾದ ಮಂಡಿಸಿದ್ದರು.

ಹೈಕೋರ್ಟ್: ಕನ್ನಡದಲ್ಲಿ ಸಂಪೂರ್ಣ ತೀರ್ಪು ಪ್ರಕಟ

ನ್ಯಾಯಾಂಗ ಇತಿಹಾಸದಲ್ಲಿ ಹೊಸ ದಾಖಲೆ ಬರೆದ ನ್ಯಾ.ಕೃಷ್ಣ ದೀಕ್ಷಿತ್, ಸಿ.ಎಂ.ಜೋಶಿ ಅವರಿದ್ದ ವಿಭಾಗೀಯ ಪೀಠ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತೀಯ ಭಾಷಾ ದಿವಸ್’ ಹಿನ್ನೆಲೆಯಲ್ಲಿ ಹಿರಿಯ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಮತ್ತು ನ್ಯಾಯಮೂರ್ತಿ ಸಿ.ಎಂ.ಜೋಶಿ ಅವರಿದ್ದ ವಿಭಾಗೀಯ ನ್ಯಾಯಪೀಠ, ಕನ್ನಡದಲ್ಲೇ ಸಂಪೂರ್ಣ ತೀರ್ಪು ಪ್ರಕಟಿಸುವ ಮೂಲಕ ಕರ್ನಾಟಕ ಹೈಕೋರ್ಟ್‌ನ ನ್ಯಾಯಾಂಗ ಇತಿಹಾಸದಲ್ಲಿ ಗುರುವಾರ ಹೊಸ ದಾಖಲೆ ಬರೆದಿದೆ.

ತುಮಕೂರು ಜಿಲ್ಲೆ ಶಿರಾ ತಾಲ್ಲೂಕು ಪಟ್ಟನಾಯಕನಹಳ್ಳಿ ಗುರುಗುಂಡ ಬ್ರಹ್ಮೇಶ್ವರ ಸ್ವಾಮಿ ಮಠದ ನಂಜಾವಧೂತ ಸ್ವಾಮೀಜಿ ಸಲ್ಲಿಸಿದ್ದ ಅಸಲು ದಾವೆಯ ಮೇಲ್ಮನವಿಯನ್ನು ಪುರಸ್ಕರಿಸಿದ ನ್ಯಾಯಪೀಠ, ಇದರ ತೀರ್ಪನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಪ್ರತ್ಯೇಕವಾಗಿ ನೀಡಿದೆ.

ಬೆಳಿಗ್ಗೆ ದಿನದ ಕಲಾಪ ಆರಂಭವಾಗುತ್ತಿದ್ದಂತೆಯೇ, ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರು, ‘ಕನ್ನಡದ ಅವಸಾನ ಆಗಬಾರದು ಎನ್ನುವುದಾದರೆ ಕನ್ನಡಕ್ಕೆ ಮಾನ್ಯತೆ ಸಿಗಬೇಕು. ಸಾಂವಿಧಾನಿಕ ಸಂಸ್ಥೆಗಳಲ್ಲಿಯೂ ಕನ್ನಡದಲ್ಲಿ ವ್ಯವಹಾರ ನಡೆಯಬೇಕು’ ಎಂದು ಪ್ರತಿಪಾದಿಸಿದರು.

‘ಭಾರತದ ಭಾಷೆಗಳಿಗೆ ಮಾನ್ಯತೆ ನೀಡುವ ದಿವಸವೇ ಭಾರತೀಯ ಭಾಷಾ ದಿವಸ್ ಉದ್ದೇಶ. ಹಾಗಾಗಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಪ್ರತ್ಯೇಕವಾಗಿ ನಾವೇ ಎರಡು ತೀರ್ಪು ಬರೆದಿದ್ದೇವೆ. ಇದು ತರ್ಜುಮೆಯಲ್ಲ. ಕವಿ ರವೀಂದ್ರನಾಥ್ ಟ್ಯಾಗೋರ್ ಹೇಗೆ ಬಂಗಾಳಿ ಮತ್ತು ಇಂಗ್ಲಿಷ್‌ನಲ್ಲಿ ಪದ್ಯ ಬರೆಯುತ್ತಿದ್ದರೋ ಹಾಗೆ’ ಎಂದು ವಿವರಿಸಿದರು.

‘ನಮ್ಮೆಲ್ಲಾ ತೀರ್ಪುಗಳನ್ನು ಇಂಗ್ಲಿಷ್‌ನಲ್ಲಿ ನೀಡುತ್ತಿದ್ದೇವೆ. ಇವು ಜನಸಾಮಾನ್ಯರಿಗೆ ಹೇಗೆ ತಾನೇ ಅರ್ಥವಾಗಬಲ್ಲವು? ಇಂಗ್ಲೆಂಡ್‌ನಲ್ಲಿ 1730ರವರೆಗೆ ಲ್ಯಾಟಿನ್ ಭಾಷೆಯಲ್ಲಿ ನ್ಯಾಯಾಲಯದ ಕಲಾಪ ನಡೆಯುತ್ತಿತ್ತು. ಹೀಗಾಗಿ, ಇಂಗ್ಲೆಂಡ್‌ನಲ್ಲಿ ನ್ಯಾಯಾಲಯದ ಆದೇಶ ಹಾಗೂ ತೀರ್ಪುಗಳನ್ನು ಸ್ಥಳೀಯ ಭಾಷೆಯಲ್ಲಿ ನೀಡಬೇಕು ಎಂಬ ಶಾಸನ ರೂಪಿಸಲಾಯಿತು. ಅಂದಿನಿಂದ ಇಂದಿನವರೆಗೆ ಇಂಗ್ಲೆಂಡ್‌ನಲ್ಲಿ ಆಂಗ್ಲ ಭಾಷೆಯಲ್ಲಿಯೇ ಕಲಾಪ ನಡೆದುಕೊಂಡು ಬರುತ್ತಿದೆ’ ಎಂದರು.

‘ನಮ್ಮ ನ್ಯಾಯಾಲಯಗಳು ಕಡೇ ಪಕ್ಷ ನಿರ್ಣಯಗಳ ಕ್ರಿಯಾತ್ಮಕ (ಆಪರೇಟಿವ್) ಭಾಗವನ್ನಾದರೂ ಕನ್ನಡದಲ್ಲಿ ನೀಡುವಂತಾಗಬೇಕು. ಆಗ ದಾವೆದಾರರಿಗೆ ತೀರ್ಪು ಅರ್ಥವಾಗುತ್ತದೆ. ಸಂವಿಧಾನದ 348ನೇ ವಿಧಿಯ ಪ್ರಕಾರ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನಲ್ಲಿ ಬಳಸಲಾಗುವ ಭಾಷೆಯ ಬಗ್ಗೆ ವಿವರಿಸಲಾಗಿದೆ. ಆದರೆ, ಇಲ್ಲಿ ಇಂಗ್ಲಿಷ್ ಮಾತ್ರ ಎಂದು ಹೇಳಿಲ್ಲ. 348(1)ನೇ ವಿಧಿಯ ಅಡಿ ಸರ್ಕಾರವು ರಾಷ್ಟ್ರಪತಿಗಳಿಂದ ಅನುಮತಿ ಪಡೆದು ರಾಜ್ಯಪಾಲರ ಮೂಲಕ ಕಾನೂನು ಮಾಡಬಹುದು ಎಂದು ಹೇಳಿದೆ. ಆದರೆ, ಸಂಬಂಧಪಟ್ಟವರು ಈ ಕುರಿತಂತೆ ಇನ್ನೂ ನಿರ್ಧಾರ ಕೈಗೊಂಡಿಲ್ಲ. ಇನ್ನೂ ನಾವು ಕಾಯಲಾಗದು. ಕನ್ನಡದಲ್ಲಿ ತೀರ್ಪು ಬರುವುದು ಆರಂಭವಾಗಬೇಕು. ಅದಕ್ಕಾಗಿ ಆರಂಭಿಸಿದ್ದೇವೆ’ ಎಂದು ತಿಳಿಸಿದರು.

‘ಸುಪ್ರೀಂ ಕೋರ್ಟ್‌ನ 2,400 ಮತ್ತು ಹೈಕೋರ್ಟ್‌ನ 1,400 ತೀರ್ಪುಗಳು ಕನ್ನಡಕ್ಕೆ ಅನುವಾದಗೊಂಡಿವೆ’ ಎಂದು ನ್ಯಾ.ಸಿ.ಎಂ.ಜೋಶಿ ತಿಳಿಸಿದರು.

ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರು ಕರ್ನಾಟಕ ಹೈಕೋರ್ಟ್‌ನ ನ್ಯಾಯಾಂಗ ದಾಖಲೆಗಳನ್ನು ಕನ್ನಡಕ್ಕೆ ಅನುವಾದಿಸುವ ಸಲಹಾ ಸಮಿತಿ ಮುಖ್ಯಸ್ಥರಾಗಿದ್ದಾರೆ.

ವಾಲ್ಮೀಕಿ ನಿಗಮ: ಹೈಕೋರ್ಟ್‌ಗೆ ಸಿಬಿಐ ವರದಿ ಸಲ್ಲಿಕೆ

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಹಣ ದುರ್ಬಳಕೆ ಆರೋಪಕ್ಕೆ ಸಂಬಂಧಿಸಿದ ತನಿಖಾ ವರದಿಯನ್ನು ಸಿಬಿಐ, ಗುರುವಾರ ಹೈಕೋರ್ಟ್‌ಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿತು.

ಈ ಸಂಬಂಧ ಬಿಜೆಪಿಯ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ರಮೇಶ ಜಾರಕಿಹೊಳಿ, ಮಾಜಿ ಶಾಸಕರಾದ ಅರವಿಂದ ಲಿಂಬಾವಳಿ ಮತ್ತು ಕುಮಾರ್ ಬಂಗಾರಪ್ಪ ಸಲ್ಲಿಸಿರುವ ರಿಟ್ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಸಿಬಿಐ ಪರ ವಕೀಲ ಪಿ. ಪ್ರಸನ್ನಕುಮಾರ್, ಹೈಕೋರ್ಟ್ ಈ ಹಿಂದೆ ನೀಡಿದ್ದ ಆದೇಶದ ಅನುಸಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಈವರೆಗಿನ ತನಿಖಾ ಪ್ರಗತಿಯನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಪೀಠಕ್ಕೆ ಸಲ್ಲಿಸಿ, ‘ಈವರೆಗೆ 31 ಸಾಕ್ಷಿಗಳ ವಿಚಾರಣೆ ನಡೆಸಲಾಗಿದೆ. ತನಿಖೆ ಚುರುಕಿನಿಂದ ನಡೆಯುತ್ತಿದೆ’ ಎಂದು ತಿಳಿಸಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆ ಮುಂದೂಡಿತು.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ವೆಂಕಟೇಶ್ ಪಿ.ದಳವಾಯಿ ಹಾಜರಿದ್ದರು.

ಕೋರಿಕೆ: ‘ವಾಲ್ಮೀಕಿ ಪ್ರಕರಣಕ್ಕೆ ಸಂಬಂಧಿಸಿದ ಸಿಬಿಐ ತನಿಖೆಯನ್ನು ಹೈಕೋರ್ಟ್ ನಿಗಾದಲ್ಲಿಯೇ ನಡೆಸಬೇಕು. ಸಿಬಿಐ ಪ್ರತಿ ಹದಿನೈದು ದಿನಗಳಿಗೊಮ್ಮೆ ಪ್ರಗತಿ ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಬೇಕು ಮತ್ತು ವಿಚಾರಣೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಸಿಬಿಐ ವಿಶೇಷ ನ್ಯಾಯಾಲಯಕ್ಕೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ದೂರು ರದ್ದು ಕೋರಿ ನಾಗೇಂದ್ರ ಅರ್ಜಿ: ಇ.ಡಿಗೆ ನೋಟಿಸ್

‘ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಅಕ್ರಮವಾಗಿ ₹ 94 ಕೋಟಿ ಮೊತ್ತವನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ ಆರೋಪ ಪ್ರಕರಣದಲ್ಲಿ; ಜಾರಿ ನಿರ್ದೇಶನಾಲಯ (ಇಡಿ) ದಾಖಲಿಸಿರುವ ಇಸಿಐಆರ್ (ಎನ್‌ಫೋರ್ಸ್‌ಮೆಂಟ್ ಕೇಸ್ ಇನ್‌ಫಾರ್ಮೇಶನ್ ರಿಪೋರ್ಟ್) ರದ್ದುಗೊಳಿಸಬೇಕು’ ಎಂದು ಕೋರಿ ಮಾಜಿ ಸಚಿವ ಬಿ.ನಾಗೇಂದ್ರ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಇ.ಡಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಬಿ.ನಾಗೇಂದ್ರ ಸಲ್ಲಿಸಿರುವ ರಿಟ್ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು. ಪ್ರತಿವಾದಿ ಇ.ಡಿ ಪರ ಹಾಜರಿದ್ದ ಪಿ.ಪ್ರಸನ್ನ ಕುಮಾರ್ ನೋಟಿಸ್ ಸ್ವೀಕರಿಸಿದರು. ವಿಚಾರಣೆಯನ್ನು ಇದೇ 17ಕ್ಕೆ ಮುಂದೂಡಲಾಗಿದೆ.

‘ಇ.ಡಿ ನನ್ನ ವಿರುದ್ಧ ಇಸಿಐಆರ್ ದಾಖಲಿಸಿದ ಸಮಯದಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023 (ಬಿಎನ್‌ಎಸ್‌ಎಸ್) ಜಾರಿಗೆ ಬಂದಿತ್ತು. ಹೀಗಾಗಿ, ಬಿಎನ್‌ಎಸ್‌ಎಸ್ ಅನುಸಾರ ದೂರು ದಾಖಲಿಸುವ ಮುನ್ನ ಆರೋಪಿಗೆ ನೋಟಿಸ್ ಕೊಟ್ಟು ಕರೆಯಿಸಿಕೊಂಡು ಹೇಳಿಕೆ ದಾಖಲಿಸಿಕೊಳ್ಳಬೇಕು. ನಂತರವಷ್ಟೇ ವಿಚಾರಣಾ ನ್ಯಾಯಾಲಯ ಅಪರಾಧವನ್ನು ವಿಚಾರಣೆಗೆ ಪರಿಗಣಿಸಿ ದೂರು ದಾಖಲಿಸಬೇಕು. ದೂರು ದಾಖಲಿಸುವ ಸಂದರ್ಭದಲ್ಲಿ ನಾನು ಸಚಿವನಾಗಿದ್ದೆ. ಹೀಗಾಗಿ, ನನ್ನ ವಿರುದ್ಧ ದೂರು ದಾಖಲಿಸುವ ಮುನ್ನ ಇ.ಡಿ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದಿಲ್ಲ. ಆದ್ದರಿಂದ, ಇಸಿಐಆರ್ ರದ್ದುಪಡಿಸಬೇಕು’ ಎಂದು ಕೋರಿದ್ದಾರೆ.

ಶಾಸಕ ಮಂಜುನಾಥ್ ವಿರುದ್ಧ ಎಫ್‌ಐಆರ್: ರದ್ದತಿಗೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟ ಜಾತಿಗೆ ಮೀಸಲಾದ ಮುಳಬಾಗಿಲು ಕ್ಷೇತ್ರಕ್ಕೆ 2013ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ ಸಲ್ಲಿಸಿ ಆಯ್ಕೆಯಾಗಿದ್ದಾರೆ’ ಎಂದು ಆರೋಪಿಸಿ ಅಂದಿನ ಶಾಸಕ ಜಿ.ಮಂಜುನಾಥ್ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿದೆ.

‘ನನ್ನ ವಿರುದ್ಧದ ಎಫ್‌ಐಆರ್ ರದ್ದುಗೊಳಿಸಬೇಕು’ ಎಂದು ಕೋರಿ ಜಿ.ಮಂಜುನಾಥ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು, ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ಪ್ರಕಟಿಸಿದರು. ಸರ್ಕಾರದ ಪರ ಹಿರಿಯ ವಕೀಲ ಸಿ.ಜಗದೀಶ್ ವಾದ ಮಂಡಿಸಿದ್ದರು.

ಜಾತಿ ಸಿಂಧುತ್ವಕ್ಕೆ ಸಂಬಂಧಿಸಿದಂತೆ ಕೋಲಾರ ಜಿಲ್ಲಾಧಿಕಾರಿ ನೇತೃತ್ವದ ಜಾತಿ ಪರಿಶೀಲನಾ ಸಮಿತಿ ಕೈಗೊಂಡಿದ್ದ ನಿರ್ಣಯವನ್ನು ಪ್ರಶ್ನಿಸಿ ಸದ್ಯ ಕೋಲಾರ ವಿಧಾನಸಭಾ ಕ್ಷೇತ್ರದ ಶಾಸಕರೂ ಆದ ಕಾಂಗ್ರೆಸ್ ಪಕ್ಷದ ಜಿ.ಮಂಜುನಾಥ್ (ಕೊತ್ತೂರು ಮಂಜುನಾಥ್) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಇತ್ತೀಚೆಗಷ್ಟೇ ತಿರಸ್ಕರಿಸಿತ್ತು.

ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಮಾಹಿತಿ

ಹೂಡಿಕೆಗೆ ಫ್ರಾನ್ಸ್ ಕಂಪನಿಗಳ ಆಸಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇನ್ವೆಸ್ಟ್ ಕರ್ನಾಟಕದ ಭಾಗವಾಗಿ ಫ್ರಾನ್ಸ್‌ನ ಏರ್‌ಬಸ್, ಡೆಕಥ್ಲಾನ್, ಥೇಲ್ಸ್ ಸೇರಿ ಹಲವು ಕಂಪನಿಗಳು ರಾಜ್ಯದಲ್ಲಿ ಹೂಡಿಕೆ ಮಾಡಲು ಮತ್ತು ಹೂಡಿಕೆ ವಿಸ್ತರಿಸಲು ಆಸಕ್ತಿ ತೋರಿಸಿವೆ’ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ತಿಳಿಸಿದರು.

ಇನ್ವೆಸ್ಟ್ ಕರ್ನಾಟಕದ ಪೂರ್ವಸಿದ್ಧತೆಯ ಭಾಗವಾಗಿ ಪ್ಯಾರಿಸ್‌ನಲ್ಲಿ ಉದ್ಯಮಿಗಳ ಜತೆಗೆ ನಡೆದ ಮಾತುಕತೆಯ ನಂತರ ಅವರು ಈ ಮಾಹಿತಿ ನೀಡಿದರು.

‘ವೈಮಾನಿಕ ಕ್ಷೇತ್ರದಲ್ಲಿ ಹೂಡಿಕೆಗೆ ರಾಜ್ಯದಲ್ಲಿ ಇರುವ ಪೂರಕ ವಾತಾವರಣದ ಬಗ್ಗೆ ಉದ್ಯಮಿಗಳಿಗೆ ಮನವರಿಕೆ ಮಾಡಿಕೊಡಲಾಯಿತು’ ಎಂದು ಅವರು ತಿಳಿಸಿದರು.

ಇನ್ವೆಸ್ಟ್ ಕರ್ನಾಟಕ–2025ರಲ್ಲಿ ಭಾಗಿಯಾಗುವಂತೆ ಫ್ರಾನ್ಸ್‌ನ ಉದ್ಯಮಿಗಳಿಗೆ ಸಚಿವ ಎಂ.ಬಿ.ಪಾಟೀಲ ಆಹ್ವಾನ ನೀಡಿದರು

‘ಕ್ರಿಕೆಟ್ ಸಂಬಂಧಿ ಉತ್ಪನ್ನಗಳ ವಿನ್ಯಾಸ ಮತ್ತು ಅಭಿವೃದ್ಧಿ ಪ್ರಯೋಗಾಲಯ ಆರಂಭಿಸುವ ಬಗ್ಗೆ ಡೆಕಥ್ಲಾನ್ ಚರ್ಚೆ ನಡೆಸಿದೆ. ವಿಮಾನ ತಯಾರಕಾ ಕಂಪನಿ ಏರ್‌ಬಸ್, ರಾಜ್ಯದಲ್ಲಿನ ತಯಾರಕರಿಂದ ಬಿಡಿಭಾಗಗಳ ಖರೀದಿಗೆ ಆಸಕ್ತಿ ತೋರಿಸಿದೆ’ ಎಂದರು.

ಫ್ರಾನ್ಸ್‌ನ ಬಹುರಾಷ್ಟ್ರೀಯ ಕಂಪನಿಗಳಾದ ಸಫ್ರಾನ್, ಯುರಾ ಟೆಕ್ನಾಲಜೀಸ್, ಕಮ್ಮೈಟ್ ಕೋಲ್ಬರ್ಟ್, ಎಟಿಆರ್ ಮತ್ತು ಆಲ್‌ಸ್ಟಂ ಕಂಪನಿಗಳ ಪ್ರತಿನಿಧಿಗಳು ಸಚಿವ ಎಂ.ಬಿ. ಪಾಟೀಲ ಜತೆಗಿನ ಮಾತುಕತೆಯಲ್ಲಿ ಭಾಗಿಯಾಗಿದ್ದರು.

ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಹೇಳಿಕೆ

ಕಾಲಮಿತಿಯೊಳಗೆ ಇ-ಖಾತಾ ವಿಲೇವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಇ-ಖಾತಾ ಅರ್ಜಿಗಳನ್ನು ಕಾಲಮಿತಿಯಲ್ಲಿ ವಿಲೇವಾರಿ ಮಾಡಲಾಗುತ್ತಿದೆ ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ಮುನೀಶ್ ಮೌದ್ಗಿಲ್

ಇ-ಖಾತಾ ಪಡೆಯಲು ನಾಗರಿಕರಿಗೆ ಅನುಕೂಲವಾಗಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ವಲಯವಾರು ಬಾಕಿ ಇರುವ ಅರ್ಜಿಗಳನ್ನು ಇನ್ನೆರಡು ದಿನಗಳಲ್ಲಿ ವಿಲೇವಾರಿ ಮಾಡಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈವರೆಗೆ, 46,962 ಇ-ಖಾತಾ ಅರ್ಜಿಗಳು ಸಂದಾಯವಾಗಿದ್ದು, ಅದರಲ್ಲಿ 39,784 ಅರ್ಜಿಗಳಿಗೆ ಅನುಮೋದನೆ ನೀಡಿ, ಅಂತಿಮ ಇ-ಖಾತಾ ನೀಡಲಾಗಿದೆ. ಶೇ 90ರಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ಎಂದರು.

ಪಾಲಿಕೆ ಎಂಟೂ ವಲಯಗಳಲ್ಲಿ ಹೆಚ್ಚುವರಿ ಸಹಾಯಕ ಕಂದಾಯ ಅಧಿಕಾರಿಗಳು (ಎಆರ್‌ಒ) ಹಾಗೂ ಹೆಚ್ಚುವರಿ ವಿಷಯ ನಿರ್ವಾಹಕರ ಲಾಗಿನ್‌ಗಳನ್ನು ಸೃಜಿಸಲಾಗಿದೆ. ಇದರ ಮೂಲಕ ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಿಕೊಂಡು ಜನರಿಗೆ ಅತಿ ಶೀಘ್ರದಲ್ಲಿ ಅಂತಿಮ ಇ-ಖಾತಾ ವಿತರಿಸಲಾಗುವುದೆಂದು ಹೇಳಿದರು.

ದೂರುಗಳಿಗೆ ಸ್ಪಂದನೆ: ಪಾಲಿಕೆಯ ಕಂದಾಯ ವಿಭಾಗದಿಂದ ಇ-ಖಾತಾ ಪಡೆಯುವ ವಿಷಯಕ್ಕೆ ಸಂಬಂಧಿಸಿದಂತೆ ಸಹಾಯವಾಣಿ 9480683695 ಆರಂಭಿಸಲಾಗಿದೆ. ಯಾವುದೇ ಗೊಂದಲಗಳಿದ್ದರೆ ಸಹಾಯವಾಣಿ ಸಂಖ್ಯೆ ಕರೆ ಮಾಡಿ, ಪರಿಹಾರ ಕಂಡುಕೊಳ್ಳಬಹುದು ಎಂದು ಮುನೀಶ್ ಮೌದ್ಗಿಲ್ ಹೇಳಿದರು.

46,962	ಇ-ಖಾತಾ ಪಡೆಯಲು ಸಲ್ಲಿಕೆಯಾಗಿರುವ ಅರ್ಜಿಗಳು
31,901	ಎಆರ್‌ಒಗಳು ಅನುಮೋದಿಸಿರುವ ಅಂತಿಮ ಇ-ಖಾತಾಗಳು
7,882	ಸ್ವಯಂಚಾಲಿತವಾಗಿ ಅನುಮೋದನೆಯಾಗಿರುವ ಅಂತಿಮ ಇ-ಖಾತಾಗಳು
4,489	ಆಸ್ತಿ ನೋಂದಣಿಗಾಗಿ ಇ-ಖಾತಾ ಪಡೆಯಲು ಸಲ್ಲಿಕೆಯಾದ ಅರ್ಜಿಗಳು
3,522	ಆಸ್ತಿ ನೋಂದಣಿಗೆ ಅನುಮೋದನೆಯಾದ ಇ-ಖಾತಾಗಳು
960	ಕೇಸ್ ವರ್ಕರ್ ಬಳಿ ಬಾಕಿ ಇರುವ ಅರ್ಜಿಗಳು
7	ತಿರಸ್ಕೃತವಾದ ಇ-ಖಾತಾ ಅರ್ಜಿಗಳು

ಇ–ಖಾತಾ: ಹಂತಹಂತ ಜಾರಿಗೆ ಕ್ರೆಡಾಯ್ ಸದಸ್ಯರ ಮನವಿ

ಬೆಂಗಳೂರು: ಇ-ಖಾತಾವನ್ನು ಆಸ್ತಿ ಕ್ರಯಪತ್ರ ಹಾಗೂ ಇತರೆ ನೋಂದಣಿಗಳಿಗೆ ಅಗತ್ಯವಾಗಿಸಿರುವ ಪ್ರಕ್ರಿಯೆಯನ್ನು ಹಂತಹಂತವಾಗಿ ಜಾರಿಗೆ ಮಾಡಬೇಕು ಎಂದು ಕ್ರೆಡಾಯ್–ಬೆಂಗಳೂರಿನ ಸದಸ್ಯರು ಮನವಿ ಮಾಡಿಕೊಂಡಿದ್ದಾರೆ.

ಇ-ಖಾತಾ ಪ್ರಕ್ರಿಯೆಯನ್ನು ಸರಳಗೊಳಿಸಲು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹಾಗೂ ಬಿಬಿಎಂಪಿಯ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಅವರಿಗೆ ಮನವಿ ಸಲ್ಲಿಸಲಾಗಿದೆ ಎಂದು ಕಾನ್ಫೆಡರೇಷನ್ ಆಫ್ ರಿಯಲ್ ಎಸ್ಟೇಟ್ ಡೆವಲಪರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ (ಕ್ರೆಡಾಯ್) ಬೆಂಗಳೂರಿನ ಅಧ್ಯಕ್ಷ ಅಮರ್ ಮೈಸೂರು ಅವರು ಪತ್ರಿಕಾಗೋಷ್ಠಿಯಲ್ಲಿ ಗುರುವಾರ ತಿಳಿಸಿದರು.

‘ಬೆಂಗಳೂರು ನಗರದಲ್ಲಿ ಎಲ್ಲಾ ಇ-ಖಾತಾಗಳನ್ನು ಅಪ್‌ಡೇಟ್ ಮತ್ತು ಅಪ್‌ಲೋಡ್ ಮಾಡುವ ಪ್ರಕ್ರಿಯೆ ಇ-ಆಸ್ತಿ ಪೋರ್ಟಲ್‌ನಲ್ಲಿ ನಡೆಯುತ್ತಿದೆ. ಇದಕ್ಕೆ ಹೆಚ್ಚುವರಿಯಾಗಿ ‘ಇಂಟರ್‌ಫೇಸ್’ ಪರಿಚಯಿಸಿ ಪ್ರಕ್ರಿಯೆ ಸರಳವಾಗಿಸಬೇಕು’ ಎಂದು ಸಲಹೆ ನೀಡಲಾಗಿದೆ ಎಂದರು.

‘ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ವಿಸ್ತರಿಸುವುದಕ್ಕಾಗಿ ಇ-ಖಾತಾ ಸರಿಯಾದ ಕ್ರಮವಾಗಿದೆ. ಆದರೆ, ಅದರ ದಿಢೀರ್ ಕಡ್ಡಾಯದಿಂದ ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಹಲವು ಸವಾಲು ಎದುರಾಗಿದೆ. ದಾಖಲೆ ಪತ್ರಗಳ ನೋಂದಣಿ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿರುವ ಜನರಿಗೆ ಸಂಕಷ್ಟ ಎದುರಾಗಿದೆ’ ಎಂದು ತಿಳಿಸಿದರು.

ಮುದ್ರಾಂಕ ಆಯುಕ್ತ ಮತ್ತು ಪ್ರಧಾನ ನೋಂದಣಿ ನಿರೀಕ್ಷಕ ದಯಾನಂದ ಅವರಿಗೆ ಪ್ರತ್ಯೇಕ ಮನವಿ ಸಲ್ಲಿಸಿದ್ದು, ‘ಹಕ್ಕುಪತ್ರ ಠೇವಣಿ ಒಪ್ಪಂದ ಮತ್ತು ಸಾಲ ಪತ್ರಗಳಿಗೆ ಮುದ್ರಾಂಕ ಶುಲ್ಕವನ್ನು ಈ ಹಿಂದೆ ಇದ್ದ ₹10 ಲಕ್ಷ ಮಿತಿಯನ್ನೇ ನಿಗದಿಪಡಿಸಲು ಕೋರಲಾಗಿದೆ’ ಎಂದು ಹೇಳಿದರು.

ತನಿಖೆ, ಕ್ರಮ ಎರಡೂ ಇಲ್ಲ: ಗೃಹ ಸಚಿವ ಜಿ.ಪರಮೇಶ್ವರ ಹೇಳಿಕೆ • ಚರ್ಚೆಗೆ ಅವಕಾಶ ನೀಡುವಂತೆ ಬಿಜೆಪಿ ಸದಸ್ಯರ ಪಟ್ಟು– ಸಭಾತ್ಯಾಗ

ಲಾಠಿ ಪ್ರಹಾರ: ಉಭಯ ಸದನಗಳಲ್ಲಿ ಕೋಲಾಹಲ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಹಿಂದುಳಿದ ವರ್ಗಗಳ ಪ್ರವರ್ಗ–2ಎ ಅಡಿಯಲ್ಲಿ ಮೀಸಲಾತಿ ಕಲ್ಪಿಸುವಂತೆ ಆಗ್ರಹಿಸಿ ಸುವರ್ಣ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ್ದ ಪಂಚಮಸಾಲಿ ಸಮುದಾಯದ ಜನರ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದ ಪ್ರಕರಣ ವಿಧಾನಮಂಡಲದ ಉಭಯ ಸದನಗಳಲ್ಲೂ ಗುರುವಾರ ಪ್ರತಿಧ್ವನಿಸಿತು. ಆಡಳಿತ ಮತ್ತು ವಿರೋಧ ಪಕ್ಷಗಳ ಮಧ್ಯೆ ತೀವ್ರ ವಾಕ್ಸಮರ, ಭಾರಿ ಕೋಲಾಹಲಕ್ಕೂ ಕಾರಣವಾಯಿತು.

‘ಲಾಠಿ ಪ್ರಹಾರ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ಸಾಧ್ಯವಿಲ್ಲ ಮತ್ತು ಯಾವ ಅಧಿಕಾರಿಯ ವಿರುದ್ಧವೂ ಕ್ರಮ ತೆಗೆದುಕೊಳ್ಳುವುದಿಲ್ಲ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಉತ್ತರ ನೀಡಿದ್ದನ್ನು ವಿರೋಧಿಸಿ ಬಿಜೆಪಿ ಸದಸ್ಯರು ವಿಧಾನಸಭೆಯಲ್ಲಿ ಸಭಾತ್ಯಾಗ ನಡೆಸಿದರು.

ವಿಧಾನಸಭೆಯಲ್ಲಿ ಬೆಳಿಗ್ಗೆ ಕಲಾಪ ಆರಂಭವಾಗುತ್ತಿದ್ದಂತೆಯೇ ವಿಷಯ ಪ್ರಸ್ತಾಪಿಸಲು ಬಿಜೆಪಿಯವರು ಯತ್ನಿಸಿದರು. ಆದರೆ, ಅಗಲಿದ ಮಾಜಿ ಶಾಸಕರಿಗೆ ಸಂತಾಪ ಸೂಚಿಸುವ ಕಾರಣವೊಡ್ಡಿ ಸಭಾಧ್ಯಕ್ಷ ಯು.ಟಿ. ಖಾದರ್ ಅವಕಾಶ ನಿರಾಕರಿಸಿದರು. ಸಂತಾಪದ ಬಳಿಕ ಚರ್ಚೆಗೆ ಅವಕಾಶ ನೀಡುವಂತೆ ಬಿಜೆಪಿ ಸದಸ್ಯರು ಪುನಃ ಪಟ್ಟು ಹಿಡಿದರು.

ಅಷ್ಟರಲ್ಲಿ ಸದನಕ್ಕೆ ಬಂದ ಗೃಹ ಸಚಿವ ಜಿ. ಪರಮೇಶ್ವರ ಅವರು ಘಟನೆ ಕುರಿತು ಹೇಳಿಕೆಯೊಂದನ್ನು ನೀಡಿ, ಲಾಠಿ ಪ್ರಹಾರ ನಡೆಸಿರುವ ತೀರ್ಮಾನವನ್ನು ಸಮರ್ಥಿಸಿಕೊಂಡರು. ಎಂಟರಿಂದ ಹತ್ತು ಸಾವಿರ ಮಂದಿ ಸುವರ್ಣ ವಿಧಾನಸೌಧಕ್ಕೆ ಮುತ್ತಿಗೆಹಾಕಲು ಬಂದಿದ್ದರಿಂದ ಪರಿಸ್ಥಿತಿ ನಿಯಂತ್ರಿಸಲು ಲಘು ಲಾಠಿಪ್ರಹಾರ ನಡೆಸಬೇಕಾಯಿತು ಎಂದರು.

ಗೃಹ ಸಚಿವರ ಉತ್ತರಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿ ಸದಸ್ಯರು, ಸರ್ಕಾರ ದುರುದ್ದೇಶದಿಂದ ಲಾಠಿ ಪ್ರಹಾರ ನಡೆಸಿದೆ ಎಂದು ದೂರಿದರು. ನಂತರ ಮಾತನಾಡಿದ ಕಾಂಗ್ರೆಸ್‌ನ ವಿಜಯಾನಂದ ಕಾಶಪ್ಪನವರ್, ಬಿಜೆಪಿ, ಆರ್‌ಎಸ್‌ಎಸ್ ವಿರುದ್ಧ ವಾಗ್ದಾಳಿ ನಡೆಸಿದರು. ಇದು ಗದ್ದಲಕ್ಕೆ ಕಾರಣವಾಯಿತು. ಇದೇ ಘಟನೆ ಕುರಿತು ಕಂದಾಯ ಸಚಿವ ಕೃಷ್ಣ ಬೈರೇಗೌಡ ಕೂಡ ಸದನದಲ್ಲಿ ಹೇಳಿಕೆ ನೀಡಿದರು. ಇದನ್ನು ಬಿಜೆಪಿ ಪ್ರಶ್ನಿಸಿತು.

ಬಿಜೆಪಿಯ ಆಕ್ಷೇಪಕ್ಕೆ ಸಚಿವರು ಪ್ರತಿಕ್ರಿಯಿಸಲಿಲ್ಲ. ಇದರಿಂದ ಸಿಟ್ಟಿಗೆದ್ದ ಬಿಜೆಪಿ ಸದಸ್ಯರು ಘೋಷಣೆ ಕೂಗಲಾರಂಭಿಸಿದರು. ಪರಿಸ್ಥಿತಿ ನಿಯಂತ್ರಣಕ್ಕೆ ಬಾರದ್ದರಿಂದ ಸಭಾಧ್ಯಕ್ಷರು ಕಲಾಪವನ್ನು ಮಧ್ಯಾಹ್ನ 3.30ಕ್ಕೆ ಮುಂದೂಡಿದರು.

ಭೋಜನ ವಿರಾಮದ ಬಳಿಕ ಸಂಧಾನ ಸಭೆ ನಡೆಸಿದ ಸಭಾಧ್ಯಕ್ಷರು, ಬಿಜೆಪಿ ಸದಸ್ಯರಿಗೆ ಮಾತನಾಡಲು ಅವಕಾಶ ಕಲ್ಪಿಸುವುದಾಗಿ ಹೇಳಿ ಮನವೊಲಿಸಿದರು. ವಿವಿಧ ಸದಸ್ಯರು ಮಾತನಾಡಿದ ಬಳಿಕ, ನ್ಯಾಯಾಂಗ ತನಿಖೆ ನಡೆಸುವ ಜತೆಗೆ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕೆಂದು ಬಿಜೆಪಿ ಸದಸ್ಯರು ಆಗ್ರಹಿಸಿದರು. ಅದನ್ನು ಸರ್ಕಾರ ಒಪ್ಪದೇ ಇದ್ದುದರಿಂದ ಬಿಜೆಪಿಯವರು ಸಭಾತ್ಯಾಗ ಮಾಡಿದರು.

ಪರಿಷತ್‌ನಲ್ಲಿ ಬೆಳಿಗ್ಗೆ ಕೋಲಾಹಲ ನಡೆದ ಕಾರಣಕ್ಕೆ ಕಲಾಪವನ್ನು ಮುಂದೂಡಲಾಗಿತ್ತು. ಮಧ್ಯಾಹ್ನದ ಬಳಿಕ ಕಲಾಪ ಆರಂಭವಾದಾಗ, ಚರ್ಚೆಗೆ ಅವಕಾಶ ನೀಡುವಂತೆ ಬಿಜೆಪಿ ಸದಸ್ಯರು ಆಗ್ರಹಿಸಿದರು. ಶುಕ್ರವಾರ ಚರ್ಚೆಗೆ ಅವಕಾಶ ಕೊಡುವುದಾಗಿ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು. ಕಲಾಪ ಸುಗಮವಾಗಿ ನಡೆಯಿತು.

ಪಂಚಮಸಾಲಿ ಹೋರಾಟಗಾರರ ಮೇಲೆ ಲಾಠಿ ಪ್ರಹಾರ ನಡೆಸಿದ್ದನ್ನು ವಿರೋಧಿಸಿ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಗುರುವಾರ ನಡೆದ ವಿಧಾನ ಪರಿಷತ್ ಅಧಿವೇಶನದಲ್ಲಿ ಬಿಜೆಪಿ ಸದಸ್ಯರು ಪ್ರತಿಭಟಿಸಿದರು

ನಿಮ್ಮ ಸರ್ಕಾರದಲ್ಲಿ ಮೀಸಲಾತಿ ಕೇಳಿದರೆ ರಕ್ತ ಬರುವಂತೆ ಹೊಡೆಯುತ್ತೀರಿ. ಜನರ ಶಾಪ ನಿಮ್ಮನ್ನು ತಟ್ಟದೇ ಬಿಡುವುದಿಲ್ಲ
ಬಸನಗೌಡ ಪಾಟೀಲ ಯತ್ನಾಳ, ಶಾಸಕ

ರಾಣಿ ಚನ್ನಮ್ಮನ ನಾಡಿನಲ್ಲಿ ಚನ್ನಮ್ಮನ ಜಾತಿ ಮಕ್ಕಳ ರಕ್ತ ಹರಿಸಿದ್ದೀರಿ. ಇದು ಮುಖ್ಯಮಂತ್ರಿಗೆ ಶೋಭೆ ತರುವುದಿಲ್ಲ
ಸಿ.ಸಿ.ಪಾಟೀಲ, ಶಾಸಕ

ಆರ್‌ಎಸ್‌ಎಸ್ ಅಸಂಸದೀಯ ಪದವೇ, ಹಾಗೆಂದು ಭಾವಿಸಿದ್ದರೆ, ಕಡತದಿಂದ ತೆಗೆಸಲು ಸಭಾಧ್ಯಕ್ಷರು ರೂಲಿಂಗ್ ನೀಡಬಹುದು
ಜಿ.ಪರಮೇಶ್ವರ, ಗೃಹ ಸಚಿವ

ನಮಗಿರುವ ಹಿಂದುಳಿದ ವರ್ಗ 2ಎ ಮೀಸಲಾತಿಯನ್ನು ಕೂಡಲಸಂಗಮ ಸ್ವಾಮೀಜಿಯು ಕಿತ್ತುಕೊಂಡು ಬಿಡಲಿ. ನಮ್ಮನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿ ಅಲ್ಲಿ ಮೀಸಲಾತಿ ಪ್ರಮಾಣ ಹೆಚ್ಚಿಸಲಿ
ಎ.ಎಚ್. ವಿಶ್ವನಾಥ್
ವಿಧಾನಪರಿಷತ್ ಸದಸ್ಯ, ಬಿಜೆಪಿ

‘2ಎಗೆ ಸೇರಲು ಬಿಡಲ್ಲ’

ಬೆಂಗಳೂರು: 2ಎಗೆ ಸೇರಲು ಕ್ರಾಂತಿಕಾರಿ ಹೋರಾಟ ಮಾಡುವುದಾಗಿ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದ್ದಾರೆ. ರಕ್ತಕ್ರಾಂತಿಯಾದರೂ ಪರವಾಗಿಲ್ಲ, ಪಂಚಮಸಾಲಿ ಸಮುದಾಯವನ್ನು 2ಎಗೆ ಸೇರಲು ಬಿಡುವುದಿಲ್ಲ ಹಿಂದುಳಿದ ಜಾತಿಗಳ ಒಕ್ಕೂಟದ ಸದಸ್ಯ ಬಿ.ಟಿ. ಜಗದೀಶ್ ತಿಳಿಸಿದರು.

ಬಲಿಷ್ಠ ಜಾತಿಗಳು ‘2ಎ’ಗೆ ಸೇರಿದರೆ ಇಲ್ಲಿರುವ ಬಡಸಮುದಾಯಗಳಿಗೆ ಅನ್ಯಾಯವಾಗಲಿದೆ ಎಂದು ತಿಳಿಸಿದರು.

ಪಂಚಮಸಾಲಿ ಹೋರಾಟದ ಹಿಂದೆ ರಾಜಕೀಯ ಪಕ್ಷಗಳ ಕೈವಾಡವಿದೆ ಎಂದು ಆದರ್ಶ ಯಲ್ಲಪ್ಪ ಆರೋಪಿಸಿದರು.

‘ರಕ್ತ ಬರುವಂತೆ ಹೊಡೆದರು’

‘ನಾವು ಮೀಸಲಾತಿ ಕೇಳಿದ್ದಕ್ಕೆ ಪೊಲೀಸರನ್ನು ಬಿಟ್ಟು ರಕ್ತ ಬರುವಂತೆ ಹೊಡೆದರು. ಸಣ್ಣಪುಟ್ಟ ಜಮೀನು ಹೊಂದಿರುವ ಮುಗ್ಧ ರೈತರ ಮೇಲೆ ನಿಮಗೆ ಸಿಟ್ಟು ಏಕೆ’ ಎಂದು ಪ್ರತಿಪಕ್ಷ ಉಪನಾಯಕ ಅರವಿಂದ ಬೆಲ್ಲದ ಪ್ರಶ್ನಿಸಿದರು.

‘ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದ ಜನರ ಮೇಲೆ ಎಡಿಜಿಪಿ ಲಾಠಿ ಪ್ರಹಾರ ಮಾಡಿ ಎಂದು ಆದೇಶ ನೀಡಿದರು. ಇದನ್ನು ಪ್ರಶ್ನೆ ಮಾಡಿದ ನಮ್ಮನ್ನು ಎಳೆದಾಡಿದರು. ಪ್ರತಿಭಟನಕಾರರನ್ನು ಭೇಟಿ ಮಾಡಲು ಮುಖ್ಯಮಂತ್ರಿ ಒಪ್ಪಲಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ನುಗ್ಗಿ ಬಂದವರಿಗೆ ಮುತ್ತಿಡಬೇಕಿತ್ತೆ?’

‘ಹತ್ತು ಸಾವಿರ ಮಂದಿ ಸುವರ್ಣ ವಿಧಾನಸೌಧಕ್ಕೆ ನುಗ್ಗಲು ಬಂದರೆ ಅವರನ್ನು ಮುತ್ತಿಡಬೇಕಿತ್ತೆ? ಯಾರು ಏನು ಮಾಡಿದರೂ ಬಿಡಬೇಕಾ? ಪೊಲೀಸರು ಲಾಠಿಯನ್ನು ಬೀಸಲೇಬೇಕು. ಅದನ್ನು ಬಿಟ್ಟು ಲಾಠಿಯಲ್ಲಿ ಮುಟ್ಟಲು ಆಗುತ್ತದೆಯೇ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಏರಿದ ಧ್ವನಿಯಲ್ಲಿ ಪ್ರಶ್ನಿಸಿದರು.ಲಾಠಿ ಜಾರ್ಜ್ ಕುರಿತು ಪ್ರತಿಪಕ್ಷದ ಆಕ್ಷೇಪಗಳಿಗೆ ಉಭಯ ಸದನಗಳಲ್ಲಿ ಪ್ರತ್ಯೇಕವಾಗಿ ಉತ್ತರ ನೀಡಿದ ಅವರು, ಪೊಲೀಸರ ಕ್ರಮವನ್ನು ಸಮರ್ಥಿಸಿಕೊಂಡರು.

‘ಕಾನೂನು ಮತ್ತು ಸುವ್ಯವಸ್ಥೆಯನ್ನು ಹದಗೆಡಿಸಲು ಯಾರಿಗೂ ಬಿಡುವುದಿಲ್ಲ. ಕಾನೂನಿನ ಆಡಳಿತಕ್ಕೆ ಯಾರೇ ಧಕ್ಕೆ ತರಲು ಯತ್ನಿಸಿದರೂ ಅದಕ್ಕೆ ಅವಕಾಶ ನೀಡುವುದಿಲ್ಲ. ಶಾಂತಿಯುತ ಪ್ರತಿಭಟನೆ ಮಾಡದೆ ಕಾನೂನು ಕೈಗೆತ್ತಿಕೊಂಡರೆ ಜವಾಬ್ದಾರಿಯುತ ಸರ್ಕಾರ ಸುಮ್ಮನೆ ಕುಳಿತುಕೊಳ್ಳಬೇಕೆ? ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸರು ಲಾಠಿ ಚಾರ್ಜ್ ಮಾಡಿದ್ದಾರೆ’ ಎಂದರು.

‘ಶಾಂತಿಯುತ ಪ್ರತಿಭಟನೆ ಸರ್ಕಾರ ಅವಕಾಶ ನೀಡಿತ್ತು. ಮುಖ್ಯಮಂತ್ರಿ ತಮ್ಮ ಪರವಾಗಿ ಮೂವರು ಸಚಿವರನ್ನು ಪ್ರತಿಭಟನಾ ಸ್ಥಳಕ್ಕೆ ಕಳುಹಿಸಿದರೂ ಹೋರಾಟಗಾರರು ಮುಖ್ಯಮಂತ್ರಿಯವರೇ ಸ್ಥಳಕ್ಕೆ ಬರಬೇಕೆಂದು ಪಟ್ಟು ಹಿಡಿದರು. ಎಲ್ಲ ಪ್ರತಿಭಟನೆಗಳ ಸ್ಥಳಕ್ಕೂ ಮುಖ್ಯಮಂತ್ರಿಗಳೇ ಹೋಗಲು ಆಗುತ್ತದೆಯೇ?’ ಎಂದರು.

‘ನಿಷೇಧವಿದ್ದರೂ ಟ್ರ್ಯಾಕ್ಟರ್‌ಗಳಲ್ಲಿ ಬಂದ 8 ಸಾವಿರದಿಂದ 10 ಸಾವಿರಷ್ಟಿದ್ದ ಪ್ರತಿಭಟನೆಕಾರರು ಬ್ಯಾರಿಕೇಡ್‌ಗಳ ಮೇಲೆ ಟ್ರ್ಯಾಕ್ಟರ್ ನುಗ್ಗಿಸಲು ಮುಂದಾದರು. ಅವರನ್ನು ತಡೆಯುವಾಗ 25 -30 ಜನ ಪೊಲೀಸರಿಗೆ ಗಾಯಗಳಾಗಿವೆ. ಆಗಲೂ ಪೊಲೀಸರು ಲಾಠಿ ಚಾರ್ಜ್ ಮಾಡಿರಲಿಲ್ಲ. ಆದರೆ, ಹೋರಾಟಗಾರರು ಬ್ಯಾರಿಕೇಡ್ ಮುರಿದು ಸುವರ್ಣ ವಿಧಾನಸೌಧದ ಒಳಗೆ ನುಗ್ಗಲು ಪ್ರಯತ್ನಿಸಿದಾಗ ಲಾಠಿ ಚಾರ್ಜ್ ಮಾಡಿದ್ದಾರೆ. ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸರು ಕ್ರಮ ಕೈಗೊಂಡರೆ ಅವರನ್ನೇ ವಜಾ ಮಾಡಿ ಅಂದರೆ ಹೇಗಾಗುತ್ತದೆ’ ಎಂದೂ ಪ್ರಶ್ನಿಸಿದರು.

ಸ್ಪೀಕರ್ ಕೊಠಡಿಗೆ ನುಗ್ಗಿ ಗದ್ದಲ

ಭೋಜನ ವಿರಾಮಕ್ಕೆ ಕಲಾಪ ಮುಂದೂಡುತ್ತಿದ್ದಂತೆಯೇ ಸಿಟ್ಟಿನಿಂದ ಸದನದಿಂದ ಹೊರಬಂದ ಬಿಜೆಪಿಯ ಹಲವು ಸದಸ್ಯರು ಸಭಾಧ್ಯಕ್ಷ ಯು.ಟಿ. ಖಾದರ್ ಕೊಠಡಿಯತ್ತ ಧಾವಿಸಿದರು. ವಿರೋಧ ಪಕ್ಷದ ನಾಯಕ ಆರ್. ಅಶೋಕ ಮತ್ತು ಸದಸ್ಯ ವಿ. ಸುನಿಲ್ ಕುಮಾರ್ ನೇತೃತ್ವದಲ್ಲಿ ಸ್ಪೀಕರ್ ಕೊಠಡಿಗೆ ನುಗ್ಗಿ, ಏರಿದ ಧ್ವನಿಯಲ್ಲಿ ಆಕ್ಷೇಪ ವ್ಯಕ್ತಪಡಿಸಿದರು.

‘ಯಾವ ನಿಯಮಗಳ ಆಧಾರದಲ್ಲಿ ಸದನದ ಕಲಾಪ ನಡೆಸುತ್ತಿದ್ದೀರಿ? ಇದೇನು ನಿಮ್ಮ ಮನೆ ಎಂದು ತಿಳಿದುಕೊಂಡಿದ್ದೀರಾ’ ಎಂದು ಸುನಿಲ್ ಕುಮಾರ್ ಅವರು ಏರಿದ ಧ್ವನಿಯಲ್ಲೇ ಸಭಾಧ್ಯಕ್ಷರನ್ನು ಪ್ರಶ್ನಿಸಿದರು. ಸ್ಪೀಕರ್ ಬೆಂಬಲಕ್ಕೆ ಬಂದ ಕಾಂಗ್ರೆಸ್‌ನ ಪಿ.ಎಂ. ನರೇಂದ್ರಸ್ವಾಮಿ ಅವರನ್ನು ತಳ್ಳಾಡಿದ ಬಿಜೆಪಿ ಸದಸ್ಯರು, ಆಕ್ರೋಶ ಹೊರಹಾಕಿದರು.

ಕೆಲಕಾಲ ಸ್ಪೀಕರ್ ಕೊಠಡಿಯಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ವಿಷಯ ತಿಳಿದು ಅಲ್ಲಿಗೆ ದೌಡಾಯಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಪರಿಸ್ಥಿತಿ ನಿಯಂತ್ರಿಸಿದರು. ಬಳಿಕ ಬಿಜೆಪಿ ಸದಸ್ಯರು ಸ್ಪೀಕರ್ ಕೊಠಡಿಯಿಂದ ಹೊರಹೋದರು. ಭೋಜನ ವಿರಾಮದ ಬಳಿಕ ನಡೆದ ಸಂಧಾನ ಸಭೆ ನಂತರ ಪರಿಸ್ಥಿತಿ ತಿಳಿಯಾಯಿತು.

ಪಂಚಮಸಾಲಿ ಬೇಡಿಕೆಯೇ ಸಂವಿಧಾನಕ್ಕೆ ವಿರುದ್ಧ– ಸಿಎಂ

‘ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ನೀಡುವ ಸಂಬಂಧ ನಾನೇ ಸಭೆ ಕರೆದಿದ್ದೆ. ಮೀಸಲಾತಿಗಾಗಿ ಹೋರಾಟ ಮಾಡುವುದು ತಪ್ಪು ಎಂದು ನಾನು ಹೇಳಿರಲಿಲ್ಲ. ಅವರ ಬೇಡಿಕೆ ಸಂವಿಧಾನಕ್ಕೆ ವಿರುದ್ಧವಾಗಿದೆ ಎಂದು ಮನವರಿಕೆ ಮಾಡಲು ಪ್ರಯತ್ನಿಸಿದ್ದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಪರಿಷತ್ತಿನ ಶೂನ್ಯವೇಳೆಯಲ್ಲಿ ಬಿಜೆಪಿಯ ಹಣಮಂತ ನಿರಾಣಿ ವಿಷಯ ಪ್ರಸ್ತಾಪಿಸಿ, ಮೀಸಲಾತಿಗೆ ಒತ್ತಾಯಿಸಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ವೇಳೆ ಸರ್ಕಾರ ಲಾಠಿ ಪ್ರಹಾರ ನಡೆಸಿ ಬಸವ ಜಯಮೃತ್ಯುಂಜಯ ಸ್ವಾಮೀಜಿಯವರನ್ನು ಬಂಧಿಸಿದೆ. ಇದು ತುಘಲಕ್ ಸರ್ಕಾರವೇ ಅಥವಾ ಪ್ರಜಾಪ್ರಭುತ್ವ ಸರ್ಕಾರವೇ’ ಎಂದು ಪ್ರಶ್ನಿಸಿದರು. ಅದಕ್ಕೆ ಸುದೀರ್ಘ ಉತ್ತರ ನೀಡಿದ ಸಿದ್ದರಾಮಯ್ಯ ಅವರು, ‘ಮುರುಗೇಶ್ ನಿರಾಣಿಯನ್ನು ಮಂತ್ರಿ ಮಾಡಲಿಲ್ಲ ಎಂದು ಪಂಚಮಸಾಲಿಗಳು 2ಎ ಮೀಸಲಾತಿ ಹೋರಾಟ ಆರಂಭಿಸಿದರು’ ಎಂದರು.

ಆಗ ಹಣಮಂತ ನಿರಾಣಿ, ‘ಈ ಹೋರಾಟಕ್ಕೆ 30 ವರ್ಷಗಳ ಇತಿಹಾಸವಿದೆ. ಮೀಸಲಾತಿ ಹೋರಾಟ ಆರಂಭವಾದಾಗ ನಿರಾಣಿ ಕುಟುಂಬ ರಾಜಕೀಯದಲ್ಲೇ ಇರಲಿಲ್ಲ’ ಎಂದರು.

‘ಮೀಸಲಾತಿ ಪ್ರವರ್ಗಗಳು ಹುಟ್ಟಿಕೊಂಡಾಗ ಪಂಚಮಸಾಲಿ ಸಮುದಾಯದವರು ಮೀಸಲಾತಿ ಹೋರಾಟ ಯಾಕೆ ಆರಂಭಿಸಿರಲಿಲ್ಲ? ಹಿಂದಿನ ಬಿಜೆಪಿ ಸರ್ಕಾರ ಅಸಾಂವಿಧಾನಿಕವಾಗಿ ಮೀಸಲಾತಿ ಹಂಚಿಕೆ ಮಾಡಿದೆ. ಮುಸ್ಲಿಮರ ಶೇ 4 ಮೀಸಲಾತಿಯನ್ನು ತೆಗೆದು ಪ್ರವರ್ಗ 3ಸಿ, 3 ಡಿ ಸೃಷ್ಟಿಸಿ ತಲಾ ಶೇ 2 ಹಂಚಿಕೆ ಮಾಡಿದೆ’ ಎಂದು ಸಿದ್ದರಾಮಯ್ಯ ಆಕ್ಷೇಪ ವ್ಯಕ್ತಪಡಿಸಿದರು.

‘ಮುಸ್ಲಿಂ ಮೀಸಲಾತಿ ಕಿತ್ತು ಹಾಕಿರುವುದಕ್ಕೆ ಗುಲಾಂ ರೂಸಲ್ ಎಂಬುವವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ. ಬೊಮ್ಮಾಯಿ ಸರ್ಕಾರದ ಪರ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ‘ಮುಸ್ಲಿಮರಿಗೆ ಕೊಟ್ಟ ಮೀಸಲಾತಿ ಬದಲಾಯಿಸುವುದಿಲ್ಲ’ ಎಂದು ಪ್ರಮಾಣಪತ್ರ ಸಲ್ಲಿಸಿದ್ದಾರೆ’ ಎಂದು ಮುಖ್ಯಮಂತ್ರಿ ಹೇಳಿದಾಗ ಗದ್ದಲ ಉಂಟಾಯಿತು.

‘ಪಂಚಮಸಾಲಿಗಳನ್ನು ವಂಚಿಸಿದ್ದು ಬಿಜೆಪಿ’

‘ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಪಂಚಮಸಾಲಿ ಸಮುದಾಯಕ್ಕೆ 2–ಡಿ ಪ್ರವರ್ಗದ ಅಡಿಯಲ್ಲಿ ಮೀಸಲಾತಿ ಕಲ್ಪಿಸುವುದಾಗಿ ಹೇಳಿ, ಹೊಸದಾಗಿ 2–ಸಿ ಮತ್ತು 2–ಡಿ ಪ್ರವರ್ಗಗಳನ್ನು ರಚಿಸಿತ್ತು. ಪಂಚಮಸಾಲಿ ಸಮುದಾಯಕ್ಕೆ ಪ್ರವರ್ಗ 2–ಎ ಅಡಿಯಲ್ಲಿ ಮೀಸಲಾತಿ ಕೊಡಲಾಗದು ಎಂದು ಅದೇ ಸರ್ಕಾರ ಹೈಕೋರ್ಟ್‌ಗೆ ಹೇಳಿತ್ತು. 2–ಸಿ ಮತ್ತು 2–ಡಿ ಪ್ರವರ್ಗಗಳ ರಚನೆಯನ್ನೂ ಅನುಷ್ಠಾನಕ್ಕೆ ತರುವುದಿಲ್ಲ ಎಂದೂ ಬಿಜೆಪಿ ನೇತೃತ್ವದ ಸರ್ಕಾರವೇ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿತ್ತು. ಪಂಚಮಸಾಲಿ ಸಮುದಾಯದ ಜನರನ್ನು ವಂಚಿಸಿದ್ದು ಬಿಜೆಪಿ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ವಿಧಾನಸಭೆಯಲ್ಲಿ ದಾಖಲೆಗಳನ್ನು ಪ್ರದರ್ಶಿಸಿದರು.

ಬಿಜೆಪಿ, ಆರ್‌ಎಸ್‌ಎಸ್‌ನವರೇ ಕಲ್ಲು ತೂರಿದ್ದು: ವಿಜಯಾನಂದ

‘ಡಿಸೆಂಬರ್ 10ರಂದು ನಡೆದ ಪಂಚಮಸಾಲಿ ಮೀಸಲಾತಿ ಹೋರಾಟ ಪಕ್ಷಾತೀತವಾದುದ್ದಲ್ಲ. ಬಿಜೆಪಿಯ ಪ್ರಚೋದನೆಯಿಂದಾಗಿಯೇ ಗಲಾಟೆ ನಡೆದಿದೆ. ಬಿಜೆಪಿ, ಆರ್‌ಎಸ್‌ಎಸ್ ಮಂದಿ ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿದ್ದರು’ ಎಂದು ಕಾಂಗ್ರೆಸ್‌ನ ವಿಜಯಾನಂದ ಕಾಶಪ್ಪನವರ್ ಆರೋಪಿಸಿದರು.

‘ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಇದ್ದಾಗ ಆರು ಲಕ್ಷ ಜನ ಸೇರಿ ಪ್ರತಿಭಟನೆ ನಡೆಸಿದ್ದೆವು. ಎರಡು ತಿಂಗಳೊಳಗೆ ಪ್ರವರ್ಗ 2–ಎ ಅಡಿ ಮೀಸಲಾತಿ ನೀಡುವುದಾಗಿ ತಮ್ಮ ತಾಯಿಯ ಮೇಲೆ ಬೊಮ್ಮಾಯಿ ಆಣೆ ಮಾಡಿದ್ದರು. ಆದರೆ, ಮೀಸಲಾತಿ ಕೊಡಲಿಲ್ಲ. ಪ್ರತ್ಯೇಕ 2–ಸಿ, 2–ಡಿ ಪ್ರವರ್ಗ ರೂಪಿಸಿದರು. ಪ್ರವರ್ಗ 2–ಎ ಅಡಿಯಲ್ಲೂ ಮೀಸಲಾತಿ ಕೊಡಲಿಲ್ಲ. ಹೊಸ ಪ್ರವರ್ಗಗಳ ಅಡಿ ಮೀಸಲಾತಿಯನ್ನೂ ಅನುಷ್ಠಾನಕ್ಕೆ ತಂದಿಲ್ಲ. ಬಿಜೆಪಿಯವರು ಪಂಚಮಸಾಲಿ ಜನರ ಪರವೋ? ಅಥವಾ ವಿರುದ್ಧವೋ ಎಂಬುದನ್ನು ಸ್ಪಷ್ಟಪಡಿಸಬೇಕು’ ಎಂದು ಆಗ್ರಹಿಸಿದರು.

ಲಾಠಿಚಾರ್ಜ್ ಖಂಡಿಸಿ ಹೆದ್ದಾರಿ ಬಂದ್ ಮಾಡಿದ ಪಂಚಮಸಾಲಿ ಹೋರಾಟಗಾರರು

‘ಸಿದ್ದರಾಮಯ್ಯ ಹೃದಯಹೀನ ಮುಖ್ಯಮಂತ್ರಿ’

ಪ್ರಜಾವಾಣಿ ವಾರ್ತೆ

ಹಿರೇಬಾಗೇವಾಡಿ (ಬೆಳಗಾವಿ ಜಿಲ್ಲೆ): ‘ಲಿಂಗಾಯತರ ವಿರುದ್ಧ ಸಿದ್ದರಾಮಯ್ಯ ಹೃದಯಹೀನರಾಗಿದ್ದಾರೆ. ನೀವು ಅಧಿಕಾರಕ್ಕೆ ಬರಲು ನಾವು ಆಶೀರ್ವಾದ ಮಾಡಿದ್ದೆವು. ಅದಕ್ಕೆ ಪ್ರತಿಯಾಗಿ ನಮ್ಮನ್ನೇ ಹೊಡೆದಿದ್ದೀರಿ. ಮುಂದಿನ ಚುನಾವಣೆಯಲ್ಲಿ ಇದರ ಪರಿಣಾಮ ಎದುರಿಸುತ್ತೀರಿ’ ಎಂದು ಕೂಡಲ ಸಂಗಮ ಲಿಂಗಾಯತ ಪಂಚಮಸಾಲಿ ಪೀಠಾಧಿಪತಿ ಬಸವಜಯ ಮೃತ್ಯುಂಜಯ ಸ್ವಾಮೀಜಿ ಎಚ್ಚರಿಕೆ ನೀಡಿದರು.

ಪಂಚಮಸಾಲಿ ಮೀಸಲಾತಿ ಹೋರಾಟಗಾರರ ಮೇಲೆ ನಡೆದ ಲಾಠಿಚಾರ್ಜ್ ಖಂಡಿಸಿ, ರಾಷ್ಟ್ರೀಯ ಹೆದ್ದಾರಿ ಮೇಲೆ ಗುರುವಾರ ಧರಣಿ ನಡೆಸಿದ ವೇಳೆ ಅವರು ಮಾತನಾಡಿದರು.

‘ಲಾಠಿಚಾರ್ಜ್ ನಡೆಸಿದಾಗ ನಮ್ಮ ಸಮಾಜದ ಒಬ್ಬ ಶಾಸಕರು ಮುಖ್ಯಮಂತ್ರಿ ಬಳಿ ಹೋಗಿ, ಲಾಠಿ ಚಾರ್ಜ್ ನಿಲ್ಲಿಸಿ ಎಂದು ಪರಿಪರಿಯಾಗಿ ಬೇಡಿದ್ದಾರೆ. ‘ಏಯ್ ಹೊಡೀಲಿ ಬಿಡ್ರಿ ಅವರನ್ನು. ಅವರು ನಮ್ಮನ್ನೇ ಹೆದರಿಸುತ್ತಾರೆಯೇ? ನಮ್ಮ ಬಳಿಯೂ ಲಾಠಿ ಇದೆ’ ಎಂದು ಸಿದ್ದರಾಮಯ್ಯ ತಿರುಗುತ್ತರ ನೀಡಿದ್ದಾರೆ. ಇದನ್ನು ಶಾಸಕರೇ ನನಗೆ ಹೇಳಿದ್ದಾರೆ’ ಎಂದರು.

‘ಪಂಚಮಸಾಲಿ ಸಮಾಜದ ಶಾಸಕರೊಬ್ಬರು ಕುಮ್ಮಕ್ಕು ನೀಡಿ ಲಾಠಿಚಾರ್ಜ್ ಮಾಡಿಸಿದ್ದಾರೆ. ಇದಕ್ಕೆ ಸುವರ್ಣ ವಿಧಾನಸೌಧದ ಒಳಗಿನ ಸಿಟಿಟಿವಿ ಕ್ಯಾಮೆರಾಗಳೇ ಸಾಕ್ಷಿ’ ಎಂದು ಸ್ವಾಮೀಜಿ ಆರೋಪಿಸಿದರು.

ಹಿರೇಬಾಗೇವಾಡಿ ಟೋಲ್‌ಗೇಟ್ ಬಳಿ ಅರ್ಧ ಗಂಟೆಗೂ ಹೆಚ್ಚು ಸಮಯ ರಾಷ್ಟ್ರೀಯ ಹೆದ್ದಾರಿ ಬಂದ್ ಆದ ಸಂದರ್ಭದಲ್ಲಿ ವಾಹನ ದಟ್ಟಣೆ ಆದ ವಿಷಯವನ್ನು ಡಿಸಿಪಿ ರೋಹನ್ ಜಗದೀಶ್ ಅವರು ಸ್ವಾಮೀಜಿಗೆ ತಿಳಿಸಿದರು. ಅಂಗಾಂಗ ಸಾಗಿಸುವ ಆಂಬುಲೆನ್ಸ್ ಸೇರಿ ನಾಲ್ಕು ಆಂಬುಲೆನ್ಸ್ ಮಾರ್ಗಮಧ್ಯೆ ಸಿಲುಕಿದ ವಿಷಯ ಗೊತ್ತಾದ ತಕ್ಷಣವೇ ಸ್ವಾಮೀಜಿ ಧರಣಿ ಕೈಬಿಟ್ಟರು. ಆಂಬುಲೆನ್ಸ್ ಸಂಚಾರಕ್ಕೆ ಅವಕಾಶ ಕಲ್ಪಿಸಿದರು.

ಲಾಠಿಚಾರ್ಜ್ ಖಂಡಿಸಿ ಬೆಳಗಾವಿ ತಾಲ್ಲೂಕಿನ ಹಿರೇಬಾಗೇವಾಡಿ ಬಳಿ ಗುರುವಾರ ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಿದ ವೇಳೆಯೇ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೆದ್ದಾರಿ ಮೇಲೆಯೇ ಪ್ರಾರ್ಥನೆ ಮಾಡಿದರು –ಪ್ರಜಾವಾಣಿ ಚಿತ್ರ

ಪಂಚಮಸಾಲಿ ಮೀಸಲಾತಿ ವಿಷಯದಲ್ಲಿ ಬಿಜೆಪಿಯಿಂದ ರಾಜಕೀಯ ನಡೆದಿದೆ. ಮುಖ್ಯಮಂತ್ರಿಯವರ ಜೊತೆ ಮಾತುಕತೆಗೆ ಹಲವು ನಾಯಕರಿಗೆ ನಾನೇ ಕರೆದಿದ್ದೆ. ಯಾರು ಬರಲಿಲ್ಲ
ಲಕ್ಷ್ಮಿ ಹೆಬ್ಬಾಳಕರ, ಸಚಿವೆ

‘₹ 14 ಸಾವಿರ ಕೋಟಿ ವಿತ್ತೀಯ ಕೊರತೆ’

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ: ‘ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ₹ 14 ಸಾವಿರ ಕೋಟಿ ವಿತ್ತೀಯ ಕೊರತೆ ಎದುರಾಗಿದೆ. ಮುಂಬರುವ ದಿನಗಳಲ್ಲಿ ಅನಗತ್ಯ ಖರ್ಚು ವೆಚ್ಚಗಳಿಗೆ ಕಡಿವಾಣ ಹಾಕುವ ಮೂಲಕ ಈ ಕೊರತೆಯನ್ನು ಸರಿದೂಗಿಸಲಾಗುವುದು’ ಎಂದು ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಪರಿಷತ್‌ನಲ್ಲಿ ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ, ‘ನಾನು ಈ ಹಿಂದೆ 5 ವರ್ಷ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಒಂದೇ ಒಂದು ಬಾರಿಯೂ ವಿತ್ತೀಯ ಕೊರತೆ ಎದುರಾಗಿರಲಿಲ್ಲ’ ಎಂದರು.

‘ಯಾವುದೇ ಸರ್ಕಾರ ತನ್ನ ಖರ್ಚುಗಳನ್ನು ಮಾಡಬೇಕಾದರೆ ಸಾಲ ಮಾಡಬೇಕಾಗುತ್ತದೆ. ಇತಿಮಿತಿಗಳನ್ನು ಪರಿಶೀಲಿಸಿ ಸಾಲ ಮಾಡಲಾಗುತ್ತದೆ. ಒಟ್ಟು ಸಾಲ ಶೇ 25 ಮೀರಬಾರದು ಎಂಬ ಮಾನದಂಡವಿದೆ. ನಮ್ಮ ಸರ್ಕಾರದ ಸಾಲ ಮಿತಿಯ ಒಳಗಡೆ ಇದೆ. ರಾಜ್ಯ ಸರ್ಕಾರ ₹1.04 ಲಕ್ಷ ಕೋಟಿ ಸಾಲ ಮಾಡಿದೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ, ನಮ್ಮ ಸಾಲ ಕಡಿಮೆ ಇದೆ. ಬಜೆಟ್‌ನಲ್ಲಿ ಗ್ಯಾರಂಟಿ ಯೋಜನೆಗಳಿಗೆ ₹ 52,000 ಕೋಟಿ ನೀಡಲಾಗಿದೆ. ಉಳಿದ ಹಣವನ್ನು ಅಭಿವೃದ್ಧಿಗೆ ನೀಡಲಾಗುತ್ತಿದೆ’ ಎಂದರು.

ಮಧ್ಯಪ್ರವೇಶಿಸಿದ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ‘ಗ್ಯಾರಂಟಿ ಯೋಜನೆಗಳಿಗೆ ನಮ್ಮ ತಕರಾರು ಇಲ್ಲ. ಆದರೆ, ಎಸ್‌ಸಿಎಸ್‌ಪಿ ಟಿಎಸ್‌ಪಿ ಅಡಿ ಮೀಸಲಿಟ್ಟಿದ್ದ ₹ 11 ಸಾವಿರ ಕೋಟಿಯನ್ನು ಗ್ಯಾರಂಟಿ ಯೋಜನೆಗೆ ಬಳಸಿಕೊಂಡಿದ್ದೀರಿ. ಅಲ್ಲದೆ, ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿವೆ. ‘ನಾನು ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿಗೆ ಬಂದಿದ್ದೇನೆ ಎಂದು ನಿಮ್ಮ ಪಕ್ಷದ ಶಾಸಕರೇ ಹೇಳಿದ್ದಾರೆ’ ಎಂದು ತಿರುಗೇಟು ನೀಡಿದರು. ಈ ಹಂತದಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಮಾತಿನ ಚಕಮಕಿ ನಡೆಯಿತು.

ಆಗ ಆಕ್ರೋಶ ವ್ಯಕ್ತಪಡಿಸಿದ ಮುಖ್ಯಮಂತ್ರಿ, ‘ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಈ ಕಾಯ್ದೆ ಏಕೆ ಜಾರಿ ಮಾಡಿಲ್ಲ. ಕೇಂದ್ರ ಸರ್ಕಾರ ಏಕೆ ಈ ಕಾಯ್ದೆ ಮಾಡಿಲ್ಲ’ ಎಂದು ಮರು ಪ್ರಶ್ನಿಸಿದರು.

ಅಭಿವೃದ್ಧಿಗಾಗಿ ₹1.14 ಲಕ್ಷ ಕೋಟಿ ವೆಚ್ಚ

ಸಿದ್ದರಾಮಯ್ಯ

‘ಗ್ಯಾರಂಟಿ ಯೋಜನೆಗಳಿಂದ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯ ಕುಂಠಿತವಾಗಿಲ್ಲ. 2023-24 ರಲ್ಲಿ ಅಭಿವೃದ್ಧಿ ವೆಚ್ಚಗಳಿಗಾಗಿ ₹ 1.14 ಲಕ್ಷ ಕೋಟಿ ವೆಚ್ಚ ಮಾಡಲಾಗಿದೆ’ ಎಂದು ಸಿದ್ದರಾಮಯ್ಯ ಹೇಳಿದರು.

‘ರಾಜ್ಯ ಸರ್ಕಾರವು 2023-24 ರಲ್ಲಿ ₹ 90,280 ಕೋಟಿ ಸಾಲ ಪಡೆದಿದ್ದು, ರಾಜ್ಯದ ವಿತ್ತೀಯ ಕೊರತೆ ಶೇ 2.6ರಷ್ಟಿದೆ. ರಾಜ್ಯ ಸರ್ಕಾರ ಪಡೆದ ಒಟ್ಟು ಸಾಲ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಕಾಯ್ದೆಯ ಮಾನದಂಡ ಮತ್ತು ಕೇಂದ್ರ ಸರ್ಕಾರ ನಿಗದಿಪಡಿಸಿರುವ ಸಾಲಮಿತಿಗೆ ಒಳಪಟ್ಟಿದೆ. ರಾಜ್ಯ ಸರ್ಕಾರವು ರಾಜಸ್ವ ಹಾಗು ಬಂಡವಾಳ ಸ್ವೀಕೃತಿಗಳಿಂದ ಮತ್ತು ಕೇಂದ್ರ ಸರ್ಕಾರ ನಿಗದಿಪಡಿಸುವ ಮಿತಿಯೊಳಗೆ ಸಾಲವನ್ನು ಪಡೆಯುವ ಮೂಲಕ ಆಯವ್ಯಯದಲ್ಲಿ ಅಂದಾಜಿಸಿರುವ ವೆಚ್ಚವನ್ನು ಭರಿಸುತ್ತದೆ. ಈ ಸ್ವೀಕೃತಿಗಳನ್ನು ಮೀರಿ ಈವರೆಗೂ ಯಾವುದೇ ವೆಚ್ಚದ ಹೊರೆ ರಾಜ್ಯ ಸರ್ಕಾರಕ್ಕೆ ಉಂಟಾಗಿಲ್ಲ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದ ವಿತ್ತೀಯ ಕೊರತೆ ಪ್ರಮಾಣ ತುಂಬಾ ಕಡಿಮೆ. ಹೀಗಾಗಿ ನಾವು ಕೇಂದ್ರ ಸರ್ಕಾರದಿಂದ ಹೆಚ್ಚಿನ ಪ್ರಮಾಣದಲ್ಲಿ ಸಾಲ ಪಡೆಯಲಿಲ್ಲ’ ಎಂದು ಸಮರ್ಥನೆ ನೀಡಿದರು.

ಮೀಸಲಾತಿ ಹೋರಾಟಗಾರರ ಮನವೊಲಿಸಲು ವಿಫಲ

ಸಚಿವರ ಮೇಲೆ ಸಿ.ಎಂ ಗರಂ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಹಿಂದುಳಿದ ವರ್ಗಗಳ ಪ್ರವರ್ಗ 2–ಎ ಅಡಿ ಮೀಸಲಾತಿಗೆ ಆಗ್ರಹಿಸಿ ಬೀದಿಗಿಳಿದ ಪಂಚಮಸಾಲಿ ಹೋರಾಟಗಾರರನ್ನು ಮನವೊಲಿಸಲು ವಿಫಲರಾದ ತಮ್ಮ ಸಂಪುಟದ ಸದಸ್ಯರೊಬ್ಬರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರವಾಗಿ ತರಾಟೆಗೆ ತೆಗೆದುಕೊಂಡರು ಎಂದು ಗೊತ್ತಾಗಿದೆ.

‘ಐದು ಸಾವಿರ ಟ್ರ್ಯಾಕ್ಟರ್‌ಗಳ ಮೂಲಕ ಸುವರ್ಣ ವಿಧಾನಸೌಧಕ್ಕೆ ಮುತ್ತಿಗೆ ಹಾಕುವುದಾಗಿ ಹಲವು ದಿನಗಳ ಮೊದಲೇ ಕೂಡಲ ಸಂಗಮದ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದ್ದರು. ನೀವು ಹಲವು ಬಾರಿ ಹೋಗಿ ಮೀಸಲಾತಿ ಹೋರಾಟಕ್ಕೆ ಬೆಂಬಲ ತಿಳಿಸಿ ಬಂದಿದ್ದೀರಿ. ಆದರೆ, ಅವರ ಮನವೊಲಿಸಿ ಪ್ರತಿಭಟನೆಯಿಂದ ಹಿಂದೆಸರಿಯುವಂತೆ ಮಾಡಿಲ್ಲ’ ಎಂದು ಸಚಿವರ ನಡವಳಿಕೆಗೆ ಮುಖ್ಯಮಂತ್ರಿ ಬೇಸರ ವ್ಯಕ್ತಪಡಿಸಿದರು ಎನ್ನಲಾಗಿದೆ.

‘ಸುವರ್ಣ ವಿಧಾನಸೌಧ ಬಳಿ ಪ್ರತಿಭಟನೆ ನಡೆಸುತ್ತಿದ್ದ ಸಂದರ್ಭದಲ್ಲಿಯೂ ಸರ್ಕಾರದ ಪರ ಡಾ. ಎಚ್‌.ಸಿ. ಮಹದೇವಪ್ಪ, ಡಾ. ಎಂ.ಸಿ. ಸುಧಾಕರ್, ಕೆ. ವೆಂಕಟೇಶ್ ಅವರನ್ನು ಕಳುಹಿಸಲಾಗಿತ್ತು. ಹೋರಾಟ ನಿರತರ ಪೈಕಿ ಹತ್ತು ಮಂದಿಯನ್ನು ಮಾತುಕತೆಗೆ ಕರೆದುಕೊಂಡು ಬರುವಂತೆಯೂ ನಿಮಗೆ ತಿಳಿಸಿದ್ದೆ. ಆದರೆ, ಸುವರ್ಣಸೌಧಕ್ಕೆ ಮುತ್ತಿಗೆ ಹಾಕಿ ಹೋರಾಟ ಹಿಂಸಾತ್ಮಕ ಸ್ವರೂಪಕ್ಕೆ ತಿರುಗುವವರೆಗೂ ನೀವು ಅವರಿಗೆ ಮಾಹಿತಿ ನೀಡಿಲ್ಲ. ನೀವು ಹೋರಾಟದ ಭಾಗವಾಗಿದ್ದರೂ ಪ್ರತಿಭಟನಕಾರರ ಮನವೊಲಿಸಲು ನಿಮ್ಮಿಂದ ಸಾಧ್ಯ ಆಗಿಲ್ಲ. ಸಚಿವರು ಸರ್ಕಾರದ ಭಾಗ ಎಂಬುದನ್ನು ಮರೆಯಬಾರದು’ ಎಂದು ಮುಖ್ಯಮಂತ್ರಿ ಖಾರವಾಗಿ ಎಚ್ಚರಿಕೆ ನೀಡಿದ್ದಾರೆ ಎಂದೂ ಗೊತ್ತಾಗಿದೆ.

ವಿಧಾನಸಭೆಯಲ್ಲಿ 11 ಮಸೂದೆ ಮಂಡನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ(ಸುವರ್ಣಸೌಧ): ರಾಜ್ಯದಲ್ಲಿ ವಿಫಲವಾದ ಅಥವಾ ನಿಷ್ಕ್ರಿಯ ಕೊಳವೆ ಬಾವಿಗಳಲ್ಲಿ ಮಕ್ಕಳು ಬಿದ್ದು ಅವಘಡ ಸಂಭವಿಸಿದರೆ ಅಧಿಕಾರಿಗಳನ್ನು ಹೊಣೆಗಾರರನ್ನಾಗಿಸಿ ಶಿಕ್ಷೆ ವಿಧಿಸುವ ಕರ್ನಾಟಕ ಅಂತರ್ಜಲ ತಿದ್ದುಪಡಿ ಮಸೂದೆ 2024 ಸೇರಿ ಒಟ್ಟು 11 ಮಸೂದೆಗಳನ್ನು ವಿಧಾನ ಸಭೆಯಲ್ಲಿ ಗುರುವಾರ ಮಂಡಿಸಲಾಯಿತು.

ರಾಜ್ಯಪಾಲರ ಅಧಿಕಾರ ಹಿಂದಕ್ಕೆ ಪಡೆದು ಮುಖ್ಯಮಂತ್ರಿಯವರಿಗೆ ಕುಲಾಧಿಪತಿ ಅಧಿಕಾರ ನೀಡುವ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ ತಿದ್ದುಪಡಿ ಮಸೂದೆಯೂ ಮಂಡನೆ ಆಯಿತು.

ಇತರ ಮಸೂದೆಗಳು: ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ಮಸೂದೆ, ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ(ತಿದ್ದುಪಡಿ) ಮಸೂದೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ)ಮಸೂದೆ, ಚಾಣಕ್ಯ ವಿಶ್ವವಿದ್ಯಾಲಯ(ತಿದ್ದುಪಡಿ) ಮಸೂದೆ, ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ಮಸೂದೆ, ಕರ್ನಾಟಕ ಮೋಟಾರು ವಾಹನಗಳ ತೆರಿಗೆ(ಎರಡನೇ ತಿದ್ದುಪಡಿ) ಮಸೂದೆ, ಕರ್ನಾಟಕ ಪ್ರವಾಸೋದ್ಯಮ ರೋಪ್‌ವೇಗಳ ಮಸೂದೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಎರಡನೇ ತಿದ್ದುಪಡಿ) ಮಸೂದೆ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ(ಎರಡನೇ ತಿದ್ದುಪಡಿ) ಮಸೂದೆ.

ಮಾಜಿ ಸಿ.ಎಂ ಕೃಷ್ಣ ಅವರೊಂದಿಗಿನ ಒಡನಾಟ ಮೆಲುಕು ಹಾಕಿದ ಡಿಸಿಎಂ ಡಿ.ಕೆ. ಶಿವಕುಮಾರ್

‘ಮಂತ್ರಿಗಿರಿಗಾಗಿ ಕೃಷ್ಣರ ಮನೆ ಬಾಗಿಲು ಒದ್ದಿದ್ದೆ’

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ‘1999ರಲ್ಲಿ ಕಾಂಗ್ರೆಸ್ ಸರ್ಕಾರ ತರಲು ಶ್ರಮಿಸಿದ್ದ ನನ್ನ ಹೆಸರನ್ನೇ ಸಚಿವರ ಪಟ್ಟಿಯಿಂದ ಕೈಬಿಡಲಾಗಿತ್ತು. ಮಂತ್ರಿಗಿರಿ ಪಡೆಯುವುದಕ್ಕಾಗಿ ಎಸ್.ಎಂ. ಕೃಷ್ಣ ಅವರ ಮನೆಯ ಬಾಗಿಲಿಗೆ ಒದ್ದಿದ್ದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿಧಾನಸಭೆಯಲ್ಲಿ ಗುರುವಾರ ಹೇಳಿದರು.

ಮಾಜಿ ಶಾಸಕರಾದ ಆರ್. ನಾರಾಯಣ ಮತ್ತು ಜಯಣ್ಣ ಅವರ ನಿಧನಕ್ಕೆಸಂತಾಪಸೂಚಿಸುವನಿರ್ಣಯಬೆಂಬಲಿಸುವಾಗಲೇ ಕೃಷ್ಣ ಅವರ ಕುರಿತು ಮಾತನಾಡಿದ ಶಿವಕುಮಾರ್, ‘ಉಪ ಮುಖ್ಯಮಂತ್ರಿಯಾದ ನಂತರದ ಚುನಾವಣೆಯಲ್ಲಿ ಕೃಷ್ಣ ಅವರು ಸೋತಿದ್ದರು. ಆ ಬಳಿಕ ಅವರನ್ನು ರಾಜ್ಯಸಭಾ ಸದಸ್ಯರನ್ನಾಗಿ ಮಾಡುವುದರಲ್ಲಿ ನಮ್ಮ ಪಾತ್ರವಿತ್ತು. ಕೃಷ್ಣ ಅವರನ್ನು ಕೆಪಿಸಿಸಿ ಅಧ್ಯಕ್ಷರನ್ನಾಗಿ ಮಾಡುವುದಕ್ಕೂ ಶ್ರಮಿಸಿದ್ದೆವು’ ಎಂದರು.

‘1999ರಲ್ಲಿ ಪಾಂಚಜನ್ಯ ಯಾತ್ರೆಯ ಫಲವಾಗಿ ಕಾಂಗ್ರೆಸ್ ಅಧಿಕಾರಕ್ಕೆ ಬಂತು. ಕೃಷ್ಣ ಅವರು ಮುಖ್ಯಮಂತ್ರಿಯಾಗಿ ಆಯ್ಕೆಯಾದರು. ಸಂಪುಟದ ಸದಸ್ಯರ ಪಟ್ಟಿಯನ್ನು ನಾನೇ ಸಿದ್ಧಪಡಿಸಿ ಕಳುಹಿಸಿದ್ದೆ. ಆದರೆ, ರಾಜಭವನಕ್ಕೆ ರವಾನೆಯಾದ ಪಟ್ಟಿಯಲ್ಲಿ ನನ್ನ ಹೆಸರು ಇರಲಿಲ್ಲ. ತಕ್ಷಣ ಜ್ಯೋತಿಷಿ ದ್ವಾರಕಾನಾಥ್ ಅವರನ್ನು ಸಂಪರ್ಕಿಸಿ, ಭವಿಷ್ಯ ಕೇಳಿದ್ದೆ. ನೀನು ಒದ್ದು ಮಂತ್ರಿಗಿರಿ ಕಿತ್ತುಕೊಳ್ಳಬೇಕಾಗುತ್ತದೆ ಎಂಬ ಸಲಹೆ ನೀಡಿದ್ದರು’ ಎಂದು ನೆನಪಿಸಿಕೊಂಡರು.

‘ಆಗ ಟಿ.ಬಿ. ಜಯಚಂದ್ರ ಕೂಡ ಸಂಪುಟ ಸದಸ್ಯರ ಪಟ್ಟಿಯಲ್ಲಿರಲಿಲ್ಲ. ಜಯಚಂದ್ರ ಅವರೊಡನೆ ಕೃಷ್ಣ ಅವರ ಮನೆಗೆ ಹೋದೆ. ಕೃಷ್ಣ ಮಲಗಿದ್ದರು. ಸಿಟ್ಟಿನಿಂದ ಅವರ ಮನೆಯ ಬಾಗಿಲಿಗೆ ಒದ್ದಿದ್ದೆ. ಕೊಠಡಿಯಿಂದ ಹೊರಬಂದ ಕೃಷ್ಣ ಕೋಪಕ್ಕೆ ಕಾರಣವೇನು ಎಂದು ಕೇಳಿದ್ದರು. ನನ್ನನ್ನು ಬಿಟ್ಟು ಹೇಗೆ ಸಂಪುಟ ರಚಿಸುತ್ತೀರಿ? ನಾನಿಲ್ಲದೆ ಸರ್ಕಾರ ರಚನೆಯಾಗಕೂಡದು ಎಂದು ಪಟ್ಟುಹಿಡಿದಿದ್ದೆ. ಮರುದಿನ ಬೆಳಿಗ್ಗೆ ನನಗೆ ಪ್ರಮಾಣವಚನಕ್ಕೆ ಕರೆಬಂತು’ ಎಂದು ಹೇಳಿದರು.

‘ಎಸ್. ಬಂಗಾರಪ್ಪ ಅವರು ನನ್ನ ರಾಜಕೀಯ ಗುರು. ಅವರು ಅಧಿಕಾರ ಕಳೆದುಕೊಳ್ಳಬೇಕಾದ ಸಂದರ್ಭದಲ್ಲಿ ಅವರ ಸೂಚನೆಯಂತೆಯೇ ಕೃಷ್ಣ ಅವರ ಜೊತೆ ಹೋಗಿದ್ದೆ. ಕೃಷ್ಣ ಅವರು ಕೊನೆಯ ದಿನದವರೆಗೂ ನನ್ನನ್ನು ಮಗನಂತೆ ನೋಡಿಕೊಂಡರು’ ಎಂದರು.

ಅಬಕಾರಿ ಇಲಾಖೆಯಲ್ಲಿ ವರಮಾನ ಸೋರಿಕೆ ಕುರಿತು ವಿಧಾನ ಪರಿಷತ್‌ನಲ್ಲಿ ಮಾತನಾಡಿದ್ದ ಆಗಿನ ವಿರೋಧ ಪಕ್ಷದ ನಾಯಕ ಎಂ.ಸಿ. ನಾಣಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಕೃಷ್ಣ ಅವರನ್ನು ಇಕ್ಕಟ್ಟಿಗೆ ಸಿಲುಕಿಸಿದ್ದರು. ಪ್ರಮುಖ ಮದ್ಯ ಉತ್ಪಾದಕರೆಲ್ಲರೂ ಕೃಷ್ಣ ಅವರ ಗೆಳೆಯರೇ ಆಗಿದ್ದರು. ಆದರೆ, ಯಾರ ಪ್ರಭಾವಕ್ಕೂ ಮಣಿಯದೆ ರಾಜ್ಯ ಪಾನೀಯ ನಿಗಮ ಸ್ಥಾಪಿಸಿದ್ದರು. ಅದರಿಂದ ಈಗ ರಾಜ್ಯ ಸರ್ಕಾರಕ್ಕೆ ವಾರ್ಷಿಕ ₹ 35,000 ಕೋಟಿ ವರಮಾನ ಬರುತ್ತದೆ ಎಂದು ಹೇಳಿದರು.

ವಿಧಾನಸಭೆ ಅಧಿವೇಶನದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿದರು –ಪ್ರಜಾವಾಣಿ ಚಿತ್ರ

ಈಗಲೂ ಒದ್ದು ಸಿಎಂ ಕುರ್ಚಿ ಕಿತ್ತುಕೊಳ್ತೀರಾ: ಆರ್.ಅಶೋಕ

‘ನಿಮ್ಮ ಜ್ಯೋತಿಷಿ ನಮಗೂ ಪರಿಚಯ ಇದ್ದಾರೆ. ಜನವರಿ ಒಳಗಾಗಿ ಶಿವಕುಮಾರ್ ಮುಖ್ಯಮಂತ್ರಿ ಆಗದಿದ್ದರೆ ಮತ್ತೆ ಅಸಾಧ್ಯ ಎಂದು ಹೇಳಿದ್ದಾರೆ. ಈಗಲೂ ಹಾಗೆಯೇ ಮಾಡುತ್ತೀರಾ? ಮುಖ್ಯಮಂತ್ರಿ ಪದವಿಯನ್ನು ಯಾವಾಗ ಒದ್ದು ಕಿತ್ತುಕೊಳ್ಳುತ್ತೀರಿ’ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಕೇಳಿದರು.

ಕೃಷ್ಣ ಅವರ ಮನೆಯ ಬಾಗಿಲಿಗೆ ಒದ್ದ ಪ್ರಕರಣವನ್ನು ಶಿವಕುಮಾರ್, ಪ್ರಸ್ತಾಪಿಸುತ್ತಿದ್ದಂತೆಯೇ ಮಧ್ಯ ಪ್ರವೇಶಿಸಿದ ಆರ್. ಅಶೋಕ ಅವರು ಹೀಗೆ ಪ್ರಶ್ನಿಸಿದರು.

‘ಜ್ಯೋತಿಷಿ ನನಗೆ ಹೇಳಿರುವುದನ್ನು ಇಲ್ಲಿ ಹೇಳಿದರೆ ಬಿಜೆಪಿ, ಜೆಡಿಎಸ್‌ನ 25–30 ಶಾಸಕರು ಈ ಕಡೆ ಬರುತ್ತಾರೆ’ ಎಂದು ಶಿವಕುಮಾರ್ ಹೇಳಿದರು.

‘ಹಾಗಿದ್ದರೆ ನೀವು ಈ ಕಡೆ (ಬಿಜೆಪಿಗೆ) ಬರುವಂತಿದೆ’ ಎಂದು ಅಶೋಕ ಕಾಲೆಳೆದರು.

ವಿಧಾನಸಭೆ ಅಧಿವೇಶನದಲ್ಲಿ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮಾತನಾಡಿದರು

27 ಮಂದಿ ಬಂಧನ: ₹100 ಕೋಟಿ ಇನ್ನೂ ಪತ್ತೆಯಾಗಿಲ್ಲ– ಸಚಿವ ಪರಮೇಶ್ವರ ಮಾಹಿತಿ

‘ಡಿಜಿಟಲ್ ಅರೆಸ್ಟ್’: ₹9 ಕೋಟಿ ವಶ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ‘ಈ ವರ್ಷ ರಾಜ್ಯದಲ್ಲಿ ದಾಖಲಾಗಿರುವ 641 ಡಿಜಿಟಲ್ ಅರೆಸ್ಟ್ ಪ್ರಕರಣಗಳಲ್ಲಿ ಸಾರ್ವಜನಿಕರು ₹109.01 ಕೋಟಿ ಕಳೆದುಕೊಂಡಿದ್ದು, ಅದರಲ್ಲಿ ₹9.45 ಕೋಟಿ ವಶಪಡಿಸಿಕೊಳ್ಳಲಾಗಿದೆ. ₹100 ಕೋಟಿ ಕೋಟಿ ಪತ್ತೆ ಆಗಿಲ್ಲ’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಕೆ. ಪ್ರತಾಪಸಿಂಹ ನಾಯಕ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಡಿಜಿಟಲ್ ಅರೆಸ್ಟ್ ಪ್ರಕರಣಗಳಿಗೆ ಸಂಬಂಧಿಸಿದಂತೆ 27 ಮಂದಿಯನ್ನು ಬಂಧಿಸಿ ಹಣ ವಶಪಡಿಸಿಕೊಳ್ಳಲಾಗಿದೆ. ಸಿಬಿಐ, ಇಡಿ, ಎನ್‌ಸಿಬಿ ಅಧಿಕಾರಿಗಳ ಸೋಗಿನಲ್ಲಿ ಹೆದರಿಸಿ ವಂಚಿಸು ತ್ತಿದ್ದಾರೆ. ಕಳೆದ ವರ್ಷ ದೇಶದಲ್ಲಿ 42 ಸಾವಿರ ಪ್ರಕರಣಗಳು ದಾಖಲಾಗಿದ್ದು, ರಾಜ್ಯದಲ್ಲೇ 11 ಸಾವಿರ ಪ್ರಕರಣಗಳು ವರದಿಯಾಗಿವೆ. ಈ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ’ ಎಂದರು.

‘ಪಿಡಿಒ ಪರೀಕ್ಷೆ; ಅಕ್ರಮ ನಡೆದಿಲ್ಲ’

ಸುವರ್ಣ ವಿಧಾನಸೌಧ (ಬೆಳಗಾವಿ): ‘ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಹುದ್ದೆಗಳ ನೇಮಕಾತಿಗೆ ಕೆಪಿಎಸ್‌ಸಿ ನ. 17ರಂದು ನಡೆಸಿದ ಪರೀಕ್ಷೆಯಲ್ಲಿ ಯಾವುದೇ ಅಕ್ರಮ ನಡೆದಿಲ್ಲ. ಪ್ರಶ್ನೆ ಪತ್ರಿಕೆಯೂ ಸೋರಿಕೆಯೂ ಆಗಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಈ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಶಶೀಲ್ ನಮೋಶಿ, ‘ಹೈದರಾಬಾದ್ ಕರ್ನಾಟಕ ವೃಂದದ 97 ಪಿಡಿಒ ಹುದ್ದೆಗಳ ನೇಮಕಾತಿಗೆ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಸರ್ಕಾರಿ ಪದವಿ ಮಹಾವಿದ್ಯಾಲಯದ ಕೇಂದ್ರದಲ್ಲಿ ನಡೆದ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಪ್ರಶ್ನಿಸಿದ 12 ಅಭ್ಯರ್ಥಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ’ ಎಂದು ಆರೋಪಿಸಿದರು.

ಈ ಆರೋಪವನ್ನು ನಿರಾಕರಿಸಿದ ಮುಖ್ಯಮಂತ್ರಿ, ‘35 ಕೊಠಡಿಗಳಲ್ಲಿ ನಡೆದ ಪರೀಕ್ಷೆಗೆ 840 ಅಭ್ಯರ್ಥಿಗಳು ಹಾಜರಾಗಿದ್ದರು. ಈ ಪೈಕಿ, 12 ವಿದ್ಯಾರ್ಥಿಗಳು ಮಾತ್ರ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿದೆಯೆಂದು ತಪ್ಪಾಗಿ ಭಾವಿಸಿ ಅನಗತ್ಯ ಗೊಂದಲ ಸೃಷ್ಟಿಸಿದ್ದಾರೆ. ಹೀಗಾಗಿ, ಸಿಂಧನೂರು ನಗರ ಪೊಲೀಸ್ ಠಾಣೆಯಲ್ಲಿ ಈ ಅಭ್ಯರ್ಥಿಗಳು ಹಾಗೂ ಪರೀಕ್ಷಾ ಕೇಂದ್ರದ ಮೇಲ್ವಿಚಾರಕರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಈ ಘಟನೆಯ ಸಮಗ್ರ ತನಿಖೆಗೆ ಆಯೋಗದ ಮೂವರು ಸದಸ್ಯರ ಉಪ ಸಮಿತಿ ರಚಿಸಲಾಗಿದೆ. ಈ ಸಮಿತಿ ನೀಡುವ ವರದಿ ಆಧರಿಸಿ ಕ್ರಮ ಕೈಗೊಳ್ಳಲಾಗುವುದು’ ಎಂದು ಭರವಸೆ ನೀಡಿದರು.

ಅತ್ಯಾಚಾರ, ಪೋಕ್ಸೊ ಪ್ರಕರಣ: ನ್ಯಾಯಾಂಗದ ಸಹಕಾರ ಅಗತ್ಯ

ಸುವರ್ಣ ವಿಧಾನಸೌಧ (ಬೆಳಗಾವಿ): ‘ಮಹಿಳೆಯರ ಮೇಲಿನ ಅತ್ಯಾಚಾರ, ಲೈಂಗಿಕ ದೌರ್ಜನ್ಯ ಹಾಗೂ ಪೋಕ್ಸೊ ಪ್ರಕರಣಗಳ ತ್ವರಿತ ವಿಚಾರಣೆ ಮತ್ತು ತೀರ್ಪಿಗೆ ನ್ಯಾಯಾಂಗದ ಸಹಕಾರ ಅಗತ್ಯವಿದೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಅಭಿಪ್ರಾಯಪಟ್ಟರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಎಸ್. ರವಿ ಪ್ರಶ್ನೆಗೆ ಉತ್ತರಿಸಿದ ಅವರು, ‘ಬಿ.ಎಸ್. ಯಡಿಯೂರಪ್ಪ ವಿರುದ್ಧದ ಪೋಕ್ಸೊ ಪ್ರಕರಣದ ವಿಚಾರಣೆಯು ಐದು ಬಾರಿ ಮುಂದೂಡಿಕೆಯಾಗಿದೆ. ನ್ಯಾಯಾಲಯಗಳು ತ್ವರಿತವಾಗಿ ವಿಚಾರಣೆ ಪೂರ್ಣಗೊಳಿಸಿ ತೀರ್ಪು ನೀಡಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕಿದೆ’ ಎಂದರು.

‘2022ರಲ್ಲಿ 507 ಅತ್ಯಾಚಾರ, 5,835 ಲೈಂಗಿಕ ದೌರ್ಜನ್ಯ, 2023ರಲ್ಲಿ 563, 6,462 ಹಾಗೂ 2024ರಲ್ಲಿ 540 ಅತ್ಯಾಚಾರ, 5,870 ಲೈಂಗಿಕ ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದಂತೆ 2022ರಲ್ಲಿ 110, 2023ರಲ್ಲಿ 3,718 ಮತ್ತು 2024ರಲ್ಲಿ 3,419 ಪ್ರಕರಣಗಳು ದಾಖಲಾಗಿದ್ದು, ನ್ಯಾಯದಾನ ವಿಳಂಬವಾಗುತ್ತಿದೆ’ ಎಂದರು.

ಅದಕ್ಕೆ ಎಸ್. ರವಿ, ‘ಪೋಕ್ಸೊ, ಅತ್ಯಾಚಾರ ಪ್ರಕರಣಗಳಲ್ಲಿ ರಾಜಕೀಯ ಪ್ರಭಾವಿಗಳಿಗೆ ಜಾಮೀನು ಸಿಗುತ್ತಿದೆ. ಇಂತಹ ಪ್ರಕರಣಗಳಿಂದ ಇಡೀ ರಾಜ್ಯ ತಲೆತಗ್ಗಿಸುವಂತಾಗಿದೆ. ಪೊಲೀಸರು ನಿಷ್ಪಕ್ಷಪಾತ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದರು.

ಯಡಿಯೂರಪ್ಪ ಹೆಸರು ಪ್ರಸ್ತಾಪಕ್ಕೆ ಆಕ್ಷೇಪ ವ್ಯಕ್ತಪಡಿಸಿದ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ‘ನ್ಯಾಯಾಲಯಗಳು ತೀರ್ಪು ನೀಡಿರುವುದು ತಡ ಆಗಿರಬಹುದು. ಅದರಲ್ಲಿ ರಾಜಕೀಯ ಹಸ್ತಕ್ಷೇಪದ ಪ್ರಶ್ನೆ ಉದ್ಭವಿಸುವುದಿಲ್ಲ’ ಎಂದರು. ಬಿಜೆಪಿಯ ಇತರ ಸದಸ್ಯರೂ ಅವರಿಗೆ ದನಿಗೂಡಿಸಿದರು.

ಜಿಎಸ್‌ಟಿ ವಂಚನೆ: 3.72 ಲಕ್ಷ ಕಂಪನಿಗಳ ನೋಂದಣಿ ರದ್ದು

ಸುವರ್ಣ ವಿಧಾನಸೌಧ (ಬೆಳಗಾವಿ): ‘ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ನಕಲಿ ಇನ್‌ವಾಯ್ಸ್ ಸೃಷ್ಟಿಸಿ ಕೋಟ್ಯಂತರ ರೂಪಾಯಿ ಜಿಎಸ್‌ಟಿ ವಂಚಿಸುತ್ತಿದ್ದ 3.72 ಲಕ್ಷ ಕಂಪನಿಗಳ ನೋಂದಣಿಯನ್ನು ಕೇಂದ್ರ ಸರ್ಕಾರ ರದ್ದುಗೊಳಿಸಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಎಂ. ನಾಗರಾಜ್ ಅವರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ, ‘ಜಿಎಸ್‌ಟಿ ವಂಚನೆಗಾಗಿಯೇ ಯಾವುದೇ ಸರಕು ಪೂರೈಸದೆ ನಕಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ಪಡೆಯಲು ಪ್ರಯತ್ನಿಸಿ 2,437 ಕಂಪನಿಗಳು ಸಿಕ್ಕಿಬಿದ್ದಿವೆ. ಈ ಕಂಪನಿಗಳು ಕೋಟ್ಯಂತರ ರೂಪಾಯಿ ತೆರಿಗೆ ವಂಚಿಸಿವೆ’ ಎಂದರು.

ಮೆರಿಟ್ ಹೊರತಾಗಿ ಶೇ 25ರಷ್ಟು ಮೀಸಲಾತಿ ಕುರಿತು ಚರ್ಚೆ

ಸುವರ್ಣ ವಿಧಾನಸೌಧ (ಬೆಳಗಾವಿ): ‘ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ವಿಶ್ವವಿದ್ಯಾಲಯದಲ್ಲಿ (ಎನ್‌ಎಲ್‌ಎಸ್‌ಐಯು) ಪ್ರವೇಶ ಪರೀಕ್ಷೆಯ ಮೆರಿಟ್ ಹೊರತಾಗಿ ರಾಜ್ಯದ ವಿದ್ಯಾರ್ಥಿಗಳಿಗೆ ಪ್ರವೇಶಾತಿಯಲ್ಲಿ ಶೇ 25ರಷ್ಟು ಮೀಸಲಾತಿ ಕಲ್ಪಿಸುವ ಸಂಬಂಧ ಕುಲಪತಿ ಜೊತೆ ಚರ್ಚಿಸಲಾಗುವುದು‘ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್‌ನ ಎಂ. ಎಲ್.ಅನಿಲ್‌ಕುಮಾರ್, ‘ಮೆರಿಟ್ ವಿದ್ಯಾರ್ಥಿಗಳನ್ನು ಹೊರತುಪಡಿಸಿ, ಪ್ರತ್ಯೇಕವಾಗಿ ಪ್ರವೇಶ ಪ್ರಕ್ರಿಯೆಯಲ್ಲಿ ಶೇ 25ರಷ್ಟು ಮೀಸಲಾತಿ ನೀಡಬೇಕು. ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗ ಳಿಂದ ಹೆಚ್ಚಿನ ಶುಲ್ಕ ಸಂಗ್ರಹಿಸಲಾಗುತ್ತಿದೆ’ ಎಂದು ದೂರಿದರು.

ಸಾಹಿತಿ ದೇವನೂರ ಮಹಾದೇವ ಅವರಿಗೆ ‘ವೈಕಂ’ ಪ್ರಶಸ್ತಿಯನ್ನು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಗುರುವಾರ ಪ್ರದಾನ ಮಾಡಿದರು. ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಇದ್ದರು —ಪಿಟಿಐ ಚಿತ್ರ

ದೇವನೂರರಿಗೆ ‘ವೈಕಂ’ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ವೈಕಂ (ಕೇರಳ): ತಮಿಳುನಾಡು ಸರ್ಕಾರ ನೀಡುವ 2024ನೇ ಸಾಲಿನ ಚೊಚ್ಚಲ ‘ವೈಕಂ’ ಪ್ರಶಸ್ತಿಯನ್ನು ಸಾಹಿತಿ ದೇವನೂರ ಮಹಾದೇವ ಅವರಿಗೆ ಕೇರಳದ ವೈಕಂನಲ್ಲಿ ಗುರುವಾರ ಪ್ರದಾನ ಮಾಡಲಾಯಿತು.

ಪೆರಿಯಾರ್ ನೇತೃತ್ವದ ವೈಕಂ ಹೋರಾಟದ ಶತಮಾನೋತ್ಸವ ಸಮಾರೋಪ ಸಮಾರಂಭ ಹಾಗೂ ಪೆರಿಯಾರ್ ಸ್ಮಾರಕ ಉದ್ಘಾಟನೆ ಕಾರ್ಯಕ್ರಮದಲ್ಲಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮತ್ತು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ಕಾರ್ಯಕ್ರಮಕ್ಕೂ ಮುನ್ನ ಮುಖ್ಯಮಂತ್ರಿಗಳಿಬ್ಬರೂ ಪೆರಿಯಾರ್ ಅವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು. ನಂತರ ಪೆರಿಯಾರ್ ಅವರ ಜೀವನ, ಚಳವಳಿ-ಹೋರಾಟದ ಚಿತ್ರಗಳಿರುವ ಚಿತ್ರ ಸಂಗ್ರಹಾಲಯ ಹಾಗೂ ಗ್ರಂಥಾಲಯವನ್ನು ಉದ್ಘಾಟಿಸಿದರು.

ಪಿಣರಾಯಿ ವಿಜಯನ್ ಅವರು ಮಾತನಾಡಿ, ‘ಇಂದಿನ ಜನ ಸಮುದಾಯಕ್ಕೆ ಅರಿವು, ವಿದ್ಯಾಭ್ಯಾಸ, ಲೋಕಜ್ಞಾನ, ಸ್ವಾಭಿಮಾನ ಅತ್ಯಗತ್ಯ ಎಂಬುದನ್ನು ಪೆರಿಯಾರ್ ಅವರು ಅಂದೇ ತಿಳಿಸಿದ್ದರು. ಪೆರಿಯಾರ್ ಅವರ ಪತ್ನಿ ನಾಗಮ್ಮ ಅವರ ಸಮುದಾಯ ಸೇವೆಯೂ ಸ್ಮರಣೀಯ’ ಎಂದರು.

ಸ್ಟಾಲಿನ್ ಅವರು, ವೈಕಂ ಸ್ಥಳ ಹಾಗೂ ಇಲ್ಲಿನ ಸತ್ಯಾಗ್ರಹದ ಮಹತ್ವ ತಿಳಿಸಿದರು. ‘ತಳಸಮುದಾಯದ ಧ್ವನಿಯಾಗಿ ನಿಂತ ದೇವನೂರ ಮಹಾದೇವ ಅವರಿಗೆ ‘ವೈಕಂ ಸತ್ಯಾಗ್ರಹ’ದ ಶತಮಾನೋತ್ಸವ ಸ್ಮರಣಾರ್ಥ ಮೊದಲ ಪ್ರಶಸ್ತಿ ನೀಡುತ್ತಿರುವುದು ಸಂತಸ ತಂದಿದೆ’ ಎಂದು ಹೇಳಿದರು.

ಇಬ್ಬರೂ ಮುಖ್ಯಮಂತ್ರಿಗಳು ಸಾಮಾಜಿಕ ನ್ಯಾಯದ ಪರವಾಗಿ ಮತ್ತು ಬ್ರಾಹ್ಮಣಶಾಹಿಯ ವಿರುದ್ಧವಾಗಿ ಮಾತನಾಡಿದರು.

ದೇವನೂರ ಮಹಾದೇವ ಅವರು ಸ್ಟಾಲಿನ್ ಅವರಿಗೆ ತಮಿಳು ಮತ್ತು ಕನ್ನಡದ ಪುಸ್ತಕಗಳನ್ನು ಹಾಗೂ ಪಿಣರಾಯಿ ವಿಜಯನ್ ಅವರಿಗೆ ಮಲಯಾಳ, ಕನ್ನಡ ಪುಸ್ತಕಗಳನ್ನು ನೀಡಿದರು. ದ್ರಾವಿಡ ಕಳಗಂನ ಅಧ್ಯಕ್ಷ ಕೆ.ವೀರಾಸಾಮಿಯವರಿಗೆ ‘ಆರ್‌ಎಸ್‌ಎಸ್ ಆಳ-ಅಗಲ’ ಪುಸ್ತಕಗಳನ್ನು ನೀಡಿದರು.

ದೆಹಲಿ: ಮಹಿಳಾ ಸಮ್ಮಾನ್ ಯೋಜನೆ ಜಾರಿ

ನವದೆಹಲಿ (ಪಿಟಿಐ): ‘ದೆಹಲಿಯ ಮಹಿಳೆಯರಿಗೆ ಪ್ರತಿ ತಿಂಗಳು ₹1 ಸಾವಿರ ನೆರವು ನೀಡುವ ‘ಮುಖ್ಯಮಂತ್ರಿ ಮಹಿಳಾ ಸಮ್ಮಾನ್ ಯೋಜನೆ’ ಜಾರಿಗೊಳಿಸಲಾಗುವುದು’ ಎಂದು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಗುರುವಾರ ಘೋಷಿಸಿದರು.

‘ಮುಂದಿನ ವರ್ಷ ನಡೆಯುವ ಚುನಾವಣೆಯಲ್ಲಿ ಪಕ್ಷ ಮತ್ತೆ ಗೆದ್ದರೆ, ಈ ಮೊತ್ತವನ್ನು ₹2,100ಕ್ಕೆ ಏರಿಕೆ ಮಾಡಲಾಗುವುದು’ ಎಂದರು.

‘ಸದ್ಯದಲ್ಲೇ ರಾಜ್ಯ ವಿಧಾನಸಭೆಗೆ ಚುನಾವಣೆ ಘೋಷಣೆಯಾಗುವ ನಿರೀಕ್ಷೆಯಿದ್ದು, ಚುನಾವಣೆಯ ಬಳಿಕವೇ ಫಲಾನುಭವಿಗಳ ಖಾತೆಗೆ ಹಣ ಜಮೆಯಾಗಲಿದೆ’ ಎಂದು ಅವರು ಸ್ಪಷ್ಟಪಡಿಸಿದರು.

2025ರ ಫೆಬ್ರವರಿಯಲ್ಲಿ ದೆಹಲಿ ವಿಧಾನ ಸಭೆಗೆ ಚುನಾವಣೆ ನಡೆಯಲಿದ್ದು, ಎಎಪಿ ಸೇರಿದಂತೆ ಎಲ್ಲ ರಾಜಕೀಯ ಪಕ್ಷಗಳು ತಯಾರಿಯಲ್ಲಿ ತೊಡಗಿವೆ.

‘ದೆಹಲಿ ಮುಖ್ಯಮಂತ್ರಿ ಅತಿಶಿ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರಕ್ಕೆ ಒಪ್ಪಿಗೆ ಸೂಚಿಸಲಾಗಿದ್ದು, ಶುಕ್ರವಾರದಿಂದಲೇ ಮಹಿಳೆಯರು ನೋಂದಣಿ ಮಾಡಿಕೊಳ್ಳಬಹುದು’ ಎಂದು ತಿಳಿಸಿದರು.

ಈ ಯೋಜನೆಯನ್ನು 2024–25ರ ಬಜೆಟ್‌ನಲ್ಲೇ ಘೋಷಿಸಲಾಗಿದ್ದು, ₹2 ಸಾವಿರ ಕೋಟಿ ಅನುದಾನವನ್ನು ನಿಗದಿಪಡಿಸಲಾಗಿತ್ತು.

‘ಮಹಿಳೆಯರ ಸಬಲೀಕರಣ ಹಾಗೂ ಅವರ ಆರ್ಥಿಕ ಸಮಸ್ಯೆ ನೀಗಿಸುವ ನಿಟ್ಟಿನಲ್ಲಿ ಈ ಯೋಜನೆ ಜಾರಿಗೆ ತರಲಾಗಿದೆ. ಬಿಜೆಪಿಯು ಇದನ್ನು ‘ಉಚಿತ ಉಡುಗೊರೆ’ ಎಂದು ಕರೆಯುತ್ತಿದೆ. ಸಮಾಜವನ್ನು ಸದೃಢಗೊಳಿಸುವ ನಿಟ್ಟಿನಲ್ಲಿ ತೆಗೆದುಕೊಂಡ ನಿರ್ಧಾರ ಎಂದು ನಾನು ಭಾವಿಸುತ್ತೇನೆ. ಈಗಾಗಲೇ ನಾವು ಉಚಿತ ವಿದ್ಯುತ್ ನೀಡುತ್ತಿದ್ದು, ಅದೇ ರೀತಿ ಹಣವನ್ನೂ ನೀಡುತ್ತೇವೆ’ ಎಂದರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಆಹ್ವಾನ ಪತ್ರಿಕೆ ಬೆಳಗಾವಿಯಲ್ಲಿ ಬಿಡುಗಡೆ

ಸಾಹಿತ್ಯ ಸಮ್ಮೇಳನ: 3 ವೇದಿಕೆ, 31 ಗೋಷ್ಠಿ

ಪ್ರಜಾವಾಣಿ ವಾರ್ತೆ

ಸಾಹಿತ್ಯ ಸಮ್ಮೇಳನದ ಆಹ್ವಾನ ಪತ್ರಿಕೆ ಬಿಡುಗಡೆ ಬಳಿಕ ಸಿದ್ದರಾಮಯ್ಯ ಅವರ ಜತೆಗೆ ಚಲುವರಾಯಸ್ವಾಮಿ ಹಾಗೂ ಮಹೇಶ ಜೋಶಿ ಸಮಾಲೋಚನೆ ನಡೆಸಿದರು

ಬೆಂಗಳೂರು: ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಆಹ್ವಾನ ಪತ್ರಿಕೆಯು ಗುರುವಾರ ಬಿಡುಗಡೆಯಾಗಿದ್ದು, ಮೂರು ವೇದಿಕೆಗಳಲ್ಲಿ ನಡೆಯಲಿರುವ ಈ ಸಮ್ಮೇಳನದಲ್ಲಿ 31 ಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಳಗಾವಿಯಲ್ಲಿ ಸಮ್ಮೇಳನದ ಆಹ್ವಾನ ಪತ್ರಿಕೆಯನ್ನು ಬಿಡುಗಡೆ ಮಾಡಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, ಮಂಡ್ಯ ಜಿಲ್ಲೆಯ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ, ಮಂಡ್ಯ ಜಿಲ್ಲಾಧಿಕಾರಿ ಕುಮಾರ, ಶಾಸಕರಾದ ರವಿಕುಮಾರ್ ಗಣಿಗ, ರಮೇಶ್ ಬಂಡಿಸಿದ್ದೇಗೌಡ, ವಿಧಾನ ಪರಿಷತ್ ಸದಸ್ಯ ಮಧು ಮಾದೇಗೌಡ ಉಪಸ್ಥಿತರಿದ್ದರು.

ಸಮ್ಮೇಳನವು ಡಿ. 20, 21 ಮತ್ತು 22ರಂದು ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮ್ಮೇಳನ ಉದ್ಘಾಟಿಸುತ್ತಾರೆ. 20ರಂದು ಬೆಳಿಗ್ಗೆ 7 ಗಂಟೆಗೆ ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ ಅವರ ಮೆರವಣಿಗೆ ನಡೆಯಲಿದ್ದು, ಇದಕ್ಕೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಚಾಲನೆ ನೀಡುತ್ತಾರೆ. ಉದ್ಘಾಟನಾ ಸಮಾರಂಭದಲ್ಲಿ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸುತ್ತಾರೆ.

ಮಂಡ್ಯ ಜಿಲ್ಲೆಗೆ ವಿಶೇಷ ಕೊಡುಗೆಗಳನ್ನು ನೀಡಿದ ಮಹನೀಯರ ಹೆಸರುಗಳನ್ನು ವೇದಿಕೆಗೆ ಇಡಲಾಗಿದೆ. ಪ್ರಧಾನ ವೇದಿಕೆಗೆ ‘ರಾಜಮಾತೆ ಕೆಂಪರಾಜಮ್ಮಣ್ಣಿ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್’ ಅವರ ಹೆಸರನ್ನು ಇಡಲಾಗಿದ್ದು, ‘ಸರ್. ಎಂ.ವಿಶ್ವೇಶ್ವರಯ್ಯ ಮತ್ತು ಸರ್. ಮಿರ್ಜಾ ಇಸ್ಮಾಯಿಲ್ ಮಹಾಮಂಟಪ’, ‘ಯಕ್ಷ ಕವಿ ಕೆಂಪಣ್ಣಗೌಡ ಮತ್ತು ಉಭಯ ಕವಿತಾ ವಿಶಾರದ ಷಡಕ್ಷರದೇವ ಮಹಾದ್ವಾರ’, ‘ಶ್ರೇಷ್ಠ ರಾಜಕೀಯ ಮುತ್ಸದ್ದಿ ಎಸ್. ಎಂ.ಕೃಷ್ಣ ಮತ್ತು ಜಗದ್ಗುರು ಬಾಲಗಂಗಾಧರನಾಥ ಸ್ವಾಮೀಜಿ ಪ್ರವೇಶದ್ವಾರ’ ಒಳಗೊಳ್ಳಲಿದೆ.

ಸಮಾನಂತರ ವೇದಿಕೆ-1ಕ್ಕೆ ‘ಕರ್ನಾಟಕ ಚಕ್ರವರ್ತಿ ಚಿಕ್ಕದೇವರಾಜ ಒಡೆಯರ್ ವೇದಿಕೆ’ ಎಂದು, ಸಮಾನಂತರ ವೇದಿಕೆ-2ಕ್ಕೆ ‘ಸಂಚಿ ಹೊನ್ನಮ್ಮ ಮತ್ತು ಕಾದಂಬರಿ ಸಾಮ್ರಾಜ್ಞಿ ತ್ರಿವೇಣಿ ವೇದಿಕೆ’ ಎಂದು ಹೆಸರಿಡಲಾಗಿದೆ. ಅಂಬರೀಶ್ ಸೇರಿ ವಿವಿಧ ಮಂಡ್ಯದ ಸಾಧಕರ ಹೆಸರನ್ನು ಪ್ರವೇಶದ್ವಾರ, ಮಹಾಮಂಟಪಕ್ಕೆ ಇಡಲಾಗಿದೆ.

ಪ್ರಧಾನ ವೇದಿಕೆಯಲ್ಲಿ ಸಮ್ಮೇಳನಾಧ್ಯಕ್ಷರ ಜತೆಗೆ ಸಂವಾದವೂ ಸೇರಿದಂತೆ 11 ಗೋಷ್ಠಿಗಳು, ಸಮಾನಂತರ ವೇದಿಕೆಗಳಲ್ಲಿ 20 ಗೋಷ್ಠಿಗಳು ಸೇರಿ ಒಟ್ಟು 31 ಗೋಷ್ಠಿಗಳು ಆಯೋಜನೆಗೊಂಡಿವೆ. ಇವುಗಳಲ್ಲಿ ನಾಲ್ಕು ಕವಿಗೋಷ್ಠಿಗಳೂ ಸೇರಿವೆ. ಈ ಗೋಷ್ಠಿಗಳಲ್ಲಿ 156 ವಿದ್ವಾಂಸರು, ನಾಲ್ಕು ಕವಿ ಗೋಷ್ಠಿಗಳಲ್ಲಿ ಒಟ್ಟು 83 ಜನ ಕವಿಗಳು ಪಾಲ್ಗೊಳ್ಳುತ್ತಾರೆ. ಇದೇ ಮೊದಲ ಬಾರಿ ಅಂಧರ ಕವಿಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿದೆ.

ಮಹಿಳಾ ವಿಶೇಷ ಕವಿಗೋಷ್ಠಿಯನ್ನು ಕೂಡ ಏರ್ಪಡಿಸಿದ್ದು, ಇದರ ಅಧ್ಯಕ್ಷತೆ ಸೇರಿ ಪಾಲ್ಗೊಳ್ಳುವ ಎಲ್ಲರೂ ಮಹಿಳೆಯರೇ ಆಗಿರುತ್ತಾರೆ. ಪ್ರಥಮ ಗೋಷ್ಠಿ ‘ಮಂಡ್ಯ ಜಿಲ್ಲೆಗೆ ಕೊಡುಗೆ ನೀಡಿದ ಮಹನೀಯರು’ ಎಂಬ ವಿಷಯದ ಮೇಲೆ ನಡೆಯಲಿದೆ. ‘ಸಾಹಿತ್ಯದಲ್ಲಿ ರಾಜಕೀಯ: ರಾಜಕೀಯದಲ್ಲಿ ಸಾಹಿತ್ಯ’ ಎಂಬ ವಿಷಯದ ಮೇಲೂ ಗೋಷ್ಠಿ ನಡೆಯಲಿದೆ. ಸರ್ಕಾರಿ ಕನ್ನಡ ಶಾಲೆಗಳ ಸಬಲೀಕರಣದ ಜ್ವಲಂತ ವಿಷಯದ ಕುರಿತು ವಿಶೇಷ ಗೋಷ್ಠಿ ಹಮ್ಮಿಕೊಳ್ಳಲಾಗಿದೆ.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವಾಗಿರುವುದರಿಂದ ನಾಡು-ನುಡಿಗೆ ವಿಶೇಷ ಸೇವೆ ಸಲ್ಲಿಸಿದ 87 ಸಾಧಕರನ್ನು ಮತ್ತು ಸುವರ್ಣ ಮಹೋತ್ಸವ ನೆನಪಿನಲ್ಲಿ 50 ಸಾಧಕರು ಸೇರಿದಂತೆ ಒಟ್ಟು 137 ಜನರನ್ನು ಸನ್ಮಾನಿಸಲಾಗುತ್ತದೆ.

ವಿಎಒ ಪರೀಕ್ಷೆ: ಅಂತಿಮ ಫಲಿತಾಂಶ

ಬೆಂಗಳೂರು: ಗ್ರಾಮ ಆಡಳಿತ ಅಧಿಕಾರಿ ಹುದ್ದೆಗೆ ಅ. 27ರಂದು ನಡೆಸಲಾದ ಲಿಖಿತ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದಿರುವ ಅಂಕಗಳ ಅಂತಿಮ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಗುರುವಾರ ಪ್ರಕಟಿಸಿದೆ.

ಕಡ್ಡಾಯ ಕನ್ನಡ ಪರೀಕ್ಷೆಯಲ್ಲಿ ಕನಿಷ್ಠ 50 ಅಂಕ ಪಡೆದಿರುವ ಹಾಗೂ ಪತ್ರಿಕೆ -1 ಮತ್ತು ಪತ್ರಿಕೆ- 2ರಲ್ಲಿ ಕನಿಷ್ಠ ಶೇ 35ರಷ್ಟು ಅಂಕ ಪಡೆದಿರುವ ಅರ್ಹರ ಪಟ್ಟಿಯನ್ನು ಮಾತ್ರ ಪ್ರಕಟಿಸಲಾಗಿದೆ ಎಂದು ಕೆಇಎ ಇಡಿ ಎಚ್. ಪ್ರಸನ್ನ ಹೇಳಿದ್ದಾರೆ.

ಅಂತಿಮ ಪಟ್ಟಿಯನ್ನು ಆಯಾ ಜಿಲ್ಲಾಧಿಕಾರಿಗಳೇ ಪ್ರಕಟಿಸಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

‘ಶೈಕ್ಷಣಿಕ ಪ್ರವಾಸ ರದ್ದುಪಡಿಸಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಹಮ್ಮಿಕೊಳ್ಳಲಾಗುತ್ತಿರುವ ಶೈಕ್ಷಣಿಕ ಪ್ರವಾಸವನ್ನು ರದ್ದು ಮಾಡುವಂತೆ, ಪ್ರವಾಸ ಹಮ್ಮಿಕೊಂಡಿದ್ದಲ್ಲಿ ಕೂಡಲೇ ಹಿಂದಿರುಗಿ ಬರುವಂತೆ ಯಾವುದೇ ಸೂಚನೆ, ನಿರ್ದೇಶನ ನೀಡಿಲ್ಲ ಎಂದು ಶಾಲಾ ಶಿಕ್ಷಣ ಇಲಾಖೆ ಸ್ಪಷ್ಟಪಡಿಸಿದೆ.

ಮುರ್ಡೇಶ್ವರಕ್ಕೆ ಪ್ರವಾಸ ತೆರಳಿದ್ದ ವೇಳೆ, ನಾಲ್ವರು ಬಾಲಕಿಯರು ಸಮುದ್ರದಲ್ಲಿ ಮುಳುಗಿ ಮೃತಪಟ್ಟಿದ್ದರು. ಈ ಘಟನೆ ಬಳಿಕ, 2024–25ನೇ ಸಾಲಿನ ಶೈಕ್ಷಣಿಕ ಪ್ರವಾಸ ರದ್ದು ಮಾಡಿರುವ ಬಗ್ಗೆ, ಪ್ರವಾಸ ಕೈಗೊಂಡಿದ್ದಲ್ಲಿ ಹಿಂದಿರುಗಿ ಬರುವಂತೆ ಇಲಾಖೆ ಸೂಚಿಸಿರುವುದಾಗಿ ವಾಟ್ಸ್‌ಆ್ಯಪ್ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಸಂದೇಶಗಳು ಹರಿದಾಡುತ್ತಿದ್ದವು.

ಇದಕ್ಕೆ ಸ್ಪಷ್ಟನೆ ನೀಡಿರುವ ಇಲಾಖೆ, ‘ಈ ರೀತಿ ಯಾವುದೇ ನಿರ್ದೇಶನವನ್ನು ನೀಡಿರುವುದಿಲ್ಲ. ಡಿಸೆಂಬರ್ ಅಂತ್ಯದೊಳಗೆ ಶೈಕ್ಷಣಿಕ ಪ್ರವಾಸವನ್ನು ಪೂರ್ಣಗೊಳಿಸಬೇಕು. ವಿದ್ಯಾರ್ಥಿಗಳ ಸುರಕ್ಷತೆಗೆ ಎಲ್ಲ ಕ್ರಮಗಳನ್ನು ಕೈಗೊಂಡು, ಪ್ರವಾಸ ಕೈಗೊಳ್ಳಬೇಕು’ ಎಂದು ತಿಳಿಸಿದೆ.

ಗವಿಸಿದ್ಧೇಶ್ವರ ರಥೋತ್ಸವ ಜ.15ಕ್ಕೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಐತಿಹಾಸಿಕ ಇಲ್ಲಿನ ಗವಿ ಸಿದ್ಧೇಶ್ವರ ಮಠದ ಜಾತ್ರಾ ಮಹೋತ್ಸವಕ್ಕೆ ಸಿದ್ಧತಾ ಕಾರ್ಯಕ್ರಮಗಳು ಆರಂಭವಾಗಿದ್ದು, ಜನವರಿ 15ರಂದು ಸಂಜೆ 5 ಗಂಟೆಗೆ ಮಹಾರಥೋತ್ಸವ ಜರುಗಲಿದೆ.

ಜ. 11ರಂದು ಸಂಜೆ 5 ಗಂಟೆಗೆ ಬಸವಪಟ, 12ರಂದು ಸಂಜೆ 5 ಗಂಟೆಗೆ ಗವಿಮಠದ ಆವರಣದಲ್ಲಿರುವ ಕೆರೆಯಲ್ಲಿ ತೆಪ್ಪೋತ್ಸವ ಹಾಗೂ ಸಂಗೀತ ಕಾರ್ಯಕ್ರಮ, 13ರಂದು ಸಂಜೆ 5ಕ್ಕೆ ಗವಿಸಿದ್ಧೇಶ್ವರ ಮೂರ್ತಿಯ (ಪಲ್ಲಕ್ಕಿ) ಕಳಸ ಮೆರವಣಿಗೆ ನಡೆಯಲಿವೆ.

ಅತ್ಯಾಚಾರ ಸಂತ್ರಸ್ತೆ ಕುಟುಂಬದ ಭೇಟಿ

2020ರಲ್ಲಿ ಹಾಥರಸ್‌ನಲ್ಲಿ ಸಾಮೂಹಿಕ ಅತ್ಯಾಚಾರ ಒಳಗಾಗಿ ಮೃತಪಟ್ಟ ದಲಿತ ಯುವತಿಯ ಕುಟುಂಬವನ್ನು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಗುರುವಾರ ಭೇಟಿ ಮಾಡಿದರು —ಪಿಟಿಐ ಚಿತ್ರ

ಹಾಥರಸ್ (ಪಿಟಿಐ): ಹಾಥರಸ್‌ನಲ್ಲಿ 2020ರಲ್ಲಿ ಸಾಮೂಹಿಕ ಅತ್ಯಾಚಾರಕ್ಕೆ ಒಳಗಾಗಿ ಮೃತಪಟ್ಟ ದಲಿತ ಯುವತಿಯ ಕುಟುಂಬವನ್ನು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಗುರುವಾರ ಭೇಟಿ ಮಾಡಿದರು.

ರಾಹುಲ್ ಗಾಂಧಿ ಅವರು 11.15ರ ಸುಮಾರಿಗೆ ಬೂಲ್‌ಗಢಿ ಗ್ರಾಮ ತಲುಪಿದರು. ರಾಹುಲ್ ಗಾಂಧಿ ಭೇಟಿ ಕಾರಣ ಚಂದ್ಪಾ ಪ್ರದೇಶ ಮತ್ತು ಅದರ ಸುತ್ತಮುತ್ತಲಿನ ಪ್ರದೇಶದಲ್ಲಿ ಪೊಲೀಸ್ ಭದ್ರತೆ ಹೆಚ್ಚಿಸಲಾಗಿತ್ತು.

ಸಂತ್ರಸ್ತೆಯ ನಿವಾಸದಲ್ಲಿ ಆಕೆಯ ಕುಟುಂಬದೊಂದಿಗೆ ಸುಮಾರು 35 ನಿಮಿಷ ಮಾತುಕತೆ ನಡೆಸಿದರು. ನಂತರ ಅಲ್ಲೇ ನಿಂತಿದ್ದ ಸುದ್ದಿಗಾರರೊಂದಿಗೆ ಏನನ್ನೂ ಮಾತನಾಡದೆ ಹೊರಟುಹೋದರು.

‘ಈ ಕುಟುಂಬದೊಂದಿಗೂ ರಾಹುಲ್ ಗಾಂಧಿ ಅವರು ಸಂಪರ್ಕದಲ್ಲಿದ್ದು, ಅವರ ಸಂಕಟವನ್ನು ಆಲಿಸಲು ಇಂದು ಬಂದಿದ್ದರು’ ಎಂದು ಸ್ಥಳೀಯ ಕಾಂಗ್ರೆಸ್ ನಾಯಕ ಚಂದ್ರಗುಪ್ತ ವಿಕ್ರಮಾದಿತ್ಯ ಹೇಳಿದರು.

ರಾಹುಲ್ ಮತ್ತು ಪ್ರಿಯಾಂಕಾ ಗಾಂಧಿ ಅವರು ಅಕ್ಟೋಬರ್ 3, 2020ರಂದು ಅತ್ಯಾಚಾರ ಸಂತ್ರಸ್ತೆಯ ಕುಟುಂಬವನ್ನು ಭೇಟಿಯಾಗಿ, ಯುವತಿಯ ಸಾವಿಗೆ ನ್ಯಾಯ ದೊರಕಿಸಿಕೊಡಲು ಹೋರಾಡುವುದಾಗಿ ಹೇಳಿದ್ದರು.

‘ಪ್ರಚಾರಕ್ಕಾಗಿ ಭೇಟಿ’

ರಾಹುಲ್ ಗಾಂಧಿ ಅವರು ಸಂಭಲ್, ಹಾಥರಸ್‌ಗೆ ಪ್ರಚಾರಕ್ಕಾಗಿ ಭೇಟಿ ನೀಡುತ್ತಾರೆಯೇ ವಿನಃ ಬೇರಾವುದೇ ಕಾರಣಕ್ಕಾಗಿ ಅಲ್ಲ’ ಎಂದು ಉತ್ತರ ಪ್ರದೇಶದ ಉಪ ಮುಖ್ಯಮಂತ್ರಿ ಬ್ರಿಜೇಶ್ ಪಾಠಕ್ ಟೀಕಿಸಿದರು.

‘ರಾಹುಲ್, ‘ಗೊಂದಲದಲ್ಲಿದ್ದಾರೆ’ ಮತ್ತು ಈ ಪ್ರಕರಣದ ಸ್ಥಿತಿಯ ಬಗ್ಗೆ ಅವರಿಗೆ ಅರಿವಿಲ್ಲ’ ಎಂದು ಹೇಳಿದರು. ‘ಸಿಬಿಐ ಪ್ರಕರಣದ ತನಿಖೆ ನಡೆಸುತ್ತಿದೆ. ಬಿಜೆಪಿ ಆಡಳಿತದಲ್ಲಿ ಯಾವೊಬ್ಬ ತಪ್ಪಿತಸ್ಥನೂ ಶಿಕ್ಷೆ ಇಲ್ಲದೆ ಓಡಾಡಲು ಸಾಧ್ಯವಿಲ್ಲ’ ಎಂದರು.

ಇಂದು ಸಾಧಾರಣ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದಿಂದಾಗಿ ರಾಜ್ಯದ ಕೆಲವೆಡೆ ಶುಕ್ರವಾರವೂ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿಯ ಕೆಲವು ಕಡೆ, ಕೊಡಗು, ತುಮಕೂರು, ಚಿಕ್ಕಮಗಳೂರು, ಮೈಸೂರು, ಹಾಸನ, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಯ ಒಂದೆರಡು ಕಡೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳ ಒಂದೆರಡು ಕಡೆ ತುಂತುರು ಮಳೆಯಾಗುವ ಸಂಭವವಿದೆ. ಉತ್ತರ ಒಳನಾಡಿನಲ್ಲಿ ಒಣಹವೆ ಇರುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಇದೇ 17ರಿಂದ ಬೆಂಗಳೂರು, ಚಿಕ್ಕಮಗಳೂರು, ರಾಮನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ತುಮಕೂರು ಸೇರಿ ವಿವಿಧ ಜಿಲ್ಲೆಗಳ ಕೆಲವೆಡೆ ಭಾರಿ ಮಳೆಯಾಗುವ ಸಾಧ್ಯತೆಯಿದೆ ಇಲಾಖೆ ತಿಳಿಸಿದೆ.

ಅಣೆಕಟ್ಟೆಗಳಲ್ಲಿ ನೀರಿನ ಪ್ರಮಾಣ ಏರಿಕೆ, ಶಟರ್ ತೆರೆದ ಅಧಿಕಾರಿಗಳು

ತಮಿಳುನಾಡು: ಹಲವೆಡೆ ಭಾರಿ ಮಳೆ

ಚೆನ್ನೈನಲ್ಲಿ ಮಳೆಯಿಂದಾಗಿ ರಸ್ತೆಗಳು ಜಲಾವೃತವಾಗಿದ್ದವು —ಪಿಟಿಐ ಚಿತ್ರ

ಚೆನ್ನೈ (ಪಿಟಿಐ): ತಮಿಳುನಾಡಿನ ಹಲವೆಡೆ ಗುರುವಾರ ಭಾರಿ ಮಳೆಯಾಗಿದ್ದು, ಚೆನ್ನೈ ಮತ್ತಿತರ ಪ್ರಮುಖ ಜಿಲ್ಲೆಗಳಲ್ಲಿ ಶಾಲೆಗಳಿಗೆ ಒಂದು ದಿನ ರಜೆ ಘೋಷಿಸಲಾಗಿದೆ.

ಅಣೆಕಟ್ಟೆಗಳಲ್ಲಿ ನೀರಿನ ಪ್ರಮಾಣ ವೇಗವಾಗಿ ಏರಿಕೆಯಾಗುತ್ತಿದ್ದು, ಚೆನ್ನೈನ ಉಪನಗರದಲ್ಲಿರುವ ಎರಡು ಅಣೆಕಟ್ಟುಗಳು ಮತ್ತು ತಿರುವಣ್ಣಾಮಲೈ ಜಿಲ್ಲೆಯಲ್ಲಿರುವ ಒಂದು ಅಣೆಕಟ್ಟೆಯ ಶಟರ್‌ಗಳನ್ನು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ತೆರೆದು ನೀರನ್ನು ಹೊರಬಿಟ್ಟಿದ್ದಾರೆ.

ಸಾತನೂರು ಅಣೆಕಟ್ಟೆಯಿಂದ 13,000 ಕ್ಯುಸೆಕ್ಸ್ ನೀರನ್ನು ಹೊರಬಿಡಲಾಗಿದೆ. ಚೆಂಬರಂಬಕ್ಕಂನಿಂದ 3,500 ಕ್ಯುಸೆಕ್ಸ್ ಮತ್ತು ಪೋಂಡಿ ಅಣೆಕಟ್ಟೆಯಿಂದ 1,000 ಕ್ಯುಸೆಕ್ಸ್ ನೀರನ್ನು ಹೊರಬಿಡಲಾಗಿದೆ.

ಬುಧವಾರ ರಾತ್ರಿ ಮತ್ತು ಗುರುವಾರ ಚೆನ್ನೈ, ತಿರುವಳ್ಳೂರು, ಚೆಂಗಲ್‌ಪೇಟ್, ಕಾಂಚೀಪುರಂ, ವಿಲ್ಲುಪುರಂ ಜಿಲ್ಲೆಗಳಲ್ಲಿ ವ್ಯಾಪಕ ಮಳೆ ಸುರಿದಿದೆ. ಈ ಪ್ರದೇಶಗಳೂ ಸೇರಿದಂತೆ ಕಲ್ಲಕುರಿಚಿ, ತಿರುವರೂರು, ತಾಂಜಾವೂರು ಮತ್ತು ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯಲ್ಲಿ ಮಳೆ ಮುಂದುವರಿಯುವ ಸಾಧ್ಯತೆ ಇದೆ ಎಂದು ಸ್ಥಳೀಯ ಹವಾಮಾನ ಸಂಸ್ಥೆ ಮುನ್ಸೂಚನೆ ನೀಡಿದೆ.

ತಿರುವರೂರು ಮತ್ತು ನಾಗಪಟ್ಟಣಂ ಜಿಲ್ಲೆಗಳಲ್ಲಿ ಕಟಾವಿಗೆ ಬಂದಿದ್ದ ಭತ್ತದ ಬೆಳೆಯು ನೀರಿನಲ್ಲಿ ಮುಳುಗಿದೆ. ಮನ್ನಾರ್‌ಗುಡಿಯಲ್ಲಿ ಮೂರು ವಿದ್ಯುತ್ ಕಂಬಗಳು ಉರುಳಿಬಿದ್ದಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಚೆನ್ನೈನಲ್ಲಿ ಕನಿಷ್ಠ ಮೂರು ಸುರಂಗ ಮಾರ್ಗಗಳು (ಸಬ್ ವೇ) ನೀರಿನಲ್ಲಿ ಮುಳುಗಿದ್ದು, ಈ ಮಾರ್ಗವಾಗಿ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿಷೇಧಿಸಲಾಗಿದೆ. ನೀರು ಹೊರಹಾಕುವ ಪ್ರಯತ್ನ ಮುಂದುವರಿದಿದೆ.

ತುರ್ತು ಸ್ಥಿತಿ ನಿರ್ಮಾಣವಾದಲ್ಲಿ ರಕ್ಷಣಾ ಕಾರ್ಯಾಚರಣೆಗೆ ಎನ್‌ಡಿಆರ್‌ಎಫ್ ಆರು ತಂಡಗಳು ಸನ್ನದ್ಧವಾಗಿವೆ ಎಂದು ರಾಜ್ಯ ಸರ್ಕಾರ ತಿಳಿಸಿದೆ. ತಗ್ಗು ಪ್ರದೇಶಗಳ ಜನರು ಎಚ್ಚರಿಕೆಯಿಂದ ಇರುವಂತೆ ಸರ್ಕಾರ ತಿಳಿಸಿದೆ.

ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ ಉಂಟಾಗಿರುವ ಕಾರಣ ದಕ್ಷಿಣದ ಜಿಲ್ಲೆಗಳು ಮತ್ತು ಅವುಗಳ ಒಳನಾಡು ಪ್ರದೇಶಗಳಲ್ಲಿ ಭಾರಿ ಮಳೆಯಾಗುತ್ತಿದೆ.

ಕೇರಳ: 3 ಜಿಲ್ಲೆಗಳಿಗೆ ರೆಡ್ ಅಲರ್ಟ್

ತಿರುವನಂತಪುರ: ಕೇರಳದ ಹಲವೆಡೆ ಗುರುವಾರ ಬೆಳಿಗ್ಗೆ ಭಾರಿ ಮಳೆಯಾಗಿದ್ದು, ಮೂರು ಜಿಲ್ಲೆಗಳಿಗೆ ರೆಡ್ ಅಲರ್ಟ್ ಘೋಷಿಸಲಾಗಿದೆ.

ಪಟ್ಟಣಂತಿಟ್ಟ, ಎರ್ನಾಕುಲಂ ಮತ್ತು ಇಡುಕ್ಕಿ ಜಿಲ್ಲೆಗಳಿಗೆ ಐಎಂಡಿ ‘ರೆಡ್ ಅಲರ್ಟ್’ ಘೋಷಣೆ ಮಾಡಲಾಗಿದೆ.

ತಿರುವನಂತಪುರ, ಕೊಲ್ಲಂ, ಅಲಪ್ಪುಳ, ಕೊಟ್ಟಾಯಂ ಮತ್ತು ತ್ರಿಶೂರ್ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಿದೆ.

ಪಾಲಕ್ಕಾಡ್, ಮಲಪ್ಪುರಂ, ಕೋಯಿಕೋಡ್, ವಯನಾಡ್ ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಣೆ ಮಾಡಲಾಗಿದೆ.

ಕರ್ನಾಟಕ ಸರ್ಕಾರ
ಆಯುಕ್ತರ ಕಾರ್ಯಾಲಯ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಹಾಗೂ ಮಹಾ ನಿರ್ದೇಶಕರು ಕರ್ನಾಟಕ ಕ್ರೀಡಾ ಪ್ರಾಧಿಕಾರ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080–22215601, 22211246 ಫ್ಯಾಕ್ಸ್ : 22215602
ಸಂಖ್ಯೆ: ಕಕ್ರೀಪ್ರಾ/ಸಿ–3/58/2024–25 ದಿನಾಂಕ : 12.12.2024
ಪತ್ರಿಕಾ ಪ್ರಕಟಣೆ
ರಾಜಸ್ಥಾನದ ಜೈಪುರದಲ್ಲಿ ನಡೆಯಲಿರುವ ಹಿರಿಯರ ಪುರುಷ ಹಾಗೂ ಮಹಿಳೆಯರ ರಾಷ್ಟ್ರೀಯ ವಾಲಿಬಾಲ್ ಪಂದ್ಯಾವಳಿ–2025ಕ್ಕೆ ರಾಜ್ಯ ತಂಡವನ್ನು ಆಯ್ಕೆ ಮಾಡುವ ಕುರಿತು
ಜಂಟಿ ಕಾರ್ಯದರ್ಶಿಗಳು, ಭಾರತೀಯ ಒಲಿಂಪಿಕ್ ಸಂಸ್ಥೆ, ಹಾಗೂ ಸದಸ್ಯರು, ಅಡ್ಹಾಕ್ ಕಮಿಟಿ ವಾಲಿಬಾಲ್ ಫೆಡರೇಷನ್ ಆಫ್ ಇಂಡಿಯಾ ಇವರ ಅಧಿಸೂಚನೆ ಪತ್ರ ದಿನಾಂಕ: 28–11–2024 ರಂತೆ ರಾಜಸ್ಥಾನದ ಜೈಪುರದಲ್ಲಿ ದಿನಾಂಕ : 07–01–2025 ರಿಂದ 13–01–2025 ರವರೆಗೆ ನಡೆಯಲಿರುವ ಹಿರಿಯರ ಪುರುಷ ಹಾಗೂ ಮಹಿಳೆಯರ ರಾಷ್ಟ್ರೀಯ ವಾಲಿಬಾಲ್ ಪಂದ್ಯಾವಳಿ–2025ನ್ನು ಸಂಘಟಿಸಲು ಸಮಿತಿಯನ್ನು ರಚಿಸಲಾಗಿದ್ದು ಸದರಿ ಪಂದ್ಯಾವಳಿಗೆ ರಾಜ್ಯ ತಂಡವನ್ನು ಇಲಾಖಾ ವತಿಯಿಂದ ಆಯ್ಕೆ ಮಾಡಿ ಕಳುಹಿಸಲು ತಿಳಿಸಲಾಗಿರುತ್ತದೆ.
ಈ ಹಿನ್ನೆಲೆಯಲ್ಲಿ ದಿನಾಂಕ: 07–01–2025 ರಿಂದ 13–01–2025ರವರೆಗೆ ರಾಜಸ್ಥಾನದ ಜೈಪುರದಲ್ಲಿ ನಡೆಯುವ ಹಿರಿಯ ಪುರುಷ ಹಾಗೂ ಮಹಿಳಾ ವಾಲಿಬಾಲ್ ಪಂದ್ಯಾವಳಿಗೆ ಕರ್ನಾಟಕ ರಾಜ್ಯದಿಂದ ಹಿರಿಯ ವಾಲಿಬಾಲ್ ಪುರುಷ ಹಾಗೂ ಮಹಿಳಾ ತಂಡದ ಆಯ್ಕೆ ಪ್ರಕ್ರಿಯೆಯನ್ನು ದಿನಾಂಕ: 16–12–2024 ರಂದು ಸೋಮವಾರ ಬೆಳಿಗ್ಗೆ 8.00 ಗಂಟೆಗೆ ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದ ವಾಲಿಬಾಲ್ ಅಂಕಣದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ/ಕರ್ನಾಟಕ ಕ್ರೀಡಾ ಪ್ರಾಧಿಕಾರದ ವತಿಯಿಂದ ನಡೆಸಲಾಗುತ್ತಿದೆ. ಈ ಆಯ್ಕೆ ಪ್ರಕ್ರಿಯೆಯಲ್ಲಿ ವಿವಿಧ ಜಿಲ್ಲೆಯ ವಾಲಿಬಾಲ್ ಕ್ರೀಡಾಪಟುಗಳು ಹಾಗೂ ಸ್ಥಳೀಯ ವಾಲಿಬಾಲ್ ಕ್ರೀಡಾಪಟುಗಳು ಭಾಗವಹಿಸುವಂತೆ ಸೂಚಿಸಲಾಗಿದೆ. ಈ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಊಟೋಪಹಾರ ಹಾಗೂ ಪ್ರಯಾಣ ಭತ್ಯೆ/ದಿನಭತ್ಯೆಯನ್ನು ಇಲಾಖೆಯಿಂದ ನೀಡಲಾಗುವುದಿಲ್ಲ.
ಸಹಿ/–
ಆಯುಕ್ತರ ಪರವಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಮಹಾ ನಿರ್ದೇಶಕರು ಕರ್ನಾಟಕ ಕ್ರೀಡಾ ಪ್ರಾಧಿಕಾರ
DIPR/CP/3733/Zen/2024-25

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ
ಸಂಖ್ಯೆ:ಆಡಳಿತ:ಸಿಬ್ಬಂದಿ:ನೇಮಕಾತಿ:44:2024–25 ದಿನಾಂಕ: 12–12–2024
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಬ್ಯಾಂಕಿನಿಂದ ಆಹ್ವಾನಿಸಲಾಗಿದ್ದ "Tender Ref: MDCCB/2024-25/SE0021" ಇ–ಟೆಂಡರ್‌ನ ಅಂತಿಮ ದಿನಾಂಕದ ಅವಧಿಯನ್ನು ದಿನಾಂಕ : 16–12–2024ರ ಸಂಜೆ 05–00 ಗಂಟೆಯವರೆಗೆ ವಿಸ್ತರಿಸಿ, Addendum/ corrigendum ಪ್ರಕಟಿಸಲಾಗಿದೆ. ವಿವರವನ್ನು https://kppp.karnataka.gov.in ಇಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/– ಮುಖ್ಯಕಾರ್ಯನಿರ್ವಹಣಾಧಿಕಾರಿ, ಮಂಡ್ಯ ಡಿ.ಸಿ.ಸಿ. ಬ್ಯಾಂಕ್ ನಿ., ಮಂಡ್ಯ

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080–22215601, 22211246 ಫ್ಯಾಕ್ಸ್ : 22215602
ಸಂ.ಡಿವೈಇಎಸ್/ತಾಂಶಾ/ಕ್ರೀಯೋ/163/2024–25 ದಿನಾಂಕ : 10.12.2024
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ವಿಷಯ: ಉಪ–ನಿರ್ದೇಶಕರು (ಆಡಳಿತ), ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು 560 001 ಕರ್ನಾಟಕ, ಭಾರತ, ಇವರು, ಕರ್ನಾಟಕ ರಾಜ್ಯದಲ್ಲಿರುವ 'ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿರುವ ವಿವಿಧ ಕ್ರೀಡಾಂಗಣಗಳ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್‌ಗಳಿಗೆ ಹ್ಯಾಮರ್ ಕೇಜ್ ಅಳವಡಿಸುವ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ರಾಜ್ಯ ಯುವ ಕೇಂದ್ರ ಕಟ್ಟಡ ನವೀಕರಣ ಕಾಮಗಾರಿಗಳಿಗೆ ಟೆಂಡರ್ ಮೂಲಕ ಕೈಗೊಳ್ಳಲು ಗುತ್ತಿಗೆದಾರರನ್ನು ನೇಮಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರನ್ನು ಆಹ್ವಾನಿಸಿದೆ.
ಕಾಮಗಾರಿ ವಿವರ : (1) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿರುವ ವಿವಿಧ ಕ್ರೀಡಾಂಗಣಗಳ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್‌ಗಳಿಗೆ ಹ್ಯಾಮರ್ ಅಳವಡಿಸುವ ಕಾಮಗಾರಿ. ಟೆಂಡರ್‌ಗಿಟ್ಟ ಮೊತ್ತ : ರೂ 129.72 ಲಕ್ಷಗಳು, ಇಎಂಡಿ ಮೊತ್ತ : 1,94.579.00 ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 23.12.2024 ಸಮಯ : 11.00 ಗಂಟೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 24.12.2024 ಸಮಯ : 11.30 ಗಂಟೆ. (2) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ರಾಜ್ಯ ಯುವ ಕೇಂದ್ರ ಕಟ್ಟಡ ನವೀಕರಣ ಕಾಮಗಾರಿ. ಟೆಂಡರ್‌ಗಿಟ್ಟ ಮೊತ್ತ : ರೂ 87.52 ಲಕ್ಷಗಳು, ಇಎಂಡಿ ಮೊತ್ತ : ರೂ. 1,75,032.00. ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 26.12.2024 ಸಮಯ : 11.00 ಗಂಟೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 27.12.2024 ಸಮಯ : 11.30 ಗಂಟೆ. ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.
ಸಹಿ/–
ಉಪ ನಿರ್ದೇಶಕರು (ಆಡಳಿತ)
ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
DIPR/CP/3748/Zen/2024-25

ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ
ಇಂದಿರಾ ಗಾಂಧಿ ವೃತಿ ಅಭಿವೃದಿ ಕೇಂದ್ರ
ಡಾ. ಬಾಬು ಜಗಜೀವನ್ ರಾಮ್ ಸಂಶೋಧನಾ ಕೇಂದ್ರ, ಔಟರ್ ರಿಂಗ್ ರೋಡ್, ಸುಮ್ಮನಹಳ್ಳಿ ವೃತ್ತ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು–560091
ಸಂಖ್ಯೆ: SWD/IGCCD/CR-ಪ್ರಕಟಣೆ/ 2024 ದಿನಾಂಕ: 13.12.2024
ಟೆಂಡರ್ ಪ್ರಕಟಣೆ (ಇ–ಟೆಂಡರ್ ಮೂಲಕ ಮಾತ್ರ)
ಸಮಾಜ ಕಲ್ಯಾಣ ಇಲಾಖೆಯ, ಇಂದಿರಾಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರದ ಮೂಲಕ ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ದೈಹಿಕ ಸಾಮರ್ಥ್ಯ ತರಬೇತಿ ಜೊತೆಗೆ ಸ್ಪರ್ಧಾತ್ಮಕ ಪೊಲೀಸ್ ಕಾನ್ಸಟೇಬಲ್ ಹುದ್ದೆಗಳ ಪರೀಕ್ಷೆಗಳಿಗೆ (ಪುರುಷ ಮತ್ತು ಮಹಿಳೆ) ವಸತಿ ಸಹಿತ ತರಬೇತಿ ನೀಡುವ ಸಂಬಂಧ ಕರ್ನಾಟಕ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ಪ್ರತ್ಯೇಕವಾಗಿ ಸೂಕ್ತ ತರಬೇತಿ ನೀಡಲು ಅರ್ಹ ಪ್ರತಿಷ್ಠಿತ ತರಬೇತಿ ಸಂಸ್ಥೆಗಳಿಂದ ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಪ್ರಕಟಣೆ ಸಂಖ್ಯೆ ಈ ಕೆಳಗಿನಂತಿವೆ. 1. No: SWD/IGCCD/OS-04/03/2024
ಹೆಚ್ಚಿನ ವಿವರಗಳಿಗೆ http://kppp.karnataka.gov.in ವೆಬ್ ಸೈಟನ್ನು ನೋಡಬಹುದಾಗಿದೆ.
ಸಹಿ/–
ಸಹಾಯಕ ನಿರ್ದೇಶಕರು,
ಇಂದಿರಾ ಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರ, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/3755/ಎಸ್‌ಎಸ್‌ಸಿ/2024–25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಗುಣವಂತರ ಜೊತೆ ಗೆಳೆತನ ಬೆಳೆಸುವುದು ಶ್ರೇಯಸ್ಕರ. ಹಾಲಲ್ಲಿ ಸೇರಿ ನೀರೂ ಹಾಲಾಗುವಂತೆ ಗುಣವಂತರ ಜೊತೆ ಸೇರಿ ನಾವೂ ಗುಣವಂತರಾಗುತ್ತೇವೆ.

-ಚಾಣಕ್ಯ

ಆರ್‌ಬಿಐಗೆ ಹೊಸ ಗವರ್ನರ್ ಸಮತೋಲನ ಸಾಧಿಸುವ ಸವಾಲು

ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹೊಸ ಗವರ್ನರ್ ಆಗಿ ಸಂಜಯ್ ಮಲ್ಹೋತ್ರಾ ಅಧಿಕಾರ ಸ್ವೀಕರಿಸಿದ್ದಾರೆ. ಆರ್‌ಬಿಐ ಗವರ್ನರ್ ಆಗಿದ್ದ ಶಕ್ತಿಕಾಂತ ದಾಸ್ ಅವರ ಅಧಿಕಾರ ಅವಧಿ ಮುಗಿದಿದೆ. ದಾಸ್ ಅವರಂತೆಯೇ ಮಲ್ಹೋತ್ರಾ ಅವರೂ ಅಧಿಕಾರಿಯಾಗಿ ಅನುಭವ ಗಳಿಸಿದವರು. ಆರ್‌ಬಿಐ ಗವರ್ನರ್ ಸ್ಥಾನದಲ್ಲಿ ಅಧಿಕಾರಿಯೊಬ್ಬರು ಇದ್ದರೆ, ಸರ್ಕಾರ ಮತ್ತು ಗವರ್ನರ್ ನಡುವಿನ ಸಂಘರ್ಷ ಕಡಿಮೆ ಇರುತ್ತದೆ ಎಂಬ ಕಾರಣಕ್ಕೆ ಕೇಂದ್ರ ಸರ್ಕಾರವು ಈ ಮಹತ್ವದ ಸ್ಥಾನಕ್ಕೆ ಅಧಿಕಾರಿಯೊಬ್ಬರನ್ನು ಆಯ್ಕೆ ಮಾಡಿರಬಹುದು. ಹಿಂದೆ ಅರ್ಥಶಾಸ್ತ್ರಜ್ಞರು ಗವರ್ನರ್ ಹುದ್ದೆಯಲ್ಲಿ ಇದ್ದಾಗ ಸರ್ಕಾರ ಮತ್ತು ಗವರ್ನರ್ ನಡುವೆ ಸಂಘರ್ಷ ಉಂಟಾದ ನಿದರ್ಶನಗಳಿವೆ. ದಾಸ್ ಅವರಿಗಿಂತ ಮೊದಲು ಗವರ್ನರ್ ಆಗಿದ್ದ ನಾಲ್ಕು ಮಂದಿ– ವೈ.ವಿ. ರೆಡ್ಡಿ, ಡಿ. ಸುಬ್ಬರಾವ್, ರಘುರಾಮ್ ರಾಜನ್ ಮತ್ತು ಉರ್ಜಿತ್ ಪಟೇಲ್– ಸರ್ಕಾರದ ಜೊತೆ ಗಂಭೀರ ತಕರಾರುಗಳನ್ನು ಹೊಂದಿದ್ದರು. ಗವರ್ನರ್ ಹುದ್ದೆಯಲ್ಲಿ ಇರುವವರು ಆರ್‌ಬಿಐನ ಸ್ವಾಯತ್ತೆಯನ್ನು ರಕ್ಷಿಸಲು ಯತ್ನಿಸಿದಾಗ ಸಂಘರ್ಷ ಉಂಟಾಗುತ್ತದೆ. ಆದರೆ, ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು ಎಂದಾದರೆ ಆರ್‌ಬಿಐ ಇಂತಹ ಸ್ವಾಯತ್ತೆಯನ್ನು ಹೊಂದಿರಬೇಕು. ಅದರಲ್ಲೂ ಮುಖ್ಯವಾಗಿ, ವಿವಿಧ ಸಂಸ್ಥೆಗಳನ್ನು ತಮ್ಮ ಇಚ್ಛೆಗೆ ಅನುಗುಣವಾಗಿ ಬಾಗಿಸುವ ಕೆಲಸದಲ್ಲಿ ಸರ್ಕಾರಗಳು ತೊಡಗಿದಾಗ, ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವುದು ಮುಖ್ಯವಾಗುತ್ತದೆ. ದಾಸ್ ಅವರು ಸರ್ಕಾರದ ಜೊತೆ ಬಹಳ ಉತ್ತಮವಾದ ಸಂಬಂಧ ಹೊಂದಿದ್ದರು. ಆದರೆ ತಮ್ಮ ಅಧಿಕಾರ ಅವಧಿಯ ಕೊನೆಯ ಹಂತದಲ್ಲಿ ಅವರು, ಬಡ್ಡಿ ದರವನ್ನು ತಗ್ಗಿಸಬೇಕು ಎಂದು ಸರ್ಕಾರದ ಕಡೆಯಿಂದ ಬಂದ ಬೇಡಿಕೆಯನ್ನು ಅಲಕ್ಷಿಸಿದರು. ಹಣದುಬ್ಬರವನ್ನು ನಿಯಂತ್ರಣದಲ್ಲಿ ಇರಿಸುವುದು ಆರ್‌ಬಿಐನ ಅತಿಮುಖ್ಯ ಜವಾಬ್ದಾರಿ ಎಂಬುದಕ್ಕೆ ಬದ್ಧತೆ ತೋರಿ, ಅವರು ಈ ರೀತಿ ಮಾಡಿದರು.

ಹಣದುಬ್ಬರದ ಪ್ರಮಾಣವನ್ನು ಮಿತಿಯಲ್ಲಿ ಇರಿಸುವ ತನ್ನ ಬದ್ಧತೆಯಿಂದ ಆರ್‌ಬಿಐ ಹಿಂದೆ ಸರಿಯದಂತೆ ನೋಡಿಕೊಳ್ಳಬೇಕಾದ ಹೊಣೆ ಅದರ ಹೊಸ ಸಾರಥಿ ಸಂಜಯ್ ಅವರ ಮೇಲಿದೆ

ದಾಸ್ ಅವರಿಗೆ ಆರ್‌ಬಿಐ ಗವರ್ನರ್ ಆಗಿ ಮೂರು ವರ್ಷಗಳ ಹೆಚ್ಚುವರಿ ಅಧಿಕಾರ ಅವಧಿ ಸಿಕ್ಕಿತ್ತು. ದಾಸ್ ಅವರು ಗವರ್ನರ್ ಆಗಿದ್ದ ಅವಧಿಯು ಆರ್‌ಬಿಐ ಗವರ್ನರ್ ಆಗಿ ವ್ಯಕ್ತಿಯೊಬ್ಬರ ಎರಡನೆಯ ಅತಿದೀರ್ಘ ಅವಧಿ. ಅವರ ಆಡಳಿತ ಅವಧಿಯಲ್ಲಿ ಆಂತರಿಕವಾಗಿ ಹಾಗೂ ಹೊರಗಿನಿಂದ ಗಂಭೀರ ಸವಾಲುಗಳು ಎದುರಾಗಿದ್ದವು. ಅದರಲ್ಲೂ, ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿನ ಹಣಕಾಸಿನ ಪರಿಸ್ಥಿತಿಯ ನಿರ್ವಹಣೆಯು ಬಹಳ ಸವಾಲಿನದಾಗಿತ್ತು. ಆ ಸಂದರ್ಭದಲ್ಲಿ ಕೇಂದ್ರೀಯ ಬ್ಯಾಂಕ್ ಕೈಗೊಂಡ ಕ್ರಮಗಳು ಅರ್ಥ ವ್ಯವಸ್ಥೆ, ಸಂಸ್ಥೆಗಳು ಹಾಗೂ ವ್ಯಕ್ತಿಗಳ ಹಣಕಾಸಿನ ಸ್ಥಿತಿಯ ಮೇಲೆ ಸಾಂಕ್ರಾಮಿಕದ ಪ್ರಭಾವದ ತೀವ್ರತೆಯು ಒಂದಿಷ್ಟು ಕಡಿಮೆಯಾಗುವಂತೆ ಮಾಡಿದವು. ದಾಸ್ ಅವರ ನೇತೃತ್ವದಲ್ಲಿ ಹಣಕಾಸಿನ ಶಿಸ್ತಿಗೆ ಆದ್ಯತೆ ನೀಡಲಾಯಿತು, ಇದರಿಂದ ಬ್ಯಾಂಕ್‌ಗಳು ಪ್ರಯೋಜನ ಪಡೆದವು. ಆದರೆ, ಆರ್‌ಬಿಐಗೆ ಇರುವ ಬಹಳ ಮುಖ್ಯವಾದ ಹೊಣೆಯಾದ ಹಣದುಬ್ಬರದ ನಿಯಂತ್ರಣವು ಸಾಧ್ಯವಾಯಿತು ಎನ್ನಲಾಗದು. ಏಕೆಂದರೆ ಹಣದುಬ್ಬರ ಪ್ರಮಾಣವು ಹಲವು ತ್ರೈಮಾಸಿಕಗಳ ಅವಧಿಗೆ ಹೆಚ್ಚಿನ ಮಟ್ಟದಲ್ಲೇ ಉಳಿದಿತ್ತು, ಅದು ಮುಂದಿನ ಕೆಲವು ಸಮಯದವರೆಗೂ ಹೆಚ್ಚಿನ ಮಟ್ಟದಲ್ಲಿ ಉಳಿಯುವ ಸಾಧ್ಯತೆ ಇದೆ. ಪ್ರಾದೇಶಿಕ ಸಂಘರ್ಷಗಳಿಂದಾಗಿ ಉಂಟಾದ ಜಾಗತಿಕ ಅಸ್ಥಿರತೆಯ ಸಂದರ್ಭದಲ್ಲಿ ಕರೆನ್ಸಿ ನಿರ್ವಹಣೆಯೂ ಬಹಳ ಸವಾಲಿನ ಕೆಲಸ ಆಗಿತ್ತು. ದಾಸ್ ಅವರು ಬಹಳ ಸಮರ್ಥ ನಿರ್ವಾಹಕನ ರೀತಿಯಲ್ಲಿ ಕೆಲಸ ಮಾಡಿದರು. ಅದಕ್ಕಾಗಿ ಅವರನ್ನು ಪ್ರಶಂಸಿಸಲಾಗಿದೆ.

ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡುವ ಉದ್ದೇಶದಿಂದ ರೆಪೊ ದರದ ವಿಚಾರದಲ್ಲಿ ಆರ್‌ಬಿಐ ತನ್ನ ನಿಲುವನ್ನು ಸಡಿಲಿಸಬೇಕು ಎಂಬ ಅಭಿಪ್ರಾಯವು ಸರ್ಕಾರದ ಉನ್ನತ ಮಟ್ಟದಲ್ಲಿ, ಕೈಗಾರಿಕೋದ್ಯಮಿಗಳ ನಡುವೆ ಇರುವ ಸಂದರ್ಭದಲ್ಲಿ ಸಂಜಯ್ ಮಲ್ಹೋತ್ರಾ ಅವರು ಅಧಿಕಾರ ವಹಿಸಿಕೊಂಡಿದ್ದಾರೆ. ಆರ್ಥಿಕ ಬೆಳವಣಿಗೆ ಹಾಗೂ ಬೆಲೆ ಸ್ಥಿರತೆ ಸುತ್ತಲಿನ ಚರ್ಚೆಯು ಬಹಳ ಹಳೆಯದು, ಅದು ತಕ್ಷಣಕ್ಕೇನೂ ಕೊನೆಗೊಳ್ಳದು. ಇವೆರಡರ ನಡುವಿನ ಸಂಬಂಧವು ಬಹಳ ಸಂಕೀರ್ಣವಾಗಿದೆ ಕೂಡ. ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಹಣಕಾಸಿನ ನೀತಿಯು ಎಷ್ಟರಮಟ್ಟಿಗೆ ಪರಿಣಾಮಕಾರಿ ಎಂಬ ಬಗ್ಗೆಯೂ ಪ್ರಶ್ನೆಗಳು ಇವೆ. ಈ ಪ್ರಶ್ನೆಗಳು ಹಾಗೂ ಚರ್ಚೆಗಳು ಬಹಳ ಪ್ರಸ್ತುತವೇ ಆದರೂ ಹಣದುಬ್ಬರದ ಪ್ರಮಾಣವನ್ನು ಮಿತಿಯಲ್ಲಿ ಇರಿಸುವ ತನ್ನ ಬದ್ಧತೆಯಿಂದ ಆರ್‌ಬಿಐ ಹಿಂದೆ ಸರಿಯಬಾರದು. ಹಣದುಬ್ಬರವನ್ನು ಹೆಚ್ಚಿನ ಅವಧಿಗೆ ನಿಯಂತ್ರಿಸದಿದ್ದರೆ, ಆರ್ಥಿಕ ಬೆಳವಣಿಗೆಗೆ ಏಟು ಬೀಳುತ್ತದೆ, ಇತರ ಹಲವು ಪರಿಣಾಮಗಳಿಗೂ ಅದು ಕಾರಣವಾಗುತ್ತದೆ. ಮಲ್ಹೋತ್ರಾ ಅವರು ಇದನ್ನು ಮನಸ್ಸಿನಲ್ಲಿ ಇರಿಸಿಕೊಳ್ಳಬೇಕು. ಇವೆಲ್ಲಕ್ಕಿಂತ ಮುಖ್ಯವಾಗಿ, ತಾವು ನೇತೃತ್ವ ವಹಿಸಿರುವ ಸಂಸ್ಥೆಯ ಸ್ವಾತಂತ್ರ್ಯದ ಬಗ್ಗೆಯೂ ಅವರು ಗಮನ ನೀಡಬೇಕು.

ದಿನದ ಟ್ವೀಟ್

ಗೌರವಕ್ಕೆ ಪಾತ್ರರಾಗಿದ್ದರು...

ಧನಕರ್ ಅವರು ರಾಜ್ಯಸಭೆ ಕಂಡ ಅತ್ಯಂತ ಪಕ್ಷಪಾತಿ ಸಭಾಪತಿ ಎಂಬುದಕ್ಕೆ ಯಾವ ಪುರಾವೆಯೂ ಬೇಕಿಲ್ಲ. ಹಾಗಿಲ್ಲದಿದ್ದರೆ, ವಿರೋಧ ಪಕ್ಷಗಳ ಮುಖಂಡರು ರಾಜ್ಯಸಭೆಯ ನಿಕಟಪೂರ್ವ ಸಭಾಪತಿ ವೆಂಕಯ್ಯ ನಾಯ್ಡು ಅವರ ವಿರುದ್ಧ ಏಕೆ ಅಂತಹ ಕ್ರಮಕ್ಕೆ ಮುಂದಾಗಲಿಲ್ಲ? ರಾಜ್ಯಸಭಾ ಸಭಾಪತಿಯಾಗಿದ್ದ ಬಿಜೆಪಿ ಮೂಲದ ಬಿ.ಎಸ್.ಶೆಖಾವತ್ ಅವರು ತಮ್ಮ ನಿಷ್ಪಕ್ಷಪಾತ ನಿಲುವಿಗಾಗಿ ಪ್ರತಿಪಕ್ಷಗಳ ಗೌರವಕ್ಕೆ ಪಾತ್ರರಾಗಿದ್ದರು.

(ರಾಜ್ಯಸಭೆ ಸಭಾಪತಿ ಜಗದೀಪ್ ಧನಕರ್ ಅವರ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸುವ ಸಂಬಂಧ 'ಇಂಡಿಯಾ' ಮೈತ್ರಿಕೂಟವು ನೋಟಿಸ್ ನೀಡಿರುವುದಕ್ಕೆ ಪ್ರತಿಕ್ರಿಯೆ)

ಎಂ.ಕೆ.ವೇಣು, ಪತ್ರಕರ್ತ

ಕಿಡಿನುಡಿ

ರಾಜ್ಯಸಭೆಯ ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸಲು ಹೊರಟಿರುವುದು ಇತಿಹಾಸದಲ್ಲಿ ಇದೇ ಮೊದಲು. ಇದು ಒಳ್ಳೆಯ ಸಂಪ್ರದಾಯ ಅಲ್ಲ. ಇದು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಮಾರಕ ಪರಿಣಾಮಗಳನ್ನು ಉಂಟುಮಾಡಬಹುದು.

ಎಚ್.ಡಿ.ದೇವೇಗೌಡ, ರಾಜ್ಯಸಭಾ ಸದಸ್ಯ, ಜೆಡಿಎಸ್ ವರಿಷ್ಠ

25 ವರ್ಷಗಳ ಹಿಂದೆ

ಸೋಮವಾರ, 13-12-1999

- **ಪಾಕ್ ಜತೆ ಮಾತುಕತೆ ಇಲ್ಲ: ವಾಜಪೇಯಿ**

ಸಾಯಿಂಜ್ ಕಣಿವೆ (ಹಿಮಾಚಲ ಪ್ರದೇಶ), ಡಿ. 12 (ಪಿಟಿಐ)– ಪಾಕಿಸ್ತಾನದ ಸೇನಾಡಳಿತದ ಜತೆ ಮಾತುಕತೆ ನಡೆಸುವುದಿಲ್ಲ ಎಂದು ಪ್ರಧಾನಿ ಎ.ಬಿ. ವಾಜಪೇಯಿ ಅವರು ಇಂದು ಇಲ್ಲಿ ಸ್ಪಷ್ಟಪಡಿಸಿದರು.

ಇಲ್ಲಿ ಜಲವಿದ್ಯುತ್ ಯೋಜನೆಯೊಂದರ ಶಿಲಾನ್ಯಾಸ ನೆರವೇರಿಸಲು ಬಂದ ಅವರನ್ನು ಪತ್ರಕರ್ತರು ಈ ಕುರಿತು ಪ್ರಶ್ನಿಸಿದಾಗ 'ಅಂಥ (ಮಾತುಕತೆಯ) ಸಾಧ್ಯತೆ ಇಲ್ಲ' ಎಂದು ಅವರು ಉತ್ತರಿಸಿದರು.

- **ಸಿಟಿ ಮಾರ್ಕೆಟ್‌ನಲ್ಲಿ ಮೂಗು ಮುಚ್ಚಿಕೊಂಡ ಮುಖ್ಯಮಂತ್ರಿ**

ಬೆಂಗಳೂರು, ಡಿ. 12– ಮುಖ್ಯಮಂತ್ರಿಯಾದ ನಂತರ ಮೊದಲ ಬಾರಿಗೆ ಇಂದು ನಗರ ವೀಕ್ಷಣೆ ಮಾಡಿದ ಎಸ್.ಎಂ. ಕೃಷ್ಣ ಅವರಿಗೆ ನಗರದ ಅವ್ಯವಸ್ಥೆಯ ಕುರಿತ ಅನೇಕ ಕಟು ಸತ್ಯಗಳು ಗೋಚರಿಸಿದವು.

ಗಾಂಧಿ ನಗರಕ್ಕೆ ಭೇಟಿ ನೀಡಿ ವಾಹನ ನಿಲುಗಡೆ ವ್ಯವಸ್ಥೆ ಹಾಗೂ ಭವಿಷ್ಯದ ಯೋಜನೆಯನ್ನು ಪರಿಶೀಲಿಸಿ ಕೆ.ಆರ್. ಮಾರುಕಟ್ಟೆಗೆ ಬಂದ ಮುಖ್ಯಮಂತ್ರಿಗಳಿಗೆ ಅಲ್ಲಿನ ಕೊಳಚೆ ಮತ್ತು ಅವ್ಯವಸ್ಥೆ ಸ್ವಾಗತಿಸಿದವು.

ಕೃಷ್ಣ ರಾಜೇಂದ್ರ ಮಾರುಕಟ್ಟೆಯ ನೆಲಮಾಳಿಗೆಯನ್ನು ಪ್ರವೇಶಿಸುತ್ತಿದ್ದಂತೆ ಅಲ್ಲಿನ ಗಬ್ಬುನಾತ ತಾಳಲಾರದೇ ಮುಖ್ಯಮಂತ್ರಿ ಮೂಗು ಮುಚ್ಚಿಕೊಂಡರು.

50 ವರ್ಷಗಳ ಹಿಂದೆ

ಶುಕ್ರವಾರ, 13-12-1974

- **ರಾಜ್ಯದ ಖದೀಮರ ಪಟ್ಟಿ: ಲೋಕಸಭೆ ಸದಸ್ಯ ಚಂದ್ರಶೇಖರಪ್ಪ ಹೆಸರಿನಲ್ಲಿ ಪತ್ರ**

ಬೆಂಗಳೂರು, ಡಿ. 12– ನಿನ್ನೆ ರಾಜ್ಯಸಭೆಯಲ್ಲಿ ಕಮ್ಯುನಿಸ್ಟ್ ಸದಸ್ಯ ಶ್ರೀ ಭೂಪೇಶ್ ಗುಪ್ತರವರು ಪ್ರಸ್ತಾಪಿಸಿದ ಪತ್ರವನ್ನು ಲೋಕಸಭೆಯ ಸದಸ್ಯ ಚಂದ್ರಶೇಖರಪ್ಪ ಅನ್ನುವವರ ಹೆಸರಿನಲ್ಲಿ ಬರೆಯಲಾಗಿದೆಯೆಂದು ತಿಳಿದುಬಂದಿದೆ.

ಸುಮಾರು ಒಂದು ತಿಂಗಳ ಹಿಂದೆ ಚಂದ್ರಶೇಖರಪ್ಪ ಅನ್ನುವವರ ಲೆಟರ್ ಹೆಡ್‌ನಲ್ಲಿ ಕೇಂದ್ರದ ಹಣಕಾಸು ಸಚಿವರಿಗೆ ಬರೆದ ಪತ್ರದಲ್ಲಿ, ಕರ್ನಾಟಕದಲ್ಲಿ ಕಳ್ಳ ಸಾಗಾಣಿಕೆದಾರರೆಂದು ಕೆಲವರ ಹೆಸರು ಹೇಳಿ, ಅವರ ವಿರುದ್ಧ ಆಂತರಿಕ ಭದ್ರತಾ ಶಾಸನದಂತೆ ಕ್ರಮ ಕೈಗೊಳ್ಳುವಂತೆ ಸಲಹೆ ನೀಡಲಾಗಿತ್ತೆಂದು ಹೇಳಲಾಗಿದೆ.

ಆ ಪತ್ರವು ಹಣಕಾಸು ಸಚಿವರ ಕಾರ್ಯಾಲಯ ತಲುಪಿತೆಂದು ಚಂದ್ರಶೇಖರಪ್ಪನವರಿಗೆ ಪತ್ರ ಬಂದಾಗ, ಅವರಿಗೆ ಆಶ್ಚರ್ಯವಾಗಿ, ತಾವು ಆ ರೀತಿ ಪತ್ರವನ್ನೇ ಬರೆಯಲಿಲ್ಲವೆಂದು ಬರೆದು ತಿಳಿಸಿದರೆಂದು ತಿಳಿದುಬಂದಿದೆ.

- **ಭತ್ತದ ಸಗಟು ವ್ಯಾಪಾರ ಸರ್ಕಾರದ ವಶಕ್ಕೆ**

ಮದ್ರಾಸ್, ಡಿ. 12– ತಮಿಳುನಾಡಿನಲ್ಲಿ ಹೆಚ್ಚುವರಿ ಭತ್ತ ಬೆಳೆಯುವ ಪ್ರದೇಶಗಳ ಭತ್ತದ ಸಗಟು ವ್ಯಾಪಾರವನ್ನು ವಹಿಸಿಕೊಳ್ಳಲು ತಮಿಳುನಾಡು ಸರ್ಕಾರ ನಿರ್ಧರಿಸಿದೆ.

ಇಂದು ಚಳಿಗಾಲದ ಅಧಿವೇಶನ ಪ್ರಾರಂಭಿಸಿದ ರಾಜ್ಯ ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಎಂ. ಕರುಣಾನಿಧಿ ಅವರು ಈ ವಿಷಯವನ್ನು ಪ್ರಕಟಿಸಿದರು.

ಗಾಂಧೀಜಿ ಅಧ್ಯಕ್ಷತೆಯ ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಇದೀಗ ಶತಕದ ಗರಿ

ಅಧಿವೇಶನ: ಏಕೀಕರಣಕ್ಕೆ ಬುನಾದಿ

ವಿಶ್ಲೇಷಣೆ

ಪುರುಷೋತ್ತಮ ಬಿಳಿಮಲೆ

ಮಹಾತ್ಮ ಗಾಂಧಿಯವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್‌ನ 39ನೇ ಅಖಿಲ ಭಾರತ ಅಧಿವೇಶನವು 1924ರ ಡಿಸೆಂಬರ್ 26 ಮತ್ತು 27ರಂದು ಬೆಳಗಾವಿ ನಗರದ ಹೊರವಲಯದಲ್ಲಿ ನಡೆಯಿತು. ಈ ಅಧಿವೇಶನಕ್ಕೆ ಇದೀಗ ನೂರು ವರ್ಷ ತುಂಬುತ್ತಿದೆ. ಗಾಂಧೀಜಿ ಅಧ್ಯಕ್ಷತೆ ವಹಿಸಿದ್ದ ಏಕೈಕ ಅಧಿವೇಶನ ಇದಾದ್ದರಿಂದ ಬೆಳಗಾವಿ ಅಧಿವೇಶನಕ್ಕೆ ಐತಿಹಾಸಿಕ ಮಹತ್ವವೂ ದೊರೆತಿದೆ. ಜೊತೆಗೆ ಭಾರತಕ್ಕೆ ಪೂರ್ಣ ಪ್ರಮಾಣದ ಸ್ವಾತಂತ್ರ್ಯ ಸಿಗಬೇಕೆಂಬ ನಿರ್ಣಯ ಕೈಗೊಂಡಿದ್ದು ಕೂಡಾ ಇಲ್ಲಿಯೇ.

ಬೆಳಗಾವಿಯು ಗಾಂಧೀಜಿಗೆ ಎಷ್ಟು ಆಪ್ತವಾದ ಪ್ರದೇಶವಾಗಿತ್ತೆಂದರೆ, ಅವರು ಒಟ್ಟು ಆರು ಸಲ ಇಲ್ಲಿಗೆ ಬಂದಿದ್ದರು. 1924ರ ಅಧಿವೇಶನಕ್ಕೆ ಬಂದಿದ್ದ ಗಾಂಧೀಜಿ 15 ದಿನ ಬೆಳಗಾವಿಯಲ್ಲೇ ತಂಗಿದ್ದರು.

ಬೆಳಗಾವಿ ಅಧಿವೇಶನವು ಕರ್ನಾಟಕ ಏಕೀಕರಣ ಚಳವಳಿಯನ್ನೂ ಗಟ್ಟಿಗೊಳಿಸಿತು ಎಂಬುದನ್ನು ನಾವು ಮರೆಯಬಾರದು. ಹುಯಿಲಗೋಳ ನಾರಾಯಣ ರಾಯರು ಬರೆದ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಹಾಡನ್ನು ಇದೇ ಅಧಿವೇಶನದಲ್ಲಿ ಸ್ವಾಗತಗೀತೆಯಾಗಿ ಹಾಡಲಾಯಿತು. ಅದನ್ನು ಹಾಡಿದವರು ಆಗ 11 ವರ್ಷ ವಯಸ್ಸಿನ ಶಾಲಾ ಬಾಲಕಿಯಾಗಿದ್ದ ಗಂಗೂಬಾಯಿ ಹಾನಗಲ್. 1970ರವರೆಗೆ ಈ ಗೀತೆ ನಾಡಗೀತೆಯಾಗಿ ಜನಪ್ರಿಯವಾಗಿತ್ತು. ಬೆಳಗಾವಿ ಅಧಿವೇಶನದ ಮೂಲಕ ಈ ಹಾಡು ಗಾಂಧೀಜಿಯೊಂದಿಗೆ ಬೆಸೆದುಕೊಂಡಿದೆ.

20ನೇ ಶತಮಾನದ ಮೊದಲೆರಡು ದಶಕಗಳಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಹಲವರು ಹೋರಾಡಿದರು. ಇದರಲ್ಲಿ ಸಮಾಜದ ಎಲ್ಲ ವರ್ಗದ ಜನ, ಅದರಲ್ಲಿ ಮುಖ್ಯವಾಗಿ ಸಾಹಿತಿಗಳು, ಶಿಕ್ಷಣ ತಜ್ಞರು, ವಕೀಲರು, ವಿದ್ವಾಂಸರು ಮತ್ತು ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಿದ್ದ ಜನರಿದ್ದರು. 1920ರಲ್ಲಿ ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಂಸ್ಥೆ ರಚನೆಯಾದಾಗ ಅದರಲ್ಲಿದ್ದವರು ಬಹುತೇಕವಾಗಿ ಏಕೀಕರಣಕ್ಕೆ ದುಡಿಯುತ್ತಿದ್ದ ಮಹನೀಯರೇ ಆಗಿದ್ದರು. ಈ ನಾಯಕರು ಭಾರತದ ರಾಷ್ಟ್ರೀಯ ಹೋರಾಟ ಮತ್ತು ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಏಕಕಾಲಕ್ಕೆ ದುಡಿಯುತ್ತಾ, ಆ ಎರಡೂ ಹೋರಾಟಗಳ ನಡುವೆ ಸಂಘರ್ಷ ಏರ್ಪಡದಂತೆ ನೋಡಿಕೊಳ್ಳುತ್ತಿದ್ದರು. ಅದೇ ಕಾಲಕ್ಕೆ ಕುವೆಂಪು 'ಜೈ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಕವಿತೆ ಬರೆದು ಆ ಎರಡೂ ಹೋರಾಟಗಳನ್ನು ಸಂಘರ್ಷಾತೀತಗೊಳಿಸಿದರು. ಆ ಕಾಲಕ್ಕೆ ಅದೊಂದು ಮಹತ್ವದ ಘಟನೆಯಾಗಿತ್ತು. 1924ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆಯ ಮಹಾಧಿವೇಶನ ಬೆಳಗಾವಿಯಲ್ಲಿ ನಡೆದಾಗ ಕರ್ನಾಟಕ ಏಕೀಕರಣಕ್ಕೆ ಹೊಸ ಚೈತನ್ಯ ದೊರೆಯಿತು.

ಬೆಳಗಾವಿ ಅಧಿವೇಶನಕ್ಕೆ ಮಂಗಳೂರು, ಕಾರವಾರ, ಮೈಸೂರು ಸಂಸ್ಥಾನ ಮತ್ತು ಕೊಡಗು ಸೇರಿದಂತೆ ಎಲ್ಲ ಕಡೆಯ ಕನ್ನಡ ಭಾಷಿಕರೂ ಆಗಮಿಸಿದ್ದರು. ಈ ಅರ್ಥದಲ್ಲಿ ಅದು ಏಕೀಕರಣಪೂರ್ವದ ಕರ್ನಾಟಕ ಸಮಾವೇಶವೇ ಆಗಿತ್ತು. ಆ ಹೊತ್ತಿಗೆ ಅಲ್ಲಿದ್ದ ಅನೇಕರ ಮೇಲೆ ಪ್ರಭಾವ ಬೀರಿದ ಪುಸ್ತಕವೆಂದರೆ ಕಡಪ ರಾಘವೇಂದ್ರ ರಾಯರ 'ಕನ್ನಡಿಗರ ಕರ್ತವ್ಯ'. ಈ ಪುಟ್ಟ ಪುಸ್ತಕದಲ್ಲಿ ಬಂಗಾಳ, ಆಂಧ್ರ ಮತ್ತು ಮಹಾರಾಷ್ಟ್ರದ ಜನರಿಗೆ ತಮ್ಮ ಭಾಷೆಗಳ ಮೇಲಿರುವ ಅಭಿಮಾನವು ಕನ್ನಡಿಗರಲ್ಲಿ ಯಾಕೆ ಕಾಣುತ್ತಿಲ್ಲ ಎಂಬ ಪ್ರಶ್ನೆಯನ್ನು ಪ್ರಮುಖವಾಗಿ ಎತ್ತಲಾಗಿತ್ತು. 22 ಭಾಗಗಳಲ್ಲಿ ಹಂಚಿಹೋಗಿದ್ದ ಕನ್ನಡಿಗರಿಗೆ ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವುದು ಸುಲಭವಾಗಿರಲಿಲ್ಲ. ಜೊತೆಗೆ, ರಾಘವೇಂದ್ರರಾಯರು ಬಳ್ಳಾರಿ, ಅನಂತಪುರ, ಕಡಪ ಮೊದಲಾದ ಜಿಲ್ಲೆಗಳಲ್ಲಿ ವಾಸವಾಗಿರುವ ಕನ್ನಡಿಗರು ತೆಲುಗು ಭಾಷೆಯಲ್ಲಿ ಮಾತನಾಡುವುದನ್ನೂ ಕನ್ನಡಿಗರಿಗೇ ಕನ್ನಡದ ಬಗ್ಗೆ ತಾತ್ಸಾರ ಮನೋಭಾವ ಇರುವುದನ್ನೂ ಮುನ್ನೆಲೆಗೆ ತಂದಿದ್ದರು. ಎಲ್ಲಕ್ಕಿಂತ ಮಿಗಿಲಾಗಿ, ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಮಿತಿಯಲ್ಲಿ ಕನ್ನಡಿಗರಿಗೆ ಪ್ರಾತಿನಿಧ್ಯವೇ ಇಲ್ಲದಿರುವುದನ್ನು ಗುರುತಿಸಿದ್ದ ಅವರು ಈ ಪರಿಸ್ಥಿತಿಯಿಂದ ಕನ್ನಡ ಮತ್ತು ಕರ್ನಾಟಕವನ್ನು ಪಾರು ಮಾಡಬೇಕೆಂದು ಗಟ್ಟಿಯಾಗಿ ಹೇಳಿದ್ದರು. ಇದು ಬೆಳಗಾವಿ ಅಧಿವೇಶನದ ಮೇಲೆ ಪರೋಕ್ಷವಾಗಿ ಕೆಲವು ಬಗೆಯ ಒತ್ತಡಗಳನ್ನು ಹೇರಿತ್ತು.

ಬೆಳಗಾವಿಯಲ್ಲಿ ಅಧಿವೇಶನದ ಸಂದರ್ಭದಲ್ಲಿ ಪ್ರಕಟವಾದ ಇನ್ನೊಂದು ಮಹತ್ವದ ಕೃತಿಯೆಂದರೆ ಆಲೂರು ವೆಂಕಟರಾಯರ 'ಕರ್ನಾಟಕ ಗತವೈಭವ'. ವಸಾಹತು ಆಡಳಿತಕ್ಕೆ ತೀವ್ರವಾದ ಪ್ರತಿಕ್ರಿಯೆಯಾಗಿ ಬಂದ ಈ ಕೃತಿಯು ಕನ್ನಡಿಗರನ್ನು ಬಡಿದೆಬ್ಬಿಸುವುದರ ಜೊತೆಗೆ ಭಾವಪರವಶತೆಗೂ ಒಳಗುಮಾಡಿತ್ತು ಮತ್ತು 'ನಮ್ಮ ದೇಶದ ನಿಜವಾದ ಇತಿಹಾಸವನ್ನು ನಮ್ಮ ಜನರೇ ಅಭಿಮಾನಪೂರ್ವಕವಾಗಿ ಬರೆಯಬೇಕು' ಎಂಬ ವಾದವನ್ನು ಮುಂದಿಟ್ಟಿತ್ತು. ಆ ಪುಸ್ತಕದಲ್ಲಿ ಆಲೂರರು ಬರೆದ 'ಕರ್ನಾಟಕವು ಒಂದು ಮೃತ ರಾಷ್ಟ್ರವೇ?' ಎಂಬ ಪ್ರಶ್ನೆ ಬಹಳ ಕಾಲದವರೆಗೆ ಕನ್ನಡಿಗರನ್ನು ಕಾಡಿತ್ತು.

ಬೆಳಗಾವಿ ಸಮಾವೇಶದಲ್ಲಿಯೇ ಬಿಡುಗಡೆಯಾದ ಇನ್ನೊಂದು ಪುಸ್ತಕವೆಂದರೆ ದ.ಕೃ.ಭಾರದ್ವಾಜ ಸಂಪಾದಕತ್ವದ 'ಕರ್ನಾಟಕ ಕೈಪಿಡಿ'. ಈ ಪುಸ್ತಕವನ್ನು ಕಾಂಗ್ರೆಸ್ ಕಮಿಟಿಯ ಪರವಾಗಿ ಸಿದ್ಧಪಡಿಸಲಾಗಿತ್ತು. ಒಂಬತ್ತು ಲೇಖನಗಳಿರುವ ಈ ಪುಸ್ತಕದಲ್ಲಿ ಕರ್ನಾಟಕದ ಭೂವಿವರಣೆ, ಸಂಕ್ಷಿಪ್ತ ಇತಿಹಾಸ, ಕರ್ನಾಟಕದ ಧಾರ್ಮಿಕ ಚಲನೆಗಳು, ಲಲಿತಕಲೆ ಮತ್ತು ಸಾಹಿತ್ಯದ ಕುರಿತು ಉದಾರವಾದಿ ನೆಲೆಯ ಬರಹಗಳಿವೆ. ಅಮೂಲ್ಯವಾದ ಮಾಹಿತಿಗಳು ಮತ್ತು ಅಂಕಿ-ಅಂಶಗಳಿವೆ. ಈ ಕೈಪಿಡಿಯಲ್ಲಿ ನೀಡಿದ ಕರ್ನಾಟಕದ ಗಡಿ ರೇಖೆಗಳೇ ಮುಂದೆ ಕರ್ನಾಟಕದ ನಿಜವಾದ ಗಡಿರೇಖೆಗಳಾಗಬೇಕಾಗಿತ್ತು. ಆದರೆ ಕಾರಣಾಂತರಗಳಿಂದ ಅದಾಗಲಿಲ್ಲ.

ಅಧಿವೇಶನದಲ್ಲಿ ಬಿಡುಗಡೆಯಾದ ಇನ್ನೊಂದು ಕೃತಿಯೆಂದರೆ, ಬೆಳಗಾವಿಯ ಆರ್.ಬಿ.ಕುಲಕರ್ಣಿ ಅವರ 'ಕನ್ನಡಿಗರ ಸರ್ವಸ್ವ ಅಥವಾ ಸಂಯುಕ್ತ-ಕರ್ನಾಟಕ ಪ್ರಾಂತ'. ಈ ಕೃತಿಯನ್ನು 'ಕರ್ನಾಟಕದ ಏಕೀಕರಣಕ್ಕೆ ಹಗಲಿರುಳು ಹಂಬಲಿಸುತ್ತಿರುವ ಕನ್ನಡ ಬಂಧು ಭಗಿನಿಯರ ಅಡಿದಾವರೆಗಳಿಗೆ ಪ್ರೀತಿಯಿಂದ' ಅರ್ಪಿಸಲಾಗಿದೆ. ಇದರ ಮುನ್ನುಡಿಯಲ್ಲಿ 'ಕರ್ನಾಟಕ ಏಕೀಕರಣ ಸಂಘ'ದ ಶಾಖೆಗಳನ್ನು ಜಿಲ್ಲೆ, ತಾಲ್ಲೂಕು ಮತ್ತು ಊರುಗಳಲ್ಲಿ ಸ್ಥಾಪಿಸುವುದು ಅವಶ್ಯವಾಗಿದೆ' ಎಂದು ಹೇಳಲಾಗಿದೆ.

ಇವೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿದರೆ, ಕರ್ನಾಟಕ ಏಕೀಕರಣಕ್ಕೆ ಸಂಬಂಧಿಸಿದಂತೆ ಅನೇಕ ವಿಚಾರಗಳು ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿಯೇ ಸ್ಪಷ್ಟ ರೂಪ ಪಡೆದವು ಎಂದು ಹೇಳಬಹುದು. ಮಹಾತ್ಮ ಗಾಂಧಿ ಇದರ ಹಿಂದಿನ ಪ್ರೇರಕಶಕ್ತಿ.

ಇಷ್ಟೆಲ್ಲ ಪೂರ್ವಸಿದ್ಧತೆಗಳನ್ನು ಮಾಡಿಕೊಂಡೇ ಕನ್ನಡಿಗರು ಬೆಳಗಾವಿ ಅಧಿವೇಶನದಲ್ಲಿ ಪಾಲ್ಗೊಂಡರು. ಅಧಿವೇಶನದ ಜೊತೆಗೇ ಪ್ರಥಮ ಕರ್ನಾಟಕ ಏಕೀಕರಣ ಪರಿಷತ್ತಿನ ಸಭೆಯೂ ಅಲ್ಲಿಯೇ ನಡೆಯಿತು. ಈ ಸಭೆಯ ಅಧ್ಯಕ್ಷತೆ ವಹಿಸಿದ್ದವರು ರಾವ್ ಬಹದ್ದೂರ ಸಿದ್ಧಪ್ಪ ಕಂಬಳಿಯವರು. ಕಂಬಳಿಯವರು ಆಗ ಮುಂಬೈ ವಿಧಾನ ಪರಿಷತ್ತಿನ ಉಪಸಭಾಪತಿಯಾಗಿದ್ದರು. ಅದೇ ವರ್ಷ 'ಅಖಿಲ ಕರ್ನಾಟಕ ಏಕೀಕರಣ ಸಂಘ'ವನ್ನೂ ಹುಟ್ಟುಹಾಕಲಾಯಿತು. ಸಂಘಕ್ಕೆ ಕಾಂಗ್ರೆಸ್ ಬೆಂಬಲ ಘೋಷಿಸಿದಾಗ ಏಕೀಕರಣ ಚಳವಳಿಗೆ ಮತ್ತಷ್ಟು ಬಲ ಬಂತು. ಗಂಗಾಧರ ರಾವ್ ದೇಶಪಾಂಡೆ ಅವರಂತಹ ಪ್ರಭಾವಿ ರಾಜಕಾರಣಿಗಳ ಜೊತೆಗೆ ಆಲೂರು ವೆಂಕಟರಾವ್, ಕಡಪ ರಾಘವೇಂದ್ರ ರಾವ್, ಶಾಂತಕವಿ ಮೊದಲಾದ ಹಲವು ಮಹನೀಯರು ಏಕೀಕರಣ ಚಳವಳಿಯನ್ನು ಮುನ್ನಡೆಸಿದರು. ಕರ್ನಾಟಕ ವಿದ್ಯಾವರ್ಧಕ ಸಂಘ, ಕರ್ನಾಟಕ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಗಳು ಚಳವಳಿಯ ಶಕ್ತಿಯನ್ನು ಹೆಚ್ಚಿಸಿದವು. ಹೀಗೆ, ಕರ್ನಾಟಕ ಏಕೀಕರಣ ಚಳವಳಿಯ ಇತಿಹಾಸದಲ್ಲಿ ಗಾಂಧೀಜಿ ಅಧ್ಯಕ್ಷತೆ ವಹಿಸಿದ್ದ ಬೆಳಗಾವಿ ಅಧಿವೇಶನಕ್ಕೆ ಮಹತ್ವದ ಸ್ಥಾನವೊಂದಿದೆ.

ಕರ್ನಾಟಕ ಸರ್ಕಾರವು ಬೆಳಗಾವಿ ಅಧಿವೇಶನದ ನೆನಪಿಗೆ ಈಗಾಗಲೇ ಅನೇಕ ಉಪಯುಕ್ತ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಇವುಗಳ ಜೊತೆಗೆ, ಈ ಅಧಿವೇಶನವು ಹೇಗೆ ಕರ್ನಾಟಕ ಏಕೀಕರಣಕ್ಕೆ ಭದ್ರವಾದ ಬುನಾದಿಯನ್ನು ಹಾಕಿಕೊಟ್ಟು, ಗಾಂಧೀಜಿಯನ್ನು ಕರ್ನಾಟಕ ರಾಜ್ಯದೊಂದಿಗೆ ಭಾವನಾತ್ಮವಾಗಿ ಬೆಸೆಯಿತು ಎಂಬುದನ್ನೂ ಹೇಳುವುದು ಅಗತ್ಯ.

ಚುರುಮುರಿ

ಆರ್‌ಸಿಬಿ ಕನ್ನಡಿಗ!

• ಗುರು ಪಿ.ಎಸ್.

'ಇಲ್ನೋಡ್ರೀ... ಆರ್‌ಸಿಬಿಯವರು ಹಿಂದಿಯಲ್ಲಿ 'X' ಅಕೌಂಟ್ ತೆರೆದಿದ್ದಾರೆ, ಪ್ಯಾನ್ ಇಂಡಿಯಾ ಆಗ್ತಿದ್ದಾರೆ ಅನಿಸುತ್ತೆ' ಮೊಬೈಲ್ ಹಿಡಿದುಕೊಂಡು ಬಂದಳು ಹೆಂಡತಿ.

'ಮತ್ತೆ ಹಿಂದಿಯಲ್ಲೇ ಅವರು ಅಕೌಂಟ್ ಓಪನ್ ಮಾಡಬೇಕು, ರಾಯಲ್ ಚಾಲೆಂಜರ್ಸ್ ಬೆಂಗಳೂರು ಟೀಮ್‌ನಲ್ಲಿ ಕನ್ನಡದವರೇ ಇಲ್ವಲ್ಲ' ಎಂದಿನ ಬೇಸರದಲ್ಲಿ ಹೇಳಿದೆ.

'ಯಾಕ್ರೀ, ಒಂದಿಬ್ಬರು ಇರಬೇಕಲ್ಲ...'

'ಏನ್ ಪ್ರಯೋಜನ, ಮೂರು ಸೀಸನ್‌ನಿಂದ ಪಾಪ ಒಬ್ಬ ಹುಡುಗನ್ನ ಬೆಂಚ್‌ನಲ್ಲಿಯೇ ಕೂರಿಸಿದ್ದಾರೆ' ಗೊಣಗಿದೆ.

'ನಮ್ ಮಗಾನೂ ಎಷ್ಟ್ ಚೆನ್ನಾಗಿ ಕ್ರಿಕೆಟ್ ಆಡ್ತಾನೆ, ಅಲ್ವೇನ್ರೀ?'

'ಅದಕ್ಕೆ ಏನ್ ಮಾಡಬೇಕು?' ಎಂದೆ.

'ನಮ್ ಮಗನ್ನೂ ಆರ್‌ಸಿಬಿ ಟೀಮ್‌ಗೆ ಸೇರಿಸಬೇಕು ರೀ... ಮುಂದೆ ಅವನೂ ಭಾರತ ತಂಡ ಸೇರಬೇಕು' ಹುಮ್ಮಸ್ಸಿನಲ್ಲಿ ಹೇಳಿದಳು ಪತ್ನಿ.

'ಓಹ್, ಒಮ್ಮೆಗೇ ಇಂಡಿಯಾ ಟೀಮ್‌ಗೆ ಸೇರಿಸಿಕೊಂಡುಬಿಡ್ತಾರೆ ನೋಡು ನಿನ್ನ ಮಗನ್ನ'.

'ಹಾಗಲ್ಲ, ಮೊದಲು ಕರ್ನಾಟಕ, ನಂತರ ಆರ್‌ಸಿಬಿ, ಆಮೇಲೆ ಇಂಡಿಯಾ'.

'ಕರ್ನಾಟಕಕ್ಕೆ ಆಡಿದರೆ ಆರ್‌ಸಿಬಿಗೆ ಸೇರಿಸ್ಕೊಳ್ಳಲ್ಲ ಕಣೆ. ಅದು ಅಲಿಖಿತ ನಿಯಮ'.

'ಅಯ್ಯೋ, ಹಾಗಾದರೆ ಏನ್ ಮಾಡಬೇಕ್ರೀ?'

'ಹೇಗಾದರೂ ಮಾಡಿ ಮಗನನ್ನ ಗುಜರಾತ್ ಐಪಿಎಲ್ ಟೀಮ್‌ಗೆ ಸೇರಿಸೋಣ'.

'ಅಲ್ಲಿಗೆ ಸೇರಿಸಿದರೆ?'

'ಆರ್‌ಸಿಬಿಯಲ್ಲಿನ ಕನ್ನಡಿಗರಿಗಿಂತ ಮುಂಚೆಯೇ ಇಂಡಿಯಾ ಟೀಮ್‌ಗೆ ಸೇರ್ತಾನೆ' ಎಂದು ನಕ್ಕೆ.

'ಐಪಿಎಲ್ ಶುರುವಾಗೋವರೆಗೂ ಹೀಗೆ ಆರ್‌ಸಿಬಿ ಮ್ಯಾನೇಜ್‌ಮೆಂಟ್‌ನ ಬೈಯ್ಕೊಂಡು ಇರ್ತೀರ, ಬೆಂಗಳೂರು ಮ್ಯಾಚ್ ಶುರುವಾಗೋದೇ ತಡ ಟೀವಿ ಮುಂದೆ ಠಿಕಾಣಿ ಹೂಡ್ತೀರ. ಕೊಹ್ಲಿ ಟಿ–ಶರ್ಟ್ ಹಾಕ್ಕೊಂಡು ಸ್ಟೇಡಿಯಂಗೆ ಬೇರೆ ಹೋಗ್ತೀರ...' ಅಣಕಿಸಿದಳು ಹೆಂಡತಿ.

'ಆರ್‌ಸಿಬಿಯಲ್ಲಿ ಬಿ ಇದೆಯಲ್ಲ, ಅದಕ್ಕೆ'.

'ಅಂದ್ರೆ?'

'ಬೆಂಗಳೂರು ಅನ್ನೋ ಎಮೋಷನ್ ಇದೆಯಲ್ಲ, ಮ್ಯಾಚ್ ನೋಡಲೇಬೇಕು' ಕಣ್ತುಂಬಿಕೊಂಡೆ.

ಸಂಗತ

ಪ್ಯಾನ್ ಇಂಡಿಯಾ ಚಿತ್ರ: ಹಾಗೆಂದರೆ?

ಯಾವುದೇ ಒಂದು ಸಿನಿಮಾವು ನಿರ್ದೇಶಕ ಅಥವಾ ನಟರ ಕಾರಣದಿಂದ 'ಪ್ಯಾನ್ ಇಂಡಿಯಾ'ದ ಸ್ವರೂಪ ಮತ್ತು ವ್ಯಾಪ್ತಿಯನ್ನು ಪಡೆಯುತ್ತದೆ ಎನ್ನಲಾಗದು

• ಎಚ್.ಎಸ್.ಮಂಜುನಾಥ

'ಕನ್ನಡ ಚಲನಚಿತ್ರ ನಿರ್ಮಾಪಕರು, ನಿರ್ದೇಶಕರು ತಮ್ಮ ದೃಷ್ಟಿಯನ್ನು ವಿಶಾಲಗೊಳಿಸಿಕೊಂಡು ಪ್ಯಾನ್ ಇಂಡಿಯಾ ಪ್ರೇಕ್ಷಕರತ್ತ ಗಮನಹರಿಸುವ ಕಾಲ ಬಂದಿದೆ' ಎಂದು ಈಚೆಗೆ ಕೆಲವು ಚಿತ್ರೋದ್ಯಮಿಗಳು ಹೇಳತೊಡಗಿದ್ದಾರೆ. 'ಕೆ.ಜಿ.ಎಫ್. ಸರಣಿ ಸಿನಿಮಾಗಳಿಂದ ಯಶ್ ಪ್ಯಾನ್ ಇಂಡಿಯಾ ಮಾದರಿ ತೇಲಿಬಿಟ್ಟ ನಂತರ... ದೊಡ್ಡ ಬಜೆಟ್ ಚಿತ್ರಗಳದೇ ಪ್ರತ್ಯೇಕ ಪ್ರಭೇದ ಆಗಿಬಿಟ್ಟಿದೆ' ಎಂಬ ಅಭಿಪ್ರಾಯ 'ಕರ್ನಾಟಕ: ಚಿನ್ನದ ಹೊಳಪು' ಸರಣಿಯ ಭಾಗವಾಗಿ ಪ್ರಕಟಗೊಂಡ (ಪ್ರ.ವಾ., ನ. 21) 'ಕನ್ನಡ ಸಿನಿಮಾ: ಸಮೃದ್ಧ ಸಂಸ್ಕೃತಿಯಿಂದ ಪ್ಯಾನ್- ಇಂಡಿಯಾ ಬಾಣಲೆವರೆಗೆ' ಎಂಬ ಶೀರ್ಷಿಕೆಯ ಲೇಖನದಲ್ಲಿ ವ್ಯಕ್ತವಾಗಿದೆ. ಈ ಪ್ಯಾನ್ ಅಂದರೇನು ಎಂಬುದನ್ನು ಮೊದಲು ಅರ್ಥಮಾಡಿಕೊಳ್ಳಬೇಕಾಗಿದೆ.

ಗ್ರೀಕ್‌ನಲ್ಲಿ pas (ಪಾಸ್) ಅಂದರೆ ಎಲ್ಲ. ಅದರಿಂದ ಬಂದಿರಬಹುದಾದ pan (ಪ್ಯಾನ್) ಪದದ ಈಗಿನ ಅರ್ಥ ಎಲ್ಲರನ್ನೂ ಒಳಗೊಳ್ಳುವುದು. ಇದನ್ನು ಪ್ರಿಫಿಕ್ಸ್ ಆಗಿ ಬಳಸಿ ಪ್ಯಾನ್ ಅಮೆರಿಕನ್ ಎಂಬಂತಹ ಪದಪುಂಜಗಳು ಬಂದಿವೆ. ಅದು ಒಂದು ಕ್ರಿಯಾಪದವೂ ಹೌದು- ನಿಧಾನವಾಗಿ ಚಲಿಸು- ಅಕ್ಕ-ಪಕ್ಕಕ್ಕೆ ಅಥವಾ ಮೇಲೆ ಕೆಳಗೆ. ನಾಮಪದವಾಗಿ ನಮಗೆ ಗೊತ್ತು- ತವಾ, ಕಾವಲಿ, ಬಾಣಲೆ. ಪ್ಯಾನ್ ಇಂಡಿಯಾ ಅಂದರೆ ಇಡೀ ಭಾರತ ಎಂದಿಟ್ಟುಕೊಳ್ಳೋಣ. ಒಂದು ಚಲನಚಿತ್ರ ಹಾಗೆ ಅನ್ನಿಸುವುದು ಅಥವಾ ಆಗುವುದು ಯಾವಾಗ? ಕಲ್ಪನೆ, ವಸ್ತುಹಂತದಲ್ಲಿಯೇ? ಇಡುವ ಬಜೆಟ್‌ನಿಂದಲೇ? ಅನುಸರಿಸುವ ಪ್ರಚಾರ ಹಾಗೂ ಮಾರ್ಕೆಟಿಂಗ್ ತಂತ್ರಗಳಿಂದಲೇ ಅಥವಾ ಕರ್ನಾಟಕದ ಆಚೆಯೂ ಪ್ರದರ್ಶನಗೊಂಡು ಜನಮನ್ನಣೆ, ಬಾಕ್ಸ್ ಆಫೀಸ್ ಗಳಿಕೆ ಪಡೆದಾಗಲೇ?

ಬಾಣಲೆ ಎಂಬ ಪದ ಬಳಸಿದಾಗ ಬಾಣಲೆಯಿಂದ ಬೆಂಕಿಗೆ ಎಂಬ ಪ್ರಯೋಗ ನೆನಪಿಗೆ ಬರುತ್ತದೆ. ಹೋಳಿಗೆಯನ್ನು ಇಂಗ್ಲಿಷ್‌ನಲ್ಲಿ ಪ್ಯಾನ್‌ಕೇಕ್ ಎಂದುಬಿಡುವುದುಂಟು. ಈಚೆಗೆ ನಡೆದ 'ಬರಹದಿಂದ ತೆರೆಗೆ' ಎಂಬ ಸಂವಾದದಲ್ಲಿ, ಕಾದಂಬರಿಯೊಂದು ಸಿನಿಮಾ ಆದಾಗ ಬೇರೆಯದೇ ರೂಪ ತಳೆಯುವ ಸಾಧ್ಯತೆಯ ಬಗೆಗೆ ಆದ ಚರ್ಚೆ ಕೇಳಿ, ಒಂದು ಕನ್ನಡ ನಾಟಕ ಅದೇ ಭಾಷೆಯಲ್ಲಿ ಚಲನಚಿತ್ರವಾಗಿ, ಬೇರೆ ಭಾಷೆಯ ಚಿತ್ರವೊಂದಕ್ಕೂ ಸ್ಫೂರ್ತಿ ನೀಡಿದ ಉದಾಹರಣೆಯೊಂದು ನೆನಪಾಯಿತು.

'ನಾಗಮಂಡಲ' ನಾಟಕವನ್ನು ಗಿರೀಶ ಕಾರ್ನಾಡರು ಬರೆದದ್ದು ಷಿಕಾಗೊ ವಿಶ್ವವಿದ್ಯಾಲಯದಲ್ಲಿದ್ದಾಗ. ಅದರ ಇಂಗ್ಲಿಷ್ ರೂಪ ಅಲ್ಲೇ ಪ್ರದರ್ಶನವಾಯಿತು. ಮೂಲ ಕನ್ನಡ ನಾಟಕ ಹತ್ತು ತಿಂಗಳ ನಂತರ ಬೆಂಗಳೂರಿನಲ್ಲಿ ಪ್ರದರ್ಶಿತವಾಯಿತು. ಪುಸ್ತಕವು 1989ರಲ್ಲಿ ಹೊರಬಂದರೆ, ಸಿನಿಮಾ ಬಿಡುಗಡೆಯಾಗಿದ್ದು 1997ರಲ್ಲಿ. ಸ್ವಾರಸ್ಯಕರ ವಿಷಯವೆಂದರೆ, ಹಿಂದಿಯಲ್ಲಿ 'ಪಹೇಲಿ' ಎಂಬ ಚಿತ್ರ 2005ರಲ್ಲಿ ಬಂತು. ಅದು 1973ರಲ್ಲಿ ಮಣಿ ಕೌಲ್ ನಿರ್ದೇಶಿಸಿದ್ದ 'ದುವಿಧಾ' ಚಿತ್ರದ ರೀಮೇಕ್ ಆಗಿತ್ತು. 'ನಾಗಮಂಡಲ' ಹಾಗೂ 'ಪಹೇಲಿ'ಯಲ್ಲಿ ಕೆಲವು ಹೋಲಿಕೆಗಳನ್ನು ಕಾಣಬಹುದು. ಕಾರ್ನಾಡರಿಗೆ ಆ ಕಥೆ ಹೇಳಿದವರು ಎ.ಕೆ.ರಾಮಾನುಜನ್. ಪಹೇಲಿಯು ರಾಜಸ್ಥಾನದ ಜನಪದ ಕತೆಯೊಂದನ್ನು ಆಧರಿಸಿದ್ದು. ನಾಗಮಂಡಲ ಯಶಸ್ಸು ಪಡೆಯಿತು, ಪಹೇಲಿ ಅಷ್ಟು ಜನಮನ್ನಣೆ ಗಳಿಸಲಿಲ್ಲ. ಯಾರಾದರೂ ಮೊದಲಲ್ಲೇ 'ನಾನು ಪ್ಯಾನ್ ಇಂಡಿಯಾ ಸಿನಿಮಾ ಮಾಡುತ್ತೇನೆ' ಎಂದು ಹೇಳಿಕೊಂಡರೆ ನಾವು ಅದನ್ನು ಪ್ಯಾನ್ (= ತೀವ್ರವಾಗಿ ಟೀಕಿಸು) ಮಾಡಬಹುದು. ಏಕೆಂದರೆ ಅಂತಿಮವಾಗಿ ಅದನ್ನು ನಿರ್ಧರಿಸುವವರು ಪ್ರೇಕ್ಷಕರು.

ನಾಗಮಂಡಲ ನಾಟಕ ಭಾರತದ ಹೊರಗೆ ಜನ್ಮತಾಳಿ, ಇಲ್ಲಿ ಪ್ರದರ್ಶಿತವಾಗಿ ನಂತರ ಸಿನಿಮಾ ರೂಪದಲ್ಲಿ ಇಲ್ಲಿ ಮತ್ತು ಹೊರಗೆ ಹೆಸರಾಯಿತು. ಮೂಲ ಕತೆಯ ದೃಷ್ಟಿಯಿಂದ ಅದು ಲೋಕಲ್ ಅಥವಾ ಪ್ರಾದೇಶಿಕ ಇರಬಹುದು. ಆದರೆ ವಿವಿಧ ಭಾಷೆಗಳ ಪ್ರೇಕ್ಷಕರ ಗಮನ ಸೆಳೆಯುವಲ್ಲಿ ಅದು ಯಶಸ್ವಿಯಾಯಿತು. ನಿರ್ದೇಶಕ, ನಟರ ಕಾರಣದಿಂದ ಸಿನಿಮಾವು 'ಪ್ಯಾನ್...' ಸ್ವರೂಪ, ವ್ಯಾಪ್ತಿ ಪಡೆಯುತ್ತದೆ ಎನ್ನುವಂತಿಲ್ಲ. ನಾಗಾಭರಣ, ಪ್ರಕಾಶ್ ರಾಜ್, ಅಮೋಲ್ ಪಾಲೇಕರ್, ಶಾರುಖ್ ಖಾನ್- ಇವರಲ್ಲಿ ಯಾರು ಹೆಚ್ಚು ಪ್ಯಾನ್ ಇಂಡಿಯಾ ವ್ಯಕ್ತಿ ಎಂದು ಹೋಲಿಸುವುದು ಅಸಂಗತ.



ನಾನು ನಾಗಮಂಡಲ ನಾಟಕವನ್ನು ಓದಿದ್ದು ಹಾಗೂ ರಂಗಪ್ರದರ್ಶನ ನೋಡಿದ್ದು ಕೃತಿ ಹೊರಬಂದ ಹತ್ತು ವರ್ಷಗಳ ನಂತರ. ಸಿನಿಮಾ ನೋಡಿದ್ದೂ ತಡವಾಗಿಯೇ. ಈ ವರ್ಷ ಮತ್ತೆ ಓದಿದೆ, ಸಿನಿಮಾದ ಹಾಡುಗಳನ್ನು ಮತ್ತೆ ಕೇಳಿದೆ. ಇವೆಲ್ಲ ಭಿನ್ನ ಭಿನ್ನ ಅನುಭವ ನೀಡಿವೆ. ಪ್ರಸ್ತಾವನೆಯಲ್ಲಿನ ಒಂಬತ್ತು ಪುಟಗಳನ್ನು ಓದಿದಾಗ, ಪ್ರದರ್ಶನದಲ್ಲಿ ಇದನ್ನೆಲ್ಲ ಹೇಗೆ ಅಳವಡಿಸುತ್ತಾರೆ ಎಂಬ ಸವಾಲು ಕಾಡಿತ್ತು. ದೀಪದ ಜ್ಯೋತಿಗಳೂ ಪಾತ್ರಗಳೇ. ಕತೆಯು ಸುಂದರ ಯುವತಿಯ ರೂಪ ತಾಳುತ್ತದೆ.

ಮನುಷ್ಯ ಪಾತ್ರಧಾರಿ (ನಾಟಕ ಆಡಿಸಿದವ) 'ಯಾರೊಬ್ಬರ ಸ್ವತ್ತಾಗಿ ಉಳೀಲಿಕ್ಕಲ್ಲ ಕತೆ ಹುಟ್ಟೋದು' ಅನ್ನುತ್ತಾನೆ. 'ಹಗಲು ಹೊತ್ತಿನ ಮುಖ ಬೇರೆ, ರಾತ್ರಿಯ ಸ್ಪರ್ಶ ಬೇರೆ' ಎಂಬುದು ರಾಣಿಯನ್ನು ಕಾಡುವ ದ್ವಂದ್ವ. ಸಿನಿಮಾದ ಮೊದಲ ಕೆಲವು ನಿಮಿಷ 'ಇದು ನಾಟಕವೋ ಸಿನಿಮಾನೋ' ಎಂಬ ದ್ವಂದ್ವ ನನ್ನದಾಗಿತ್ತು! ಒಟ್ಟಿನಲ್ಲಿ ಕೃತಿಯೊಂದರ ಮೂಲ ರೂಪದಿಂದ ಬೇರೆಯದೇ ಮಾಧ್ಯಮಕ್ಕೆ ತಂದಾಗ ಕೆಲವೊಮ್ಮೆ ಬದಲಾವಣೆಗಳು ಹೆಚ್ಚಾಗಿ ಪ್ರಭಾವ ಅಳ್ಳಕವಾಗಬಹುದು ಅಥವಾ ಸಿನಿಮಾ ಮೂಲಕತೆಗಿಂತ ಮುಂದೆ ಹೋಗಿ ಪ್ರೇಕ್ಷಕರನ್ನು ಹೆಚ್ಚು ತಟ್ಟಲೂಬಹುದು.

ಪ್ಯಾನ್ ಎಂಬುದು ಚಲನಚಿತ್ರದಲ್ಲಿ ಸಾರ್ವತ್ರಿಕ ಮೌಲ್ಯ ಇದೆಯೇ ಎಂಬುದನ್ನು ಅವಲಂಬಿಸಿರುತ್ತದೆ. ಪ್ರಾರಂಭದಲ್ಲೇ 'ಪ್ಯಾನ್' ರಾಗ ಹಾಡಿದರೆ ಮನೆಯನ್ನೇ (ರಾಜ್ಯದ ಫಿಲ್ಮ್ ಮಾರುಕಟ್ಟೆ) ಗೆಲ್ಲಲಾಗದಿರಬಹುದು, ಮಾರು (ಹೊರಗಿನ ಪ್ರೇಕ್ಷಕರು) ಗೆಲ್ಲುವುದು ದೂರವೇ ಉಳಿಯಿತು!

ವಾಚಕರ ವಾಣಿ

ಹೆಮ್ಮೆ ಮೂಡಿಸುವವರ ಸನ್ಮಾನಿಸಬಾರದೇಕೆ?

ಮಡಿಕೇರಿ ತಾಲ್ಲೂಕಿನ ಗಾಳಿಬೀಡು ಗ್ರಾಮ ಪಂಚಾಯಿತಿ ಮತ್ತು ಉಡುಪಿ ಜಿಲ್ಲಾ ಪಂಚಾಯಿತಿಗೆ ಇತ್ತೀಚೆಗೆ ರಾಷ್ಟ್ರ ಪ್ರಶಸ್ತಿಗಳು ಸಂದಿವೆ, ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶೇ 100ರಷ್ಟು ಹಾಜರಾತಿ ಇದ್ದ ಮಕ್ಕಳಿಗೆ ಆ ಶಾಲೆಯ ಶಿಕ್ಷಕರೊಬ್ಬರು ಸ್ವಂತ ಖರ್ಚಿನಲ್ಲಿ ವಿಮಾನ ಪ್ರಯಾಣ ಮಾಡಿಸಿಕೊಂಡು ಬಂದಿದ್ದಾರೆ... ಇಂಥ ಹೃದಯಸ್ಪರ್ಶಿ ಸಂಗತಿಗಳು ನಾಡಿನಲ್ಲಿ ಆಗಾಗ ವರದಿಯಾಗುತ್ತಲೇ ಇರುತ್ತವೆ. ಇದಕ್ಕೆ ಕಾರಣರಾದವರನ್ನು ಸರ್ಕಾರದ ಮಟ್ಟದಲ್ಲಿ ಗುರುತಿಸಿ, ಕನಿಷ್ಠ ವರ್ಷಕ್ಕೆ ಒಮ್ಮೆಯಾದರೂ ಅವರನ್ನೆಲ್ಲ ಒಂದೆಡೆ ಸೇರಿಸಿ, ಸರಳವಾಗಿಯಾದರೂ ಸನ್ಮಾನಿಸುವ, ಅವರ ಬಗ್ಗೆ ನಾಲ್ಕು ಒಳ್ಳೆಯ ಮಾತನಾಡುವ ಕಾರ್ಯಕ್ರಮವನ್ನು ರಾಜ್ಯ ಸರ್ಕಾರ ಹಮ್ಮಿಕೊಳ್ಳಬೇಕು.

ಮುಖ್ಯಮಂತ್ರಿ ಕಚೇರಿಯಲ್ಲಿ ಇದಕ್ಕೆಂದೇ ಒಂದು ವ್ಯವಸ್ಥೆ ಇದೆ. ಆದರೆ, ಅಲ್ಲಿನವರಿಗೆ ಅದರ ಪರಿವೆಯೇ ಇಲ್ಲದಿರುವುದು ವಿಪರ್ಯಾಸ. ಅವರು ಕುಂಭಕರ್ಣನನ್ನು ಧ್ಯಾನಿಸುತ್ತ ಕುಳಿತಿದ್ದಾರೆ, ಅಷ್ಟೆ! ಇಂತಹ ಸಂಗತಿಗಳನ್ನು ಮುಖ್ಯಮಂತ್ರಿಯವರ ಗಮನಕ್ಕೆ ತರುವುದು ಅವರ ಆದ್ಯ ಕರ್ತವ್ಯ. ಈ ಬಗೆಯ ಕಾರ್ಯಕ್ರಮವನ್ನು ಮೊದಲು ಕಲ್ಯಾಣ ಕರ್ನಾಟಕದಿಂದ ಆರಂಭಿಸುವುದು ಉತ್ತಮ. ಅದರಿಂದ ಅಲ್ಲಿನ ಮಕ್ಕಳು ಮುದಗೊಂಡಾರು. ಮುಖ್ಯಮಂತ್ರಿ ಈ ವಿಷಯದಲ್ಲಿ ಹಿಂದೆ ಬೀಳದಿರಲಿ.

ಎಸ್.ಕೆ.ಕುಮಾರ್, ಬೇಲೂರು

ಆನ್‌ಲೈನ್ ಸಾಲ: ಬೇಕಿದೆ ಅಂಕುಶ

ವಿಶಾಖಪಟ್ಟಣದಲ್ಲಿ ಯುವಕನೊಬ್ಬ ಮೊಬೈಲ್ ಆ್ಯಪ್ ಮೂಲಕ ಪಡೆದಿದ್ದ ₹ 2,000 ಮೊತ್ತದ ಸಾಲವನ್ನು ಹಿಂದಿರುಗಿಸಲು ತಡವಾಗಿದ್ದಕ್ಕೆ, ಆ ಆ್ಯಪ್‌ಗೆ ಸಂಬಂಧಿಸಿದವರು ಯುವಕನ ಪತ್ನಿಯ ಮುಖಕ್ಕೆ ನಕಲಿ ನಗ್ನಚಿತ್ರವನ್ನು ಅಂಟಿಸಿ ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟಿದ್ದರಿಂದ ಮನನೊಂದ ಆತ ಆತ್ಮಹತ್ಯೆ ಮಾಡಿಕೊಂಡಿರುವ ಸುದ್ದಿಯನ್ನು ಓದಿ ಆಘಾತವಾಯಿತು. ಆನ್‌ಲೈನ್ ಗೇಮ್‌ನ ಚಾಳಿಗೆ ಬಿದ್ದಿರುವ ನೂರಾರು ಯುವಕರಿಗೆ ಆನ್‌ಲೈನ್ ಮೂಲಕ ಸಾಲ ನೀಡಿ, ಅವರು ಕೊಡುವುದು ತಡವಾದಾಗ ಇದೇ ರೀತಿ ಅವರ ಅಥವಾ ಅವರಿಗೆ ಸಂಬಂಧಿಸಿದವರ ಕೃತಕ ನಗ್ನಚಿತ್ರಗಳನ್ನು ಸೃಷ್ಟಿಸಿ, ಅವರ ತಂದೆ ತಾಯಿ, ಸ್ನೇಹಿತರಿಗೆ ಕಳುಹಿಸಿ ಮಾನಸಿಕವಾಗಿ ಹಿಂಸೆ ಕೊಡುವ ದಂಧೆ ಅವ್ಯಾಹತವಾಗಿ ನಡೆಯುತ್ತಿದೆ.

ಯುವಕರಿಗೆ ಅದರಲ್ಲೂ ವಿದ್ಯಾರ್ಥಿಗಳಿಗೆ ಯಾವ ಗ್ಯಾರಂಟಿಯ ಮೇಲೆ ಸಾಲ ನೀಡಲಾಗುತ್ತದೆ, ಅದಕ್ಕೆ ಅವರು ಒದಗಿಸುವ ಭದ್ರತೆಯಾದರೂ ಏನು? ತಮ್ಮ ಮಕ್ಕಳದು ಎಂದು ಭಾವಿಸಿದ ಅಸಭ್ಯ ಚಿತ್ರಗಳನ್ನು ನೋಡಿ ಆ ಕುಟುಂಬದವರಿಗೆ ಆಗುವ ಆಘಾತವನ್ನು ಇಂತಹ ವಿಕೃತ ಮನಸ್ಸುಗಳು ಅರಿಯಬೇಕಿದೆ. ಹಲವಾರು ದಾಖಲೆಗಳನ್ನು ಕೊಟ್ಟರೂ ಸಾಲ ಕೊಡಲು ಸತಾಯಿಸುವ ಹಣಕಾಸು ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಸಾಲ ಕೊಡುವುದಾದರೂ ಹೇಗೆ? ಸರ್ಕಾರ ಇಂತಹವರ ವಿರುದ್ಧ ಕಠಿಣ ಕ್ರಮಗಳನ್ನು ತೆಗೆದುಕೊಂಡು ಇಂತಹ ಅನಾಹುತಗಳನ್ನು ತಡೆಯಬೇಕಿದೆ. ಆನ್‌ಲೈನ್ ಆಟಗಳ ಚಟಕ್ಕೆ ಬಿದ್ದಿರುವ ವಿದ್ಯಾರ್ಥಿಗಳು, ಯುವಕರು ಸಹ ಇಂತಹ ದಂಧೆಯ ವಿರುದ್ಧ ಜಾಗೃತರಾಗಬೇಕಾಗಿದೆ. ಮೋಸ ಹೋಗುವವರು ಇರುವ ತನಕ ಮೋಸ ಮಾಡುವವರು ಇದ್ದೇ ಇರುತ್ತಾರೆ ಎಂಬುದನ್ನು ಅರಿಯಬೇಕಾಗಿದೆ.

ಮಲ್ಲತಹಳ್ಳಿ ಎಚ್. ತುಕಾರಾಂ, ಬೆಂಗಳೂರು

ಕಸಾಪಕ್ಕೂ ಆರ್ಥಿಕ ಅಡಚಣೆ?!

ಮಂಡ್ಯದಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ತಗಲುವ ಖರ್ಚನ್ನು ಮಿತಿಗೊಳಿಸಿ, ಆ ಹಣವನ್ನು ಆರ್ಥಿಕ ಸಂಕಷ್ಟದಲ್ಲಿರುವ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ನೀಡಬೇಕೆಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು ಮಂಡ್ಯ ಜಿಲ್ಲಾಧಿಕಾರಿಗೆ ಸಲಹೆ ನೀಡಿರುವ ಸಂಗತಿ ಮಾಧ್ಯಮದಲ್ಲಿ ಚರ್ಚೆಗೆ ಒಳಗಾಗಿದೆ. ಕಸಾಪ ಕೂಡ ಆರ್ಥಿಕ ಸಮಸ್ಯೆಯನ್ನು ಅನುಭವಿಸುತ್ತಿದೆ ಎಂಬ ಮಾತು ಕೇಳಿಬರುತ್ತಿದೆ. ಅಲ್ಲದೆ ಕನ್ನಡ ವಿಶ್ವವಿದ್ಯಾಲಯದ ನಿರ್ವಹಣೆಯ ಹೊಣೆ ಸರ್ಕಾರದ್ದೇ ವಿನಾ ಕಸಾಪದ್ದಲ್ಲ.

ಕಸಾಪ ಈಗ ತನ್ನ 'ಕನ್ನಡ ನುಡಿ' ಪತ್ರಿಕೆಯನ್ನು ಸದಸ್ಯರಿಗೆ ನೀಡುವುದನ್ನು ನಿಲ್ಲಿಸಿದೆ. ಅದಕ್ಕೆ ಆರ್ಥಿಕ ಅಡಚಣೆಯೇ ಕಾರಣ ಎಂಬ ಮಾತು ಕೇಳಿಬರುತ್ತಿದೆ. ಹೀಗೆ ಪತ್ರಿಕೆ ವಿತರಣೆಯನ್ನು ಸ್ಥಗಿತಗೊಳಿಸಿರುವುದು ಸರಿಯಲ್ಲ. ಏಕೆಂದರೆ ಇದರಿಂದ ಸದಸ್ಯರಿಗೆ ಕಸಾಪದೊಟ್ಟಿಗಿನ ಸಂಪರ್ಕವೇ ತಪ್ಪಿಹೋಗಿದೆ. ಆದ್ದರಿಂದ ಮಂಡ್ಯ ಸಮ್ಮೇಳನಕ್ಕೆ ಮಿತವ್ಯಯ ಮಾಡುವುದರಿಂದ ಉಳಿಯುವ ಹಣವನ್ನು 'ಕನ್ನಡ ನುಡಿ' ಪತ್ರಿಕೆಯನ್ನು ಕಸಾಪ ಸದಸ್ಯರಿಗೆ ಕಳುಹಿಸಲು ತಗಲುವ ಖರ್ಚಿಗೆ ಬಳಸಲಿ. ಆ ಮೂಲಕ ಕಸಾಪ ತನ್ನ ಸದಸ್ಯರೊಂದಿಗೆ ಮತ್ತೆ ಸಂಪರ್ಕ ಬೆಳೆಸಲಿ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಅಪಾಯಕಾರಿ ರಸ್ತೆ: ವೈಜ್ಞಾನಿಕವಾಗಿ ಪುನರ್‌ನಿರ್ಮಿಸಿ

ಹಾಸನ– ಮೈಸೂರು ಹೆದ್ದಾರಿಯ ಕಿತ್ತಾನೆ ಗಡಿ ಬಳಿ ಇತ್ತೀಚೆಗೆ ಭೀಕರ ಅಪಘಾತ ಸಂಭವಿಸಿ ಪ್ರೊಬೇಷನರಿ ಐಪಿಎಸ್ ಅಧಿಕಾರಿ ಹರ್ಷವರ್ಧನ್ ಅವರು ಸಾವಿಗೀಡಾಗಿದ್ದ ಅದೇ ಜಾಗದಲ್ಲಿ ಈಗ ಇನ್ನೊಂದು ಅಪಘಾತವಾಗಿದೆ. ಈ ಹಿಂದೆಯೂ ಅಲ್ಲಿ ಸರಣಿ ಅಪಘಾತಗಳು ಸಂಭವಿಸಿವೆ.

ಒಂದೈದು ನಿಮಿಷ ನಿಂತು ಆ ಸ್ಥಳವನ್ನು ಗಮನಿಸಿದರೆ, ಇಂತಹ ನಿರಂತರ ಅಪಘಾತಗಳಿಗೆ ಅವೈಜ್ಞಾನಿಕ ರಸ್ತೆ ನಿರ್ಮಾಣವೇ ಕಾರಣ ಎಂಬುದು ತಿಳಿಯುತ್ತದೆ. ಈ ನೆಲವು ನೈಸರ್ಗಿಕವಾಗಿ ತಗ್ಗು– ದಿಣ್ಣೆಗಳಿಂದ ಕೂಡಿದೆ. ಅದನ್ನು ಸರಿಪಡಿಸಿ, ಶೇಕಡ 100ರಷ್ಟು ಅಲ್ಲದಿದ್ದರೂ ಕನಿಷ್ಠ 500 ಮೀಟರ್ ದೂರದವರೆಗಿನ ವಾಹನಗಳಾದರೂ ಕಾಣುವ ಹಾಗೆ ರಸ್ತೆ ನಿರ್ಮಿಸಬೇಕು. ಆದರೆ ಅಲ್ಲಿ ತಗ್ಗು– ದಿಣ್ಣೆ ಪ್ರಕಾರವೇ ರಸ್ತೆ ಮಾಡಲಾಗಿದೆ. ಹೀಗಾಗಿ, ತಗ್ಗಿನಲ್ಲಿರುವ ವಾಹನಗಳು ಕಾಣಿಸುವುದಿಲ್ಲ. ಯಾವುದೇ ವಾಹನ ಬರುತ್ತಿಲ್ಲ ಎಂದು ಭಾವಿಸಿ ಜನ ರಸ್ತೆ ದಾಟಲು ಮುಂದಾಗುತ್ತಾರೆ. ವೇಗದಿಂದ ಬರುವ ವಾಹನಗಳಿಗೂ ರಸ್ತೆ ದಾಟುತ್ತಿರುವವರು ಕಾಣಿಸುವುದಿಲ್ಲ. ಇದು ಅಪಘಾತಗಳಿಗೆ ಕಾರಣವಾಗುತ್ತಿದೆ.

ಈ ಎಲ್ಲ ಸಾವು ನೋವಿಗೆ ಆ ರಸ್ತೆಯನ್ನು ನಿರ್ಮಿಸಿದ ಎಂಜಿನಿಯರ್‌ಗಳು ಮತ್ತು ಗುತ್ತಿಗೆದಾರರನ್ನೇ ನೇರ ಹೊಣೆ ಮಾಡಬೇಕು ಮತ್ತು ಈಗಲಾದರೂ ಆ ರಸ್ತೆಯನ್ನು ವೈಜ್ಞಾನಿಕವಾಗಿ ಸರಿಪಡಿಸಬೇಕು.

ಸುನಿಲ್ ಟಿ.ಪಿ., ತಳಗವಾಡಿ, ಮಳವಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಂಗಾಳ ಕೊಲ್ಲಿ ಚಂಡಮಾರುತಗಳ ತಾಣ

ಚಂಡಮಾರುತಗಳಿಂದ ತೀವ್ರ ಹಾನಿ ಅನುಭವಿಸುತ್ತಿರುವ ಜಗತ್ತಿನ ದೇಶಗಳಲ್ಲಿ ಭಾರತವೂ ಒಂದು. 8,041 ಕಿ.ಮೀ. ಉದ್ದದ ಕರಾವಳಿಯನ್ನು ಹೊಂದಿರುವ ದೇಶವು ಜಗತ್ತಿನ ಶೇ 10ರಷ್ಟು ಉಷ್ಣವಲಯದ ಚಂಡಮಾರುತಗಳಿಗೆ ಗುರಿಯಾಗುತ್ತಿದೆ. ಇವುಗಳಲ್ಲಿ ಹೆಚ್ಚಿನವು ಬಂಗಾಳ ಕೊಲ್ಲಿಯಲ್ಲಿ ಕಾಣಿಸಿಕೊಂಡು, ಪೂರ್ವ ಕರಾವಳಿಯ ಮೂಲಕ ಸಾಗುತ್ತವೆ.

ಅರಬ್ಬಿ ಸಮುದ್ರದಲ್ಲಿ ಚಂಡಮಾರುತಗಳು ಉಂಟಾಗುವುದು ಕಡಿಮೆ. ಅರಬ್ಬಿ ಸಮುದ್ರದಲ್ಲಿ ಒಂದು ಚಂಡಮಾರುತ ಎದ್ದರೆ, ಬಂಗಾಳ ಕೊಲ್ಲಿಯಲ್ಲಿ ನಾಲ್ಕು ಚಂಡಮಾರುತಗಳು ಏಳುತ್ತವೆ. ಅರಬ್ಬಿ ಸಮುದ್ರ ವಿಶಾಲವಾಗಿದ್ದು, ಅಲ್ಲಿ ಚಂಡಮಾರುತ ಎದ್ದರೆ, ಮುಂದಕ್ಕೆ ಸಾಗಿದಂತೆ ಒತ್ತಡ ಮತ್ತು ಉಷ್ಣತೆಯಲ್ಲಿ ವ್ಯತ್ಯಯವಾಗಿ, ಇದ್ದಕ್ಕಿದ್ದಂತೆ ಅದು ಕ್ಷೀಣವಾಗುವ ಸಾಧ್ಯತೆ ಇರುತ್ತದೆ ಎಂಬುದು ತಜ್ಞರ ಹೇಳಿಕೆ.

ಬಂಗಾಳ ಕೊಲ್ಲಿಯಲ್ಲಿ ಹೆಚ್ಚೇಕೆ?

ಬಂಗಾಳಕೊಲ್ಲಿಯಲ್ಲಿ ಸಾಮಾನ್ಯವಾಗಿ ಪ್ರತಿ ವರ್ಷ ಏಪ್ರಿಲ್–ಮೇ –ಜೂನ್ ಹಾಗೂ ನವೆಂಬರ್–ಡಿಸೆಂಬರ್‌ನಲ್ಲಿ ಚಂಡಮಾರುತಗಳು ಸೃಷ್ಟಿಯಾಗುತ್ತವೆ. ಇತ್ತೀಚೆಗೆ ಕಡಿಮೆ ದಿನಗಳ ಅಂತರದಲ್ಲಿ ಒಂದರ ಹಿಂದೆ ಚಂಡಮಾರುತಗಳು ಪೂರ್ವ ಕರಾವಳಿಗೆ ಅಪ್ಪಳಿಸುತ್ತಿವೆ. ಭಾರತದಲ್ಲಿ 1891 ಮತ್ತು 1990ರ ನಡುವೆ ಕಾಣಿಸಿಕೊಂಡ ಚಂಡಮಾರುತಗಳ ಅಧ್ಯಯನದಲ್ಲಿ, 262 ಸೈಕ್ಲೋನ್‌ಗಳು ಪೂರ್ವ ಕರಾವಳಿಯಲ್ಲಿ ಕಾಣಿಸಿಕೊಂಡಿವೆ. ಅವುಗಳಲ್ಲಿ 92 ತೀವ್ರ ಸ್ವರೂಪದವು. ಇದೇ ಅವಧಿಯಲ್ಲಿ ಪಶ್ಚಿಮ ಕರಾವಳಿಯಲ್ಲಿ 33 ಸೈಕ್ಲೋನ್‌ಗಳು ಕಾಣಿಸಿಕೊಂಡಿದ್ದರೆ, ಅವುಗಳಲ್ಲಿ 19 ಗಂಭೀರ ಸ್ವರೂಪದ್ದಾಗಿವೆ.

ಅಮೆರಿಕದ ಹವಾಮಾನ ಪತ್ರಿಕೆ ‘ವೆದರ್ ಅಂಡರ್‌ಗ್ರೌಂಡ್’ ಪ್ರಕಾರ, ಭೂಮಿಗೆ ಅಪ್ಪಳಿಸಿದ 35 ವಿನಾಶಕಾರಿ ಚಂಡಮಾರುತಗಳ ಪೈಕಿ 26 ಚಂಡಮಾರುತಗಳು ಬಂಗಾಳ ಕೊಲ್ಲಿಯಲ್ಲಿ ಸೃಷ್ಟಿಯಾದವು.

ಬಂಗಾಳಕೊಲ್ಲಿಯಲ್ಲಿ ಹೆಚ್ಚು ಚಂಡಮಾರುತಗಳು ಹುಟ್ಟಲು ಹಲವು ಕಾರಣಗಳನ್ನು ಪಟ್ಟಿ ಮಾಡುತ್ತಾರೆ ಭೂವಿಜ್ಞಾನಿಗಳು, ಹವಾಮಾನ ತಜ್ಞರು.

ಭೌಗೋಳಿಕ ಲಕ್ಷಣ: ಬಂಗಾಳಕೊಲ್ಲಿಯ ಭೌಗೋಳಿಕ ಲಕ್ಷಣವೇ ಚಂಡಮಾರುತ ಸೃಷ್ಟಿಗೆ ಪೂರಕವಾಗಿದೆ. 21.73 ಲಕ್ಷ ಚದರ ಕಿ.ಮೀ ವ್ಯಾಪ್ತಿಯಲ್ಲಿ ಹರಡಿರುವ ಈ ಸಮುದ್ರವು ಆಲಿಕೆ ಆಕಾರದಲ್ಲಿದೆ. ಇದರ ಸುತ್ತಲೂ ಮೂರು ಕಡೆಗಳಲ್ಲಿ ಭೂಭಾಗ ಇದೆ (ಒಂದು ಕಡೆ ಭಾರತ, ಉಳಿದ ಕಡೆಗಳಲ್ಲಿ ಬಾಂಗ್ಲಾದೇಶ, ಮ್ಯಾನ್ಮಾರ್, ಥಾಯ್ಲೆಂಡ್, ಮಲೇಷ್ಯಾ, ಶ್ರೀಲಂಕಾ ಇದೆ). ಇದರ ಜೊತೆಗೆ, ಕರಾವಳಿಯಿಂದ ಕೊಲ್ಲಿಯ ದೀರ್ಘ ದೂರದವರೆಗೆ ಸಮುದ್ರದ ಆಳವೂ ಕಡಿಮೆ. ವಾಯುಭಾರ ಕುಸಿತ ಉಂಟಾಗುತ್ತಿದ್ದಂತೆಯೇ ಗಾಳಿಯ ವೇಗಕ್ಕೆ ಅಲೆಗಳು ಉಕ್ಕೇರುತ್ತವೆ. ವೇಗವಾಗಿ ಬೀಸುವ ಗಾಳಿ ಆ ಭಾಗದಲ್ಲಿ ಸಾಗುವಾಗ ರಕ್ಕಸ ಅಲೆಗಳು ಕರಾವಳಿಯತ್ತ ಮುನ್ನುಗ್ಗುತ್ತವೆ.

ನೀರು ಬಿಸಿಯಾಗಿರುವುದು: ಬಂಗಾಳ ಕೊಲ್ಲಿಯ ಮೇಲ್ಮೈ ಸದಾ ಬಿಸಿಯಾಗಿರುತ್ತದೆ. ಸಮುದ್ರ ನೀರಿನ ಮೇಲ್ಮೈನ ಸರಾಸರಿ ಉಷ್ಣತೆ 28 ಡಿಗ್ರಿ ಸೆಲ್ಸಿಯಸ್ (26 ರಿಂದ 30 ಡಿಗ್ರಿ ಸೆಲ್ಸಿಯಸ್ ಇರುತ್ತದೆ). ಅರಬ್ಬಿ ಸಮುದ್ರದ ಮೇಲ್ಮೈ ಉಷ್ಣತೆ 24ರಿಂದ 25 ಡಿಗ್ರಿ ಸೆಲ್ಸಿಯಷ್ಟು ಇದೆ. ವಾತಾವರಣದ ಸ್ಥಿತಿಗತಿಯಿಂದಾಗಿ ತಾಪಮಾನ ಇನ್ನಷ್ಟು ಹೆಚ್ಚಾದ ಸಂದರ್ಭದಲ್ಲಿ ನೀರು ಇನ್ನಷ್ಟು ಬಿಸಿಯಾಗಿ ವಾಯುಭಾರ ಕುಸಿತ ಉಂಟಾಗುತ್ತದೆ. ಜಾಗತಿಕ ಹವಾಮಾನ ಬದಲಾವಣೆಯೂ ಚಂಡಮಾರುತಗಳ ಹೆಚ್ಚಳಕ್ಕೆ ಕಾರಣ. ಈ ವರ್ಷದ ಮೇನಲ್ಲಿ ಅಪ್ಪಳಿಸಿದ್ದ ರೀಮಲ್ ಚಂಡಮಾರುತ ಸಂದರ್ಭದಲ್ಲಿ ಬಂಗಾಳ ಕೊಲ್ಲಿಯ ನೀರಿನ ಮೇಲ್ಮೈ ಉಷ್ಣತೆ 31 ಡಿಗ್ರಿ ಸೆಲ್ಸಿಯಷ್ಟಿತ್ತು.

ಪೆಸಿಫಿಕ್ ಸಾಗರ ಮತ್ತು ಬಂಗಾಳ ಕೊಲ್ಲಿ ನಡುವೆ ಭೂಪ್ರದೇಶ ಕಡಿಮೆ ಇರುವುದರಿಂದ ಚಂಡಮಾರುತ ಉಂಟು ಮಾಡುವ ಗಾಳಿಯು ಕರಾವಳಿ ಪ್ರದೇಶಗಳತ್ತ ಸುಲಭವಾಗಿ ಸಾಗುತ್ತವೆ. ಇದು ಮಳೆಯನ್ನು ತರಿಸುತ್ತದೆ. ಭಾರತದಲ್ಲಿ ನೈರುತ್ಯ ಮುಂಗಾರು ಮುಕ್ತಾಯದ ನಂತರ, ಭಾರತದ ವಾಯವ್ಯ ಭಾಗದಿಂದ ಪೂರ್ವದ ಕಡೆಗೆ ಗಾಳಿಯ ಚಲನೆ ಕಡಿಮೆ ಇರುವುದರಿಂದಲೂ ಚಂಡಮಾರುತ ಉಂಟಾಗುವ ಸಾಧ್ಯತೆ ಇರುತ್ತದೆ ಎಂದು ಹೇಳುತ್ತಾರೆ ತಜ್ಞರು.



21.73 ಲಕ್ಷ ಚದರ ಕಿ.ಮೀ
ಬಂಗಾಳ ಕೊಲ್ಲಿಯ ವ್ಯಾಪ್ತಿ

1,610 ಕಿ.ಮೀ
ಬಂಗಾಳ ಕೊಲ್ಲಿಯ ಅಗಲ

2,600 ಮೀಟರ್
ಸರಾಸರಿ ಆಳ

4,694 ಮೀಟರ್
ಗರಿಷ್ಠ ಆಳ

8,041 ಕಿ.ಮೀ
ಭಾರತ ಹೊಂದಿರುವ ಕರಾವಳಿಯ ಒಟ್ಟು ಉದ್ದ

4,653
ಭಾರತದ ಪೂರ್ವ ಕರಾವಳಿಯ (ಬಂಗಾಳಕೊಲ್ಲಿ) ಉದ್ದ

4:1
ಬಂಗಾಳಕೊಲ್ಲಿ ಮತ್ತು ಅರಬ್ಬಿ ಸಮುದ್ರದಲ್ಲಿ ಉಂಟಾಗುವ ಚಂಡಮಾರುತದ ಅನುಪಾತ

10%
ಜಗತ್ತಿನಾದ್ಯಂತ ಉಂಟಾಗುವ ಉಷ್ಣವಲಯದ ಚಂಡಮಾರುತಗಳಲ್ಲಿ ಭಾರತ ಎದುರಿಸುವ ಚಂಡಮಾರುತಗಳ ಪ್ರಮಾಣ

ತಮಿಳುನಾಡು ಕರಾವಳಿಗೆ ‘ಫೆಂಜಲ್’ ಚಂಡಮಾರುತ ಅಪ್ಪಳಿಸಿ, ರಾಜ್ಯದಲ್ಲಿ ಅಕಾಲಿಕ ಮಳೆ ಸುರಿದು 10 ದಿನಗಳೂ ಕಳೆದಿಲ್ಲ. ಬಂಗಾಳ ಕೊಲ್ಲಿಯಲ್ಲಿ ಮತ್ತೆ ವಾಯುಭಾರ ಕುಸಿತ ಉಂಟಾಗಿದೆ. ಅದರ ಪ್ರಭಾವ ರಾಜ್ಯದಲ್ಲೂ ಆಗುತ್ತಿದ್ದು ಮತ್ತೆ ಥಂಡಿ, ಗಾಳಿ, ಮಳೆಯಾಗುತ್ತಿದೆ. ಚಂಡಮಾರುತದ ಪ್ರಭಾವದಿಂದ ಸುರಿಯುತ್ತಿರುವ ಅಕಾಲಿಕ ಮಳೆ ಜನರಿಗೆ ಹಲವು ರೀತಿ ತೊಂದರೆ ಉಂಟುಮಾಡುತ್ತಿದೆ. ವಾಯುಭಾರ ಕುಸಿತ, ಸೈಕ್ಲೋನ್‌ಗಳ ಪರಿಣಾಮದಿಂದ ಪದೇ ಪದೇ ಮಳೆ ಬೀಳುವುದು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿದೆ. ಅರಬ್ಬಿ ಸಮುದ್ರಕ್ಕಿಂತಲೂ ಬಂಗಾಳ ಕೊಲ್ಲಿಯಲ್ಲಿ ಹೆಚ್ಚು ಚಂಡಮಾರುತಗಳು ಸೃಷ್ಟಿಯಾಗುತ್ತಿವೆ. ಇವುಗಳು ಹೆಚ್ಚು ತೀವ್ರವಾಗಿಯೂ ಇವೆ. ಈ ಬಗ್ಗೆ ಅಧ್ಯಯನಗಳು ನಡೆಸಿರುವ ವಿಜ್ಞಾನಿಗಳು, ಆಸಕ್ತಿಕರ ವಿಚಾರಗಳನ್ನು ಹೊರಗೆಡವಿದ್ದಾರೆ

ಫೆಂಜಲ್ ಚಂಡಮಾರುತದ ಕಾರಣಕ್ಕೆ ಪ್ರಕ್ಷುಬ್ಧಗೊಂಡಿದ್ದ ಬಂಗಾಳ ಕೊಲ್ಲಿ

ಆರು ವರ್ಷಗಳಲ್ಲಿ ಅಪ್ಪಳಿಸಿದ ಚಂಡಮಾರುತಗಳು
(ಗಾಳಿಯ ಗರಿಷ್ಠ ವೇಗ ಕಿ.ಮೀ/ಪ್ರತಿ ಗಂಟೆಗೆ)

2019 ಏಪ್ರಿಲ್–ಮೇ	ಫನಿ (213)
2019 ಅಕ್ಟೋಬರ್–ನವೆಂಬರ್	ಬುಲ್‌ಬುಲ್ (139)
2020 ಮೇ	ಅಂಫನ್ (241)
2020 ನವೆಂಬರ್	ನಿವಾರ್ (120)
2020 ನವೆಂಬರ್–ಡಿಸೆಂಬರ್	ಬುರೆವಿ (83)
2021 ಮೇ	ಯಾಸ್ (139)
2021 ನವೆಂಬರ್–ಡಿಸೆಂಬರ್	ಜವಾದ್ (74)
2022 ಮೇ	ಅಸಾನಿ (102)
2022 ಅಕ್ಟೋಬರ್	ಸಿತರಂಗ್ (83)
2022 ಡಿಸೆಂಬರ್	ಮೆಂಡಸ್ (93)
2023 ಮೇ	ಮೋಚಾ (256)
2023 ಅಕ್ಟೋಬರ್	ಹಮೂನ್ (148)
2024 ಮೇ	ರೀಮಲ್ (105)
2024 ಅಕ್ಟೋಬರ್	ಡಾನಾ (130)
2024 ನವೆಂಬರ್–ಡಿಸೆಂಬರ್	ಫೆಂಜಲ್ (95)

ವಿನಾಶ ಸೃಷ್ಟಿಸಿದ್ದ ‘ಭೋಲಾ’, ‘ನರ್ಗೀಸ್’

ಬಂಗಾಳ ಕೊಲ್ಲಿಯು ಭೋಲಾ, ನರ್ಗೀಸ್‌ನಂತಹ ಉಷ್ಣವಲಯದ ಚಂಡಮಾರುತಗಳಿಗೆ ಕುಖ್ಯಾತವಾಗಿದೆ. 1970ರ ನವೆಂಬರ್‌ನಲ್ಲಿ ಬಾಂಗ್ಲಾದೇಶದಲ್ಲಿ ಹುಟ್ಟಿದ್ದ ಭೋಲಾ ಚಂಡಮಾರುತದಿಂದ ಐದು ಲಕ್ಷ ಮಂದಿ ಸಾವಿಗೀಡಾಗಿದ್ದರು. ಜಗತ್ತಿನಲ್ಲಿಯೇ ಅತಿ ಹೆಚ್ಚು ಜನರನ್ನು ಬಲಿ ಪಡೆದಿದ್ದ ಸೈಕ್ಲೋನ್ ಅದು.

ಏಪ್ರಿಲ್ 27, 2008, ಮತ್ತೊಂದು ವಿನಾಶಕಾರಿ ಉಷ್ಣವಲಯದ ಚಂಡಮಾರುತ ಹುಟ್ಟಿತ್ತು. ನರ್ಗೀಸ್ ಎಂದು ಹೆಸರಾಗಿರುವ ಆ ಚಂಡಮಾರುತವು ಬಂಗಾಳ ಕೊಲ್ಲಿಯಲ್ಲಿ ಉಂಟಾಗಿತ್ತು. ಪೂರ್ವದಿಂದ ಈಶಾನ್ಯದತ್ತ ಚಲಿಸುತ್ತಲೇ ಹೆಚ್ಚು ವಿನಾಶಕಾರಿಯಾಗಿದ್ದ ಸೈಕ್ಲೋನ್‌ನಿಂದ 210 ಕಿ.ಮೀ. ವೇಗದಲ್ಲಿ ಗಾಳಿ ಬೀಸತೊಡಗಿತ್ತು. 16.4 ಅಡಿ ಎತ್ತರದ ಅಲೆಗಳು, 600 ಮಿಲಿಮೀಟರ್ ಮಳೆಯಿಂದ 1,40,000 ಮಂದಿ ಸತ್ತಿದ್ದರು. ಸುಮಾರು ₹84 ಸಾವಿರ ಕೋಟಿ ಮೌಲ್ಯದ ಆಸ್ತಿಪಾಸ್ತಿಗೆ ನಷ್ಟವಾಗಿತ್ತು. ಈ ರೀತಿ ಅತ್ಯಂತ ವಿಧ್ವಂಸಕ ಪ್ರಕೃತಿ ವಿಕೋಪಗಳಿಗೆ ಬಂಗಾಳ ಕೊಲ್ಲಿಯು ಕಾರಣವಾಗುತ್ತಿದ್ದು, ಮಾನವೀಯ ಬಿಕ್ಕಟ್ಟು ಸೃಷ್ಟಿಸುತ್ತಿದೆ.

ಮುನ್ನೆಚ್ಚರಿಕೆ ಅಗತ್ಯ: ಚಂಡಮಾರುತಗಳನ್ನು ತಡೆಯಲು ಸಾಧ್ಯವಿಲ್ಲದಿದ್ದರೂ, ಆಧುನಿಕ ವೈಜ್ಞಾನಿಕ ಸಾಧನಗಳಿಂದ ಅವುಗಳ ಸುಳಿವನ್ನು ಪಡೆಯಬಹುದಾಗಿದೆ. ಸೈಕ್ಲೋನ್‌ಗಳನ್ನು ರೇಡಾರ್‌ಗಳು ಹಾಗೂ ಹವಾಮಾನ ಉಪಗ್ರಹಗಳ ಮೂಲಕ ಪತ್ತೆಹಚ್ಚಬಹುದು. ಮುಂಚೆಯೇ ಪತ್ತೆ ಪೂರ್ವಸಿದ್ಧತೆ ಇಲ್ಲದಿದ್ದರೆ ಚಂಡಮಾರುತಗಳು ಅಪಾಯಕಾರಿಯಾಗಿ ಪರಿಣಮಿಸುತ್ತವೆ. ಚಂಡಮಾರುತಗಳ ಗುಣಲಕ್ಷಣಗಳನ್ನು ಅಧ್ಯಯನ ಮಾಡುವ ಮೂಲಕ ಪ್ರಕೃತಿ ವಿಕೋಪ ಎದುರಿಸಲು ಉತ್ತಮ ಸಿದ್ಧತೆ ಮಾಡಿಕೊಳ್ಳಲು, ಮುಂಜಾಗ್ರತೆ ವಹಿಸಲು, ಜನರ ಜೀವ ಉಳಿಸಲು ಮತ್ತು ಹಾನಿ ತಡೆಗಟ್ಟಲು ಸಾಧ್ಯ.

ಹೆಸರು ಬೇರೆ ಬೇರೆ

ಉಷ್ಣವಲಯ ಪ್ರದೇಶಗಳಾದ ಕೆರಿಬಿಯನ್, ಅಟ್ಲಾಂಟಿಕ್ ಮತ್ತು ಉತ್ತರ ಅಮೆರಿಕದಲ್ಲಿ ಚಂಡಮಾರುತವನ್ನು ಹರಿಕೇನ್ ಎಂದೂ, ಹಿಂದೂ ಮಹಾಸಾಗರದಲ್ಲಿ ಸೈಕ್ಲೋನ್, ಪೆಸಿಫಿಕ್ ಸಾಗರದಲ್ಲಿ ಟೈಫೂನ್ ಎಂದೂ, ಫಿಲಿಪ್ಪೀನ್ಸ್‌ನಲ್ಲಿ ಬಗುವೋ ಎಂದೂ ಕರೆಯುತ್ತಾರೆ.

ಆಧಾರ: ನಾಸಾ, ಭಾರತೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಬಿಬಿಸಿ, ವರ್ಲ್ಡ್ ಡೇಟಾ.ಇನ್ಫೊ

ಪ್ರಕ್ಷುಬ್ಧ ಸ್ಥಿತಿಯ ವಿಧಗಳು	ಗಾಳಿಯ ವೇಗ (ಕಿ.ಮೀ./ಪ್ರತಿ ಗಂಟೆಗೆ)
ಕಡಿಮೆ ಒತ್ತಡ	31ಕ್ಕಿಂತ ಕಡಿಮೆ
ವಾಯುಭಾರ ಕುಸಿತ	31-49
ತೀವ್ರ ಕುಸಿತ	49-61
ಚಂಡಮಾರುತ ಲಕ್ಷಣವುಳ್ಳ ಬಿರುಗಾಳಿ	61-88
ತೀವ್ರತರದ ಸುಂಟರಗಾಳಿ	88-117
ಸೂಪರ್ ಚಂಡಮಾರುತ	221ಕ್ಕಿಂತಲೂ ಹೆಚ್ಚು

ವರ್ಗೀಕರಣ ಹೇಗೆ?

ಅರಬ್ಬಿ ಸಮುದ್ರ ಮತ್ತು ಬಂಗಾಳಕೊಲ್ಲಿಯಲ್ಲಿ ಕಂಡುಬರುವ ಪ್ರಕ್ಷುಬ್ಧ ಸ್ಥಿತಿ, ಚಂಡಮಾರುತಗಳನ್ನು ಗುರುತಿಸಲು ಮತ್ತು ವರ್ಗೀಕರಿಸಲು ಭಾರತೀಯ ಹವಾಮಾನ ಇಲಾಖೆ ಮಾನದಂಡಗಳನ್ನು ರೂಪಿಸಿದೆ. ಗಾಳಿಯು ಬೀಸುತ್ತಿರುವ ವೇಗವನ್ನು ಆಧರಿಸಿ ಸಮುದ್ರದಲ್ಲಿ ಉಂಟಾಗುವ ಪ್ರಕ್ಷುಬ್ಧ ಸ್ಥಿತಿಯನ್ನು ಐದು ರೀತಿಯಲ್ಲಿ ಗುರುತಿಸಲಾಗುತ್ತದೆ. ವೇಗದಿಂದ ಬೀಸುವ ಗಾಳಿಯು ಉಂಟು ಮಾಡಬಹುದಾದ ಹಾನಿಯ ತೀವ್ರತೆಯನ್ನು ಆಧಾರವಾಗಿಟ್ಟುಕೊಂಡು ಚಂಡಮಾರುತಗಳನ್ನು ಐದು ರೀತಿಯಲ್ಲಿ ವರ್ಗೀಕರಿಸಲಾಗುತ್ತದೆ.

ಚಂಡಮಾರುತಗಳ ವರ್ಗೀಕರಣ	ಗಾಳಿಯ ವೇಗ (ಕಿ.ಮೀ./ಪ್ರತಿ ಗಂಟೆಗೆ)	ಹಾನಿ ಸಾಮರ್ಥ್ಯ
1	120-150	ಕಡಿಮೆ
2	150-180	ಮಧ್ಯಮ
3	180-210	ವ್ಯಾಪಕ
4	210-250	ಅತ್ಯಂತ ತೀವ್ರ
5	250ಕ್ಕಿಂತ ಹೆಚ್ಚು	ವಿನಾಶಕಾರಿ

ಸಿನಿ ಬಿಟ್ಸ್

ಸೆಟ್ಟೇರಿದ ‘ವೆಂಕಟೇಶಾಯ ನಮಃ’

ಹರೀಶ್ ರಾಜ್ ನಟಿಸಿ, ನಿರ್ದೇಶಿಸುತ್ತಿರುವ ಹೊಸ ಚಿತ್ರ ‘ವೆಂಕಟೇಶಾಯ ನಮಃ’ ಇತ್ತೀಚೆಗಷ್ಟೇ ಸೆಟ್ಟೇರಿದೆ. ಚಿತ್ರಕ್ಕೆ ಪಿ.ಜನಾರ್ದನ ಬಂಡವಾಳ ಹೂಡಿದ್ದಾರೆ.

‘ರೊಮ್ಯಾಂಟಿಕ್ ಕಾಮಿಡಿ ಕಥೆಯನ್ನು ಹೊಂದಿದ್ದು, ಇದರಲ್ಲಿ ಪ್ರೀತಿ, ಪ್ರೇಮದ ಜೊತೆಗೆ ಕೌಟುಂಬಿಕ ಕತೆಯೂ ಇರುತ್ತದೆ. ಸುಮಾರು 45 ದಿನಗಳ ಒಂದೇ ಹಂತದಲ್ಲಿ ಚಿತ್ರೀಕರಣ ಮುಗಿಸುವ ಯೋಜನೆಯಿದೆ. ಚಿತ್ರದಲ್ಲಿ ಉಮಾಶ್ರೀ, ತಬಲಾ ನಾಣಿಯಂತಹ ಹಿರಿಯ ಕಲಾವಿದರ ಜೊತೆಗೆ ಬಹಳಷ್ಟು ಹೊಸ ಕಲಾವಿದರು ನಟಸಲಿದ್ದಾರೆ’ ಎಂದರು ಹರೀಶ್ ರಾಜ್.

ಶ್ರೀನಿವಾಸ್ ಮೂರ್ತಿ ಸಂಗೀತ, ಶಿವಶಂಕರ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಭರ್ಜರಿ ಚೇತನ್, ಪ್ರಮೋದ ಮರವಂತೆ ಸಾಹಿತ್ಯವಿದೆ. ನಾಯಕಿ ಸೇರಿದಂತೆ ಉಳಿದ ಮಾಹಿತಿಯನ್ನು ಶೀಘ್ರದಲ್ಲಿಯೇ ಹಂಚಿಕೊಳ್ಳುವುದಾಗಿ ಚಿತ್ರತಂಡ ಹೇಳಿದೆ.



ಹರೀಶ್ ರಾಜ್

‘ಸಿದ್ಲಿಂಗು-2’ ಚಿತ್ರೀಕರಣ ಪೂರ್ಣ

ಲೂಸ್ ಮಾದ ಯೋಗಿ, ರಮ್ಯಾ ಜೋಡಿಯಾಗಿ ನಟಿಸಿದ್ದ ‘ಸಿದ್ಲಿಂಗು’ ಹೊಸರೀತಿಯ ನಿರೂಪಣೆಯಿಂದ ಜನಮನ್ನಣೆ ಗಳಿಸಿತ್ತು. ಆ ಸಿನಿಮಾ ತೆರೆಕಂಡು 12 ವರ್ಷಗಳ ಬಳಿಕ ಸೆಟ್ಟೇರಿದ ‘ಸಿದ್ಲಿಂಗು-2’ ಚಿತ್ರೀಕರಣ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದೆ.

‘ತೋತಾಪುರಿ’ ಬಳಿಕ ನಿರ್ದೇಶಕ ವಿಜಯ್ ಪ್ರಸಾದ್ ‘ಸಿದ್ಲಿಂಗು’ ಸೀಕ್ವೆಲ್ ಕಥೆಯನ್ನು ಕೈಗೆತ್ತಿಕೊಂಡಿದ್ದರು. ‘ಜಮಾಲಿಗುಡ್ಡ’ ಚಿತ್ರದ ನಿರ್ಮಾಪಕ ಶ್ರೀಹರಿ ರೆಡ್ಡಿ ನಿಹಾರಿಕಾ ಫಿಲ್ಮ್ಸ್ ಅಡಿಯಲ್ಲಿ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

‘ಸಿದ್ಲಿಂಗು ಹಾಸ್ಯ, ಸಂಬಂಧಗಳು, ಪ್ರೀತಿ, ಭಾವನೆಗಳಿಂದ ಜನರ ಮೆಚ್ಚುಗೆ ಗಳಿಸಿತ್ತು. ಇಲ್ಲಿ ಬರೀ ಮೀನಿಂಗ್ ಇರಲಿದೆ. ನನ್ನ ಹಿಂದಿನ ಸಿನಿಮಾಗಳಂತೆ ಡಬಲ್ ಮೀನಿಂಗ್ ಇರುವುದಿಲ್ಲ. ಮೈಸೂರು, ಬೆಂಗಳೂರು ಸುತ್ತಮುತ್ತ ಚಿತ್ರೀಕರಣಗೊಂಡಿದ್ದು, ಒಂದು ಹಾಡನ್ನು ಜಮ್ಮು–ಕಾಶ್ಮೀರದಲ್ಲಿ ಚಿತ್ರೀಕರಿಸಲಾಗಿದೆ’ ಎಂದಿದ್ದಾರೆ ನಿರ್ದೇಶಕ.

‘ಕಿರಗೂರಿನ ಗಯ್ಯಾಳಿಗಳು’ ಖ್ಯಾತಿಯ ಸೋನುಗೌಡ ನಾಯಕಿ. ಅನೂಪ್ ಸೀಳಿನ್ ಸಂಗೀತ, ಅರಸು ಅಂತಾರೆ ಸಾಹಿತ್ಯ ಚಿತ್ರಕ್ಕಿದೆ. ಪದ್ಮಜಾ ರಾಜ್, ಆಂಟೋನಿ ಕಮಲ್, ಮಹಾಂತೇಶ್ ಸೇರಿದಂತೆ ದೊಡ್ಡ ತಾರಾಗಣವಿದೆ.



ಯೋಗಿ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಬಿದ್ದಾಗ ಎದ್ದು ಓಡುವುದೇ ಜೀವನ

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

87

ಮನುಷ್ಯನಿಗೆ ಆತ್ಮವಿಶ್ವಾಸ ಇರಬೇಕು. ಬದುಕುವ ಛಲ ಇರಬೇಕು. ಬದುಕಿನಲ್ಲಿ ಭರವಸೆ ಬೇಕು. ಉತ್ಸಾಹ ಬೇಕು. ಅದೇ ಇಲ್ಲದಿದ್ದರೆ ಬದುಕಿಗೆ ಏನು ಅರ್ಥ? ಜೀವನದ ಸೌಂದರ್ಯ ಎಲ್ಲೈತಿ? ಓಡುವಾಗ ಬೀಳೋದು ಸಹಜ. ಬಿದ್ದಾಗ ಎದ್ದು ಓಡುತ್ತೀವಲ್ಲ ಅಲ್ಲೇ ಬದುಕಿನ ಸೌಂದರ್ಯ ಐತಿ. ಸಣ್ಣ ಮಕ್ಕಳು ಬಿದ್ದರೆ ಯಾಕ್ ಬಿದ್ದೆ ಎಂದು ಕೇಳ್ತಾರೇನು? ಬಿದ್ದರೆ ಎದ್ದೇಳು ಎದ್ದೇಳು ಅಂತಿರ್ತಾರಲ್ಲ. ಸಣ್ಣ ಮಕ್ಕಳಿಗೆ ಎದ್ದೇಳೋದನ್ನು ಕಲಿಸಿದ ಹಾಗೆ ನಾವು ಜೀವನದಲ್ಲಿಯೂ ಎದ್ದೇಳೋದನ್ನು ಕಲಿಯಬೇಕು.

ಪತಂಜಲಿ ಮಹರ್ಷಿ ಇದಕ್ಕೆ ಮೂರು ಸೂತ್ರ ಕಂಡುಕೊಂಡರು. ಮೊದಲನೆಯದ್ದು, ‘ನನ್ನಿಂದ ಏನು ತಪ್ಪಾತು ಅಂತ ವಿಮರ್ಶೆ ಮಾಡು. ಅದನ್ನು ತಿಳಿದುಕೊ. ಎರಡನೆಯದ್ದು ಪ್ರಯತ್ನ ಮಾಡು. ಮೂರನೆಯದ್ದು ಪ್ರಯತ್ನ ಮಾಡಿದರೂ ಫಲ ನನ್ನ ಕೈಯೊಳಗೆ ಇಲ್ಲ ಅನ್ನೋದನ್ನು ತಿಳಿದುಕೊ’ ಎಂದರು. ನಮ್ಮ ತಪ್ಪನ್ನು ನಾವು ತಿಳಿದುಕೊಳ್ಳುವುದಕ್ಕೆ ಸ್ವಾಧ್ಯಾಯ ಎಂದರು. ಸ್ವಾಧ್ಯಾಯ ಎಂದರೆ ವೇದ, ಉಪನಿಷತ್ ಓದೋದು, ತಪಸ್ಸು ಮಾಡೋದು ಅಲ್ಲ. ನಮ್ಮ ಅರಿವಿನಿಂದ ನಮ್ಮನ್ನು ನಾವು ತಿಳಿದುಕೊಳ್ಳೋದು. ದೇಹಕ್ಕೆ ಏನಾದರೂ ತೊಂದರೆ ಆದರೆ ಸ್ಕ್ಯಾನ್ ಮಾಡಿ ತೊಂದರೆ ಎಲ್ಲೈತಿ ಅಂತ ಕಂಡು ಹಿಡಿತಾರಲ್ಲ ಹಾಗೆಯೇ ಅರಿವಿನಿಂದ ನಿನ್ನ ಮನಸ್ಸು ಸ್ಕ್ಯಾನ್ ಮಾಡು. ಆಗ ನಾನು ಎಲ್ಲಿ ತಪ್ಪಿದ್ದೇನೆ ಎನ್ನುವುದು ಗೊತ್ತಾಗುತ್ತದೆ. ನೀನು ಎಲ್ಲಿ ತಪ್ಪಿದೆ ಅಂತ ಪುಸ್ತಕದಲ್ಲಿ ಹುಡುಕಬೇಡ, ಮಸ್ತಕದಲ್ಲಿ ನೋಡಿ ತಿಳಿದುಕೊ. ಪಾಣಿನಿ ಮೊದಲು ಪರೀಕ್ಷೆಯಲ್ಲಿ ಫೇಲಾಗಿದ್ದ. ಆಗ ಅವನ ಪತ್ನಿ ಹೇಳಿದಳು ನೀರು ಕೂಡಾ ಪ್ರಯತ್ನದಿಂದ ಕಲ್ಲನ್ನು ಕೊರೆಯುತ್ತದೆ. ಪ್ರಯತ್ನ ಪಟ್ಟರೆ ಎಲ್ಲ ಸಾಧ್ಯ ಎಂದಳು. ಅದಕ್ಕೆ ಅವನು ತಪ್ಪಸ್ಸು ಮಾಡಿದ. ವಿಶ್ವದ ಮೊಟ್ಟಮೊದಲ ವಯ್ಯಾಕರಣಿಯಾದ. ಪ್ರಯತ್ನದಿಂದ ಎಲ್ಲವೂ ಸಾಧ್ಯ.

ನಾವು ಕೆಟ್ಟ ಆಲೋಚನೆ ಮಾಡಬಾರದು. ಇನ್ನೊಬ್ಬರ ಹೊಲದಲ್ಲಿ ಜಾಸ್ತಿ ಬೆಳೆ ಬಂತು ಎಂದು ಹೊಟ್ಟೆಕಿಚ್ಚು ಪಡಬಾರದು. ನಾನು ಕಷ್ಟಪಟ್ಟು ದುಡಿತೇನಿ, ಮುಂದಿನ ವರ್ಷ ನನ್ನ ಹೊಲದಲ್ಲಿಯೂ ಜಾಸ್ತಿ ಫಲ ಬರಲಿ. ದುಡಿಯಲು ನನ್ನ ರಟ್ಟೆಗೆ ಶಕ್ತಿ ಕೊಡು ಎಂದು ಬೇಡಿಕೊಳ್ಳುವ ಮನಸ್ಸು ಇರಬೇಕು. ಒಬ್ಬ ವ್ಯಾಪಾರಿ ಇದ್ದ. ಯಾರೋ ಅವನ ಹೊಟೇಲ್‌ಗೆ ಬೆಂಕಿ ಹಚ್ಚಿದರು. ಹೊಟೇಲ್ ಟೇಬಲ್ ಕುರ್ಚಿ, ವಸ್ತುಗಳು ಸುಟ್ಟು ಹೋಗಿದ್ದವು. ಆಗ ಸೇವಕರು ಬಂದು ‘ಈಗ ಏನು ಮಾಡೋದು’ ಎಂದು ಕೇಳಿದರು.

ಅದಕ್ಕೆ ವ್ಯಾಪಾರಿ, ‘ನನ್ನ ವೈರಿಗಳು ಟೇಬಲ್, ಕುರ್ಚಿ, ವಸ್ತುಗಳನ್ನು ಸುಟ್ಟಿರಬಹುದು. ಆದರೆ ಮತ್ತೊಂದು ಹೊಟೇಲ್ ಮಾಡಬೇಕು ಎಂಬ ನನ್ನ ಆತ್ಮವಿಶ್ವಾಸವನ್ನು ಸುಡಲು ವೈರಿಗಳಿಗೆ ಸಾಧ್ಯವಿಲ್ಲ’ ಎಂದ. ಆತ್ಮವಿಶ್ವಾಸ ಬಿಡಬಾರದು. ಬೆಳೆದು ನಿಲ್ಲಬಲ್ಲೆ ಎಂಬ ಛಲ ಬೇಕು. ‘ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ ಹರದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ’ ಅಂತ ಬಸವಣ್ಣನವರು ಹೇಳ್ತಾರ. ಅಂದರ ಅವರ ಅಂಗಡಿಯಲ್ಲಿ ಉದ್ರಿ ಇಲ್ಲ. ಎಲ್ಲ ನೇರಾನೇರ ನಗದು ವ್ಯವಹಾರ. ಸೂರ್ಯಾಸ್ತ ಅಂದರ ಸೂರ್ಯ ಮುಳುಗುವುದು. ಹಾಗೆಯೇ ಯೋಗಸ್ಥ ಅಂದರ ಕಾರ್ಯದಲ್ಲಿ ಮುಳುಗುವುದು ಎಂದರ್ಥ. ಅಂದರ ಸುಮ್ಮನೆ ಕೆಲಸ ಮಾಡೋದನ್ನು ಕಲಿಯಬೇಕು ಮನುಷ್ಯ. ಫಲ ನಮ್ಮ ಕೈಯಲ್ಲಿ ಇಲ್ಲ ಅನ್ನೋದನ್ನು ತಿಳಕೋಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಶುಕ್ರವಾರ ಡಿಸೆಂಬರ್ 13, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ತ್ರಯೋದಶಿ ಗಂ. 19-41 ನಕ್ಷತ್ರ: ಭರಣಿ ಗಂ. 07-50 ನಂತರ ಕೃತ್ತಿಕಾ ಗಂ. 29-48, ಯೋಗ: ಶಿವ ಗಂ. 11-54 ಕರಣ: ಕೌಲವ ಗಂ. 09-04, ವೃಶ್ಚಿಕ ಮಾಸದ 27 ನೇ ದಿನ, ಮಳೆನಕ್ಷತ್ರ: ಜ್ಯೇಷ್ಠ 4. **ರಾಹುಕಾಲ:** ಬೆಳಿಗ್ಗೆ 10-30 – 12-00
ಸೂರ್ಯೋದಯ: 06-48 **ಸೂರ್ಯಾಸ್ತ:** 06-02
ಮುಸ್ಲಿಂ ದಿನಾಂಕ: 10 ಜುಮಾದುಸ್ಸಾನಿ
ದಿನ ವಿಶೇಷ: ಕೃತ್ತಿಕಾ ದೀಪಮ್ **ಅದೃಷ್ಟ ಸಂಖ್ಯೆ:** 10, 5

ಮೇಷ: ಕಾರ್ಖಾನೆಯಲ್ಲಿ ವಿದ್ಯುಚ್ಛಕ್ತಿಯ ಲೋಪದಿಂದಾಗಿ ನಷ್ಟ ಸಂಭವಿಸಬಹುದು. ಪರರಿಗೆ ಉಪಕಾರ ಮಾಡದಿದ್ದರೂ ಪರವಾಗಿಲ್ಲ. ಆದರೆ ಕೇಡು ಬಗೆಯದಿರಿ. ಹೋಟೆಲ್ ಉದ್ಯಮಿಗಳಿಗೆ ಹೆಚ್ಚಿನ ಲಾಭವಾಗಲಿದೆ.

ವೃಷಭ: ವಿದ್ಯಾಭ್ಯಾಸದಲ್ಲಿ ಹಿನ್ನಡೆಯಾಗಿ ವಿದ್ಯಾರ್ಥಿಗಳಿಗೆ ನಿರಾಸೆ ಹಾಗೂ ಅಸಹನೆ ಕಾಡಲಿದೆ. ಕಾರ್ಯಸಿದ್ಧಿಯಿಂದ ನೆಮ್ಮದಿ ಕಂಡು ಬರಲಿದೆ. ಚಲನಚಿತ್ರ ನಿರ್ಮಾಪಕರಿಗೆ ನಿರೀಕ್ಷೆಗೂ ಮೀರಿದ ಲಾಭ ಇರಲಿದೆ.

ಮಿಥುನ: ಕೌಟುಂಬಿಕ ವಿಚಾರವಾಗಿ ಪರರ ಮಾತುಗಳನ್ನು ಪರಾಮರ್ಶಿಸದೆಯೇ ವಿವೇಚನೆ ಕಳೆದುಕೊಳ್ಳಬೇಡಿ. ಆಲಸ್ಯದಿಂದಾಗಿ ವಿದ್ಯಾಭ್ಯಾಸದಲ್ಲಿ, ಕಲಿಕೆಯಲ್ಲಿ ಹಿನ್ನಡೆ ಉಂಟಾಗುವುದು.

ಕರ್ಕಾಟಕ: ವೈಯಕ್ತಿಕ ವಿಚಾರಗಳನ್ನು ಆಪ್ತರೊಂದಿಗೆ ಹಂಚಿಕೊಳ್ಳುವುದರಿಂದ ಯಾತನೆ ಕಡಿಮೆಯಾಗಲಿದೆ. ಕಾರ್ಯಸ್ಥಳದಲ್ಲಿ ಸಮಾಧಾನದಿಂದ ವರ್ತಿಸದಿದ್ದರೆ ಅವಮಾನ ಎದುರಿಸಬೇಕಾಗಬಹುದು.

ಸಿಂಹ: ಕೋರ್ಟು ಕಚೇರಿಯ ಕೆಲಸ ಕಾರ್ಯಗಳು ಯಾವುದೇ ವಿಘ್ನಗಳಿಲ್ಲದೆ ಸರಾಗವಾಗಿ ನಡೆಯಲಿವೆ. ಜೀವನದಲ್ಲಿ ನಿಮ್ಮದೇ ಆದ ನಿಯಮಗಳನ್ನು ರೂಢಿಸಿಕೊಳ್ಳಿ. ಸಿಹಿ ತಿನಿಸುಗಳ ತಯಾರಕರಿಗೆ ಬೇಡಿಕೆ ಹೆಚ್ಚುವುದು.

ಕನ್ಯಾ: ಮೇಲಧಿಕಾರಿಗಳೊಂದಿಗೆ ವ್ಯವಹರಿಸುವಾಗ ಅವರಿಗೆ ಅರ್ಥವಾಗುವ ರೀತಿಯಲ್ಲಿ ಸ್ಪಷ್ಟನೆ ನೀಡುವುದು ಒಳ್ಳೆಯದು. ಸ್ವಪ್ರೇರಣೆ, ಸ್ವಪ್ರಯತ್ನದಿಂದ ಕೈಗೊಂಡ ಕಾರ್ಯಗಳು ಈ ದಿನ ಫಲ ನೀಡಲಿವೆ.

ತುಲಾ: ಅಲಂಕಾರಿಕ ಕ್ಷೇತ್ರದಲ್ಲಿ ಸ್ವ–ಸಾಮರ್ಥ್ಯವನ್ನು ಉತ್ತಮ ರೀತಿಯಲ್ಲಿ ಪ್ರದರ್ಶಿಸಿದಲ್ಲಿ, ಉನ್ನತ ಹುದ್ದೆಯನ್ನು ಸುಲಭವಾಗಿ ಪಡೆದುಕೊಳ್ಳುವಿರಿ. ಕ್ರೀಡಾಪಟುಗಳು ತಮ್ಮ ಸಾಮರ್ಥ್ಯ ಪ್ರದರ್ಶಿಸಲು ಸೂಕ್ತ ದಿನ.

ವೃಶ್ಚಿಕ: ವ್ಯಾಪಾರಿಗಳಿಗೆ ನೂತನ ಯೋಜನೆಯ ಬಗ್ಗೆ ಆಲೋಚನೆಗಳು ಬರಲಿವೆ. ಪ್ರಭಾವಿ ವ್ಯಕ್ತಿಗಳ ಸಂಪರ್ಕವು ವೈಯಕ್ತಿಕ ಬೆಳವಣಿಗೆಗೆ ಉಪಯೋಗವಾಗಲಿದೆ. ಸಂಚಾರದಲ್ಲಿ ವಿಘ್ನಗಳು ಎದುರಾಗಬಹುದು.

ಧನು: ಕೆಲಸಕ್ಕಾಗಿ ಅಲೆಯುವಾಗ ಹೊಸ ಜನರ ಪರಿಚಯ ಹಾಗೂ ಹೊಸ ಅನುಭವವು ನೆಮ್ಮದಿಯನ್ನು ತರುತ್ತದೆ. ಸ್ನೇಹಿತರೊಬ್ಬರ ಭೇಟಿಯು ಸಂತೋಷ ಮೂಡಿಸುತ್ತದೆ. ಬೂದು ಬಣ್ಣವು ಶುಭತರಲಿದೆ.

ಮಕರ: ಪಾಲುದಾರಿಕೆ ವ್ಯವಹಾರದಲ್ಲಿರುವವರಿಗೆ ಹೆಚ್ಚಿನ ಬಂಡವಾಳದ ಅವಶ್ಯಕತೆ ಎದುರಾಗಲಿದೆ. ಷೇರುಪೇಟೆ ವ್ಯವಹಾರದಲ್ಲಿರುವವರು ಹೆಚ್ಚಿನ ಹೂಡಿಕೆ ಮಾಡದಿರಿ. ಆಸ್ತಿ ಖರೀದಿಸುವ ಯೋಗವಿದೆ.

ಕುಂಭ: ಸಹೋದರರಲ್ಲಿ ಕ್ಷುಲ್ಲಕ ಕಾರಣಗಳಿಗೆ ಸಂಘರ್ಷ ಏರ್ಪಟ್ಟು, ಒಡಕು ಉಂಟಾಗಲಿದೆ. ನ್ಯಾಯಾಂಗ ಇಲಾಖೆಯವರಿಗೆ ವಿಚಿತ್ರ ರೀತಿಯ ಅನುಭವವಾಗುವುದು.

ಮೀನ: ಕಚೇರಿ ಕೆಲಸಗಳಿಗೆ ನಿರ್ದಿಷ್ಟ ಕಾರ್ಯಸೂಚಿಯನ್ನು ರೂಪಿಸಿಕೊಳ್ಳಿ ಹಾಗೂ ಅಧಿಕ ಸಮಯ ನೀಡಿ. ನೀರಿನ ಬದಲಾವಣೆಯು ಅನಾರೋಗ್ಯಕ್ಕೆ ಕಾರಣವಾಗಬಹುದು. ಅಕ್ಕಿ ವ್ಯಾಪಾರಿಗಳಿಗೆ ಅಧಿಕ ಲಾಭವಾಗಲಿದೆ.

ಪದಬಂಧ 5890

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬೇರೊಂದು ಸ್ಥಳಕ್ಕೆ ಹೋಗುವಿಕೆ (5)
4.ಗಟ್ಟಿಯಾದ ಕೂಗು (3)
5.ಈಕೆ ದುಷ್ಟಸ್ವಭಾವದ ಹೆಂಗಸು (3)
6.ಕಾರು ಓಡಿಸಿದವ ಹಬ್ಬಿಸಿರುವ ಗಾಳಿಸುದ್ದಿ! (3)
7.ನೀರಾಗಿ ಕಲಸಿದ ಮಣ್ಣು (3)
9.ಮಂಕರಿ ಹೊತ್ತಿರುವ ಹೆಡಿಗೆ (3)
10.ಶಿವನ ಧನಸ್ಸು (3)
13.ಸೀರೆಯ ಹೊದೆಯುವ ಭಾಗ (3)
15.ತಿರುಗಿಸಿ ನೋಡಿದರೂ ಸುವರ್ಣವೇ (3)
16.ಬಹು ಹೆಚ್ಚಿನ ಅವಶ್ಯಕತೆ (3)
17.ಕೋಟೆಯ ಸುತ್ತಣ ಮೇಲು ಗೋಡೆ (3)
18.ಸಾಯುವ ಸಮಯವಿದು (5)

ಮೇಲಿಂದ ಕೆಳಕ್ಕೆ
1.ಸ್ಥಾನವನ್ನು ಕಳೆದುಕೊಂಡವನು (4)
2.ವಿದ್ಯಾರ್ಥಿಗಳಿಗೆ ಓದಲು ಗೊತ್ತುಪಡಿಸಿದ ಪುಸ್ತಕ (5)
3.ಗುರುಗುಟ್ಟುತ್ತಿರುವ ಗಂಡುಕುರಿ ಇಲ್ಲಿದೆ (3)
4.ಸಂಪಾದನೆಯನ್ನು ಹೀಗೆನ್ನಿ (3)
8.ಸಭೆಯಲ್ಲಿ ಕುಳಿತಿರುವವನು (3)
9.ಜನ ಹೊಕ್ಕಿರುವ ಗುಡಿ (3)
11.ಹೆಸರಿಡುವ ಶಾಸ್ತ್ರ (5)
12.ಅವನತಿಯ ಸಮಯ (4)
14.ಹಳೆಯ ಸಾಮಾನುಗಳನ್ನು ಮಾರುವ ಸ್ಥಳ (3)
15.ದಯೆಯಿಲ್ಲಿ ಉಲ್ಟಾ ಪಲ್ಟಾ ಆಗಿದೆ (3)



5889ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಖೇಚರ 3.ಅಜರಾಮರ 5.ಸಲ್ಲಾಪ 6.ರಿಸನ 7.ಪರ 9.ಅಶನ 11.ಯಾವಜ್ಜೀವ 13.ನಳಪಾಕ 14.ನಿಯಮ 16.ಕಸ 18.ಪಲ್ಲಂಗ 20.ನಿನಾದ 21.ಲವಲವಿಕೆ 22.ವಿಚಾರ

ಮೇಲಿಂದ ಕೆಳಕ್ಕೆ: 1.ಖೇಚರಿ 2.ರಸನ 3.ಅಪಭ್ರಂಶ 4.ರಾಯಸ 8.ರಮಪಾ 9.ಅವನಿ 10.ನನಮ 12.ವರ್ತಕ 15.ಯವನಿಕೆ 17.ಸಲಿಲ 18.ಪದವಿ 19.ಗಹ್ವರ

ಸುಡೊಕು 6275

4		7		8			2	
	3							
6		5		9		4	1	
	2		6				3	5
5			2		1	8		
	1				9		4	2
	6			2		3		
		8	9				5	7
	5			3	4		9	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6274 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ಸುಧಾ, ಮಯೂರ ಓದಿ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,641
ಇಂದಿನ ಅಂತ್ಯ	24,548
▼	93
ದಿನದ ಕನಿಷ್ಠ	24,527

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹635
12 ಕ್ಕೆ	₹82
ಮೈಸೂರು	
100ಕ್ಕೆ	₹637

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹366-655

ದ್ವಿತಳಿ (ಬಿ.ವಿ) ₹300-786

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹187

ಆರ್‌ಎಸ್‌ಎಸ್-5 ₹182

ಗುಡ್ ಲಾಟ್ (ಪ್ರತಿ ಕೆ.ಜಿಗೆ) ₹177

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹22225
ಎಸಿ	₹11475
ಆರ್‌ಪಿ	₹19000
ಆರ್‌ಸಿ	₹10790

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಶ್ರದ್ಧಾಂಜಲಿ

ಡಾ|| ಆರ್.ಎನ್ ಶಾರದ

ಡಾ|| ಟಿ.ಪಿ ಪದ್ಮರಾಜುರವರ ಧರ್ಮಪತ್ನಿ

ಡಾ|| ಲೇ.ಆರ್.ಎನ್ ಬೈರಾರೆಡ್ಡಿರವರ ಪುತ್ರಿ

05.01.1950 – 12.12.2024

ದುಃಖತಪ್ತರು: ಕುಟುಂಬವರ್ಗ ಮತ್ತು ಸ್ನೇಹಿತರು.

34ನೇ ವರ್ಷದ ನೆನಪು



ಶ್ರೀ ದಿಬ್ಬೂರ್ ಕುಮಾರ್

31.3.36 – 13.12.90

ಪತ್ನಿ, ಮಕ್ಕಳು ಮತ್ತು ಮೊಮ್ಮಕ್ಕಳು

5th YEAR REMEMBRANCE

Sri.K.T.ANKA REDDY

15/04/1932 – 09/12/2019

FOUNDER

Sri Saraswathi Vidya Mandira School, Kaggadasapura and B-Narayanapura

"We Deeply Miss You"

Regards,
Smt.Narayanamma,
Sons, Daughters,
Son in Laws
and Grand Childrens

ತೆರಿಗೆ ಹೆಚ್ಚಿಸಬೇಡಿ: ಕೇಂದ್ರಕ್ಕೆ ಮನವಿ

ನವದೆಹಲಿ (ಪಿಟಿಐ): ಸಿಗರೆಟ್, ತಂಬಾಕು ಸೇರಿ ಕೆಲ ಉತ್ಪನ್ನಗಳ ಮೇಲೆ ಶೇ 35ರಷ್ಟು ಜಿಎಸ್‌ಟಿ ತೆರಿಗೆ ವಿಧಿಸುವ ಪ್ರಸ್ತಾವಕ್ಕೆ ಕೇಂದ್ರ ಹಣಕಾಸು ಸಚಿವಾಲಯ ಮತ್ತು ಜಿಎಸ್‌ಟಿ ಮಂಡಳಿಯು ಒಪ್ಪಿಗೆ ನೀಡಬಾರದು ಎಂದು ವ್ಯಾಪಾರಿಗಳ ಒಕ್ಕೂಟಗಳು ಗುರುವಾರ ಮನವಿ ಮಾಡಿವೆ.

ಈ ಉತ್ಪನ್ನಗಳನ್ನು ಹೆಚ್ಚಿನ ದರದ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯಾಪ್ತಿಯೊಳಗೆ ತರಲು 5ನೇ ಸ್ಲ್ಯಾಬ್ ರಚಿಸಲಾಗುತ್ತಿದ್ದು, ಶೇ 35ರಷ್ಟು ಜಿಎಸ್‌ಟಿ ವಿಧಿಸಲು ಮುಂದಾಗಿದೆ. 55ನೇ ಜಿಎಸ್‌ಟಿ ಮಂಡಳಿ ಸಭೆ ರಾಜಸ್ಥಾನದ ಜೈಸಲ್ಮೇರ್‌ನಲ್ಲಿ ಡಿಸೆಂಬರ್ 21ರಂದು ನಡೆಯಲಿದೆ.

ತೆರಿಗೆ ಹೆಚ್ಚಳದಿಂದ ಚಿಲ್ಲರೆ ವ್ಯಾಪಾರಿಗಳ ಲಾಭದ ಪ್ರಮಾಣ ಕಡಿಮೆಯಾಗಲಿದೆ. ಇದು ದೇಶದ ಆರ್ಥಿಕತೆಯ ಮೇಲೆ ಪರಿಣಾಮ ಬೀರಲಿದೆ. ಸರ್ಕಾರದ ಈ ಕ್ರಮದಿಂದ ಚೀನಾ ಉತ್ಪನ್ನಗಳು ದೇಶದ ತಯಾರಕರಿಗಿಂತಲೂ ಕಡಿಮೆ ದರದಲ್ಲಿ ಪ್ರವೇಶಿಸಲಿದ್ದು, ಮಾರುಕಟ್ಟೆ ಮೇಲೆ ಚೀನಾ ಪ್ರಾಬಲ್ಯವನ್ನು ಸಾಧಿಸಲಿದೆ. ಈ ತೆರಿಗೆ ದರ ಹೆಚ್ಚಳಕ್ಕೆ ಶಿಫಾರಸನ್ನು ಅನುಮೋದಿಸಿದರೆ ಜಿಎಸ್‌ಟಿ ಲಾಭ ಕಡಿಮೆಯಾಗಲಿದ್ದು, ಚಿಲ್ಲರೆ ಮಾರುಕಟ್ಟೆಗೆ ಹಾನಿ ಆಗಲಿದೆ ಎಂದು ಹೇಳಿವೆ.

ದೇಶದಲ್ಲಿ ಸಾಂಪ್ರದಾಯಿಕ ಮಾರಾಟದ ಪ್ರಮಾಣ ಈಗಾಗಲೇ ಇ-ಕಾಮರ್ಸ್ ಮತ್ತು ಕ್ವಿಕ್ ಕಾಮರ್ಸ್‌ನಿಂದ ಕುಸಿತಗೊಂಡಿದೆ. ಜಿಎಸ್‌ಟಿ ಹೆಚ್ಚಿಸಿದರೆ ಬೃಹತ್ ಸಮಸ್ಯೆ ಸೃಷ್ಟಿಸುವ ಜೊತೆಗೆ ಅಕ್ರಮ ವ್ಯಾಪಾರ ಚಟುವಟಿಕೆಗೆ ಅವಕಾಶ ಮಾಡಿಕೊಡಲಿದೆ ಎಂದು ಹೇಳಿವೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	45000-48500
ಕುಮಟಾ	
ಚಾಲಿ	31000-37399
ಚಿಪ್ಪು	11069-28019
ಕೋಕ	6100-25899
ಹಳೆಚಾಲಿ	38599-38699
ಹೊಸಚಾಲಿ	23100-28119
ಪುತ್ತೂರು	
ಕೋಕ	20500-31500
ಹೊಸತು	25000-33500
ಹಳತು	35000-48500
ಸಾಗರ	
ಬಿಳಿಗೋಟು	10199-26099
ಚಾಲಿ	22119-34399
ಕೋಕ	10699-21399
ಕೆಂಪುಗೋಟು	24699-31899
ರಾಶಿ	26989-50329
ಸಿಪ್ಪೆಗೋಟು	7509-17100
ಶಿವಮೊಗ್ಗ	
ಬೆಟ್ಟೆ	45359-57800
ಗೊರಬಲು	17000-33119
ಹೊಸತು	30309-50099
ರಾಶಿ	33009-50200
ಸರಕು	46159-85710
ಸಿದ್ದಾಪುರ	
ಬಿಳಿಗೋಟು	24119-28309
ಚಾಲಿ	32529-37599
ಕೋಕ	20119-25909
ಕೆಂಪುಗೋಟು	21609-21609
ರಾಶಿ	42699-47969
ತಟ್ಟಿಬೆಟ್ಟೆ	27109-34099
ಶಿರಸಿ	
ಬೆಟ್ಟೆ	30209-36899
ಬಿಳಿಗೋಟು	21899-31400
ಚಾಲಿ	35108-39099
ಕೆಂಪುಗೋಟು	11899-24699
ರಾಶಿ	43699-47299
ಯಲ್ಲಾಪುರ	
ಅಪಿ	58059-68779
ಬಿಳಿಗೋಟು	14899-30307
ಚಾಲಿ	31599-38501
ಕೋಕ	6899-17001
ಕೆಂಪುಗೋಟು	15099-24899
ರಾಶಿ	39010-56699
ತಟ್ಟಿಬೆಟ್ಟೆ	28100-36090

ಆಹಾರ ಪದಾರ್ಥಗಳ ಬೆಲೆ ಕಡಿಮೆಯಾಗಿದ್ದರಿಂದ ಇಳಿಕೆ: ಎನ್‌ಎಸ್‌ಒ

ಚಿಲ್ಲರೆ ಹಣದುಬ್ಬರ ಇಳಿಕೆ

ನವದೆಹಲಿ (ಪಿಟಿಐ): ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ (ಸಿಪಿಐ) ಚಿಲ್ಲರೆ ಹಣದುಬ್ಬರವು ನವೆಂಬರ್ ತಿಂಗಳಲ್ಲಿ ಶೇ 5.48ಕ್ಕೆ ಇಳಿಕೆಯಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಗುರುವಾರ ತಿಳಿಸಿದೆ.

ತರಕಾರಿಗಳು ಸೇರಿದಂತೆ ಆಹಾರ ಪದಾರ್ಥಗಳ ದರ ಕಡಿಮೆಯಾಗಿದ್ದರಿಂದ ಹಣದುಬ್ಬರವು ಇಳಿಕೆಯಾಗಿದೆ ಎಂದು ಹೇಳಿದೆ.

ಚಿಲ್ಲರೆ ಹಣದುಬ್ಬರವು ಅಕ್ಟೋಬರ್‌ನಲ್ಲಿ ಶೇ 6.2 ದಾಖಲಾಗಿತ್ತು. ಇದು ಎರಡು ವರ್ಷದ ಗರಿಷ್ಠ ಮಟ್ಟವಾಗಿತ್ತು. ಕಳೆದ ವರ್ಷದ ನವೆಂಬರ್‌ನಲ್ಲಿ ಶೇ 5.5ರಷ್ಟಿತ್ತು. ತರಕಾರಿಗಳು, ಬೇಳೆಕಾಳುಗಳು, ಸಕ್ಕರೆ, ಹಣ್ಣುಗಳು, ಮೊಟ್ಟೆ, ಹಾಲು, ಮಸಾಲೆ ಪದಾರ್ಥಗಳು, ಸಾರಿಗೆ, ಸಂವಹನ, ವೈಯಕ್ತಿಕ ಆರೈಕೆ ಉತ್ಪನ್ನಗಳ ಬೆಲೆ ಕಡಿಮೆಯಾಗಿದ್ದರಿಂದ ಹಣದುಬ್ಬರದಲ್ಲಿ ಇಳಿಕೆಯಾಗಿದೆ ಎಂದು ಎನ್‌ಎಸ್‌ಒ ಹೇಳಿದೆ.

ಅಕ್ಟೋಬರ್‌ನಲ್ಲಿ ಆಹಾರ ಪದಾರ್ಥಗಳ ಹಣದುಬ್ಬರ ಶೇ 10.87ರಷ್ಟಿತ್ತು. ಇದು ನವೆಂಬರ್‌ನಲ್ಲಿ ಶೇ 9.04ಕ್ಕೆ ಇಳಿದಿದೆ. ಕಳೆದ ವರ್ಷದ ನವೆಂಬರ್‌ನಲ್ಲಿ ಶೇ 8.70ರಷ್ಟಿತ್ತು.

ಈ ವರ್ಷದ ನವೆಂಬರ್ ತಿಂಗಳಲ್ಲಿ ಬೆಳ್ಳುಳ್ಳಿ (ಶೇ 85.14), ಆಲೂಗಡ್ಡೆ (ಶೇ 66.65), ಹೂಕೋಸು (ಶೇ 47.7), ಎಲೆಕೋಸು (ಶೇ 43.58) ಮತ್ತು ತೆಂಗಿನ ಎಣ್ಣೆ (ಶೇ 42.13) ಅತಿ ಹೆಚ್ಚು ಬೆಲೆಯನ್ನು ಹೊಂದಿದ್ದವು.

ಈಗ ಹಣದುಬ್ಬರದಲ್ಲಿ ಇಳಿಕೆ ಆಗಿರುವುದರಿಂದ ಆರ್‌ಬಿಐ ಹೊಸ ಗವರ್ನರ್ ಸಂಜಯ್ ಮಲ್ಹೋತ್ರಾ ನೇತೃತ್ವದಲ್ಲಿ ಫೆಬ್ರುವರಿಯಲ್ಲಿ ನಡೆಯಲಿರುವ ಹಣಕಾಸು ನೀತಿ ಸಮಿತಿ ಸಭೆಯು ರೆಪೊ ದರ ಕಡಿತದ ಬಗ್ಗೆ ಯೋಚಿಸಲು ಅವಕಾಶ ನೀಡಿದೆ.

ಅಕ್ಟೋಬರ್‌ನಲ್ಲಿ ಆಹಾರ ಸಿಪಿಐ ಹಣದುಬ್ಬರವು ಗ್ರಾಮೀಣ ಪ್ರದೇಶದಲ್ಲಿ ಶೇ 5.95 ಮತ್ತು ನಗರ ಪ್ರದೇಶದಲ್ಲಿ ಶೇ 4.83ರಷ್ಟಿದೆ. ರಾಜ್ಯಗಳ ಪೈಕಿ ಹಣದುಬ್ಬರ ಛತ್ತೀಸಗಢದಲ್ಲಿ ಅತಿಹೆಚ್ಚು ಶೇ 8.39ರಷ್ಟಿದ್ದರೆ, ದೆಹಲಿಯಲ್ಲಿ ಶೇ 2.65ರಷ್ಟು ಕಡಿಮೆ ಇದೆ ಎಂದು ವರದಿ ಹೇಳಿದೆ.

ದೇಶದ ಹಣದುಬ್ಬರವನ್ನು ಶೇ 4ರಲ್ಲಿ ಇರುವಂತೆ ನೋಡಿಕೊಳ್ಳಬೇಕು ಎಂದು ಕೇಂದ್ರ ಸರ್ಕಾರ ಆರ್‌ಬಿಐಗೆ ಸೂಚಿಸಿದೆ. ಆರ್‌ಬಿಐಯು ರೆಪೊ ದರವನ್ನು ಸತತ 11ನೇ ಬಾರಿ ಶೇ 6.5ರಲ್ಲಿ ಉಳಿಸಿಕೊಂಡಿದೆ.

ಕೈಗಾರಿಕಾ ಉತ್ಪಾದನೆ ಕುಸಿತ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನೆ ಬೆಳವಣಿಗೆಯು ಅಕ್ಟೋಬರ್ ತಿಂಗಳಲ್ಲಿ ಶೇ 3.5ಕ್ಕೆ ಇಳಿದಿದೆ ಎಂದು ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯ ಗುರುವಾರ ತಿಳಿಸಿದೆ.

ಕೈಗಾರಿಕಾ ಉತ್ಪಾದನಾ ಸೂಚ್ಯಂಕ (ಐಐಪಿ) ಆಧಾರದ ಮೇಲೆ ಲೆಕ್ಕ ಹಾಕುವ ಈ ಬೆಳವಣಿಗೆಯು ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಇದು ಶೇ 11.9ರಷ್ಟಿತ್ತು. ಗಣಿಗಾರಿಕೆ, ವಿದ್ಯುತ್ ಮತ್ತು ತಯಾರಿಕೆ ವಲಯದಲ್ಲಿ ಉತ್ಪಾದನೆ ಇಳಿಕೆ ಆಗಿದ್ದರಿಂದ ಬೆಳವಣಿಗೆ ದರವು ಕುಸಿದಿದೆ ಎಂದು ತಿಳಿಸಿದೆ. ಸೆಪ್ಟೆಂಬರ್‌ನಲ್ಲಿ ಶೇ 3.1 ದಾಖಲಾಗಿತ್ತು.

ತಯಾರಿಕಾ ವಲಯದ ಬೆಳವಣಿಗೆ ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಶೇ 10.6 ಇತ್ತು. ಅದು ಈ ಬಾರಿ ಶೇ 4.1ಕ್ಕೆ ಇಳಿದಿದೆ. ಗಣಿಗಾರಿಕೆ ಮತ್ತು ವಿದ್ಯುತ್ ಉತ್ಪಾದನೆ ಕ್ರಮವಾಗಿ ಶೇ 0.9 ಮತ್ತು ಶೇ 2ರಷ್ಟಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಕ್ರಮವಾಗಿ ಶೇ 13.1 ಮತ್ತು ಶೇ 20.4ರಷ್ಟಿತ್ತು.

ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಅಕ್ಟೋಬರ್ ಅವಧಿಯಲ್ಲಿ ಐಐಪಿ ಬೆಳವಣಿಗೆ ಶೇ 4ರಷ್ಟಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಶೇ 7ರಷ್ಟು ಎಂದು ತಿಳಿಸಿದೆ.

ಅಮೆಜಾನ್ ಸಂಸ್ಥೆಯ 5ನೇ 'ಸಂಭವ್ ಸಮ್ಮಿಟ್' ಕಾರ್ಯಕ್ರಮದಲ್ಲಿ ಘೋಷಣೆ

'ಜಾಗತಿಕ ಮಾರುಕಟ್ಟೆಗೆ ದೇಶೀಯ ಉತ್ಪನ್ನಗಳು'

• ರಾಹುಲ ಬೆಳಗಲಿ

ನವದೆಹಲಿ: ಅಮೆಜಾನ್ ಸಂಸ್ಥೆಯು ತನ್ನ ಸೇವೆಯನ್ನು ನಗರ ಪ್ರದೇಶಕ್ಕೆ ಅಲ್ಲದೇ ಗ್ರಾಮೀಣ ಪ್ರದೇಶಕ್ಕೂ ವಿಸ್ತರಿಸಲು ಹಲವು ಯೋಜನೆಗಳನ್ನು ರೂಪಿಸಿಕೊಂಡಿದೆ. ಅದರ ಭಾಗವಾಗಿ ಕೇಂದ್ರ ಉದ್ಯಮ ಸಂವರ್ಧನೆ ಮತ್ತು ಆಂತರಿಕ ವ್ಯಾಪಾರ ಇಲಾಖೆ (ಡಿಪಿಐಐಟಿ) ಜೊತೆ ಒಪ್ಪಂದ ಮಾಡಿಕೊಂಡಿದೆ. ಸಣ್ಣ ಉದ್ಯಮಗಳಿಗೆ ಪ್ರೋತ್ಸಾಹ ನೀಡುವುದರ ಜೊತೆಗೆ ದೇಶೀಯ ಉತ್ಪನ್ನಗಳಿಗೆ ಜಾಗತಿಕ ಮಾರುಕಟ್ಟೆಯಲ್ಲಿ ವೇದಿಕೆ ಕಲ್ಪಿಸಲು ಬಯಸಿದೆ.

ನವದೆಹಲಿಯ ಭಾರತ ಮಂಟಪಂ ಸಭಾಂಗಣದಲ್ಲಿ ನಡೆದ ಅಮೆಜಾನ್ ಸಂಸ್ಥೆಯ 5ನೇ 'ಸಂಭವ್ ಸಮ್ಮಿಟ್' ಕಾರ್ಯಕ್ರಮದಲ್ಲಿ ಡಿಪಿಐಐಟಿ ಇಲಾಖೆ ಜೊತೆ ಒಪ್ಪಂದ ಆಗಿರುವುದನ್ನು ಘೋಷಿಸಲಾಯಿತು.

ನಿತಿನ್ ಗಡ್ಕರಿ

ದೇಶದ ಎಲ್ಲಾ ದಿಕ್ಕುಗಳಲ್ಲಿನ ಕುಗ್ರಾಮಗಳಲ್ಲಿ ವಾಸಿಸುವ ಜನರಿಗೆ ತಲುಪಲು ಸರಕು ಸಾಗಣೆ ಮತ್ತು ಹಡಗು ಸೇವೆಯನ್ನು ಆರಂಭಿಸಿದೆ. ನಿರುದ್ಯೋಗ ಸಮಸ್ಯೆ ನಿವಾರಣೆ ಜೊತೆಗೆ ಗ್ರಾಮೀಣ ಉದ್ಯಮಗಳಿಗೆ ಲಾಭ ವೃದ್ಧಿಸುವ ಗುರಿ ಸಂಸ್ಥೆ ಹೊಂದಿದೆ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಮಾತನಾಡಿ, 'ಅಮೆಜಾನ್ ಸಂಸ್ಥೆಯು ದೇಶೀಯ ಉತ್ಪನ್ನಗಳಿಗೆ ಜಾಗತಿಕ ಮಾರುಕಟ್ಟೆಯಲ್ಲಿ ಅವಕಾಶ ಕಲ್ಪಿಸುತ್ತಿರುವುದು ಶ್ಲಾಘನೀಯ ಕಾರ್ಯ. ದೇಶದ ಅಭಿವೃದ್ಧಿಗೆ ಪೂರಕವಾಗಿ ನಡೆಯುವ ಎಲ್ಲಾ ರೀತಿಯ ವಹಿವಾಟಿಗೆ ಮತ್ತು ಉತ್ತಮ ಕಾರ್ಯಗಳಿಗೆ ಕೇಂದ್ರ ಸರ್ಕಾರ ಸಹಕಾರ ನೀಡಲಿದೆ' ಎಂದರು.

ಅಮೆಜಾನ್ ಸಂಸ್ಥೆಯ ಹಿರಿಯ ಉಪಾಧ್ಯಕ್ಷ ಅಮಿತ್ ಅಗರವಾಲ್ ಮಾತನಾಡಿ, 'ಆರ್ಥಿಕವಾಗಿ ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ದೇಶಗಳಲ್ಲಿ ಭಾರತವು ಮುಂಚೂಣಿಯಲ್ಲಿದೆ. ವಿವಿಧ ಕ್ಷೇತ್ರಗಳಲ್ಲಿ, ಆಯಾಮಗಳಲ್ಲಿ ಮಾರುಕಟ್ಟೆ ವಿಸ್ತರಣೆ ಆಗುತ್ತಿರುವುದನ್ನು ಸದ್ಬಳಕೆ ಮಾಡಕೊಳ್ಳಲಾಗುವುದು' ಎಂದರು.

ಅಮೆಜಾನ್ ಸಂಸ್ಥೆಯ ರಾಷ್ಟ್ರೀಯ ವ್ಯವಸ್ಥಾಪಕ ಸಮೀರ್ ಕುಮಾರ್ ಮಾತನಾಡಿ, 'ಡಿಜಿಟಲ್ ತಂತ್ರಜ್ಞಾನದ ಮೂಲಕ 10 ಲಕ್ಷಕ್ಕೂ ಹೆಚ್ಚು ಸಣ್ಣ ಉದ್ಯಮಗಳನ್ನು ಮಾರುಕಟ್ಟೆಯ ಮುಖ್ಯವಾಹಿನಿಗೆ ತರುತ್ತೇವೆ. ಅವರ ಉತ್ಪನ್ನಗಳಿಗೆ ಹೆಚ್ಚು ಪ್ರಚಾರ ನೀಡುವುದರ ಜೊತೆಗೆ ಸಮಾಜದ ಎಲ್ಲಾ ವರ್ಗಗಳಿಗೆ ಅವಕಾಶ ಕಲ್ಪಿಸಲು ಪ್ರಯತ್ನಿಸುತ್ತೇವೆ' ಎಂದರು.

ಕೇಂದ್ರ ಗ್ರಾಹಕರ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಕಾರ್ಯಕ್ರಮ ಉದ್ಘಾಟಿಸಿದರು. ನಂತರ ನಡೆದ ಚರ್ಚಾಗೋಷ್ಠಿಯಲ್ಲಿ ಪತ್ರಕರ್ತ ವಿಕ್ರಮ್ ಚಂದ್ರ, ಕ್ರೀಡಾಪಟುಗಳಾದ ಸಾನಿಯಾ ಮಿರ್ಜಾ, ಯುವರಾಜ್ ಸಿಂಗ್, ರೋಹಣ ಬೋಪಣ್ಣ ಮತ್ತು ಅಭಿನವ್ ಬಿಂದ್ರಾ ಪಾಲ್ಗೊಂಡಿದ್ದರು.

ಉಕ್ಕು ಆಮದು: ಸರ್ಕಾರದ ಮುಂದೆ ಭದ್ರತಾ ಸುಂಕ ಪ್ರಸ್ತಾವ–ಎಚ್‌ಡಿಕೆ

ನವದೆಹಲಿ: 'ದೇಶಕ್ಕೆ ಆಮದಾಗುವ ಉಕ್ಕಿನ ನಿರ್ದಿಷ್ಟ ವಸ್ತುಗಳ ಮೇಲೆ ಶೇ 25ರಷ್ಟು ಭದ್ರತಾ ಸುಂಕ ವಿಧಿಸುವ ಪ್ರಸ್ತಾವವನ್ನು ಸರ್ಕಾರ ಪರಿಗಣಿಸುತ್ತಿದೆ' ಎಂದು ಕೇಂದ್ರ ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ಉಕ್ಕಿನ ಆಮದಿನ ಮೇಲೆ ಶೇ 25ರಷ್ಟು ಭದ್ರತಾ ಸುಂಕ ವಿಧಿಸುವ ಸಚಿವಾಲಯದ ಪ್ರಸ್ತಾವನೆಯ ಪ್ರಕ್ರಿಯೆ ನಡೆಯುತ್ತಿದೆ ಎಂದು ಸುದ್ದಿಸಂಸ್ಥೆ ಪಿಟಿಐಗೆ ಗುರುವಾರ ತಿಳಿಸಿದ್ದಾರೆ.

ಡಿಸೆಂಬರ್ 2ರಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರನ್ನು ಭೇಟಿಯಾಗಿದ್ದರು. ಈ ವೇಳೆ ದೇಶಕ್ಕೆ ಆಮದಾಗುವ ಉಕ್ಕಿನ ನಿರ್ದಿಷ್ಟ ವಸ್ತುಗಳ ಮೇಲೆ ಶೇ 25ರಷ್ಟು ಭದ್ರತಾ ಸುಂಕ ವಿಧಿಸುವ ಕುರಿತು ಪ್ರಸ್ತಾವ ಸಲ್ಲಿಸಿದ್ದರು.

ವಾಣಿಜ್ಯ ಸಚಿವಾಲಯದ ಶಿಫಾರಸು ಮೇರೆಗೆ ಹಣಕಾಸು ಸಚಿವಾಲಯವು ಸುಂಕವನ್ನು ವಿಧಿಸುವ ಅಂತಿಮ ನಿರ್ಧಾರ ತೆಗೆದುಕೊಳ್ಳಲಿದೆ.

2024–25ರ ಹಣಕಾಸು ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ 55 ಲಕ್ಷ ಟನ್ ಉಕ್ಕು ದೇಶಕ್ಕೆ ಆಮದಾಗಿತ್ತು. ಇದರಲ್ಲಿ 18.5 ಲಕ್ಷ ಟನ್ ಚೀನಾದಿಂದ ಆಮದಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರಧಾನ ಅಭಿಯಂತರರುರವರ ಕಛೇರಿ, ಕೇಂದ್ರ ಕಛೇರಿ ಆವರಣ, ಎನ್.ಆರ್. ಚೌಕ, ಬೆಂಗಳೂರು–560002

ಸಂ.: ಇಐಸಿ/ಬಿಬಿಎಂಪಿ/ಪಿಆರ್/1923/2024–25 ದಿನಾಂಕ: 12.12.2024

ಬಂಡವಾಳ ಹೂಡಿಕೆಗಾಗಿ ಆಸಕ್ತಿ ವ್ಯಕ್ತಪಡಿಸುವಿಕೆ

(ಇಐಸಿ/ಬಿಬಿಎಂಪಿ/ಪಿಆರ್/1923/2024–25ಗೆ ತಿದ್ದುಪಡಿ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಭೂಗತ ಜೋಡಿ ವಾಹನ ಸುರಂಗ ಮಾರ್ಗ ಯೋಜನೆಗಾಗಿ ನಿಧಿಯನ್ನು ಸಂಗ್ರಹಿಸಲು ಉದ್ದೇಶಿಸಿದೆ

ತಿದ್ದುಪಡಿ–1

ವಿಷಯ: "ಕರ್ನಾಟಕ ರಾಜ್ಯದ ಬೆಂಗಳೂರಿನ ಉತ್ತರ–ದಕ್ಷಿಣ ಕಾರಿಡಾರ್‌ಗಾಗಿ ಹೆಬ್ಬಾಳ ಎಸ್ಟೀಮ್ ಮಾಲ್ ಜಂಕ್ಷನ್‌ನಿಂದ ಸಿಲ್ಕ್ ಬೋರ್ಡ್ ಕೆಎಸ್‌ಆರ್‌ಪಿ ಜಂಕ್ಷನ್‌ವರೆಗೆ ಬಿಒಟಿ (ಟೋಲ್) ಮೋಡ್‌ನಲ್ಲಿ ಸುರಂಗ ಬೋರಿಂಗ್ ಯಂತ್ರದೊಂದಿಗೆ ಭೂಗತ ವಾಹನ ರಸ್ತೆ 3–ಲೇನ್ ಟ್ವಿನ್ ಟನಲ್‌ಗಳಿಗೆ ಬಂಡವಾಳ ಅಗತ್ಯತೆ". – ಕುರಿತ ಇಐಸಿ/ಬಿಬಿಎಂಪಿ/ಪಿಆರ್/1923/2024–25 ದಿನಾಂಕ: 06.12.2024ಗೆ ಸಂಬಂಧಿಸಿದಂತೆ **ಆಸಕ್ತಿ ವ್ಯಕ್ತಪಡಿಸುವಿಕೆ (EOI) ದಸ್ತಾವೇಜಿನ ವೇಳಾಪಟ್ಟಿಯಲ್ಲಿ ಬದಲಾವಣೆಗಳು ಮತ್ತು ತಿದ್ದುಪಡಿಗಳು.**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಆಂತರಿಕ ಚರ್ಚೆ ಮತ್ತು ಸಮಾಲೋಚನೆಯ ಆಧಾರದ ಮೇಲೆ ಆಸಕ್ತಿ ವ್ಯಕ್ತಪಡಿಸುವಿಕೆ (EOI) ದಾಖಲೆಗೆ ಈ ಕೆಳಗಿನ ತಿದ್ದುಪಡಿಗಳನ್ನು ಮಾಡಲಾಗಿದೆ.

1. ಬಿಬಿಎಂಪಿಯು ಉತ್ತರ–ದಕ್ಷಿಣ ಕಾರಿಡಾರ್‌ಗೆ ಮಾತ್ರ **ಸಂಬಂಧಿಸಿದಂತೆ ಭೂಸ್ವಾಧೀನದ ಅನುದಾನದ ಅವಶ್ಯಕತೆ ಮತ್ತು ವೆಚ್ಚಕ್ಕಾಗಿ ರೂಪಾಯಿ 8,000 ಕೋಟಿಗಳನ್ನು** (ರೂಪಾಯಿ ಎಂಟು ಸಾವಿರ ಕೋಟಿಗಳು ಮಾತ್ರ) **ಸಾಲ ಪಡೆಯಲು ಪ್ರಸ್ತಾಪಿಸಿದೆ.**
   ಪೂರ್ವ–ಪಶ್ಚಿಮ ಕಾರಿಡಾರ್‌ಗೆ ಅಗತ್ಯವಿರುವ ಬಂಡವಾಳಗಳಿಗಾಗಿ ಆಸಕ್ತಿ ವ್ಯಕ್ತಪಡಿಸುವಿಕೆ (EOI) ಅನ್ನು ಪ್ರತ್ಯೇಕವಾಗಿ ಕರೆಯಲಾಗುವುದು.
2. **ಬಂಡವಾಳಗಳ ಹಿಂಪಡೆಯುವಿಕೆ:** ಅವಶ್ಯಕತೆಯ ಆಧಾರದ ಮೇಲೆ ಮೊತ್ತವನ್ನು ಡ್ರಾ ಮಾಡುವ ಹಕ್ಕನ್ನು ಬಿಬಿಎಂಪಿ ಕಾಯ್ದಿರಿಸಿಕೊಂಡಿದೆ. ರಿಯಾಯಿತಿದಾರರ ನಿರ್ಮಾಣ ವೆಚ್ಚವನ್ನು ಭಾಗಶಃ ಬೆಂಬಲಿಸಲು, ಸಾಲದ ಮೊತ್ತವನ್ನು ಐದು ವರ್ಷಗಳ ಅವಧಿಯಲ್ಲಿ ಡ್ರಾ ಮಾಡಲು ಪ್ರಸ್ತಾಪಿಸಲಾಗಿದೆ. ಉತ್ತರ–ದಕ್ಷಿಣ ಕಾರಿಡಾರ್ ನಿರ್ಮಾಣವು 2025ರ ವೇಳೆಗೆ ಪ್ರಾರಂಭವಾಗುವ ನಿರೀಕ್ಷೆಯಿದೆ.
3. ಪ್ರಕ್ರಿಯೆಗಾಗಿ ನವೀಕರಿಸಿದ ವೇಳಾಪಟ್ಟಿ ಈ ಕೆಳಗಿನಂತಿವೆ:

ಕ್ರ. ಸಂ.	ವಿವರಗಳು	ದಿನಾಂಕಗಳು
1	ಬಂಡವಾಳ ಹೂಡಿಕೆಗಾಗಿ ಆಸಕ್ತಿ ವ್ಯಕ್ತಪಡಿಸುವಿಕೆ ಪ್ರಕಟಣೆ	13.12.2024 (ತಿದ್ದುಪಡಿ)
2	ಪ್ರಶ್ನೆಗಳನ್ನು ಸಲ್ಲಿಸುವುದು	13.12.2024 ರಿಂದ 20.12.2024
3	ಟನಲ್ ಯೋಜನೆಯ ಕರಡು ಡಿಪಿಆರ್ ಖಡ್ಡಾಯ ಖರೀದಿ @ ರೂ. 25,000/– (ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಮುಖ್ಯ ಆಯುಕ್ತರು, ಬಿಬಿಎಂಪಿಗೆ ಪಾವತಿಸಬೇಕಾದ ಡಿಡಿಯನ್ನು ಪ್ರಧಾನ ಅಭಿಯಂತರರ ಕಛೇರಿ, ಬಿಬಿಎಂಪಿಗೆ ಸಲ್ಲಿಸುವುದು	13.12.2024 ರಿಂದ 20.12.2024
4	ಮುಖ್ಯ ಆಯುಕ್ತರು, ಬಿಬಿಎಂಪಿರವರ ಕಛೇರಿಯಲ್ಲಿ ಪೂರ್ವಭಾವಿ ಸಭೆ	23.12.2024ರ ಸಂಜೆ 04:00 ಗಂಟೆಗೆ
5	ವಿಶೇಷ ಆಯುಕ್ತರು (ಹಣಕಾಸು), ಬಿಬಿಎಂಪಿರವರಿಗೆ ಸೀಲ್ ಮಾಡಿದ ಲಕೋಟೆಯಲ್ಲಿ ಬಿಡ್ ಸಲ್ಲಿಸಲು ಕೊನೆಯ ದಿನಾಂಕ	03.01.2025ರ ಸಂಜೆ 04:00 ಗಂಟೆವರೆಗೆ
6	ಬಿಡ್‌ಗಳನ್ನು ತೆರೆಯುವುದು	03.01.2025ರ ಸಂಜೆ 05:00 ಗಂಟೆಗೆ

4. ಡಿಪಿಆರ್ ಖರೀದಿ ಶುಲ್ಕವನ್ನು ಸಲ್ಲಿಸಿದ ನಂತರ ಬಿಡ್ ಸಲ್ಲಿಕೆಗಾಗಿ ಪ್ರೊಫಾರ್ಮ್ ಮತ್ತು ಕರಡು ಡಿಪಿಆರ್ ಅನ್ನು ಪ್ರಧಾನ ಅಭಿಯಂತರರ ಕಛೇರಿ, ಬಿಬಿಎಂಪಿಯಿಂದ ಪಡೆಯಬಹುದು. ಕರಡು ಡಿಪಿಆರ್ ಬದಲಾವಣೆಗಳಿಗೆ ಒಳಪಟ್ಟಿರುತ್ತದೆ.
5. ಬಿಡ್ ಸಲ್ಲಿಕೆಗಾಗಿ ಬಿಡ್‌ದಾರರು ಪ್ರೊಫಾರ್ಮಾದಲ್ಲಿ ಮಂಜೂರು ಮಾಡಬೇಕಾದ ಮೊತ್ತ, ಅವಧಿ, ಬಡ್ಡಿ ದರ, ಮರುಪಾವತಿ ವೇಳಾಪಟ್ಟಿ, ಮೊರಟೋರಿಯಂ, ಭದ್ರತೆ, ಇತರೆ ವೆಚ್ಚಗಳು, ಇತ್ಯಾದಿ ಸೇರಿದಂತೆ ಪ್ರಮುಖ ನಿಯತಾಂಕಗಳು ಮತ್ತು ನಿಯಮಗಳನ್ನು ಒದಗಿಸುವ ಅಗತ್ಯವಿದೆ.
6. ಯಾವುದೇ ಹೆಚ್ಚಿನ ಮಾಹಿತಿ / ಸ್ಪಷ್ಟೀಕರಣಕ್ಕಾಗಿ ನೀವು ದಯವಿಟ್ಟು ಕೆಳಗಿನ ಅಧಿಕಾರಿಗಳನ್ನು ಸಂಪರ್ಕಿಸಬಹುದು: ಧನಂಜಯ ಕೆ.ಕೆ. (+91–98452–08023) ಅಥವಾ ಶಿಲ್ಪ (+91–99865–53232)

ಸಹಿ/–
ಪ್ರಧಾನ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಡುಗೆ ಎಣ್ಣೆ ಆಮದು ಶೇ 39ರಷ್ಟು ಏರಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ನವೆಂಬರ್ ತಿಂಗಳಲ್ಲಿ 15.90 ಲಕ್ಷ ಟನ್ ಅಡುಗೆ ಎಣ್ಣೆ ದೇಶಕ್ಕೆ ಆಮದಾಗಿದೆ ಎಂದು ಭಾರತೀಯ ಎಣ್ಣೆ ಗಿರಣಿ ಮಾಲೀಕರ ಸಂಘ (ಎಸ್‌ಇಎ) ಗುರುವಾರ ತಿಳಿಸಿದೆ.

2023ರ ನವೆಂಬರ್‌ನಲ್ಲಿ 11.48 ಲಕ್ಷ ಟನ್ ಆಮದಾಗಿತ್ತು. ಈ ಆಮದು ಪ್ರಮಾಣಕ್ಕೆ ಹೋಲಿಸಿದರೆ ಶೇ 39ರಷ್ಟು ಏರಿಕೆಯಾಗಿದೆ. ಕಚ್ಚಾ ಸೂರ್ಯಕಾಂತಿ ಎಣ್ಣೆ ಮತ್ತು ಕಚ್ಚಾ ಸೋಯಾಬಿನ್ ಎಣ್ಣೆ ಆಮದು ಪ್ರಮಾಣ ಹೆಚ್ಚಳದಿಂದ ಅಡುಗೆ ಎಣ್ಣೆ ಆಮದು ಪ್ರಮಾಣದಲ್ಲಿ ಏರಿಕೆಯಾಗಿದೆ ಎಂದು ತಿಳಿಸಿದೆ.

2024–25ರ ತೈಲ ಮಾರುಕಟ್ಟೆ ವರ್ಷದ (ನವೆಂಬರ್‌ನಿಂದ ಅಕ್ಟೋಬರ್) ಮೊದಲ ತಿಂಗಳಲ್ಲಿ ಒಟ್ಟಾರೆ ಅಡುಗೆ ಎಣ್ಣೆ ಆಮದು ಶೇ 40ರಷ್ಟು ಹೆಚ್ಚಳವಾಗಿದ್ದು, 16.27 ಲಕ್ಷ ಟನ್ ಆಗಿದೆ. ಅಡುಗೆಯೇತರ ಎಣ್ಣೆ ಆಮದು ಪ್ರಮಾಣ ಕಳೆದ ವರ್ಷದ ನವೆಂಬರ್‌ನಲ್ಲಿ 12,498 ಟನ್ ಇತ್ತು. ಅದು ಈ ಬಾರಿ 37,341 ಟನ್‌ಗೆ ಏರಿಕೆಯಾಗಿದೆ. ಆರ್‌ಬಿಡಿ ಪಾಮೋಲಿನ್ ಎಣ್ಣೆ 2.84 ಲಕ್ಷ ಟನ್ ಆಮದಾಗಿದೆ.

ಪ್ರಸಕ್ತ ವರ್ಷದ ನವೆಂಬರ್‌ನಲ್ಲಿ ಕಚ್ಚಾ ಸೂರ್ಯಕಾಂತಿ ಎಣ್ಣೆ 3.40 ಲಕ್ಷ ಟನ್ ಮತ್ತು ಕಚ್ಚಾ ಸೋಯಾಬಿನ್ ಎಣ್ಣೆ 4.07 ಲಕ್ಷ ಟನ್ ಆಮದಾಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಆಮದು ಪ್ರಮಾಣ ಕ್ರಮವಾಗಿ 1.28 ಲಕ್ಷ ಟನ್ ಮತ್ತು 1.49 ಲಕ್ಷ ಟನ್ ಆಗಿತ್ತು.

ಆದರೆ, ಕಚ್ಚಾ ತಾಳೆ ಎಣ್ಣೆ ಆಮದು 6.92 ಲಕ್ಷ ಟನ್‌ನಿಂದ 5.47 ಲಕ್ಷ ಟನ್‌ಗೆ ಇಳಿದಿದೆ ಎಂದು ತಿಳಿಸಿದೆ.

ಭಾರತಕ್ಕೆ, ಇಂಡೊನೇಷ್ಯಾ ಮತ್ತು ಮಲೇಷ್ಯಾ ಆರ್‌ಬಿಡಿ ಪಾಮೋಲಿನ್ ಮತ್ತು ಕಚ್ಚಾ ತಾಳೆ ಎಣ್ಣೆಯನ್ನು ಪೂರೈಕೆ ಮಾಡುತ್ತವೆ. ಅರ್ಜೆಂಟೀನಾ, ಬ್ರೆಜಿಲ್ ಮತ್ತು ರಷ್ಯಾದಿಂದ ಸೋಯಾಬಿನ್ ಎಣ್ಣೆ, ರಷ್ಯಾ, ಉಕ್ರೇನ್, ಅರ್ಜೆಂಟೀನಾದಿಂದ ಸೂರ್ಯಕಾಂತಿ ಎಣ್ಣೆಯನ್ನು ಭಾರತ ಆಮದು ಮಾಡಿಕೊಳ್ಳುತ್ತದೆ.

ಪೂರ್ವ ಉಕ್ರೇನ್‌ನತ್ತ ರಷ್ಯಾ ಸೇನೆ

ಕೀವ್ (ಎಪಿ): 'ಕಳೆದೊಂದು ತಿಂಗಳಿನಿಂದ ತೀವ್ರ ಹೋರಾಟ ನಡೆಸುತ್ತಿರುವ ರಷ್ಯಾ ಸೇನಾ ಪಡೆಯು ಪೂರ್ವ ಉಕ್ರೇನ್‌ನ ಪೋಕ್ರೋವ್‌ಸ್ಕ್ ನಗರದ ಹತ್ತಿರ ಸಮೀಪಿಸಿದೆ' ಎಂದು ಉಕ್ರೇನ್‌ನ ಸೇನಾ ಕಮಾಂಡರ್ ತಿಳಿಸಿದ್ದಾರೆ. ರಷ್ಯಾ ಪಡೆಗಳು ನಗರದಿಂದ ಕೆಲವೇ ಕಿಲೋ ಮೀಟರ್ ಅಂತರದಲ್ಲಿವೆ ಎಂದು ರಕ್ಷಣಾ ತಜ್ಞರು ತಿಳಿಸಿದ್ದಾರೆ.

'ನಗರ ಪ್ರವೇಶಿಸಲು ಯತ್ನಿಸಿದ ರಷ್ಯಾ ಪಡೆಗಳು ಕಳೆದ 24 ಗಂಟೆಗಳಲ್ಲಿ ನಡೆಸಿದ 40 ಪ್ರಯತ್ನಗಳನ್ನು ಉಕ್ರೇನ್ ಪಡೆಗಳು ಹಿಮ್ಮೆಟ್ಟಿಸಿವೆ' ಎಂದು ಸೇನೆಯ ಹಿರಿಯ ಅಧಿಕಾರಿಗಳು ಗುರುವಾರ ತಿಳಿಸಿದರು.

'ರಷ್ಯಾ ಪಡೆಗಳು ಮುನ್ನಡೆ ಸಾಧಿಸಲು ಎಲ್ಲ ಪ್ರಯತ್ನಗಳನ್ನು ನಡೆಸುತ್ತಿವೆ. ನಮ್ಮ ಪಡೆಗಳ ರಕ್ಷಣೆಯನ್ನು ಭೇದಿಸಲು ಯತ್ನಿಸುತ್ತಿದೆ' ಎಂದು ಉಕ್ರೇನ್‌ನ ಸೇನಾ ಪಡೆಯ ಮುಖ್ಯಸ್ಥ ಜನರಲ್ ಒಲೆಕ್ಸಾಂಡರ್ ಸಿರ್ಕ್‌ಸ್ಕಿಯಿ ಅವರು ಫೇಸ್‌ಬುಕ್‌ನಲ್ಲಿ ತಿಳಿಸಿದ್ದಾರೆ.

ಪೋಕ್ರೋವ್‌ಸ್ಕ್ ನಗರ 60 ಸಾವಿರ ಜನಸಂಖ್ಯೆ ಹೊಂದಿದ್ದು, ಈ ನಗರದ ಹಿಡಿತ ಸಾಧಿಸಲು 2022ರ ಫೆಬ್ರುವರಿಯಿಂದಲೂ ರಷ್ಯಾ ಸೇನೆ ಹೋರಾಟ ನಡೆಸುತ್ತಿದೆ. ಉಕ್ರೇನ್ ಪಡೆಗಳಿಗೆ ಈ ನಗರವೇ ರಕ್ಷಣಾತ್ಮಕವಾಗಿ ಭದ್ರವಾದ ನೆಲೆಯಾಗಿದ್ದು, ಡೊನ್‌ಸ್ಟೆಕ್ ಪ್ರಾಂತ್ಯಕ್ಕೆ ಪ್ರಮುಖ ಸರಕು ನೆಲೆಯೂ ಆಗಿದೆ. ಈ ನಗರದ ಹಿಡಿತ ಸಾಧಿಸಿದರೆ, ಇಡೀ ಡೊನ್‌ಸ್ಟೆಕ್ ಹಿಡಿತ ಸಾಧಿಸಲು ನೆರವಾಗುತ್ತದೆ ಎಂದು ರಷ್ಯಾದ ಆಲೋಚನೆಯಾಗಿದೆ.

'ಪೋಕ್ರೋವ್‌ಸ್ಕ್ ನಗರದಿಂದ 6 ಕಿ.ಮೀ. ದೂರದಲ್ಲಿ ರಷ್ಯಾ ಸೇನಾ ಪಡೆಗಳು ಬೀಡುಬಿಟ್ಟಿವೆ' ಎಂದು 'ಯುದ್ಧ ಅಧ್ಯಯನ ಸಂಸ್ಥೆ'ಯು ತಿಳಿಸಿದೆ.

ಇಮ್ರಾನ್, ಪತ್ನಿ ವಿರುದ್ಧ ಆರೋಪ ಹೊರಿಸಿದ ಕೋರ್ಟ್

ಇಸ್ಲಾಮಾಬಾದ್ (ಪಿಟಿಐ): ತೋಷಖಾನಾ ಪ್ರಕರಣದಲ್ಲಿ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಹಾಗೂ ಅವರ ಪತ್ನಿ ಬುಶ್ರಾ ಬೀಬಿ ವಿರುದ್ಧ ಪಾಕಿಸ್ತಾನದ ನ್ಯಾಯಾಲಯ ಆರೋಪ ಹೊರಿಸಿದೆ.

ರಾವಲ್ಪಿಂಡಿಯ ಅಡಿಯಾಲಾ ಜೈಲಿನಲ್ಲಿ ನಡೆದ ವಿಚಾರಣೆ ವೇಳೆ, ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಶಾರುಕ್ ಅರ್ಜುಮಂದ್ ಅವರು ಈ ಇಬ್ಬರ ವಿರುದ್ಧ ಆರೋಪ ಹೊರಿಸಿದರು.

ಗಣ್ಯರು ನೀಡಿದ್ದ ಉಡುಗೊರೆಗಳನ್ನು ಮಾರಿ, ಭ್ರಷ್ಟಾಚಾರ ಎಸಗಿದ ಆರೋಪವನ್ನು ಇಮ್ರಾನ್ ಖಾನ್, ಬುಶ್ರಾ ಬೀಬಿ ಎದುರಿಸುತ್ತಿದ್ದಾರೆ. ಇದನ್ನು ತೋಷಖಾನಾ ಪ್ರಕರಣ ಎನ್ನಲಾಗುತ್ತದೆ.

'ವಿಜಯ ದಿವಸ ಆಚರಣೆ: ಬಾಂಗ್ಲಾ ನಿಯೋಗ ಪಾಲ್ಗೊಳ್ಳುವ ಸಾಧ್ಯತೆ'

ಕೋಲ್ಕತ್ತ (ಪಿಟಿಐ): ಡಿಸೆಂಬರ್ 16ರಂದು ಕೋಲ್ಕತ್ತದಲ್ಲಿ ನಡೆಯಲಿರುವ ವಿಜಯ ದಿವಸ ಆಚರಣೆಯಲ್ಲಿ ಬಾಂಗ್ಲಾದೇಶದ ನಿಯೋಗ ಪಾಲ್ಗೊಳ್ಳುವ ಸಾಧ್ಯತೆಯಿದೆ ಎಂದು ಸೇನಾ ಮೂಲಗಳು ಗುರುವಾರ ತಿಳಿಸಿವೆ.

ಆಚರಣೆಯಲ್ಲಿ 'ಮುಕ್ತಿ ಜೋಧರು' (ಬಾಂಗ್ಲಾ ಸೇನೆ) ಕೂಡ ಭಾಗವಹಿಸಬಹುದು ಎಂದು ರಕ್ಷಣಾ ಮೂಲಗಳು ತಿಳಿಸಿದ್ದು, ನಿಯೋಗದ ಗಾತ್ರ ಹೇಗಿರಲಿದೆ ಎಂಬ ವಿವರವನ್ನು ನೀಡಿಲ್ಲ.

'ಮುಕ್ತಿ ಜೋಧರು' ಮತ್ತು ಬಾಂಗ್ಲಾದೇಶ ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳನ್ನು ಒಳಗೊಂಡ ಬಾಂಗ್ಲಾದೇಶದ ನಿಯೋಗವು ಭಾರತೀಯ ಸೇನೆ, ಪ್ರತಿ ವರ್ಷ ಕೋಲ್ಕತ್ತದಲ್ಲಿ ಆಚರಿಸುವ ವಿಜಯ ದಿವಸ ಕಾರ್ಯಕ್ರಮದಲ್ಲಿ ಭಾಗವಹಿಸುತ್ತದೆ.

ಭಾರತವು 1971ರ ಕಾರ್ಗಿಲ್ ಯುದ್ಧದಲ್ಲಿ ಪಾಕಿಸ್ತಾನದ ವಿರುದ್ಧದ ನಿರ್ಣಾಯಕ ಗೆಲುವು ಸಾಧಿಸುವ ಮೂಲಕ ಬಾಂಗ್ಲಾದೇಶದ ಹುಟ್ಟಿಗೆ ಕಾರಣವಾಯಿತು. ಈ ಐತಿಹಾಸಿಕ ಗೆಲುವಿನ ಸ್ಮರಣೆಗಾಗಿ ಪ್ರತಿವರ್ಷ ಡಿ. 16ರಂದು ವಿಜಯ ದಿವಸ ಆಚರಿಸಲಾಗುತ್ತದೆ.

ಒಂದೇ ದಿನ 1,500 ಮಂದಿಯ ಶಿಕ್ಷೆ ಕಡಿತಗೊಳಿಸಿದ ಬೈಡನ್



ವಾಷಿಂಗ್ಟನ್ (ಎಪಿ): ವಿವಿಧ ಕಾರಣಗಳಿಂದ ಜೈಲುಶಿಕ್ಷೆ ಅನುಭವಿಸುತ್ತಿದ್ದ 1,500 ಮಂದಿಯ ಶಿಕ್ಷೆ ಕಡಿತಗೊಳಿಸಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಆದೇಶಿಸಿದ್ದಾರೆ. ಅದೇ ರೀತಿ, ಅಹಿಂಸಾತ್ಮಕ ಅಪರಾಧ ಎಸಗಿದ 39 ಮಂದಿಗೆ ಕ್ಷಮಾದಾನ ನೀಡಿದ್ದಾರೆ.

ಅಮೆರಿಕದ ಆಧುನಿಕ ಇತಿಹಾಸದಲ್ಲಿಯೇ ಒಂದೇ ದಿನ ಗರಿಷ್ಠ ಕ್ಷಮಾದಾನ ನೀಡಿದ ಪ್ರಕರಣ ಇದಾಗಿದೆ.

ಕನಿಷ್ಠ ಒಂದು ವರ್ಷಗಳ ಕಾಲ ಗೃಹಬಂಧನ ಶಿಕ್ಷೆ ಪೂರ್ಣಗೊಳಿಸಿದವರನ್ನು ಬಿಡುಗಡೆಗೊಳಿಸಲು ಗುರುವಾರ ಪ್ರಕಟಿಸಲಾದ ಆದೇಶದಲ್ಲಿ ತಿಳಿಸಲಾಗಿದೆ.

ಮುಂದಿನ ದಿನಗಳಲ್ಲಿ ಮತ್ತಷ್ಟು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ತಿಳಿಸಿರುವ ಬೈಡನ್, ಮತ್ತಷ್ಟು ಕ್ಷಮಾದಾನ ಅರ್ಜಿಗಳ ಪರಿಶೀಲನೆ ನಡೆಸುವುದಾಗಿ ತಿಳಿಸಿದರು. 2017ರಲ್ಲಿ ಅಧ್ಯಕ್ಷ ಸ್ಥಾನದಿಂದ ನಿರ್ಗಮಿಸುವ ಕೆಲವು ದಿನಗಳ ಮುನ್ನ ಬರಾಕ್ ಒಬಾಮಾ ಅವರು ಒಂದೇ ದಿನ 330 ಮಂದಿಗೆ ಕ್ಷಮಾದಾನ ನೀಡಿದ್ದರು.

ಪುತ್ರನಿಗೂ ಕ್ಷಮಾದಾನ: ಅಕ್ರಮವಾಗಿ ಬಂದೂಕು ಇಟ್ಟುಕೊಂಡಿದ್ದ ಹಾಗೂ ತೆರಿಗೆ ನಿಯಮ ಉಲ್ಲಂಘಿಸಿದ ಆರೋಪದ ಮೇಲೆ ಇದೇ ವರ್ಷದ ಆರಂಭದಲ್ಲಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಪುತ್ರ ಹಂಟರ್ ಅವರನ್ನು ದೋಷಿ ಎಂದು ಫೆಡರಲ್ ನ್ಯಾಯಾಲಯ ತೀರ್ಪು ನೀಡಿತ್ತು. ಈ ತಿಂಗಳ ಆರಂಭದಲ್ಲಿ ತನ್ನ ಮಗನಿಗೂ ಬೈಡನ್ ಕ್ಷಮಾದಾನ ನೀಡಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ. ವಿಡಿಯೋಕಾನ್. ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ13,000-17,000, 8951315839, 9141634619

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ಪುಸ್ತಕ ಬರೆಯುವ ಹಾಗು ಫಾರಂ ತುಂಬುವ ಮೂಲಕ ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಇದೆ. 9611874742, 9611574742.

ವ್ಯಾಪಾರ

Business to Business

Finance

LOAN AGAINST PROPERTY- MORTGAGE LOAN (All KHATA's) LOAN AMOUNT:- 60%- 75% of Market Value. Interest rate-9.5% onwards, Source: Banks and NBFC's. Call 9071013506 EKTAA LOANS.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸೌಂದರ್ಯ-ಆರೋಗ್ಯ

Beauty Parlour

SP ಸೆಲೆಬ್ರಿಟಿ ಸಲೂನ್ & ಸ್ಪಾ (MEN*WOMEN* CHILDREN) ಐಬ್ರೋ-Rs 20 ಫೇಷೆಯಲ್-350 ಬ್ಲೀಚಿಂಗ್-350 ಕ್ಲೀನ್ ಅಫ್-250 ಹೇರ್ ಡೈ-200 ಮೇಹಂದಿ ಡೈ-200 ಮೆನಿಕ್ಯೂರ್-250 ಪೆಡಿಕ್ಯೂರ್-350, ವಿವಿಧ ರೀತಿಯ ಹೇರ್ ಕಟ್-250 ವ್ಯಾಕ್ಸಿಂಗ್-300. ವಿಳಾಸ: ಎಸ್ ಸಿ ರೋಡ್, ಕುಮಾರ್ ಕೀನೊ ಎದುರುಗಡೆ, ಶೇಷಾದ್ರಿಪುರಂ, ಬೆಂಗಳೂರು-7349494852.

ಭವಿಷ್ಯ

Astrology

★ಭಾರತದ★ ಪ್ರಖ್ಯಾತ ಬುಡಬುಡಕಿ ಜನಾಂಗದ ಲಕ್ಷಾಂತರ ಸಂತುಷ್ಟಗ್ರಾಹಕರ ಪರಮಶ್ರೇಷ್ಠ ಬಾಬಾ ಶ್ರೀ.ದೇವಾನಂದರವರಿಂದ ನಿಮ್ಮೆಲ್ಲಾ ಸಂಕಷ್ಟಗಳಿಗೆ ಮುಕ್ತಿ,ಮನ್ಮೋಹಿನಿ ಮೂಡಿ ವಶೀಕರಣಗಳಿಗೆ.9353143216

ಪ್ರವಾಸ

Travel

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 22.12.2024 20.01.2025 ರಿಂದ 7 ದಿನಗಳ ತಮಿಳುನಾಡು ಕೇರಳ.23.12.2024 ರಿಂದ 7 ದಿನಗಳ ಶ್ರೀಶೈಲ,ಮಂತ್ರಾಲಯ ಹೈದ್ರಾಬಾದ್. 03.02.2025 13.02.2025 ರಿಂದ 17/11 ದಿನಗಳ ಗುಜರಾತ್,ರಾಜಸ್ಥಾನ್. 10.02.2025 ರಿಂದ 10 ದಿನಗಳ ಮಧ್ಯಪ್ರದೇಶ. 16.01.2025 ರಿಂದ 6 ದಿನಗಳ ದುಬೈ,ಅಬುದಾಬಿ. 04.02.2025 10.04.2025 ರಿಂದ 11/7 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. 28.02.2025 ರಿಂದ 10 ದಿನಗಳ ವಿಯೆಟ್ನಂ ಕಾಂಬೋಡಿಯ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

6 ದಿನಗಳ ದುಬೈ. 6 ದಿನಗಳ ಬಾಲಿ. 6 ದಿನಗಳ ಶ್ರೀಲಂಕಾ. 7/11 ದಿನಗಳ ಸಿಂಗಪುರ್ ಮಲೇಷ್ಯಾ, ಥೈಲ್ಯಾಂಡ್. 7 ದಿನಗಳ ಜಪಾನ್. ಭಟ್ ಟ್ರಾವೆಲ್ 9844037295

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಚಳಿಗಾಲದ ಅಧಿವೇಶನದಲ್ಲಿ ಮಂಡನೆ ಸಾಧ್ಯತೆ ● ವಿಧಾನಸಭೆ ಸ್ಪೀಕರ್‌ಗಳ ಜತೆ ಚರ್ಚಿಸಲು ನಿರ್ಧಾರ

ಒಟ್ಟಿಗೆ ಚುನಾವಣೆ: ಸಂಪುಟ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿಯ ಪ್ರಮುಖ ಕಾರ್ಯಸೂಚಿಗಳಲ್ಲಿ ಒಂದಾಗಿರುವ 'ಒಂದು ರಾಷ್ಟ್ರ–ಒಂದು ಚುನಾವಣೆ' ಜಾರಿಗೆ ತರಲು ಸಂವಿಧಾನ ತಿದ್ದುಪಡಿ ಸೇರಿದಂತೆ ಎರಡು ಮಸೂದೆಗಳಿಗೆ ಕೇಂದ್ರ ಸಚಿವ ಸಂಪುಟ ಗುರುವಾರ ಅನುಮೋದನೆ ನೀಡಿದೆ.

ಸಂಸತ್‌ನ ಚಳಿಗಾಲದ ಅಧಿವೇಶನದಲ್ಲೇ ಮುಂದಿನ ವಾರ ಈ ಮಸೂದೆಗಳನ್ನು ಮಂಡಿಸುವ ಸಂಭವ ಇದೆ. ಬಳಿಕ ಈ ಮಸೂದೆಯನ್ನು ಜಂಟಿ ಸಂಸದೀಯ ಸಮಿತಿಗೆ (ಜೆಪಿಸಿ) ಶಿಫಾರಸು ಮಾಡಲಾಗುತ್ತದೆ.

ಈ ಮಸೂದೆಗಳ ಬಗ್ಗೆ ವ್ಯಾಪಕ ಸಮಾಲೋಚನೆ ನಡೆಸಲು ಸರ್ಕಾರ ಉತ್ಸುಕವಾಗಿದೆ. ಸಮಿತಿಯ ಮೂಲಕ ವಿವಿಧ ರಾಜ್ಯಗಳ ವಿಧಾನಸಭೆಗಳ ಸ್ಪೀಕರ್‌ಗಳೊಂದಿಗೆ ಸಮಾಲೋಚಿಸಲು ಸರ್ಕಾರ ಬಯಸಿದೆ ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ.

'ಒಂದು ರಾಷ್ಟ್ರ, ಒಂದು ಚುನಾವಣೆ' ಬಿಜೆಪಿಯ ಪ್ರಮುಖ ಕಾರ್ಯಸೂಚಿಯಾಗಿದ್ದು, 2014ರಲ್ಲಿ ಮೋದಿ ಅಧಿಕಾರಕ್ಕೆ ಬಂದಾಗಿನಿಂದಲೂ ಅದರ ಜಾರಿಗೆ ಚಿಂತನೆ ನಡೆಸುತ್ತಿದ್ದರು. ಈ ಸಂಬಂಧ ಅಧ್ಯಯನ ನಡೆಸಿ ವರದಿ ನೀಡಲು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅಧ್ಯಕ್ಷತೆಯ ಉನ್ನತ ಮಟ್ಟದ ಸಮಿತಿಯನ್ನು ಸರ್ಕಾರ ನೇಮಿಸಿತ್ತು.

ಸಮಿತಿಯು ಒಟ್ಟಿಗೆ ಚುನಾವಣೆ ನಡೆಸುವ ಸಂಬಂಧ 62 ಪಕ್ಷಗಳ ಅಭಿಪ್ರಾಯ ಕೇಳಿತ್ತು. 47 ಪಕ್ಷಗಳು ಪರವಾಗಿ ಅಭಿಪ್ರಾಯ ನೀಡಿದರೆ, 15 ಪಕ್ಷಗಳು ಪ್ರಸ್ತಾವ ವಿರೋಧಿಸಿದ್ದವು. ಸಮಿತಿಯು ಮಾರ್ಚ್‌ನಲ್ಲಿ 18,626 ಪುಟಗಳ ವರದಿ ಸಲ್ಲಿಸಿತ್ತು. ಸಂವಿಧಾನಕ್ಕೆ 18 ತಿದ್ದುಪಡಿಗಳನ್ನು ಸಮಿತಿ ಶಿಫಾರಸು ಮಾಡಿತ್ತು. ಈ ಸಮಿತಿಯ ಶಿಫಾರಸುಗಳನ್ನು ಕೇಂದ್ರ ಸಚಿವ ಸಂಪುಟ ಸೆಪ್ಟೆಂಬರ್ ತಿಂಗಳಲ್ಲಿ ಅಂಗೀಕರಿಸಿತ್ತು.

ಸದ್ಯಕ್ಕೆ, ಲೋಕಸಭೆ ಮತ್ತು ವಿಧಾನಸಭೆಗಳಿಗೆ ಮಾತ್ರ ಏಕಕಾಲದಲ್ಲಿ ಚುನಾವಣೆ ನಡೆಸುವ ಕರಡು ಮಸೂದೆಗೆ ಸಂಪುಟ ಒಪ್ಪಿಗೆ ನೀಡಿದೆ ಎಂದು ಮೂಲಗಳು ತಿಳಿಸಿವೆ. ಈ ಮೂಲಕ ಬಿಜೆಪಿಯ ಮತ್ತೊಂದು 'ಕಾರ್ಯಸೂಚಿ'ಯನ್ನು ಕಾರ್ಯಗತಗೊಳಿಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಮೈತ್ರಿ ಸರ್ಕಾರ ಮುಂದಡಿ ಇಟ್ಟಿದೆ.

ಲೋಕಸಭೆ ಹಾಗೂ ವಿಧಾನಸಭಾ ಚುನಾವಣೆಗಳ ಜತೆಗೆ ಪುರಸಭೆ ಹಾಗೂ ಪಂಚಾಯಿತಿಗಳ ಚುನಾವಣೆಗಳನ್ನು ಹಂತ ಹಂತವಾಗಿ ನಡೆಸಲು ಉನ್ನತ ಮಟ್ಟದ ಸಮಿತಿ ಶಿಫಾರಸು ಮಾಡಿತ್ತು. ಇದಕ್ಕೆ ಶೇ 50ರಷ್ಟು ವಿಧಾನಸಭೆಗಳ ಒಪ್ಪಿಗೆ ಅಗತ್ಯ ಇತ್ತು.

ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವ ಸಂವಿಧಾನ ತಿದ್ದುಪಡಿ ಮಸೂದೆಗೆ ಕನಿಷ್ಠ ಶೇ 50ರಷ್ಟು ರಾಜ್ಯಗಳ ಅನುಮೋದನೆ ಅಗತ್ಯವಿರುವುದಿಲ್ಲ ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್ ವಿರೋಧ

'ಒಂದು ರಾಷ್ಟ್ರ–ಒಂದು ಚುನಾವಣೆ' ಮಸೂದೆಯನ್ನು ಕೇಂದ್ರ ಸರ್ಕಾರವು ಅನುಮೋದಿಸಿರುವುದಕ್ಕೆ ಕಾಂಗ್ರೆಸ್ ಪಕ್ಷವು ವಿರೋಧ ವ್ಯಕ್ತಪಡಿಸಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಚುನಾವಣೆಯ ಪ್ರಾಮಾಣಿಕ ಪ್ರಕ್ರಿಯೆಗೆ ಸಂಬಂಧಿಸಿದ ಪ್ರಶ್ನೆಗಳಿಂದ ಗಮನವನ್ನು ಬೇರೆಡೆ ಸೆಳೆಯಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದೆ.

ಈ ಸಂಬಂಧ ಪ್ರತಿಕ್ರಿಯೆ ನೀಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು, 'ಕೇಂದ್ರವು ಒಂದು ರಾಷ್ಟ್ರ, ಒಂದು ಚುನಾವಣೆ ಮಸೂದೆಗೆ ಅನುಮೋದನೆ ನೀಡಿದೆ. ಈ ಬಗ್ಗೆ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಜನವರಿ 17, 2024ರಂದು ಒತ್ತಡಪೂರ್ವಕವಾಗಿ ತಮ್ಮ ಅಭಿಪ್ರಾಯ ದಾಖಲಿಸಿದ್ದರು. ಆದರೂ ಈ ವಿಚಾರದಲ್ಲಿ ಯಾವ ಬದಲಾವಣೆಯೂ ಆಗಿಲ್ಲ' ಎಂದು ಹೇಳಿದ್ದಾರೆ.

'ಬಿಜೆಪಿ ಸಂಭವನೀಯ ಸಚಿವರ ಪಟ್ಟಿ ಸಿದ್ಧ'

ನವದೆಹಲಿ (ಪಿಟಿಐ): ಬಿಜೆಪಿಯ ಸಂಭವನೀಯ ಸಚಿವರ ಹೆಸರುಗಳ ಪಟ್ಟಿಯನ್ನು ಸಿದ್ಧಗೊಳಿಸಲಾಗಿದ್ದು, ಕೇಂದ್ರದ ನಾಯಕರ ಸಮ್ಮತಿ ಸಿಕ್ಕ ನಂತರ ಆ ಪೈಕಿ ಯಾರಿಗೆ ಸ್ಥಾನ ಸಿಗಲಿದೆ ಎನ್ನುವುದು ಸ್ಪಷ್ಟವಾಗಲಿದೆ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಗುರುವಾರ ತಿಳಿಸಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ಪಕ್ಷದ ಹಿರಿಯ ಮುಖಂಡ ಬಿ.ಎಲ್. ಸಂತೋಷ್ ಅವರನ್ನು ಫಡಣವೀಸ್ ಬುಧವಾರ ಭೇಟಿ ಮಾಡಿದ್ದರು.

ಮಹಾರಾಷ್ಟ್ರ ಬಿಜೆಪಿ ಘಟಕದ ಅಧ್ಯಕ್ಷ ಚಂದ್ರಶೇಖರ್ ಬಾವಂಕುಲೆ ಅವರೂ ಎರಡು ದಿನಗಳ ದೆಹಲಿ ಭೇಟಿಯಲ್ಲಿ ಫಡಣವೀಸ್ ಜತೆಗಿದ್ದರು.



ದೇವೇಂದ್ರ ಫಡಣವೀಸ್

'ಸಚಿವ ಸ್ಥಾನ ಹಂಚಿಕೆ ಸೂತ್ರದ ಬಗ್ಗೆ ಚರ್ಚಿಸಿದ್ದೇವೆ. ಯಾರು ಯಾರಿಗೆ ಮಂತ್ರಿ ಸ್ಥಾನ ಸಿಗಲಿದೆ ಎಂದು ಸದ್ಯದಲ್ಲೇ ತಿಳಿಯಲಿದೆ. ಸಚಿವ ಸಂಪುಟ ವಿಸ್ತರಣೆಯ ದಿನಾಂಕ ಇನ್ನೂ ನಿಗದಿಯಾಗಿಲ್ಲ' ಎಂದು ಫಡಣವೀಸ್ ಹೇಳಿದರು.

ಎನ್‌ಸಿಪಿ (ಅಜಿತ್ ಬಣ) ಮುಖ್ಯಸ್ಥ ಅಜಿತ್ ಪವಾರ್ ಪ್ರತ್ಯೇಕವಾಗಿ ಮಾತನಾಡಿ, ಡಿಸೆಂಬರ್ 14ರಂದು ಸಚಿವ ಸಂಪುಟ ವಿಸ್ತರಣೆ ಆಗಲಿದೆ ಎಂದು ಹೇಳಿದ್ದರು.

'ಸಂಪುಟ ವಿಸ್ತರಣೆಯ ಕಾರಣಕ್ಕಷ್ಟೇ ನಾನು ದೆಹಲಿಗೆ ಬಂದಿಲ್ಲ. ಇಲ್ಲಿನ ಸ್ನೇಹಿತರನ್ನು ಭೇಟಿ ಮಾಡಲು ಬಂದಿದ್ದೆ. ಅಜಿತ್ ಅವರು ತಮ್ಮ ಕೆಲಸಕ್ಕಾಗಿ ಬಂದಿದ್ದಾರೆ. ಬಿಜೆಪಿಯ ಯಾರಿಗೆಲ್ಲ ಸಚಿವ ಸ್ಥಾನ ನೀಡಬೇಕು ಎಂದು ಇಲ್ಲಿ ಚರ್ಚಿಸಿದೆ. ಏಕನಾಥ್ ಶಿಂದೆ ಅವರು ತಮ್ಮ ಪಕ್ಷದಿಂದ ಯಾರಿಗೆ ಸಚಿವ ಸ್ಥಾನ ಸಿಗಬೇಕು ಎಂದು ನಿರ್ಧರಿಸುವರು. ಅಜಿತ್ ಪವಾರ್ ಕೂಡ ಸಂಪುಟದಲ್ಲಿ ತಮ್ಮ ಪಕ್ಷದ ಪ್ರಾತಿನಿಧ್ಯದ ಬಗ್ಗೆ ತೀರ್ಮಾನ ತೆಗೆದುಕೊಳ್ಳುವರು' ಎಂದು ಫಡಣವೀಸ್ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪ್ರಧಾನಿ ನರೇಂದ್ರ ಮೋದಿ, ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪ ರಾಷ್ಟ್ರಪತಿ ಜಗದೀಪ್ ಧನಕರ್, ಸಚಿವರಾದ ರಾಜನಾಥ್ ಸಿಂಗ್ ಹಾಗೂ ನಿತಿನ್ ಗಡ್ಕರಿ ಅವರನ್ನೂ ಫಡಣವೀಸ್ ಭೇಟಿ ಮಾಡಿದರು.

ರಿಜಿಜು ವಿರುದ್ಧ ಹಕ್ಕುಚ್ಯುತಿ ನೋಟಿಸ್

ನವದೆಹಲಿ(ಪಿಟಿಐ): ರಾಜ್ಯಸಭೆಯಲ್ಲಿ ವಿಪಕ್ಷಗಳ ನಾಯಕರ ಕುರಿತು ಅವಹೇಳನಕಾರಿ ಹೇಳಿಕೆಗಳನ್ನು ನೀಡಿದ್ದಕ್ಕಾಗಿ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ವಿರುದ್ಧ ಹಕ್ಕುಚ್ಯುತಿ ನಿರ್ಣಯ ಮಂಡಿಸಲು ಟಿಎಂಸಿ ಸಂಸದೆ ಸಾಗರಿಕಾ ಘೋಷ್ ಗುರುವಾರ ನೋಟಿಸ್ ನೀಡಿದ್ದಾರೆ.

ವಿರೋಧ ಪಕ್ಷಗಳ 60 ನಾಯಕರು ಈ ನೋಟಿಸ್‌ಗೆ ಸಹಿ ಹಾಕಿದ್ದಾರೆ ಎಂದು ಮೂಲಗಳು ಹೇಳಿವೆ.

'ಬುಧವಾರ ರಾಜ್ಯಸಭೆ ಕಲಾಪದ ವೇಳೆ, 'ನೀವೆಲ್ಲ ಸದನದಲ್ಲಿರಲು ಯೋಗ್ಯರಲ್ಲ' ಎಂಬುದಾಗಿ ವಿರೋಧ ಪಕ್ಷಗಳ ಸದಸ್ಯರನ್ನು ಉದ್ದೇಶಿಸಿ ಸಚಿವ ರಿಜಿಜು ಹೇಳಿದ್ದಾರೆ. ಕಲಾಪವನ್ನು ಸುಗಮವಾಗಿ ನಡೆಸುವುದಕ್ಕೆ ಬೇಕಾದ ಕ್ರಮಗಳನ್ನು ಕೈಗೊಳ್ಳುವ ಬದಲು, ಪದೇಪದೇ ವಿರೋಧ ಪಕ್ಷಗಳ ಸದಸ್ಯರನ್ನು ಅವರು ಅವಮಾನಿಸಿದರು' ಎಂದು ಸುದ್ದಿಗಾರರಿಗೆ ಘೋಷ್ ತಿಳಿಸಿದರು.

'ಸಂಸತ್ ಒಳಗೆ ಹಾಗೂ ಹೊರಗೆ ರಿಜಿಜು ಅವರು ವಿಪಕ್ಷಗಳ ನಾಯಕರ ಕುರಿತು ಅಸಂಸದೀಯ ಭಾಷೆ ಬಳಸಿ ನಿಂದಿಸಿದ್ದಾರೆ' ಎಂದೂ ಘೋಷ್ ಹೇಳಿದರು.

ಪಿತೂರಿಕೋರರ ಜೊತೆ ಸಂಬಂಧವಿಲ್ಲ: ಶಾರ್ಜೀಲ್

ನವದೆಹಲಿ (ಪಿಟಿಐ): 2020ರ ಫೆಬ್ರುವರಿಯಲ್ಲಿ ದೆಹಲಿಯಲ್ಲಿ ನಡೆದ ಕೋಮು ಹಿಂಸಾಚಾರದ ಸಹ ಪಿತೂರಿಕೋರರ ಜೊತೆ ತಮಗೆ ಯಾವ ನಂಟೂ ಇರಲಿಲ್ಲ ಎಂದು ವಿದ್ಯಾರ್ಥಿ ಕಾರ್ಯಕರ್ತ ಶಾರ್ಜೀಲ್ ಇಮಾಮ್ ಅವರು ದೆಹಲಿ ಹೈಕೋರ್ಟ್‌ಗೆ ಗುರುವಾರ ತಿಳಿಸಿದ್ದಾರೆ. ತಾವು ಮಾಡಿದ ಸಾರ್ವಜನಿಕ ಭಾಷಣಗಳು ಅಹಿಂಸೆಗೆ ಕರೆ ನೀಡಿದ್ದವು ಎಂದು ಅವರು ಹೇಳಿದ್ದಾರೆ.

ತಾವು ನಾಲ್ಕು ವರ್ಷಕ್ಕೂ ಹೆಚ್ಚಿನ ಅವಧಿಯಿಂದ ಪೊಲೀಸ್ ವಶದಲ್ಲಿ ಇರುವುದಾಗಿ, ತಮಗೆ ಜಾಮೀನು ಮಂಜೂರು ಮಾಡಬೇಕು ಎಂಬುದಾಗಿ ಅವರು ನ್ಯಾಯಮೂರ್ತಿ ನವೀನ್ ಚಾವ್ಲಾ ನೇತೃತ್ವದ ಪೀಠಕ್ಕೆ ಮನವಿ ಮಾಡಿದರು.

ಉಮರ್ ಖಾಲಿದ್, ಇಮಾಮ್ ಮತ್ತು ಇತರ ಕೆಲವರ ವಿರುದ್ಧ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ) ಅಡಿ ಪ್ರಕರಣ ದಾಖಲಿಸಲಾಗಿದೆ. 2020ರಲ್ಲಿ ನಡೆದ ಹಿಂಸಾಚಾರದ ಪ್ರಮುಖ ಸೂತ್ರಧಾರರು ಇವರು ಎಂಬ ಆರೋಪ ಹೊರಿಸಲಾಗಿದೆ. ಗಲಭೆಯಲ್ಲಿ 53 ಮಂದಿ ಮೃತಪಟ್ಟಿದ್ದರು. 'ನನ್ನ- ಪಿತೂರಿಕೋರರ ನಡುವೆ ಮಾತುಕತೆ ನಡೆದಿಲ್ಲ' ಎಂದು ಇಮಾಮ್ ಹೇಳಿದ್ದಾರೆ.

ಹಿಮದಾಟ... ಕಾಶ್ಮೀರದಲ್ಲಿ ಈ ವರ್ಷದ ಮೊದಲ ಹಿಮಪಾತವಾಗಿದ್ದು, ಬಾರಾಮುಲ್ಲಾ ಜಿಲ್ಲೆಯ ತಂಗ್‌ಮಾರ್ಗ್‌ನಲ್ಲಿ ಮಕ್ಕಳು ಹಿಮದಿಂದ ಆವೃತವಾಗಿದ್ದ ರಸ್ತೆಯಲ್ಲಿ ಗುರುವಾರ ಆಟವಾಡಿದರು –ಪಿಟಿಐ ಚಿತ್ರ

ಇಂದಿನಿಂದ 'ಸಂವಿಧಾನ' ಚರ್ಚೆ

ನವದೆಹಲಿ (ಪಿಟಿಐ): ಸಂವಿಧಾನ ಜಾರಿಗೆ ಬಂದು 75ನೇ ವರ್ಷ ಆಗುತ್ತಿರುವ ಸಂದರ್ಭದಲ್ಲಿ ಶುಕ್ರವಾರ ಲೋಕಸಭೆಯಲ್ಲಿ ಎರಡು ದಿನಗಳ ಚರ್ಚೆ ಪ್ರಾರಂಭ ಆಗಲಿದೆ ಎಂದು ಮೂಲಗಳು ತಿಳಿಸಿವೆ.

ಪ್ರಧಾನಿ ನರೇಂದ್ರ ಮೋದಿ ಅವರು ಚರ್ಚೆಗೆ ಶನಿವಾರ ಉತ್ತರ ನೀಡಲಿದ್ದಾರೆ. ರಕ್ಷಣಾ ಸಚಿವ ರಾಜನಾಥ ಸಿಂಗ್ ಶುಕ್ರವಾರ ಚರ್ಚೆ ಪ್ರಾರಂಭಿಸಲಿದ್ದಾರೆ ಎಂದು ಹೇಳಿವೆ.

ವಾಯುಯಾನ ಮಸೂದೆಗೆ ಅಂಕಿತ ಹಾಕಿದ ರಾಷ್ಟ್ರಪತಿ

ನವದೆಹಲಿ (ಪಿಟಿಐ): ಭಾರತದಲ್ಲಿ ವಿಮಾನಗಳ ವಿನ್ಯಾಸ ಮತ್ತು ತಯಾರಿಕೆಗೆ ಅನುಕೂಲ ಕಲ್ಪಿಸುವ ಮಸೂದೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಅಂಕಿತ ದೊರೆತಿದೆ.

90 ವರ್ಷಗಳ ಹಿಂದಿನ ವಿಮಾನ ಕಾಯ್ದೆಗೆ ಬದಲಾಗಿ ಭಾರತೀಯ ವಾಯುಯಾನ ವಿಧೇಯಕವನ್ನು ಸಂಸತ್ತು ಈ ತಿಂಗಳು ಅಂಗೀಕರಿಸಿತ್ತು. ಡಿ.11ರ ಅಧಿಸೂಚನೆ ಪ್ರಕಾರ ಮಸೂದೆಗೆ ರಾಷ್ಟ್ರಪತಿಯವರ ಅಂಕಿತ ಸಿಕ್ಕಿದೆ.

ದ್ರೌಪದಿ ಮುರ್ಮು

ವಿಮಾನದ ವಿನ್ಯಾಸ, ತಯಾರಿಕೆ, ನಿರ್ವಹಣೆ, ಬಳಕೆ, ಕಾರ್ಯಾಚರಣೆ, ಮಾರಾಟ, ರಫ್ತು ಮತ್ತು ಆಮದು ಹಾಗೂ ಅದಕ್ಕೆ ಸಂಬಂಧಿಸಿದ ನಿಯಂತ್ರಣ ಕುರಿತ ಕಾಯ್ದೆ ಇದಾಗಿದೆ ಎಂದು ಕಾನೂನು ಮತ್ತು ನ್ಯಾಯಾಂಗ ಸಚಿವಾಲಯ ಹೊರಡಿಸಿದ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

7 ನಕ್ಸಲರು ಬಲಿ

ನಾರಾಯಣಪುರ (ಪಿಟಿಐ): ಛತ್ತೀಸಗಢದ ನಾರಾಯಣಪುರ ಜಿಲ್ಲೆಯ ದಕ್ಷಿಣ ಅಬುಜಮಾಡ್‌ನ ಅರಣ್ಯದಲ್ಲಿ ಬೆಳಿಗ್ಗೆ 3 ಗಂಟೆ ಸುಮಾರಿಗೆ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಏಳು ಮಂದಿ ನಕ್ಸಲರು ಮೃತಪಟ್ಟಿದ್ದಾರೆ.

'ಕೇಂದ್ರೀಯ ಮೀಸಲು ಪೊಲೀಸ್ ಪಡೆ, ಬಸ್ತಾರ್, ದಂತೇವಾಡ ಜಿಲ್ಲೆಯ ಸ್ಥಳೀಯ ಪೊಲೀಸರು ಕಾಡಿನಲ್ಲಿ ಶೋಧ ಕಾರ್ಯ ನಡೆಸುತ್ತಿದ್ದರು. ಈ ವೇಳೆ ಭದ್ರತಾ ಪಡೆಗಳ ಮೇಲೆ ನಕ್ಸಲರು ಗುಂಡಿನ ದಾಳಿ ನಡೆಸಿದ್ದಾರೆ. ಭದ್ರತಾ ಪಡೆಗಳು ಪ್ರತಿದಾಳಿ ನಡೆಸಿದವು. ಗುಂಡಿನ ದಾಳಿ ನಿಂತ ಬಳಿಕ ಸ್ಥಳದಿಂದ ಸಮವಸ್ತ್ರ ಧರಿಸಿದ ಏಳು ಮಂದಿ ನಕ್ಸಲರ ಮೃತದೇಹಗಳನ್ನು ವಶಪಡಿಸಿಕೊಳ್ಳಲಾಯಿತು' ಎಂದು ಪೊಲೀಸರು ತಿಳಿಸಿದರು.

11 ನಕ್ಸಲರು ಶರಣು: ಸುಕ್ಮಾ (ಪಿಟಿಐ): ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ಗುರುವಾರ 11 ನಕ್ಸಲರು ಶರಣಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಭಾರತೀಯ ಕಮ್ಯುನಿಸ್ಟ್ ಪಾರ್ಟಿ'ಯ (ನಕ್ಸಲ್ ಸಂಘಟನೆ) 'ಪೆದ್ದಬೊಡ್ಕೆಲ್ ಕ್ರಾಂತಿಕಾರಿ ಪಕ್ಷ ಸಮಿತಿ'ಯ ಕೃಷಿ ಸಂಘದ ಅಧ್ಯಕ್ಷ ಜೋಗೇಂದ್ರ ಯಾದವ್ ಹಾಗೂ ಸಂಘಟನೆಯ ಸಾರ್ವಜನಿಕ ಸಂಪರ್ಕ ಸಮಿತಿಯ ಮುಖ್ಯಸ್ಥ ಹೇಮ್ಲಾ ದೇವಾ ಸೇರಿದಂತೆ 11 ಜನ ಶರಣಾಗಿದ್ದಾರೆ.

ಮುಖ ಮುಚ್ಚಿಕೊಳ್ಳಲು ಯತ್ನಿಸುವೆ: ಗಡ್ಕರಿ

ನವದೆಹಲಿ (ಪಿಟಿಐ): 'ನಾನು ಅಂತರರಾಷ್ಟ್ರೀಯ ಸಮಾವೇಶಗಳಿಗೆ ಹೋದಾಗ, ರಸ್ತೆ ಅಪಘಾತಗಳ ಬಗ್ಗೆ ಚರ್ಚೆಗಳು ಇದ್ದಾಗ ನನ್ನ ಮುಖ ಮುಚ್ಚಿಕೊಳ್ಳಲು ಯತ್ನಿಸುತ್ತೇನೆ' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದರು.

ರಸ್ತೆ ಸಾರಿಗೆ ಮತ್ತು ಹೆದ್ದಾರಿ ಖಾತೆಯನ್ನು ಮೊದಲ ಬಾರಿಗೆ ವಹಿಸಿಕೊಂಡಾಗ ತಾವು ರಸ್ತೆ ಅಪಘಾತಗಳ ಪ್ರಮಾಣವನ್ನು ಶೇಕಡ 50ರಷ್ಟು ತಗ್ಗಿಸುವ ಗುರಿಯನ್ನು ಹೊಂದಿದ್ದುದಾಗಿ ಅವರು ಗುರುವಾರ ಹೇಳಿದರು.

ರಸ್ತೆ ಅಪಘಾತಗಳ ಕುರಿತು ಲೋಕಸಭೆಯಲ್ಲಿ ನಡೆದ ಚರ್ಚೆಯಲ್ಲಿ ಭಾಗಿಯಾದ ಗಡ್ಕರಿ, 'ರಸ್ತೆ ಅಪಘಾತಗಳನ್ನು ಕಡಿಮೆ ಮಾಡುವುದು ಅತ್ತ ಇರಲಿ, ರಸ್ತೆ ಅಪಘಾತಗಳ ಸಂಖ್ಯೆ ಹೆಚ್ಚಾಗಿದೆ ಎಂಬುದನ್ನು ಒಪ್ಪಿಕೊಳ್ಳಲು ನನಗೆ ಯಾವ ಅಳುಕೂ ಇಲ್ಲ' ಎಂದರು. ಪ್ರಶ್ನೋತ್ತರ ವೇಳೆಯಲ್ಲಿ ಗಡ್ಕರಿ ಅವರು ಪೂರಕ ಪ್ರಶ್ನೆಯೊಂದಕ್ಕೆ ಉತ್ತರಿಸುವ ಸಂದರ್ಭದಲ್ಲಿ ಹೀಗೆ ಹೇಳಿದರು.

ಪರಿಸ್ಥಿತಿ ಸುಧಾರಿಸಬೇಕು ಎಂದಾದರೆ ದೇಶದಲ್ಲಿ ನಾಗರಿಕರ ವರ್ತನೆಯಲ್ಲಿ ಬದಲಾವಣೆ ಬೇಕು, ಸಮಾಜವು ಬದಲಾಗಬೇಕು ಮತ್ತು ಕಾನೂನಿಗೆ ಗೌರವ ನೀಡಬೇಕು ಎಂದರು.



ರಸ್ತೆಗಳಲ್ಲಿ ಟ್ರಕ್ಕುಗಳನ್ನು ನಿಲುಗಡೆ ಮಾಡುವುದು ಅಪಘಾತಗಳಿಗೆ ಬಹಳ ದೊಡ್ಡ ಕಾರಣವಾಗುತ್ತಿದೆ. ಟ್ರಕ್ಕುಗಳಲ್ಲಿ ಹೆಚ್ಚಿನವು ಹೆದ್ದಾರಿಗಳಲ್ಲಿ ನಿಗದಿ ಮಾಡಿರುವ ಪಥದಲ್ಲಿ ಸಾಗುವುದಿಲ್ಲ. ಅಲ್ಲದೆ ಲೇನ್ ನಿಯಮಗಳನ್ನು ಅನೇಕರು ಪಾಲಿಸುವುದಿಲ್ಲ. ಇದೂ ಅಪಘಾತಕ್ಕೆ ಎಡೆಮಾಡಿಕೊಡುತ್ತಿದೆ ಎಂದು ಗಡ್ಕರಿ ಹೇಳಿದರು.

ಬಸ್‌ನ ಕಿಟಕಿಗಳ ಬಳಿ ಸುತ್ತಿಗೆ ಇರಬೇಕು. ಆಗ, ಅಪಘಾತದ ಸಂದರ್ಭದಲ್ಲಿ ಕಿಟಕಿಯನ್ನು ಸುಲಭವಾಗಿ ಒಡೆಯಬಹುದು ಎಂದು ಅವರು ಮಾಹಿತಿ ನೀಡಿದರು.

ನಗರಗಳ ಪೈಕಿ, ರಸ್ತೆ ಅಪಘಾತಗಳಲ್ಲಿ ಅತಿಹೆಚ್ಚು ಸಾವುಗಳು ವರದಿಯಾಗುವುದು ದೆಹಲಿಯಲ್ಲಿ (ವರ್ಷಕ್ಕೆ 1,400). ಎರಡನೆಯ ಸ್ಥಾನದಲ್ಲಿ ಬೆಂಗಳೂರು (ವರ್ಷಕ್ಕೆ 915 ಪ್ರಾಣಹಾನಿ) ಇದೆ ಎಂದರು.

ರಾಜ್ಯಸಭೆ: ಕಲಾಪ ನುಂಗಿದ ಗದ್ದಲ

ಜಗದೀಪ್ ಧನಕರ್ ವಿರುದ್ಧ ವಿಪಕ್ಷಗಳಿಂದ ಅವಿಶ್ವಾಸ ನಿರ್ಣಯ ವಿಚಾರ

ನವದೆಹಲಿ(ಪಿಟಿಐ): ಸಭಾಪತಿ ಜಗದೀಪ್ ಧನಕರ್ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡನೆ, ಶತಕೋಟ್ಯಧಿಪತಿ ಹೂಡಿಕೆದಾರ ಜಾರ್ಜ್ ಸೊರೊಸ್ ಜತೆ ಕಾಂಗ್ರೆಸ್ ನಾಯಕರ ನಂಟು ಕುರಿತ ಬಿಜೆಪಿಯ ಆರೋಪಗಳಿಂದಾಗಿ, ರಾಜ್ಯಸಭೆಯಲ್ಲಿ ಗುರುವಾರ ಆಡಳಿತ ಮತ್ತು ವಿಪಕ್ಷಗಳ ಸದಸ್ಯರ ನಡುವೆ ವಾಗ್ವಾದ ನಡೆಯಿತಲ್ಲದೇ, ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಲಾಯಿತು.

ಇದಕ್ಕೂ ಮುನ್ನ, ಎರಡು ಬಾರಿ ಕಲಾಪ ಮುಂದೂಡುವುದಕ್ಕೂ ಸದನ ಸಾಕ್ಷಿಯಾಯಿತು.

ಭೋಜನ ವಿರಾಮದ ಪೂರ್ವದಲ್ಲಿ, ಶೂನ್ಯವೇಳೆಯಲ್ಲಿ ವಿರೋಧ ಪಕ್ಷಗಳ ಸದಸ್ಯರು ತಾವು ನೀಡಿದ ನೋಟಿಸ್‌ಗಳಲ್ಲಿನ ವಿಷಯಗಳನ್ನು ಚರ್ಚೆಗೆ ಕೈಗೆತ್ತಿಕೊಳ್ಳುವಂತೆ ಕೋರಿದರು.

ಈ ಸಂಬಂಧ ಸಲ್ಲಿಕೆಯಾಗಿದ್ದ 6 ನೋಟಿಸ್‌ಗಳನ್ನು ಸಭಾಪತಿ ಧನಕರ್ ತಿರಸ್ಕರಿಸಿದರು. ಆಗ, ಧನಕರ್ ಅವರ ನಡೆಗೆ ವಿರೋಧ ಪಕ್ಷಗಳ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಮಧ್ಯಪ್ರವೇಶಿಸಿದ ಸಚಿವ ಜೆ.ಪಿ.ನಡ್ಡಾ, 'ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಸುದ್ದಿಗೋಷ್ಠಿ ನಡೆಸಿ, ಸಭಾಪತಿಯೂ ಆಗಿರುವ ಉಪರಾಷ್ಟ್ರಪತಿ ಅವರನ್ನು ಟೀಕಿಸಿದ್ದು ಸರಿಯಲ್ಲ' ಎಂದು ವಾಗ್ದಾಳಿ ನಡೆಸಿದರು.

'ಸಭಾಪತಿ ಅವರ ರೂಲಿಂಗ್ ಅನ್ನು ಪ್ರಶ್ನೆ ಮಾಡುವಂತಿಲ್ಲ ಅಥವಾ ಟೀಕಿಸುವಂತಿಲ್ಲ. ಹಾಗೆ ಮಾಡಿದಲ್ಲಿ ಅದು ಸದನ ಮತ್ತು ಸಭಾಪತಿಗಳ ನಿರ್ಣಯದ ನಿಂದನೆ ಆಗಲಿದೆ' ಎಂದು ನಡ್ಡಾ ಹೇಳಿದರು.

ನಂತರ, 'ಸೋನಿಯಾ ಗಾಂಧಿ ಮತ್ತು ಜಾರ್ಜ್ ಸೊರೊಸ್ ನಡುವಿನ ಸಂಬಂಧವೇನು? ಈ ಬಗ್ಗೆ ತಿಳಿಯಲು ಇಡೀ ದೇಶವೇ ಬಯಸುತ್ತಿದೆ' ಎಂದು ನಡ್ಡಾ ಹೇಳಿದಾಗ ಅದಕ್ಕೆ ವಿಪಕ್ಷಗಳ ಪಾಳಯದಿಂದ ವಿರೋಧ ವ್ಯಕ್ತವಾಯಿತು. ಗದ್ದಲ ಶುರುವಾದಾಗ ಕಲಾಪವನ್ನು ಮಧ್ಯಾಹ್ನ 2ರವರೆಗೆ ಮುಂದೂಡಲಾಯಿತು.

ಮಧ್ಯಾಹ್ನ ಮತ್ತೆ ಕಲಾಪ ಆರಂಭಗೊಂಡಾಗ, ಟಿಎಂಸಿ ಸಂಸದ ಡೆರೆಕ್ ಒಬ್ರಯಾನ್ ಅವರು ಕ್ರಿಯಾಲೋಪ ಪ್ರಸ್ತಾವಕ್ಕೆ ಮುಂದಾದರು. ಇದಕ್ಕೆ ಅವಕಾಶ ಇಲ್ಲ ಎಂದು ಧನಕರ್ ಹೇಳಿದಾಗ, ವಿಪಕ್ಷಗಳ ಸದಸ್ಯರು ಮತ್ತೆ ಘೋಷಣೆಗಳನ್ನು ಕೂಗಿದಾಗ ಸದನ ಗದ್ದಲದಿಂದ ತುಂಬಿತು.

ಇದರ ನಡುವೆಯೇ, ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ಸಂಸದ ಎಚ್‌.ಡಿ.ದೇವೇಗೌಡ ಮಾತನಾಡುವಂತೆ ಧನಕರ್ ಹೇಳಿದರಾದರೂ, ವಿರೋಧ ಪಕ್ಷಗಳ ಸದಸ್ಯರ ಗದ್ದಲ ಜೋರಾದ ಕಾರಣ, ದೇವೇಗೌಡರು ಮಾತನಾಡಲು ಸಾಧ್ಯವಾಗಲಿಲ್ಲ.

'ಕಲಾಪ ಸರಿಯಾಗಿ ನಡೆಯುತ್ತಿಲ್ಲ. ಆಡಳಿತ ಪಕ್ಷದವರು ವಿವೇಕರಹಿತರಂತೆ ಆರೋಪಗಳನ್ನು ಮಾಡುತ್ತಿದ್ದಾರೆ. ನೀವು ಅವುಗಳನ್ನು ಆಲಿಸುವ ಜೊತೆಗೆ, ಅವರನ್ನು ಪ್ರೋತ್ಸಾಹಿಸುತ್ತಿದ್ದೀರಿ' ಎಂದು ಖರ್ಗೆ ಹೇಳಿದರು.

ಮತ್ತೆ ಗದ್ದಲ ಜೋರಾದ ಕಾರಣ, ಧನಕರ್ ಅವರು ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಿದರು.

ಅವಿಶ್ವಾಸ ನೋಟಿಸ್‌ಗೆ ದೇವೇಗೌಡ ಕಿಡಿ

ನವದೆಹಲಿ: ರಾಜ್ಯಸಭೆ ಸಭಾಪತಿ ಜಗದೀಪ್ ಧನಕರ್ ವಿರುದ್ಧ ಇಂಡಿಯಾ ಮೈತ್ರಿಕೂಟದ ಸದಸ್ಯರು ಅವಿಶ್ವಾಸ ಗೊತ್ತುವಳಿ ಮಂಡಿಸಲು ನೀಡಿರುವ ನೋಟಿಸ್ ವಿರುದ್ಧ ಹರಿಹಾಯ್ದ ರಾಜ್ಯಸಭಾ ಸದಸ್ಯ ಎಚ್‌.ಡಿ.ದೇವೇಗೌಡ, 'ಕಾಂಗ್ರೆಸ್ ಪಕ್ಷ ಪ್ರಜಾಪ್ರಭುತ್ವವನ್ನು ಅಪಾಯಕ್ಕೆ ದೂಡುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯಸಭೆಯಲ್ಲಿ ಗುರುವಾರ ಮಾತನಾಡಿದ ಅವರು, ವಿಪಕ್ಷಗಳು ಸಂಸತ್ತಿನ ಘನತೆಯನ್ನು ಎತ್ತಿಹಿಡಿಯಬೇಕು ಮತ್ತು ಕಲಾಪಕ್ಕೆ ಅಡ್ಡಿಪಡಿಸುವುದನ್ನು ನಿಲ್ಲಿಸಬೇಕು ಎಂದು ಸಲಹೆ ನೀಡಿದರು. ರಾಜ್ಯಸಭೆಯ ಸಭಾಪತಿ ವಿರುದ್ಧ ಇಂತಹ ನಿರ್ಣಯವನ್ನು ಮಂಡಿಸಲು ಹೊರಟಿರುವುದು ಇತಿಹಾಸದಲ್ಲಿ ಇದೇ ಮೊದಲು. ಇದು ಒಳ್ಳೆಯ ಸಂಪ್ರದಾಯ ಅಲ್ಲ. ಇದು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಮಾರಕ ಪರಿಣಾಮಗಳನ್ನು ಉಂಟುಮಾಡಬಹುದು ಎಂದು ಅವರು ಎಚ್ಚರಿಕೆ ನೀಡಿದರು.



'ಜೀವನಾಂಶದ ಹಕ್ಕು ಮೂಲಭೂತ ಹಕ್ಕುಗಳಿಗೆ ಸಮ'

ನವದೆಹಲಿ: 'ಜೀವನಾಂಶದ ಹಕ್ಕು ಎನ್ನುವುದು ಮೂಲಭೂತ ಹಕ್ಕುಗಳಿಗೆ ಸಮನಾಗಿದೆ. ಸಂವಿಧಾನದ 21ನೇ ವಿಧಿಯಲ್ಲಿ ಹೇಳಿರುವಂತೆ ಎಲ್ಲರಿಗೂ ಗೌರವಯುತವಾಗಿ ಜೀವಿಸುವ ಹಕ್ಕಿದೆ' ಎಂದು ಗುರುವಾರ ಸುಪ್ರೀಂ ಕೋರ್ಟ್ ಹೇಳಿದೆ.

'ನಾನು ಡೈಮಂಡ್ ಉದ್ಯಮದಲ್ಲಿ ತೊಡಗಿಕೊಂಡಿದ್ದು, ನಷ್ಟ ಅನುಭವಿಸಿದ್ದೇನೆ. ಸಾಲ ವಸೂಲಿ ಪ್ರಕ್ರಿಯೆಯೂ ನಡೆದಿದೆ. ಆದ್ದರಿಂದ ಗುಜರಾತ್ ಹೈಕೋರ್ಟ್ ಆದೇಶಿಸಿದಷ್ಟು ದೊಡ್ಡ ಮೊತ್ತದ ಜೀವನಾಂಶ ನೀಡಲು ಸಾಧ್ಯವಿಲ್ಲ' ಎಂದು ಮೇಲ್ಮನವಿ ಸಲ್ಲಿಸಿದ್ದ ಪತಿಯ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಉಜ್ವಲ್ ಭುಯಾನ್ ನಡೆಸಿದರು.

'2002ರ ಸರ್ಫೇಸಿ ಕಾಯ್ದೆ, 2016ರ ದಿವಾಳಿ ಸಂಹಿತೆ ಅಥವಾ ಇಂಥ ಯಾವುದೇ ಕಾಯ್ದೆಯಲ್ಲಿ ಉಲ್ಲೇಖಿಸಿರುವ ಸಾಲದಾತರ ಹಕ್ಕು-ಗಳಿಗಿಂತಲೂ ಪತ್ನಿ ಹಾಗೂ ಮಕ್ಕಳಿಗೆ ಜೀವನಾಂಶ ನೀಡುವುದು ಹೆಚ್ಚು ಮುಖ್ಯವಾಗುತ್ತದೆ. ಯಾಕೆಂದರೆ, ಜೀವನಾಂಶದ ಹಕ್ಕು ಮೂಲಭೂತ ಹಕ್ಕುಗಳಿಗೆ ಸಮನಾಗಿದೆ' ಎಂದು ಪೀಠ ಹೇಳಿದೆ.

ತಂಡದ ಆಟಗಾರರಿಗೆ ವಿರಾಟ್ ಸ್ಫೂರ್ತಿಯ ನುಡಿ

ನೆಟ್ಸ್‌ನಲ್ಲಿ ರೋಹಿತ್ ಅಭ್ಯಾಸ

ಬ್ರಿಸ್ಬೇನ್ (ಪಿಟಿಐ): ಭಾರತ ತಂಡದ ನಾಯಕರಾಗಿದ್ದ ಸಂದರ್ಭದಲ್ಲಿ ವಿರಾಟ್ ಕೊಹ್ಲಿ ಅವರ ಮೇಲೆಯೇ ಎಲ್ಲರ ಕಣ್ಣುಗಳು ನೆಟ್ಟಿರುತ್ತಿದ್ದರು. ಅಲ್ಲದೇ ಬ್ಯಾಟಿಂಗ್ ಶಕ್ತಿಯಾಗಿಯೂ ಅವರು ಗುರುತಿಸಿಕೊಂಡಿದ್ದರು. ಅಲ್ಲದೇ ತಂಡದ ಆಟಗಾರರೊಂದಿಗೆ ಅವರು ಬಹಳಷ್ಟು ಮಾತುಕತೆ ನಡೆಸುತ್ತಿದ್ದರು.

ಅಡಿಲೇಡ್‌ನಲ್ಲಿ ನಡೆದಿದ್ದ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಎರಡನೇ ಪಂದ್ಯದಲ್ಲಿ ಭಾರತ ತಂಡವು 10 ವಿಕೆಟ್‌ಗಳ ಸೋಲನುಭವಿಸಿತ್ತು. ಇದರಿಂದಾಗಿ ಭಾರತ ತಂಡಕ್ಕೆ ಶನಿವಾರ ಇಲ್ಲಿ ಆರಂಭವಾಗಲಿರುವ ಮೂರನೇ ಟೆಸ್ಟ್ ಪ್ರಮುಖವಾಗಿದೆ. ಅದಕ್ಕಾಗಿ ಈಗ ಮತ್ತೊಮ್ಮೆ ಕೊಹ್ಲಿ ಅವರು ತಂಡದ ಆಟಗಾರರಿಗೆ ಸ್ಫೂರ್ತಿ ತುಂಬುತ್ತಿದ್ದಾರೆ. ಗುರುವಾರ ಅವರು ತಂಡದ ಅಟಗಾರರಿಗೆ ತಮ್ಮ ಅನುಭವದ ಮಾತುಗಳನ್ನು ಅರುಹಿದರು. ದಿನದ ಅಭ್ಯಾಸ ಶುರುವಾಗುವ ಮುಂಚೆ ಆಟಗಾರರೊಂದಿಗೆ ಚುಟುಕು ಸಭೆಯಲ್ಲಿ ಕೊಹ್ಲಿ ಮತ್ತು ನಾಯಕ ರೋಹಿತ್ ಶರ್ಮಾ ಅವರು ಮಾತನಾಡಿದರು.

ರೋಹಿತ್ ಅಭ್ಯಾಸ: ಸತತ ಬ್ಯಾಟಿಂಗ್ ವೈಫಲ್ಯ ಅನುಭವಿಸುತ್ತಿರುವ ರೋಹಿತ್ ಶರ್ಮಾ ಅವರು ನೆಟ್ಸ್‌ನಲ್ಲಿ ಹೊಸ ಚೆಂಡು ಮತ್ತು ಅರ್ಧ ಹಳತಾದ ಚೆಂಡುಗಳ ಬೌಲಿಂಗ್ ಎದುರಿಸಿದರು.

ಅವರು ನ್ಯೂಜಿಲೆಂಡ್ ಎದುರಿನ ಸರಣಿಯಲ್ಲಿ ಆರಂಭಿಕ ಬ್ಯಾಟರ್ ಆಗಿ ಹೊಸ ಚೆಂಡು ಎದುರಿಸುವಲ್ಲಿ ವಿಫಲರಾಗಿದ್ದರು. ಈಚೆಗೆ ಅಡಿಲೇಡ್‌ನಲ್ಲಿ 6ನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿಯೂ ವಿಫಲರಾಗಿದ್ದರು. ಹಳೆ ಚೆಂಡು ಎದುರಿಸುವಲ್ಲಿಯೂ ಅವರು ಯಶಸ್ವಿಯಾಗಿರಲಿಲ್ಲ.

ಈ ಪಂದ್ಯದಲ್ಲಿಯೂ ಒಂದೊಮ್ಮೆ ಕೆ.ಎಲ್. ರಾಹುಲ್ ಮತ್ತು ಯಶಸ್ವಿ ಜೈಸ್ವಾಲ್ ಇನಿಂಗ್ಸ್ ಆರಂಭಿಸಿದರೆ ರೋಹಿತ್ ಆರನೇ ಕ್ರಮಾಂಕದಲ್ಲಿ ಆಡಬಹುದು. ಇಲ್ಲದಿದ್ದರೆ ಅವರು ಇನಿಂಗ್ಸ್ ಆರಂಭಿಸಬಹುದು.

ರೋಹಿತ್ ಶರ್ಮಾ

ಹದವಾದ ಹಸಿರು ಗರಿಕೆಗಳ ಹೊದಿಕೆ ಇರುವ ಗಾಬಾದ ಪಿಚ್‌ನಲ್ಲಿ ಚೆಂಡಿನ ಪುಟಿತ ಉತ್ತಮವಾಗಿರುತ್ತದೆ. ಏಕಾಗ್ರತೆ ಮತ್ತು ತಾಳ್ಮೆಯುತವಾಗಿ ಆಡುವ ಬ್ಯಾಟರ್‌ಗಳಿಗೂ ಇಲ್ಲಿ ಉತ್ತಮ ಅವಕಾಶವಿದೆ. ಇಲ್ಲದಿದ್ದರೆ ಬೌಲರ್‌ಗಳು ವಿಜೃಂಭಿಸುವುದಂತೂ ಖಚಿತ. ಅದರಿಂದಾಗಿ ನಾಯಕ ರೋಹಿತ್ ಮತ್ತು ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ರೂಪಿಸುವ ತಂತ್ರಗಾರಿಕೆಯೂ ಪ್ರಮುಖವಾಗಲಿದೆ. ಅವರು ಬೌಲಿಂಗ್ ವಿಭಾಗದಲ್ಲಿ ಕೆಲವು ಬದಲಾವಣೆಗೆ ಚಿತ್ತ ಹರಿಸುವ ಸಾಧ್ಯತೆ ಇದೆ.

ಹರ್ಷಿತ್ ರಾಣಾಗೆ ವಿಶ್ರಾಂತಿ ನೀಡಿ ಆಕಾಶ್ ದೀಪ್ ಅವರಿಗೆ ಅವಕಾಶ ಕೊಡುವ ಸಾಧ್ಯತೆ ಇದೆ. ಹರ್ಷಿತ್ ಅವರು ಮೊದಲ ಟೆಸ್ಟ್‌ನಲ್ಲಿ ಭರವಸೆ ಮೂಡಿಸಿದ್ದರು. ಆದರೆ ಅಡಿಲೇಡ್‌ನಲ್ಲಿ 16 ಓವರ್‌ಗಳಲ್ಲಿ 86 ರನ್ ನೀಡಿ ದುಬಾರಿಯಾಗಿದ್ದರು.

ಕರ್ನಾಟಕ ಕ್ರಿಕೆಟ್ ತಂಡಕ್ಕೆ ಶ್ರೇಯಸ್ ಉಪನಾಯಕ

ಬೆಂಗಳೂರು: ಮಯಂಕ್ ಅಗರವಾಲ್ ಇದೇ 21ಕ್ಕೆ ಅಹಮದಾಬಾದ್‌ನಲ್ಲಿ ಆರಂಭವಾಗುವ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಲಿದ್ದಾರೆ.

ಕಳೆದ ಋತುವಿನಲ್ಲಿ ಕೇರಳ ತಂಡಕ್ಕಾಗಿ ಆಡಿ, ಈ ವರ್ಷ ಕರ್ನಾಟಕ ತಂಡಕ್ಕೆ ವಾಪಸಾಗಿರುವ ಶ್ರೇಯಸ್ ಗೋಪಾಲ್ ಅವರಿಗೆ ಉಪನಾಯಕನ ಹೊಣೆ ನೀಡಲಾಗಿದೆ. ಅವರು ಮನೀಷ್ ಪಾಂಡೆ ಸ್ಥಾನವನ್ನು ತುಂಬಲಿದ್ದಾರೆ. ಪಾಂಡೆ ಅವರನ್ನು ತಂಡದಿಂದ ಕೈಬಿಡಲಾಗಿದೆ. 'ಸಿ' ಗುಂಪಿನಲ್ಲಿರುವ ಕರ್ನಾಟಕ ತಂಡವು ಮುಂಬೈ ವಿರುದ್ಧ ಅಭಿಯಾನ ಆರಂಭಿಸಲಿದೆ.

ತಂಡ ಹೀಗಿದೆ: ಮಯಂಕ್ ಅಗರವಾಲ್ (ನಾಯಕ), ಶ್ರೇಯಸ್ ಗೋಪಾಲ್ (ಉಪನಾಯಕ), ಎಸ್‌.ಜೆ. ನಿಕಿನ್ ಜೋಸ್, ಅನೀಶ್ ಕೆ.ವಿ, ಸ್ಮರಣ್ ಆರ್, ಕೆ.ಎಲ್. ಶ್ರೀಜಿತ್ (ವಿಕೆಟ್ ಕೀಪರ್), ಅಭಿನವ್ ಮನೋಹರ್, ಹಾರ್ದಿಕ್ ರಾಜ್, ವೈಶಾಖ ವಿಜಯ್‌ಕುಮಾರ್, ಕೌಶಿಕ್ ವಿ, ವಿದ್ಯಾಧರ್ ಪಾಟೀಲ, ಕಿಶನ್ ಎಸ್. ಬೆದರೆ , ಅಭಿಲಾಷ್ ಶೆಟ್ಟಿ, ಮನೋಜ್ ಭಾಂಡಗೆ, ಪ್ರವೀಣ್ ದುಬೆ, ಲುವ್ನಿತ್ ಸಿಸೋಡಿಯಾ (ವಿಕೆಟ್ ಕೀಪರ್). ಕೋಚ್: ಯೆರ್ರೆ ಗೌಡ. ಬೌಲಿಂಗ್ ಕೋಚ್: ಮನ್ಸೂರ್ ಅಲಿ ಖಾನ್. ಫೀಲ್ಡಿಂಗ್ ಕೋಚ್: ಶಬರೀಶ್ ಪಿ ಮೋಹನ್. ಮ್ಯಾನೇಜರ್: ಎ. ರಮೇಶ್ ರಾವ್.

ಹಾಕಿ: ವಿಶ್ವಕಪ್‌ಗೆ ಭಾರತ ಅರ್ಹತೆ

ಮಸ್ಕತ್: ದೀಪಿಕಾ ಅವರ ನಾಲ್ಕು ಗೋಲುಗಳ ನೆರವಿನಿಂದ ಭಾರತ ತಂಡ, ಮಹಿಳೆಯರ ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿ 'ಎ' ಗುಂಪಿನ ಪಂದ್ಯದಲ್ಲಿ ಥಾಯ್ಲೆಂಡ್ ತಂಡದ ಮೇಲೆ ಗುರುವಾರ 9–0 ಗೋಲುಗಳ ಜಯ ಪಡೆಯಿತು.

ಹಾಲಿ ಚಾಂಪಿಯನ್ ಭಾರತ 'ಎ' ಗುಂಪಿನಲ್ಲಿ ಇದು ಮೂರನೇ ಜಯ. ಗುಂಪಿನಲ್ಲಿ ಚೀನಾ ನಂತರ ಎರಡನೇ ಸ್ಥಾನ ಗಳಿಸಿತು. ಭಾರತ ಶನಿವಾರ ನಡೆಯುವ ಸೆಮಿಫೈನಲ್‌ನಲ್ಲಿ ಜಪಾನ್ ತಂಡವನ್ನು ಎದುರಿಸಲಿದೆ. ಭಾನುವಾರ ಫೈನಲ್ ನಡೆಯಲಿದೆ.

ವಿಶ್ವಕಪ್‌ಗೆ ಅರ್ಹತೆ: ಭಾರತ ಸೇರಿದಂತೆ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದ ಎಲ್ಲಾ ನಾಲ್ಕು ತಂಡಗಳು 2025ರ ಎಫ್‌ಐಎಚ್ ಜೂನಿಯರ್ ವಿಶ್ವಕಪ್‌ಗೆ ಅರ್ಹತೆ ಪಡೆದವು. ಜಪಾನ್, ಚೀನಾ ಮತ್ತು ದಕ್ಷಿಣ ಕೊರಿಯಾ ವಿಶ್ವಕಪ್‌ಗೆ ಟಿಕೆಟ್ ಪಡೆದ ಇತರ ತಂಡಗಳು.

ಗಾಯತ್ರಿ–ಟ್ರೀಸಾ ಜೋಡಿಗೆ ಜಯ

ಹಾಂಗ್‌ಝೌ (ಪಿಟಿಐ): ಭಾರತದ ಮಹಿಳಾ ಡಬಲ್ಸ್ ಆಟಗಾರ್ತಿಯರಾದ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಅವರು ನೇರ ಆಟ ಗಳಿಂದ ಮಲೇಷ್ಯಾದ ಪಿಯರ್ಲಿ ತಾನ್– ತಿನಾ ಮುರಳೀಧರನ್ ಅವರನ್ನು ಸೋಲಿಸಿ ಬಿಡಬ್ಲ್ಯುಎಫ್ ಬ್ಯಾಡ್ಮಿಂಟನ್ ವಿಶ್ವ ಟೂರ್ ಫೈನಲ್ಸ್‌ನಲ್ಲಿ ಸೆಮಿಫೈನಲ್ ಅವಕಾಶವನ್ನು ಜೀವಂತವಾಗಿರಿಸಿಕೊಂಡರು.

ಗುರುವಾರ ನಡೆದ 'ಎ' ಗುಂಪಿನ ಎರಡನೇ ಪಂದ್ಯದಲ್ಲಿ ಟ್ರೀಸಾ– ಗಾಯತ್ರಿ ಜೋಡಿ 21–19, 21–19 ರಿಂದ ಮಲೇಷ್ಯಾ ಆಟಗಾರ್ತಿಯರನ್ನು ಸೋಲಿಸಲು 46 ನಿಮಿಷ ತೆಗೆದುಕೊಂಡಿತು. ಭಾರತದ ಜೋಡಿ ಗುಂಪಿನ ಮೊದಲ ಪಂದ್ಯದಲ್ಲಿ ಚೀನಾದ ಲಿಯು ಶೆಂಗ್ ಶು– ತಾನ್ ನಿಂಗ್ ಎದುರು ಸೋಲನುಭವಿಸಿತ್ತು.

ದಬಾಂಗ್‌ಗೆ ಮಣಿದ ಟೈಟನ್ಸ್

ಪುಣೆ (ಪಿಟಿಐ): ನವೀನ್ ಕುಮಾರ್ ಮತ್ತು ಅಶು ಮಲಿಕ್ ಅವರ ಅಮೋಘ ರೇಡಿಂಗ್ ಬಲದಿಂದ ಡೆಲ್ಲಿ ದಬಾಂಗ್ ತಂಡವು ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ 33–27ರಿಂದ ತೆಲುಗು ಟೈಟನ್ಸ್ ತಂಡವನ್ನು ಮಣಿಸಿತು.

ಬಾಲೇವಾಡಿ ಕ್ರೀಡಾ ಸಂಕೀರ್ಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ವಿರಾಮದ ವೇಳೆ ಟೈಟನ್ಸ್ ತಂಡವು 4 ಅಂಕಗಳ (17–13) ಮುನ್ನಡೆ ಪಡೆದಿತ್ತು. ಆದರೆ ಉತ್ತರಾರ್ಧದಲ್ಲಿ ಸಾಂಘಿಕ ಆಟ ಪ್ರದರ್ಶಿಸಿದ ಡೆಲ್ಲಿ ತಂಡವು ಗೆಲುವನ್ನು ತನ್ನದಾಗಿಸಿಕೊಂಡಿತು.

ನವೀನ್ ಮತ್ತು ಅಶು ಕ್ರಮವಾಗಿ 11 ಮತ್ತು 9 ಅಂಕಗಳಿಸಿ ಗೆಲುವಿನ ರೂವಾರಿಯಾದರು. ಈ ಗೆಲುವಿನೊಂದಿಗೆ ಡೆಲ್ಲಿ ತಂಡವು 61 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಐದನೇ ಸ್ಥಾನದಿಂದ ಎರಡನೇ ಸ್ಥಾನಕ್ಕೆ ಬಡ್ತಿ ಪಡೆದಿದೆ. ಟೈಟನ್ಸ್ ತಂಡವು (54) ಏಳನೇ ಸ್ಥಾನದಲ್ಲಿ ಮುಂದುವರಿದಿದೆ.

ರೇಡಿಂಗ್ ನಡೆಸಿದ ಡೆಲ್ಲಿ ದಬಾಂಗ್ ತಂಡದ ನವೀನ್ ಕುಮಾರ್

ದಿನದ ಮತ್ತೊಂದು ಪಂದ್ಯದಲ್ಲಿ ಯು.ಪಿ. ಯೋಧಾಸ್ ತಂಡವು 31–31ರಿಂದ ಬೆಂಗಾಲ್ ವಾರಿಯರ್ಸ್ ಜೊತೆ 'ಟೈ' ಮಾಡಿಕೊಂಡಿತು.

ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿ

ಚಿನ್ನಸ್ವಾಮಿಯಲ್ಲಿ ತಾರೆಗಳ ಮುಖಾಮುಖಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಲ್‌ರೌಂಡರ್ ಸಹೋದರರಾದ ಕೃಣಾಲ್ ಪಾಂಡ್ಯ ಮತ್ತು ಹಾರ್ದಿಕ್ ಪಾಂಡ್ಯ ಅವರು ಇರುವ ಬರೋಡಾ ತಂಡವು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಬಲಿಷ್ಠ ಮುಂಬೈ ತಂಡವನ್ನು ಎದುರಿಸಲಿದೆ.



ಕೃಣಾಲ್ ಪಾಂಡ್ಯ ಮತ್ತು ಹಾರ್ದಿಕ್ ಪಾಂಡ್ಯ (ಎಡಚಿತ್ರ), ಶ್ರೇಯಸ್ ಅಯ್ಯರ್

ಶುಕ್ರವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಮೊದಲ ಸೆಮಿ ಫೈನಲ್‌ನಲ್ಲಿ ಉಭಯ ತಂಡಗಳು ಸೆಣಸಲಿವೆ. ಆದರೆ ಮಳೆಯು ಅಡ್ಡಿಪಡಿಸುವ ಎಲ್ಲ ಸಾಧ್ಯತೆಗಳೂ ಇವೆ.

ಪಾಂಡ್ಯ ಸಹೋದರರು ಟಿ20 ಮಾದರಿಯ ಪರಿಣತ ಆಲ್‌ರೌಂಡರ್‌ಗಳು. ಐಪಿಎಲ್ ಮತ್ತು ಅಂತರರಾಷ್ಟ್ರೀಯ ಚುಟುಕು ಪಂದ್ಯಗಳಲ್ಲಿ 'ಮ್ಯಾಚ್ ವಿನ್ನರ್'ಗಳಾಗಿ ಗಮನ ಸೆಳೆದವರು. ದೇಶಿ ಟಿ20 ಚಾಂಪಿಯನ್‌ಷಿಪ್‌ನಲ್ಲಿ ಇದುವರೆಗೆ ಬರೋಡಾವು ಸಾಗಿಬರುವಲ್ಲಿಯೂ ಅವರ ಪಾತ್ರ ಪ್ರಮುಖವಾಗಿದೆ. ಬರೋಡಾದ ವೇಗಿ ಅತಿಥ್ ಸೇಠ್ ಅವರು 13 ವಿಕೆಟ್ ಗಳಿಸಿದ್ದಾರೆ. ಹೊಸಪ್ರತಿಭೆ ಭಾನು ಪನಿಯಾ ಅವರು ತಂಡದ ಅತಿ ಹೆಚ್ಚು ರನ್ ಗಳಿಸಿರುವ (271) ಬ್ಯಾಟರ್ ಆಗಿದ್ದಾರೆ.

ಎಂಟರ ಘಟ್ಟದಲ್ಲಿ ಬಂಗಾಳ ವಿರುದ್ಧದ ಜಯದಲ್ಲಿ ಅಭಿಮನ್ಯು ರಾಜಪೂತ್ ಮತ್ತು ಶಾಶ್ವತ್ ರಾವತ್ ಅವರ ಆಟವು ಪ್ರಮುಖವಾಗಿತ್ತು. ವೇಗಿ ಮೊಹಮ್ಮದ್ ಶಮಿ ಅವರಿದ್ದ ಬಂಗಾಳ ತಂಡವನ್ನು ಮಣಿಸಿದ್ದು ಬರೋಡಾದ ಹೆಗ್ಗಳಿಕೆ.

ಆದರೆ ಮುಂಬೈ ತಂಡವನ್ನು ಹಗುರವಾಗಿ ಪರಿಗಣಿಸುವಂತಿಲ್ಲ. ಶ್ರೇಯಸ್ ಅಯ್ಯರ್ ನಾಯಕತ್ವದ ತಂಡದಲ್ಲಿ ಅನುಭವಿ ಅಜಿಂಕ್ಯ ರಹಾನೆ ತಾವು ಟೆಸ್ಟ್‌ಗಷ್ಟೇ ಅಲ್ಲ. ಟಿ20 ಆಟಕ್ಕೂ ಸೈ ಎಂಬುದನ್ನು ಸಾಬೀತುಪಡಿಸಿದ್ದಾರೆ. ಅವರಲ್ಲದೇ ಪೃಥ್ವಿ ಶಾ, ಸೂರ್ಯಾಂಶ್ ಶೆಡಗೆ, ಶಿವಂ ದುಬೆ ಅವರ ಆಟವೂ ಪ್ರಮುಖವಾಗಿದೆ. ಅವರೆಲ್ಲರೂ ಉತ್ತಮ ಲಯದಲ್ಲಿದ್ದಾರೆ. ತಾರೆಗಳೇ ತುಂಬಿರುವ ತಂಡವು ಬರೋಡಾಕ್ಕೆ ಕಠಿಣ ಸವಾಲು ಒಡ್ಡುವ ಎಲ್ಲ ಸಾಧ್ಯತೆಗಳೂ ಇವೆ.

ದಿನದ ಇನ್ನೊಂದು ಸೆಮಿಫೈನಲ್‌ನಲ್ಲಿ ರಜತ್ ಪಾಟೀದಾರ್ ನೇತೃತ್ವದ ಮಧ್ಯಪ್ರದೇಶ ಮತ್ತು ಆಯುಷ್ ಬಡೋಣಿಯ ನಾಯಕತ್ವದ ಡೆಲ್ಲಿ ತಂಡ ಮುಖಾಮುಖಿಯಾಗಲಿವೆ.

ಮಧ್ಯಪ್ರದೇಶ ತಂಡವು ಸ್ಪಿನ್ನರ್ ಕುಮಾರ್ ಕಾರ್ತಿಕೇಯ ಸಿಂಗ್ ಮೇಲೆ ಹೆಚ್ಚು ಅವಲಂಬಿತವಾಗಿದೆ. ಈ ಟೂರ್ನಿಯಲ್ಲಿ ಅವರು 15 ವಿಕೆಟ್ ಗಳಿಸಿದ್ದಾರೆ. ಆರ್‌ಸಿಬಿ ತಾರೆ ರಜತ್ ಪಾಟೀದಾರ್ ಅವರು ತಂಡದ ಬ್ಯಾಟಿಂಗ್ ಬೆನ್ನೆಲುಬಾಗಿದ್ದಾರೆ. ಡೆಲ್ಲಿ ತಂಡಕ್ಕೂ ಆಯುಷ್, ಪ್ರಿಯಾಂಶ್ ಆರ್ಯ ಮತ್ತು ಅನುಜ್ ರಾವತ್ ಅವರೇ ಬ್ಯಾಟಿಂಗ್ ಬಲ.

ಇಂದಿನ ಪಂದ್ಯಗಳು

ಬರೋಡಾ –ಮುಂಬೈ (ಬೆಳಿಗ್ಗೆ 11ರಿಂದ); ಮಧ್ಯಪ್ರದೇಶ–ಡೆಲ್ಲಿ (ಸಂಜೆ 4.30ರಿಂದ)

ಎಂಬಾಪೆ ವಿರುದ್ಧದ ಅತ್ಯಾಚಾರ ಪ್ರಕರಣದ ತನಿಖೆ ಸ್ಥಗಿತ

ಸ್ಟಾಕ್‌ಹೋಮ್ (ಎಎಫ್‌ಪಿ): ರಿಯಲ್ ಮ್ಯಾಡ್ರಿಡ್ ಫಾರ್ವರ್ಡ್ ಕೀಲಿಯನ್ ಎಂಬಾಪೆ ಅವರ ವಿರುದ್ಧ ಕೇಳಿಬಂದಿತ್ತೆನ್ನಲಾದ ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯದ ಆರೋಪಗಳ ತನಿಖೆಯನ್ನು ಸಾಕ್ಷ್ಯಗಳ ಕೊರತೆಯಿಂದ ಕೊನೆಗೊಳಿಸಲಾಗಿದೆ ಎಂದು ಸ್ವೀಡನ್‌ನ ಪ್ರಾಸಿಕ್ಯೂಟರ್ ಗುರುವಾರ ತಿಳಿಸಿದ್ದಾರೆ.

ಅ.9 ರಿಂದ 11ರ ನಡುವೆ ಸ್ಟಾಕ್‌ಹೋಮ್‌ನ ಹೋಟೆಲ್ ಒಂದರಲ್ಲಿ ದೌರ್ಜನ್ಯ ನಡೆದಿತ್ತು ಎನ್ನಲಾದ ಈ ಪ್ರಕರಣದ ತನಿಖೆಯಲ್ಲಿ ತನಿಖಾಧಿಕಾರಿಗಳು ಎಲ್ಲೂ ಫ್ರಾನ್ಸ್ ಫುಟ್‌ಬಾಲ್ ತಾರೆಯ ಹೆಸರು ಬಹಿರಂಗಪಡಿಸಿರಲಿಲ್ಲ. ಈ ಪ್ರಕರಣದಲ್ಲಿ ಎಂಬಾಪೆ ಅವರನ್ನು ಗುರಿಪಡಿಸಲಾಗಿದೆ ಎಂದು ಸ್ವೀಡನ್‌ನ ಮಾಧ್ಯಮಗಳು ವರದಿ ಮಾಡಿದ್ದವು.



ನೇಷನ್ಸ್ ಲೀಗ್ ಪಂದ್ಯದಲ್ಲಿ 25 ವರ್ಷ ವಯಸ್ಸಿನ ಎಂಬಾಪೆ ಅವರನ್ನು ಆಡಿಸಿರಲಿಲ್ಲ. ಅವರು ಗೆಳೆಯರೊಡನೆ ಸ್ವೀಡನ್ ರಾಜಧಾನಿಗೆ ಆ ವೇಳೆ (ಅ. 9 ರಿಂದ 11) ಬಂದಿದ್ದರು. ಅ. 10ರಂದು ಸ್ಟಾಕ್‌ಹೋಮ್‌ನಲ್ಲಿ ಇಂಥ ಪ್ರಕರಣ ನಡೆದಿದ್ದು ಇದರ ತನಿಖೆ ಕೈಗೊಂಡಿರುವುದಾಗಿ ಸ್ವೀಡನ್‌ನ ತನಿಖಾ ಅಧಿಕಾರಿಗಳು ಅ.15ರಂದು ಪ್ರಕಟಿಸಿದ್ದರು. ಆದರೆ ಎಂಬಾಪೆ ಹೆಸರನ್ನು ಪ್ರಸ್ತಾಪಿಸಿರಲಿಲ್ಲ.

ವಿಶ್ವ ಚೆಸ್ ಚಾಂಪಿಯನ್ ಗುಕೇಶ್ ಯಶಸ್ಸಿನ ಹಿಂದೆ ಪರಿಶ್ರಮ, ಪೋಷಕರ ತ್ಯಾಗ

ಸವಾಲಿನ ಹಾದಿಯಲ್ಲಿ ಬೆಳೆದ ತಾರೆ

ನವದೆಹಲಿ (ಏಜನ್ಸೀಸ್): ವೃತ್ತಿಯಲ್ಲಿ ವೈದ್ಯರಾಗಿದ್ದ ತಂದೆ –ತಾಯಿ, ಮಗ ಗುಕೇಶ್ ಕಂಡ ವಿಶ್ವ ಚಾಂಪಿಯನ್ ಕನಸನ್ನು ಈಡೇರಿಸಲು ಸಂಕಲ್ಪ ತೊಟ್ಟು ವೃತ್ತಿಗೆ ವಿರಾಮ ನೀಡಿದ್ದರು. ಕ್ರೌಡ್ ಫಂಡಿಂಗ್ ಮೊರೆ ಹೋಗಿದ್ದರು. ಏಳನೇ ವರ್ಷ ವಯಸ್ಸಿನಲ್ಲಿ ಚೆಸ್ ಆಡಲು ಆರಂಭಿಸಿದ ಗುಕೇಶ್ ವಿಶ್ವ ಚಾಂಪಿಯನ್ ಆಗಬೇಕೆಂಬ ತಮ್ಮ ಕನಸನ್ನು ಒಂದು ದಶಕದ ನಂತರ ಸಾಕಾರಗೊಳಿಸಿ, ಅತಿ ಕಿರಿಯ ವಿಶ್ವ ಚಾಂಪಿಯನ್ ಎನಿಸಿದ್ದಾರೆ.

ಈ ಹಿಂದಿನ ವಿಶ್ವ ಚಾಂಪಿಯನ್ ಆದ ಡಿಂಗ್ ಲಿರೆನ್ ಅವರನ್ನು 14 ಪಂದ್ಯಗಳ ಫೈನಲ್‌ನಲ್ಲಿ ಸೋಲಿಸಿ, 2024ನೇ ಸಾಲನ್ನು ಸಾಧನೆಗಳ ದೃಷ್ಟಿಯಿಂದ ಅವಿಸ್ಮರಣೀಯಗೊಳಿಸಿಕೊಂಡಿದ್ದಾರೆ. 18 ವರ್ಷ ವಯಸ್ಸಿನಲ್ಲಿ ವಿಶ್ವದ 18ನೇ ಚಾಂಪಿಯನ್ ಆಗಿದ್ದಾರೆ.

ಆದರೆ ಚೆನ್ನೈ ಆಟಗಾರನ ಈ ಪಯಣ ಹೂವಿನ ಹಾದಿಯಾಗಿರಲಿಲ್ಲ. ಅದಕ್ಕೆ ಅವರ ಕಠಿಣ ಪರಿಶ್ರಮದ ಜೊತೆಗೆ ಪೋಷಕರ ತ್ಯಾಗದ ಬಲವೂ ಇದೆ. ತಂದೆ ಇಎನ್‌ಟಿ ತಜ್ಞ ಡಾ.ರಜನಿಕಾಂತ್ ಮತ್ತು ಮೈಕ್ರೊಬಯಾಲಜಿಸ್ಟ್ ಆಗಿರುವ ತಾಯಿ ಪದ್ಮಾ ಅವರು ಮಗನ ಯಶಸ್ಸಿನ ಹಿಂದೆ ಸಾಕಷ್ಟು ಶ್ರಮಪಟ್ಟಿದ್ದಾರೆ. ರಜನಿಕಾಂತ್ ಅವರು 2017–18ರಲ್ಲೇ ವೈದ್ಯ ವೃತ್ತಿಗೆ ಬಹುತೇಕ ವಿದಾಯ ಹೇಳಿಯಾಗಿತ್ತು. ವಿಶ್ವದ ವಿವಿಧ ಕಡೆ ಟೂರ್ನಿಗಳಲ್ಲಿ ಆಡುವಾಗ ಮಗನೊಡನೆ ಅವರೂ ತೆರಳಿದರು. ಅದೂ ಆರ್ಥಿಕ ಇತಿಮಿತಿಗಳ ನಡುವೆ. ತಾಯಿ ಮನೆಯ ಖರ್ಚುವೆಚ್ಚ ಸರಿದೂಗಿಸುವ ಕಡೆ ಗಮನಹರಿಸಿದರು.

‘ಗುಕೇಶ್ ಯಶಸ್ಸಿನಲ್ಲಿ ಪೋಷಕರ ತ್ಯಾಗ ಬಹಳ ದೊಡ್ಡದು’ ಎಂದು ಅವರ ಬಾಲ್ಯದ ಕೋಚ್ ವಿಷ್ಣು ಪ್ರಸನ್ನ ಏಪ್ರಿಲ್‌ನಲ್ಲಿ ಗುಕೇಶ್ ಕ್ಯಾಂಡಿಡೇಟ್ಸ್ ಟೂರ್ನಿ ಗೆದ್ದ ಬಳಿಕ ಸುದ್ದಿಸಂಸ್ಥೆಗೆ ತಿಳಿಸಿದ್ದರು.

‘ತಂದೆ ವೃತ್ತಿಗೆ ವಿರಾಮ ನೀಡಿದ್ದರು. ತಾಯಿಯ ದುಡಿಮೆಯಲ್ಲಿ ಮನೆ ನಡೆಯುತಿತ್ತು. ಗುಕೇಶ್ ವಿವಿಧ ಟೂರ್ನಿಗಳಿಗೆ ಹೋಗುತ್ತಿದ್ದ ಕಾರಣ

ಗೆದ್ದ ಬಳಿಕ ಭಾವೋದ್ವೇಗಕ್ಕೆ ಒಳಗಾದ ಡಿ.ಗುಕೇಶ್ —ಪಿಟಿಐ ಚಿತ್ರ

ಸೋತ ನಿರಾಸೆಯಲ್ಲಿ ಚೀನಾದ ಲಿರೆನ್ —ಎಎಫ್‌ಪಿ ಚಿತ್ರ

ಒಬ್ಬರನ್ನೊಬ್ಬರು ನೋಡುತ್ತಿದ್ದುದೇ ಕಡಿಮೆ’ ಎಂದು ಅವರು ನೆನಪಿಸಿದ್ದರು.

ಗ್ರ್ಯಾಂಡ್‌ಮಾಸ್ಟರ್ ಬಿರುದು ಪಡೆದಾಗ ಗುಕೇಶ್ ವಯಸ್ಸು 12 ವರ್ಷ, 7 ತಿಂಗಳು 17 ದಿನ. 2700 ರೇಟಿಂಗ್ ಕ್ಲಬ್‌ಗೆ ಸೇರ್ಪಡೆಗೊಂಡ ಮೂರನೇ ಅತಿ ಕಿರಿಯ ಈತ. 2750ರ ರೇಟಿಂಗ್ ಮೈಲಿಗಲ್ಲು ದಾಟಿದ ವಿಶ್ವದ ಅತಿ ಕಿರಿಯ ಆಟಗಾರ ಎಂಬ ಶ್ರೇಯಸ್ಸು.

ಅವಿಸ್ಮರಣೀಯ ವರ್ಷ: 2024– ಗುಕೇಶ್ ಪಾಲಿಗೆ ಅತ್ಯಂತ ಯಶಸ್ಸಿನ ವರ್ಷ. ಏಪ್ರಿಲ್‌ನಲ್ಲಿ ಕೆನಡಾದ ಟೊರಾಂಟೊದಲ್ಲಿ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಗೆಲುವು. ಹಂಗೆರಿಯ ಬುಡಾಪೆಸ್ಟ್‌ನಲ್ಲಿ ನಡೆದ

> **ಕ್ರಿಕೆಟಿಗ ಎಂ.ಎಸ್.ಧೋನಿ ಮತ್ತು ಟೆನಿಸ್ ದಿಗ್ಗಜ ನೊವಾಕ್ ಜೊಕೊವಿಚ್ ನೆಚ್ಚಿನ ಕ್ರೀಡಾಪಟುಗಳು. ಚಿಕ್ಕವನಿದ್ದಾಗ ಧೋನಿ ಅವರಿಂದ ಮತ್ತು ಈಗ ಜೊಕೊವಿಚ್‌ರಿಂದ ಸ್ಫೂರ್ತಿ ಪಡೆದಿದ್ದೇನೆ.**
> **ಡಿ.ಗುಕೇಶ್,** ವಿಶ್ವ ಚೆಸ್ ಚಾಂಪಿಯನ್

ಒಲಿಂಪಿಯಾಡ್‌ನಲ್ಲಿ ಭಾರತಕ್ಕೆ ಐತಿಹಾಸಿಕ ಚಿನ್ನದ ಜೊತೆ ಮೊದಲ ಬೋರ್ಡ್‌ನಲ್ಲಿ ಅಜೇಯ ಸಾಧನೆಗಾಗಿ ವೈಯಕ್ತಿಕ ಚಿನ್ನ. ಇದರ ಜೊತೆಗೆ ಕಳಶಪ್ರಾಯವಾಗಿ ಈಗ ವಿಶ್ವ ಚಾಂಪಿಯನ್ ಪಟ್ಟ.

2013ರಲ್ಲಿ ಅವರ ಚೆಸ್ ಕಲಿಕೆ ಆರಂಭವಾಯಿತು. ಕೆಲವೇ ವರ್ಷಗಳಲ್ಲಿ ಈ ಪ್ರತಿಭಾನ್ವಿತ ವಿವಿಧ ವಯೋವರ್ಗ-ಗಳಲ್ಲಿ ಏಷ್ಯನ್ ಚಾಂಪಿಯನ್ ಆದರು. 2017ರಲ್ಲಿ ಫ್ರಾನ್ಸ್‌ನ ಕಾನ್‌ನಲ್ಲಿ ನಡೆದ ಟೂರ್ನಿಯನ್ನು ಗೆದ್ದು ಇಂಟರ್‌ನ್ಯಾಷನಲ್ ಮಾಸ್ಟರ್ ಪಟ್ಟ. 2018ರಲ್ಲಿ ವಿಶ್ವ ಯೂತ್ ಚೆಸ್ ಚಾಂಪಿಯನ್‌ಷಿಪ್ ನಲ್ಲಿ 12 ವರ್ಷದೊಳಗಿನವರ ವಿಭಾಗದಲ್ಲಿ ಚಾಂಪಿಯನ್ ಪಟ್ಟ.

ಚೆಸ್ ಕಡೆ ಗುಕೇಶ್ ಅವರ ಉತ್ಕಟ ಮೋಹ ಕಂಡ ಅವರ ಪೋಷಕರು ನಾಲ್ಕನೇ ತರಗತಿಯಲ್ಲೇ ಪೂರ್ಣಾವಧಿ ಶಾಲಾ ಕಲಿಕೆಗೆ ಕೊನೆಹಾಡಿದರು. 2019ರಲ್ಲಿ ದೆಹಲಿಯಲ್ಲಿ ನಡೆದ ಟೂರ್ನಿಯಲ್ಲಿ ಅವರು (ಆಗ) ವಿಶ್ವದ ಎರಡನೇ ಅತಿ ಕಿರಿಯ ಗ್ರ್ಯಾಂಡ್‌ಮಾ-ಸ್ಟರ್ ಆದರು. ಆ ವೇಳೆ ರಷ್ಯಾದ ಸೆರ್ಗಿ ಕರ್ಯಾಕಿನ್ ಅತಿ ಕಿರಿಯ ಗ್ರ್ಯಾಂಡ್‌ಮಾ-ಸ್ಟರ್ ಆಗಿದ್ದರು. ನಂತರದ ವರ್ಷದಲ್ಲಿ ಭಾರತ ಮೂಲದ ಅಮೆರಿಕ ಆಟಗಾರ ಅಭಿಮನ್ಯು ಮಿಶ್ರಾ ನಂತರ ಅತಿ ಕಿರಿಯ ಗ್ರ್ಯಾಂಡ್‌ಮಾಸ್ಟರ್ ಗೌರವಕ್ಕೆ ಭಾಜರಾದರು.

> **ಕೊನೆಯವರೆಗೂ ಗುಕೇಶ್ ಗೆಲುವಿಗೆ ಪ್ರಯತ್ನಿಸುತ್ತಿದ್ದರು. ಇನ್ನೇನೂ ಸಾಧ್ಯವಿಲ್ಲ ಎಂಬುದು ಖಚಿತವಾದಾಗಷ್ಟೇ ‘ಡ್ರಾ’ಕ್ಕೆ ಒಪ್ಪಿಕೊಳ್ಳುತ್ತಿದ್ದರು. ಗುರಿಯತ್ತ ತದೇಕಚಿತ್ತ ಮೆಚ್ಚುವಂಥದ್ದು**
> **ಡಿ.ವಿ.ಪ್ರಸಾದ್**
> ಐಎಂ ಆಟಗಾರ

ಚೆನ್ನೈ ಸಮೀಪದ ಮಹಾಬಲಿಪುರಂನಲ್ಲಿ ನಡೆದ 2022ರ ಒಲಿಂಪಿಯಾಡ್‌ನಲ್ಲಿ ಭಾರತ ‘ಬಿ’ ತಂಡದ ಪರ ಆಡಿದ್ದ ಗುಕೇಶ್ ವೈಯಕ್ತಿಕ ಚಿನ್ನ ಗೆದ್ದು ವಿಶ್ವದ ಗಮನ ಸೆಳೆದರು. ಅದೇ ವರ್ಷದ ಸೆಪ್ಟೆಂಬರ್‌ನಲ್ಲಿ 2700 ರೇಟಿಂಗ್ ಮೈಲಿಗಲ್ಲು ದಾಟಿದರು. ಆಗ ವಿಶ್ವ ಚಾಂಪಿಯನ್ ಆಗಿದ್ದಾಗ ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ಸೋಲಿಸಿದ ಅತಿ ಕಿರಿಯ ಆಟಗಾರ ಕೂಡ ಎಂಬ ಹಿರಿಮೆಯೂ ಚೆನ್ನೈನ ಈ ಪ್ರತಿಭಾನ್ವಿತನ ಪಾಲಾಯಿತು. ಆದರೆ ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹತೆ ಪಡೆಯುವಲ್ಲಿ ಅವರಿಗೆ ಅದೃಷ್ಟದ ಬಲವೂ ಇತ್ತು. ತಮಿಳುನಾಡು ಸರ್ಕಾರ ಕೆಲವೇ ಆಟಗಾರರನ್ನು ಒಳಗೊಂಡ ಗ್ರ್ಯಾಂಡ್‌ಮಾಸ್ಟರ್ಸ್ ಟೂರ್ನಿ ಹಮ್ಮಿಕೊಂಡಿತು. ಇದರಲ್ಲಿ ಗೆದ್ದ ಗುಕೇಶ್ ಎಂಟು ಆಟಗಾರರ ಕ್ಯಾಂಡಿಡೇಟ್ಸ್ ಟೂರ್ನಿಗೆ ಟಿಕೆಟ್ ಪಡೆದರು. ಅಲ್ಲಿನ ಗೆಲುವು ಅವರನ್ನು ವಿಶ್ವ ಚಾಂಪಿಯನ್ ಪಟ್ಟಕ್ಕೆ ಅತಿ ಕಿರಿಯ ಚಾಲೆಂಜರ್ ಎಂಬ ಗೌರವಕ್ಕೆ ಪಾತ್ರರ-ನ್ನಾಗಿಸಿತು. ಆಗ ಅವರ ವಯಸ್ಸು 17.

ಈ ಪಯಣದಲ್ಲಿ ಅವರಿಗೆ ಪ್ರಾಯೋಜಕರು ಇರಲಿಲ್ಲ. ಬಹುಮಾನದ ಹಣ ಮತ್ತು ಪೋಷಕರ ಆಸಕ್ತಿಯಿಂದ ಕ್ರೌಡ್ ಫಂಡಿಂಗ್ ಮೂಲಕ ಅವರು ಪ್ರಯಾಣದ ವೆಚ್ಚ ಭರಿಸುತ್ತಿದ್ದರು.

ಈ ವರ್ಷದ ಆರಂಭದಲ್ಲಿ ತಮ್ಮ ಮೆಂಟರ್ ವಿಶ್ವನಾಥನ್ ಆನಂದ್ ಅವರನ್ನು ರ‍್ಯಾಂಕಿಂಗ್‌ನಲ್ಲಿ ಹಿಂದೆಹಾಕಿ ಭಾರತದ ಅಗ್ರಮಾನ್ಯ ಆಟಗಾರ ಎನಿಸಿದ್ದ ಗುಕೇಶ್, ಈಗ ಆನಂದ್ ಅವರ ವೆಸ್ಟ್‌ಬ್ರಿಜ್–ಆನಂದ್ ಚೆಸ್ ಅಕಾಡೆಮಿಯಲ್ಲಿ ಆಟ ಹುರಿಗೊಳಿಸುತ್ತಿದ್ದಾರೆ. ಕೋವಿಡ್ ವೇಳೆ ಈ ಅಕಾಡೆಮಿ ಅಸ್ತಿತ್ವಕ್ಕೆ ಬಂದಿತ್ತು.

‘ಕೋವಿಡ್ ಸಂದರ್ಭದಲ್ಲಿ ನಾವು ಆನಂದ್ ಅವರ ಅಕಾಡೆಮಿಯಲ್ಲೇ ಹೆಚ್ಚಿನ ಸಮಯ ಕಳೆಯುತ್ತಿದ್ದೆವು. ವಿಶಿ (ಆನಂದ್) ಜೊತೆ ನಾವು ಗುಕೇಶ್ ಭವಿಷ್ಯದ ಬಗ್ಗೆ ಚರ್ಚಿಸುತ್ತಿದ್ದೆವು’ ಎಂದು ವಿಷ್ಣು ಪ್ರಸನ್ನ ಹೇಳುತ್ತಾರೆ.

‘ವಿಶಿ ಸರ್ ನನ್ನ ಪಾಲಿಗೆ ಸ್ಫೂರ್ತಿಯ ಸೆಲೆ. ಅವರ ಅಕಾಡೆಮಿಯಿಂದ ನನಗೆ ಸಾಕಷ್ಟು ಅನುಕೂಲವಾಗಿದೆ. ಅವರಿಗೆ ಆಭಾರಿ. ಅವರ ನೆರವು ಇಲ್ಲದೇ ಹೋಗಿದ್ದಲ್ಲಿ ನಾನು ಈ ಸ್ಥಾನಕ್ಕೆ ತಲುಪುತ್ತಿರಲಿಲ್ಲ’ ಎಂದು ಗುಕೇಶ್ ಹಲವು ಬಾರಿ ಹೇಳಿದ್ದಾರೆ.

ಗುರುವಾರ ಅವರು ಮಾರ್ಗದರ್ಶಕ ವಿಶ್ವನಾಥನ್ ಆನಂದ್ ನಂತರ ಭಾರತದ ಎರಡನೇ ವಿಶ್ವ ಚಾಂಪಿಯನ್ ಆಗಿದ್ದಾರೆ. ತಮ್ಮ ತಂದೆ–ತಾಯಿ ಪಟ್ಟ ಶ್ರಮವನ್ನು ಸಾರ್ಥಕಗೊಳಿಸಿದ್ದಾರೆ.

ಚರಿತ್ರೆ ಬರೆದ ಗುಕೇಶ್

ಒಂದನೇ ಪುಟದಿಂದ...

ಹಾಗೆ ನೋಡಿದರೆ, ಚಾಂಪಿಯನ್‌ಷಿಪ್‌ಗೆ ಮೊದಲೇ ಗುಕೇಶ್ ಗೆಲ್ಲುವ ನೆಚ್ಚಿನ ಆಟಗಾರ ಎನಿಸಿದ್ದರು. ಆದರೆ, 32 ವರ್ಷ ವಯಸ್ಸಿನ ಲಿರೆನ್ ಕೊನೆಯವರೆಗೂ ಹೋರಾಟ ನೀಡಿದರು.

ಈ ಹಿಂದಿನ ಚಾಂಪಿಯನ್ ಆಗಿದ್ದ ಲಿರೆನ್ 59ನೇ ನಡೆಯಲ್ಲಿ ಸೋಲೊಪ್ಪಿಕೊಂಡರು; ತಕ್ಷಣ ಗುಕೇಶ್ ಭಾವೋದ್ವೇಗಕ್ಕೆ ಒಳಗಾ ದರು. ‘ನಾನು ಗೆಲುವನ್ನು ನಿರೀಕ್ಷಿಸಿರಲಿಲ್ಲ. ಆದರೆ ಕೊನೆಯಲ್ಲಿ ಅಚಾನಕ್ ಆಗಿ ಆ ಅವಕಾಶ ದೊರೆತು ಜಯ ಸಾಧ್ಯವಾಗಿದ್ದರಿಂದ ಒಂದು ಕ್ಷಣ ಭಾವೋದ್ವೇಗಕ್ಕೆ ಒಳಗಾಗಿದ್ದೆ’ ಎಂದು ನಂತರ ಪ್ರತಿಕ್ರಿಯಿಸಿದರು.

‘ವಿಶ್ವ ಚಾಂಪಿಯನ್ ಆಗುವ ಕನಸನ್ನು ಹತ್ತು ವರ್ಷಗಳಿಂದ ಕಾಣುತ್ತಿದ್ದೆ. ಅದು ಸಾಕಾರಗೊಂಡಿದ್ದರಿಂದ ಸಂತಸವಾಗಿದೆ’ ಎಂದು ಮುಗುಳ್ನಗೆ ಬೀರಿದರು.

ಈ ವರ್ಷದ ಏಪ್ರಿಲ್‌ನಲ್ಲಿ ಟೊರಾಂಟೊದಲ್ಲಿ (ಕೆನಡಾ) ಕ್ಯಾಂಡಿಡೇಟ್ಸ್ ಟೂರ್ನಿ ಗೆದ್ದಾಗ ಚೆನ್ನೈನ ಗುಕೇಶ್, ವಿಶ್ವ ಚಾಂಪಿಯನ್ ಪಟ್ಟಕ್ಕೆ ಅತಿ ಕಿರಿಯ ಚಾಲೆಂಜರ್ ಎಂಬ ಹಿರಿಮೆಗೆ ಪಾತ್ರರಾಗಿದ್ದರು. ವಿಶ್ವ ಚಾಂಪಿಯನ್ ಕಿರೀಟ ಧರಿಸಿದ ಭಾರತದ ಎರಡನೇ ಆಟಗಾರ ಎಂಬ ಶ್ರೇಯವೂ ಅವರದಾಯಿತು. ಭಾರತದಲ್ಲಿ ಚೆಸ್ ಕ್ರಾಂತಿಗೆ ಮುನ್ನುಡಿ ಬರೆದಿದ್ದ ವಿಶ್ವನಾಥನ್ ಆನಂದ್ 2000 ದಿಂದ 2013ರ ಅವಧಿಯಲ್ಲಿ ಐದು ಬಾರಿ ವಿಶ್ವ ಚಾಂಪಿಯನ್ ಆಗಿದ್ದರು.

ನಾಟಕೀಯ ತಿರುವು: ಗುರುವಾರದ ಪಂದ್ಯವೂ ಡ್ರಾ ಆಗಿದ್ದಲ್ಲಿ ಶುಕ್ರವಾರ ಅಲ್ಪಾವಧಿ ಪಂದ್ಯಗಳ ಟೈಬ್ರೇಕರ್ ಆಡಬೇಕಾಗುತಿತ್ತು. ಗುಕೇಶ್ ಕಪ್ಪು ಕಾಯಿಗಳಲ್ಲಿ ಆಡಿದ್ದು, ಹದಿನಾಲ್ಕನೇ ಪಂದ್ಯವೂ ಬಹುತೇಕ ಡ್ರಾ ಹಾದಿ ಹಿಡಿದಿತ್ತು. ಆದರೆ 55ನೇ ನಡೆಯಲ್ಲಿ ಚೀನಾದ ಆಟಗಾರ ರೂಕ್ (ಆನೆ) ಎಫ್2 ನಡೆ ಇರಿಸಿದ್ದು ಗುಕೇಶ್‌ಗೆ ಅವಕಾಶದ ಬಾಗಿಲನ್ನು ತೆರೆಯಿತು. ಇದನ್ನೇ ಬಂಡವಾಳ ಮಾಡಿಕೊಂಡು ರೂಕ್ ಎಕ್ಸ್‌ಚೇಂಜ್ ಮಾಡಿಕೊಂಡ ಗುಕೇಶ್, ಹೆಚ್ಚುವರಿ ಪಾನ್ (ಕಾಲಾಳು) ಸಹಾಯದಿಂದ ಗೆಲುವಿನ ಸ್ಥಿತಿಗೆ ಮುನ್ನಡೆದರು. ಆಗ ಗುಕೇಶ್ ಬಳಿ ಎರಡು ಕಾಲಾಳುಗಳು ಉಳಿದಿದ್ದು ಸುಸ್ಥಿತಿಯಲ್ಲಿದ್ದವು. ಲಿರೆನ್ ಬಳಿ ಒಂದು ಕಾಲಾಳು ಇದ್ದರೂ ಅದನ್ನು ಉಳಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ.

ಒಟ್ಟು 14 ಪಂದ್ಯಗಳಲ್ಲಿ ಗುಕೇಶ್ ಮೂರು ಪಂದ್ಯಗಳನ್ನು (3, 11, 14ನೇ) ಗೆದ್ದರೆ, ಲಿರೆನ್ ಎರಡು ಪಂದ್ಯಗಳನ್ನು (1, 12) ಗೆದ್ದಿದ್ದರು. ಉಳಿದ 9 ಪಂದ್ಯಗಳು ‘ಡ್ರಾ’ ಆಗಿದ್ದವು.

> **ಭಾರತಕ್ಕೆ ಅತ್ಯಂತ ಹೆಮ್ಮೆ ಮೂಡಿಸಿದ್ದಾರೆ. ಚೆಸ್‌ನಲ್ಲಿ ಭಾರತ ಹೊಂದಿರುವ ಪಾರಮ್ಯವನ್ನು ಈ ಗೆಲುವು ಸಾಬೀತು ಮಾಡಿತು. ನಿನ್ನ ಉಜ್ವಲ ಭವಿಷ್ಯಕ್ಕೆ ಶುಭಕಾಮನೆಗಳು**
> **ದ್ರೌಪದಿ ಮುರ್ಮು,** ರಾಷ್ಟ್ರಪತಿ

> **ವಿಶ್ವ ಚೆಸ್ ಪರಂಪರೆಯಲ್ಲಿ ಭಾರತದ ಸಾಧನೆ ಗುಕೇಶ್ ಮೂಲಕ ಮುಂದುವರಿದಿದೆ. ಮತ್ತೊಬ್ಬ ಚಾಂಪಿಯನ್ ಅನ್ನು ಜಗತ್ತಿಗೆ ನೀಡುವ ಮೂಲಕ ಚೆನ್ನೈ, ವಿಶ್ವ ಚೆಸ್ ರಾಜಧಾನಿ ಎಂದು ಮತ್ತೊಮ್ಮೆ ಸಾಬೀತಾಯಿತು**
> **ಎಂ.ಕೆ. ಸ್ಟಾಲಿನ್,** ತಮಿಳುನಾಡು ಸಿ.ಎಂ

> **ನೀವು ದೇಶವು ಹೆಮ್ಮೆ ಪಡುವಂತೆ ಮಾಡಿದ್ದೀರಿ. ದೃಢ ನಿಶ್ಚಯವೊಂದಿದ್ದರೆ ಏನನ್ನೂ ಸಾಧಿಸಬಹುದು ಎನ್ನುವುದನ್ನು ನಿಮ್ಮ ಕಠಿಣ ಪರಿಶ್ರಮ ತೋರಿಸಿಕೊಟ್ಟಿದೆ**
> **ರಾಹುಲ್ ಗಾಂಧಿ**
> ಲೋಕಸಭೆ ವಿರೋಧ ಪಕ್ಷದ ನಾಯಕ

ಗುಕೇಶ್ ಸಾಧನೆಯ ಹಾದಿ

ಜನನ: **29 ಮೇ 2006**
ಸ್ಥಳ: **ಚೆನ್ನೈ, ತಮಿಳುನಾಡು**
ತಂದೆ: **ಡಾ. ರಜನಿಕಾಂತ್** (ಇಎನ್‌ಟಿ ಸರ್ಜನ್)
ತಾಯಿ: **ಡಾ.ಪದ್ಮ** (ಮೈಕ್ರೊ ಬಯೊಲಜಿಸ್ಟ್)
ಫಿಡೆ ರೇಟಿಂಗ್: **2783** (ಡಿಸೆಂಬರ್ 2024)
ಗರಿಷ್ಠ ರೇಟಿಂಗ್: **2794** (ಅಕ್ಟೋಬರ್ 2024)
ವಿಶ್ವ ರ‍್ಯಾಂಕಿಂಗ್: **5** (ಡಿಸೆಂಬರ್ 2024)

- **7** ವರ್ಷ ಪ್ರಾಯದಲ್ಲಿ ಚೆಸ್ ಕಲಿಕೆ ಆರಂಭ
- **2015**ರಲ್ಲಿ ಏಷ್ಯನ್ ಸ್ಕೂಲ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ 9 ವರ್ಷದೊಳಗಿನವರ ವಿಭಾಗದಲ್ಲಿ ಪ್ರಶಸ್ತಿ
- **2017**ರಲ್ಲಿ ಇಂಟರ್‌ನ್ಯಾಷನಲ್ ಮಾಸ್ಟರ್ ಪಟ್ಟ
- **2018**ರ ಏಷ್ಯನ್ ಯೂತ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ 12 ವರ್ಷದೊಳಗಿನವರ ವಿಭಾಗದಲ್ಲಿ ಒಟ್ಟು ಐದು ಚಿನ್ನದ ಪದಕ
- **2018**ರಲ್ಲಿ ವಿಶ್ವ ಯೂತ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ 12 ವರ್ಷದೊಳಗಿನವರ ವಿಭಾಗದಲ್ಲಿ ಚಾಂಪಿಯನ್
- **2019**ರಲ್ಲಿ ಗ್ರ್ಯಾಂಡ್ ಮಾಸ್ಟರ್ (ವಿಶ್ವದ ಮೂರನೇ ಅತಿ ಕಿರಿಯ ಸಾಧಕ, 12 ವರ್ಷ 7 ತಿಂಗಳು)
- **2022**ರ ಒಲಿಂಪಿಯಾಡ್‌ನ ಮೊದಲ ಬೋರ್ಡ್‌ನ ವೈಯಕ್ತಿಕ ಚಿನ್ನದ ಪದಕ, ಅವರಿದ್ದ ಭಾರತ ತಂಡಕ್ಕೆ ಮೂರನೇ ಸ್ಥಾನ
- **2023**ರಲ್ಲಿ ಚೆಸ್ ವಿಶ್ವಕಪ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದ ಸಾಧನೆ
- **2023** ಸೆಪ್ಟೆಂಬರ್‌ನಲ್ಲಿ ರೇಟಿಂಗ್ ಪಟ್ಟಿಯಲ್ಲಿ ಚೆಸ್ ದಂತಕಥೆ ವಿಶ್ವನಾಥನ್ ಆನಂದ್ ಅವರನ್ನು ಹಿಂದಿಕ್ಕಿ ಭಾರತದ ಅಗ್ರ ಕ್ರಮಾಂಕ ಪಟ್ಟ
- **2024**ರ ಏಪ್ರಿಲ್‌ನಲ್ಲಿ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಚಾಂಪಿಯನ್, ವಿಶ್ವ ಚಾಂಪಿಯನ್‌ಷಿಪ್‌ಗೆ ಚಾಲೆಂಜರ್ ಅದ ಅತಿ ಕಿರಿಯ ವಯಸ್ಸಿನ ಆಟಗಾರ
- **2024**ರ ಸೆಪ್ಟೆಂಬರ್‌ನಲ್ಲಿ ಒಲಿಂಪಿಯಾಡ್‌ನಲ್ಲಿ ಐತಿಹಾಸಿಕ ಚಿನ್ನ ಗೆದ್ದ ಭಾರತ ತಂಡದಲ್ಲಿದ್ದ ಆಟಗಾರ, ಸತತ ಎರಡನೇ ಬಾರಿ ವೈಯಕ್ತಿಕ ಚಿನ್ನ
- **2024** ಡಿಸೆಂಬರ್ 12ರಂದು ವಿಶ್ವ ಚಾಂಪಿಯನ್, ಈ ಸಾಧನೆ ಮಾಡಿದ ವಿಶ್ವದ ಅತಿ ಕಿರಿಯ ಆಟಗಾರ

14 ಪಂದ್ಯಗಳ ಫಲಿತಾಂಶ

ಪಂದ್ಯ 1	ಲಿರೆನ್‌ಗೆ ಜಯ	ಪಂದ್ಯ 8	ಡ್ರಾ
ಪಂದ್ಯ 2	ಡ್ರಾ	ಪಂದ್ಯ 9	ಡ್ರಾ
ಪಂದ್ಯ 3	ಗುಕೇಶ್‌ಗೆ ಜಯ	ಪಂದ್ಯ 10	ಡ್ರಾ
ಪಂದ್ಯ 4	ಡ್ರಾ	ಪಂದ್ಯ 11	ಗುಕೇಶ್‌ಗೆ ಜಯ
ಪಂದ್ಯ 5	ಡ್ರಾ	ಪಂದ್ಯ 12	ಲಿರೆನ್‌ಗೆ ಜಯ
ಪಂದ್ಯ 6	ಡ್ರಾ	ಪಂದ್ಯ 13	ಡ್ರಾ
ಪಂದ್ಯ 7	ಡ್ರಾ	ಪಂದ್ಯ 14	ಗುಕೇಶ್‌ಗೆ ಜಯ

ಲಿರೆನ್ ನೈಜ ಚಾಂಪಿಯನ್: ಗುಕೇಶ್ ಮೆಚ್ಚುಗೆ

ಸಿಂಗಪುರ (ಪಿಟಿಐ): ವಿಶ್ವ ಚಾಂಪಿಯನ್ ಆಗಿರುವುದು ಸಂಭ್ರಮದ ಕ್ಷಣ ನಿಜ. ಆದರೆ ನಾನು ವಿಶ್ವದ ಶ್ರೇಷ್ಠ ಆಟಗಾರನಲ್ಲ. ಅದು ಮ್ಯಾಗ್ನಸ್ ಕಾರ್ಲ್‌ಸನ್. ಉತ್ತುಂಗದಲ್ಲಿ ಮತ್ತೊಬ್ಬ ಆಟಗಾರನಿರುವುದು ಪ್ರೇರಣೆ ಮೂಡಿಸುವ ಅಂಶವೂ ಸಹ. ಅದು ನನ್ನನ್ನು ಇನ್ನಷ್ಟು ಪರಿಶ್ರಮ ಪಡುವುದಕ್ಕೆ ನೆರವಾಗಲಿದೆ’ ಎಂದು ಗುಕೇಶ್ ಹೇಳಿದ್ದಾರೆ.

ವಿಶ್ವ ಚಾಂಪಿಯನ್ ಆದ ನಂತರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ‘ಲಿರೆನ್ ಅವರ ಆರ್‌ಎಫ್2 ನಡೆ ಇಟ್ಟ ಕ್ಷಣ, ಪ್ರಾಯಶಃ ನನ್ನ ಬದುಕಿನ ಅತಿ ಮಹತ್ವದ್ದು’ ಎಂದು ಎದುರಾಳಿಯ (55ನೇ) ಅಚಾತುರ್ಯದ ನಡೆಯ ಬಗ್ಗೆ ಪ್ರತಿಕ್ರಿಯಿಸಿದರು. ‘ಡಿಂಗ್ ಲಿರೆನ್ ಅವರು ಹಲವು ಒತ್ತಡಗಳ ನಡುವೆಯೂ ಹೋರಾಟ ತೋರಿದರು. ಇದು ನೈಜ ಚಾಂಪಿಯನ್ ಆಟಗಾರ ಎಂಬುದನ್ನು ತೋರಿಸುತ್ತದೆ’ ಎಂದರು.